ಕರ್ನಾಟಕ ವಿಧಾನ ಸಭೆ

ಗುರುವಾರ 27 ನೇ ಮಾರ್ಚ್ 1997
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.
(ಅಧ್ಯಕ್ಷರು : ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

1) ವಿತ್ತೀಯ ಕಾರ್ಯಕಲಾಪ

1997-98ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ.

ಅಧ್ಯಕ್ಷರು : 1997-98ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆಗೆ ಸರ್ಕಾರದಿಂದ ಉತ್ತರ.

ಶ್ರೀ ವಾಟಾಳ್ ನಾಗರಾಜ್ : ಇವರೆಲ್ಲಾ ಹೊರಟು ಹೋಗಿದ್ದಾರೆ.

ಅಧ್ಯಕ್ಷರು : ಅವರೆಲ್ಲಾ ತಯಾರಿ ತೆಗೆದುಕೊಂಡು ಬರಬೇಕಲ್ಲಾ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಚರ್ಚೆ ಬೇಡ ನೇರವಾಗಿ, ಪಾಸ್ ಮಾಡಿಕೊಳ್ಳಲಿ ಸರ್, ಉತ್ತರ ಬೇಡ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ನೀವೆಲ್ಲಾ ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ, ಅದಕ್ಕೆಲ್ಲಾ ಉತ್ತರ ಹೇಳಬೇಕಲ್ಲಾ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ : ಬೇಡ, ಬೇಡ, ನೀವು ಹೇಳಿದ್ದೇ ಸಂತೋಷ ಅಕ್ಸೆಪ್ಟೆಡ್. ಇನ್ನು ಉತ್ತರ ಏತಕ್ಕೆ ಬೇಕು? ಮತಕ್ಕೆ ಹಾಕಿಬಿಡಿ.

ಶ್ರೀ ಸಿದ್ಧರಾಮಯ್ಯ : ನಾನು ಹೇಳುವುದು ಪತ್ರಿಕೆಯಲ್ಲಿ ಬರಲಿ..

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಏನಾಗಿದೆ ಎಂದರೆ, ಬರಿ ವಿರೋಧಪಕ್ಷದ ನಾಯಕರ ಭಾಷಣಕ್ಕೆ ಅರ್ಥ ಇಲ್ಲವೆಂದು ತಿಳಿದುಕೊಂಡಿದ್ದೆವು ಈಗ ಉಪಮುಖ್ಯಮಂತ್ರಿಗಳ ಭಾಷಣಕ್ಕೂ ಇಲ್ಲ , ಇದೇ ಪದ್ಧತಿಯಾಗಿಬಿಟ್ಟಿದೆ. ಇದು ಒಳ್ಳೆಯದಲ್ಲ.

ಶ್ರೀ ಸಿದ್ಧರಾಮಯ್ಯ : ಈಗ ನೀವೆಲ್ಲಾ ಇದ್ದರೆ ಸಾಕು ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಇದ್ದೇವೆ, ನಾವು ಪ್ರಾಮಾಣಿಕವಾಗಿ ಇರುತ್ತೇವೆ.

ಶ್ರೀ ವಸಂತ ವಿ. ಸಾಲಿಯಾನ : ಅಧ್ಯಕ್ಷರೆ, ಇವತ್ತು ಹೆಲ್ತ್ ಕ್ಲಬ್ ಅನ್ನು ಪ್ರಾರಂಭಿಸಿ ಎಲ್ಲಾ ಶಾಸಕರ ಪರವಾಗಿ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಧನ್ಯವಾದಗಳು.

ಶ್ರೀ ಕೆ. ಎಸ್. ಈಶ್ವರಪ್ಪ : ಅಧ್ಯಕ್ಷರೆ, ಸನ್ಮಾನ್ಯ ಹಣಕಾಸು ಸಚಿವರು ಉತ್ತರವನ್ನು ಕೊಟ್ಟಿದ್ದಾರೆಂದು ಭಾವಿಸಿಕೊಳ್ಳುತ್ತೇವೆ ಮತಕ್ಕೆ ಹಾಕಿಬಿಡಿ.

ಅಧ್ಯಕ್ಷರು : ನೀವು ಅದಕ್ಕೆ ತಯಾರಾಗಿರಬಹುದು, ನಾನೂ ಕೂಡ ಸದಸ್ಯನಲ್ಲವೇ ನಾನು ಉತ್ತರ ಕೇಳಬೇಕೆಂದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ನಾವು ತಮ್ಮ ಭಾಷಣವನ್ನು ಕೇಳಬೇಕಾಗಿದೆ.

ಶ್ರೀ ಸಿದ್ಧರಾಮಯ್ಯ : ವಿರೋಧಪಕ್ಷದವರು ನನ್ನ ಹಕ್ಕನ್ನೇ ಕಿತ್ತುಕೊಳ್ಳಲು ಹೊರಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಭಾಷಣವನ್ನು ನಾವು ಕೇಳಬೇಕು, ನಾನು ಸ್ವಾಗತ ಮಾಡುತ್ತೇನೆ, ಸ್ಫೂರ್ತಿ ಬೇಕಲ್ಲಾ ಎಲ್ಲಿದೆ?

ಅಧ್ಯಕ್ಷರು : ಈಶ್ವರಪ್ಪನವರು, ಮಲ್ಲಿಕಾರ್ಜುನ ಖರ್ಗೆಯವರು ಹೇಳುವುದು ಬೇರೆ ತಾವು ಉತ್ತರ ಹೇಳುವುದನ್ನು ಪ್ರಾರಂಭಿಸಿ.

ಶ್ರೀ ವಾಟಾಳ್ ನಾಗರಾಜ್ : ಪ್ರಾರಂಭ ಮಾಡುವುದು ನಿಧಾನವಾದರೆ, ನಾವು ಬೇರೆ ವಿಚಾರವನ್ನು ತೆಗೆದುಕೊಳ್ಳುತ್ತೇವೆ.

+ ಶ್ರೀ ಸಿದ್ಧರಾಮಯ್ಯ : ಮಾನ್ಯ ಸಭಾಧ್ಯಕ್ಷರೆ, 1997-98ನೇ ಸಾಲಿನ ರಾಜ್ಯದ ಆಯವ್ಯಯದ ಮೇಲೆ ಸುಮಾರು ಹತ್ತು ಜನ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ಹಾಗೂ ಕೆಲವರು ಟೀಕೆಗಳನ್ನು ಕೂಡ ಮಾಡಿದ್ದಾರೆ. ನಾನು ಎಲ್ಲಾ ಸಲಹೆ ಸೂಚನೆಗಳೂ ಹಾಗೂ ಕೆಲವರು ಟೀಕೆಗಳನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು, ಶ್ರೀಮಾನ್ ವೀರಪ್ಪ ಮೊಯ್ಲಿಯವರು, ಮುಖ್ಯ ಮಂತ್ರಿಗಳಾಗಿದ್ದವರು, ಸುಮಾರು ಐದು ವರ್ಷಗಳ ಕಾಲ ಈ ರಾಜ್ಯದ ಆರ್ಥಿಕ ಸಚಿವರಾಗಿದ್ದರು, ಯಡಿಯೂರಪ್ಪನವರು ವಾಟಾಳ್ ನಾಗರಾಜ್‌ರವರು ಶ್ರೀರಾಮರೆಡ್ಡಿಯವರು, ಪುಟ್ಟಣ್ಣಯ್ಯನವರು ಇನ್ನು ಅನೇಕ ಜನ ಮುಖಂಡರುಗಳು ಚರ್ಚೆಯಲ್ಲಿ ಭಾಗಿಯಾಗಿದ್ದರೆ. ತಮ್ಮ ಅನುಭವಗಳ ಅಧಾರದ ಮೇಲೆ..

ಅಧ್ಯಕ್ಷರು : ಅನೇಕರಿಲ್ಲ ಎಲ್ಲರೂ ಸೇರಿ ಒಂಬತ್ತೇ ಜನ ಸದಸ್ಯರು ಆಯವ್ಯಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದುದು.

ಶ್ರೀ ಸಿದ್ದರಾಮಯ್ಯ : ಅದಕ್ಕೆ ನಾನು ಒಂಭತ್ತು, ಹತ್ತು ಜನರೆಂದು ಹೇಳಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಪ್ಪತ್ತೈದು, ಮೂವತ್ತು ವರ್ಷಗಳ ಇತಿಹಾಸದಲ್ಲಿ ಆಯವ್ಯಯದ ಮೇಲೆ ಚರ್ಚೆಯಾಗುವಂಥ ಕಾಲದಲ್ಲಿ ಸಮಯವೇ ಸಿಗದೆ ಒಂಭತ್ತು ಜನ ಸದಸ್ಯರು ಮಾತನಾಡಿರುವುದು ದಾಖಲೆಯಾಗಿದೆ. ಈ ರೆಕಾರ್ಡ್ ಗಿನ್ನಿಸ್ ದಾಖಲೆಗೆ ಸೇರುವಂಥದ್ದು.

ಅಧ್ಯಕ್ಷರು : ಇಂಥದ್ದರಲ್ಲಿ ನಾನು ಅಧ್ಯಕ್ಷನಾಗಿರುವುದು ನನ್ನ ಸೌಭಾಗ್ಯ.

ನಿಮ್ಮದು ಯಾರ್‍ಯಾರದ್ದು ಏನೇನು ದಾಖಲೆಗಳೂ ಇವೆ ಎಲ್ಲಾ ಪ್ರತ್ಯೇಕ ಮಾಡಿ ನಿಮ್ಮ ಅಕೌಂಟಿಗೆ ಜಮಾ ಮಾಡಬೇಕಾಗುತ್ತದೆ. ನೀವು ಉತ್ತರ ಮುಂದುವರೆಸಿ.

ಶ್ರೀ ಸಿದ್ಧಾರಾಮಯ್ಯ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಮಾನ್ಯ ಅಧ್ಯಕ್ಷರೆ, ಬಜೆಟ್ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಬಹಳ ಜನ ವಿರೋಧ ಪಕ್ಷದವರು ಪ್ರತಿಭಟನೆಯನ್ನು ಮಾಡಿದ್ದಾರೆ. ಬಹುಶಃ ಪ್ರಜಾತಂತ್ರ ವ್ಯವಸ್ಥೆಯಲಿಲ್ಲ ಬಜೆಟ್ ಮಂಡನೆಗೆ, ರಾಜ್ಯಪಾಲರ ಭಾಷಣಕ್ಕೆ ಒಂದು ಮಹತ್ವ ವಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಭಾಷಣಗಳ ಮೇಲೆ, ಬಜೆಟ್ ಮೇಲೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ವಿರೋಧಪಕ್ಷದವರಿಗೆ ಚರ್ಚೆಯಲ್ಲಿ ಭಾಗವಹಿಸಿ ಅವರ ಅಭಿಪ್ರಾಯಗಳನ್ನು ಹೇಳಲಿಕ್ಕೆ ಬಹಳಷ್ಟು ಅವಕಾಶವಿದೆ. ಆದರೂ ಕೆಲವು ವರ್ಷಗಳಿಂದೀಚೆಗೆ ಈ ತರಹ ಒಂದು ಬೆಳವಣಿಗೆ ಪ್ರಜಾತಂತ್ರದ ಹಿತದೃಷ್ಟಿಯಿಂದ ಮತ್ತು ಇದು ಒಂದು ಒಳ್ಳೆಯ ಸಂಪ್ರಾದಯ ಅಲ್ಲವೇನೋ ಎನ್ನುವಂಥ ನನ್ನ ಅಭಿಪ್ರಾಯವನ್ನು ಹೇಳಲಿಕ್ಕೆ ಬಯಸುತ್ತೇನೆ. ಪ್ರಜಾತಂತ್ರ ಬೆಳೆದಂತೆಲ್ಲಾ ನಾವು ಒಳ್ಳೊಳ್ಳೆಯ ಸಂಪ್ರದಾಯಗಳನ್ನು ಸಂಸತ್ತಿನಲ್ಲಿ, ವಿಧಾನಪರಿಷತ್ತುಗಳಲ್ಲಿ ಹಾಕಬೇಕಾದುದು ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಬಹಳ ಒಳ್ಳೆಯದು. ಆ ಕಾರಣ ಅಂತಹ ಸಂಪ್ರಾದಾಯವನ್ನು ಬೆಳೆಸುವುದಕ್ಕೆ ಇನ್ನು ಮುಂದಾದರೂ ಕೂಡ ಆ ದಿಕ್ಕಿನಲ್ಲಿ ಚಿಂತನೆಯನ್ನು ಮಾಡಬೇಕಾದುದು ಅಗತ್ಯವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ ಇನ್ನು ಮುಂದಾದರೂ ಸರ್ಕಾರ ಬಜೆಟ್ ಮಂಡನೆ ಮಾಡುವುದಕ್ಕೆ ಮುಂದೆ ದರಗಳನ್ನು ಏರಿಸಿ ಬರಬೇಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಿಮ್ಮ ಸರ್ಕಾರ ದರಗಳನ್ನು ಏರಿಸಿದ್ದರೆ ನಾವು ದರಗಳನ್ನು ಏರಿಸುತ್ತಿರಲಿಲ್ಲ. ನೀವು ದರಗಳನ್ನು ಏರಿಸದೆ ಸುಮ್ಮನೆ ಬಿಟ್ಟಿರಿ. ನಾವು ದರಗಳನ್ನು ಏರಿಸಬೇಕಾಗಿ ಬಂತು. ಇದರ ಬಗ್ಗೆ ಚರ್ಚೆ ಬೇಡ. ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿದೆ. ಕೆ.ಇ.ಬಿ. ದರ ಏರಿಸುವುದಕ್ಕೆ ಸದನ ಸಮಿತಿ ಮಾಡಿ ಅದರಲ್ಲಿ ಚರ್ಚೆ ಆಯಿತು. ಬಸ್ಸು ಪ್ರಯಾಣದ ದರ ಏರಿಸಿದಾಗ ವಿರೋಧ ಪಕ್ಷದವರೆಲ್ಲಾ ಕುಳಿತುಕೊಂಡು ಚರ್ಚೆ ಮಾಡಿ ಸರ್ವಸಮ್ಮತವಾದತಂಥ ಒಂದು ದರವನ್ನು ಮಾಡಿದ್ದಾರೆ. ಆದ್ದರಿಂದ ಅದರ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತು ಅವು ವಾರ್ಷಿಕ ಆಯವ್ಯಯದ ವ್ಯಾಪ್ತಿಯಲ್ಲಿ ಕೂಡ ಬರುವುದಿಲ್ಲ. ನಾನು ಅದನ್ನು ಅಲ್ಲಿಗೆ ಬಿಟ್ಟು ಇವತ್ತು ಕೇಂದ್ರದಲ್ಲಿ ಒಂದು ಹೊಸ ರಾಜಕೀಯ ಗಾಳಿ ಬೀಸಿದೆ. ಪ್ರಥಮ ಬಾರಿಗೆ ಯಾವ ಪಕ್ಷಕ್ಕೂ ಕೂಡ.. ಹೊಸ ಗಾಳಿ ಬೀಸಿ ಇವತ್ತು ಸಂಯುಕ್ತ ಸರ್ಕಾರ ದೇಶದಲ್ಲಿ ಆಡಳಿತಕ್ಕೆ ಬಂದು, ನಮ್ಮವರೇ..

ಶ್ರೀ ಬಿ. ಎಸ್. ಯಡಿಯೂರಪ್ಪ : ಹೊಸ ಗಾಳಿ ಬಿರುಗಾಳಿಯಾಗಿ ಸರ್ಕಾರ ಕೊಚ್ಚಿಕೊಂಡು ಹೋಗುವ ಸ್ಥಿತಿಗೆ ಬಂದಿದೆ.

ಶ್ರೀ ಸಿದ್ಧರಾಮಯ್ಯ : ನೋಡೋಣ, ಚುನಾವಣೆಯಲ್ಲಿ ಜನರ ಹತ್ತಿರ ಹೋಗೋಣ. ಯಾರ್‍ಯಾರು ಚುನಾವಣೆಯಲ್ಲಿ ಕೊಚ್ಚಿಕೊಂಡು ಹೋಗುತ್ತಾರೆ ಯಾರ್‍ಯಾರು ಉಳಿದುಕೊಳ್ಳುತ್ತಾರೆ ಇದನ್ನು ಜನ ತೀರ್ಮಾನ ಮಾಡುತ್ತಾರೆ. ಚುನಾವಣೆ ಬರಲಿ, ನೋಡೋಣ ಎರಡೂವರೆ ವರ್ಷದಲ್ಲಿ ಎಷ್ಟೆಷ್ಟು ಚುನಾವಣೆಗಳನ್ನು ನೋಡಿದ್ದೇವೆ. ಯಾರ್‍ಯಾರು ಕೊಚ್ಚಿಕೊಂಡು ಹೋಗಿದ್ದಾರೆ, ಯಾರ್‍ಯಾರು ಉಳಿದ್ದಾರೆ ಎನ್ನತಕ್ಕಂಥದ್ದು ಈ ರಾಜ್ಯದಲ್ಲಿ ಇತಿಹಾಸ ಆಗಿದೆ, ಜನರಿಗೆ ಗೊತ್ತಾಗಿದೆ. 11 ದಿನಕ್ಕೆ ಯಾವ ಪಕ್ಷ ಕೊಚ್ಚಿಕೊಂಡು ಹೋಯಿತು ಇದು ನಿಮಗೆ ಗೊತ್ತಿಲ್ಲವೇ? ಯಾವ ಪ್ರಧಾನಮಂತ್ರಿಗಳೂ ಕೂಡ 11 ದಿನಕ್ಕೆ ಕೊಚ್ಚಿಕೊಂಡು ಹೋಗಿಲ್ಲ. 11 ದಿನಕ್ಕೆ ಕೊಚ್ಚಿಕೊಂಡು ಹೋಗಿರುವುದು ಅದು ಬಿ.ಜೆ.ಪಿ. ಪಕ್ಷದ ಸರ್ಕಾರ ಮಾತ್ರ ಆ ರೀತಿ ಆಗಿದೆ. ಇದು ಒಂದು ಇತಿಹಾಸವಾಗಿದೆ. ಆದ್ದರಿಂದ ಚುನಾವಣೆ ಬಂದಾಗ ಯಾರ್‍ಯಾರು ಉಳಿಯುತ್ತಾರೆ ಯಾರ್‍ಯಾರು ಕೊಚ್ಚಿಕೊಂಡು ಹೋಗುತ್ತಾರೆ ಎನ್ನತಕ್ಕಂಥದ್ದನ್ನು ಜನ ತೀರ್ಮಾನ ಮಾಡುತ್ತಾರೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೆ, ಒಂದು ಸಲಹೆ ನೀಡುತ್ತಿದ್ದೇನೆ, ಅದೇನೆಂದರೆ ರಾಜಕೀಯ ಭಾಷಣವನ್ನು ಕೊನೆಗೆ ಇಟ್ಟುಕೊಳ್ಳೋಣ. ಹಣಕಾಸಿನ ಸಚಿವರು ಏನು ಹೇಳಬೇಕೆಂದು ಇದ್ದಾರೋ ಅದನ್ನೆಲ್ಲಾ ಹೇಳಿಬಿಡಲಿ. ಆ ನಂತರ ರಾಜಕೀಯ ಭಾಷಣವನ್ನು ಇಟ್ಟುಕೊಳ್ಳೋಣ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಹಣಕಾಸಿನ ಸಚಿವರು ಹೇಳುವುದನ್ನು ಕೇಳದೆ ಮಧ್ಯ ಮಧ್ಯದಲ್ಲಿ ಅವರಿಗೆ ಡಿಸ್ಟರ್ಬ್ ಮಾಡುತ್ತಿದ್ದೀರಲ್ಲಾ..

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಆ ರಾಜಕೀಯ ಭಾಷಣ ಮಾಡುವುದಕ್ಕೆ ಪ್ರೇರೇಪಣೆ ಕೊಡತಕ್ಕಂಥವರು ಇವರೇ ಕಾರಣ.

ಶ್ರೀ ಸಿದ್ಧರಾಮಯ್ಯ : ಇವರು ಯಾರು ಮಾತನಾಡಿದಾಗಲೂ ಸಹ ನಾನು ಮಧ್ಯೆ ಮಾತನಾಡದೆ ಸುಮ್ಮನೆ ಇದ್ದೆ. ಸುಮ್ಮನೆ ಅವರು ಹೇಳಿದ್ದನ್ನು ಕೇಳಿಕೊಂಡಿದ್ದೇನೆ ಮತ್ತು ಬರೆದುಕೊಂಡಿದ್ದೇನೆ. ನಾನು ಮಾತನಾಡುವಾಗ ಇಷ್ಟೇಕೆ ನೀವು ತೊಂದರೆ ಕೊಡುತ್ತಿದ್ದೀರಿ.? ಆದ್ದರಿಂದ ಇವತ್ತು ನಮ್ಮ ರಾಜ್ಯದವರೇ ನಮ್ಮಲ್ಲಿ ಮುಖ್ಯಮಂತ್ರಿ ಆಗಿದ್ದಂಥವರು, ಸಾಮಾನ್ಯ ರೈತ ಕುಟುಂಬದಿಂದ ಬಂದಿದ್ದಂಥವರು ಈ ದೇಶದ ಪ್ರಧಾನಮಂತ್ರಿಯಾಗಿರತಕ್ಕಂಥದ್ದು ಕೂಡ ಇತಿಹಾಸವೆಂದು ನಾವು ಹೇಳಬೇಕಾಗುತ್ತದೆ ಆದ್ದರಿಂದ ಇವತ್ತು ಕರ್ನಾಟಕದ ಜನ ಹೆಮ್ಮೆ ಪಡಬೇಕಾದದ್ದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ. ಅವರು ಪ್ರಧಾನ ಮಂತ್ರಿಗಳಾದ ಮೇಲೆ ಸಂಯುಕ್ತ ಸರ್ಕಾರ ಎರಡನೇ ಬಜೆಟ್‌ನ್ನು ಕೂಡ ಮಂಡಿಸಿದ್ದರೆ ಅವರ ಮೊದಲನೆ ವರ್ಷದ ಬಜೆಟ್ ಮತ್ತು ಎರಡನೇ ವರ್ಷದ ಬಜೆಟ್ ನೋಡಿದಾಗ ಒಬ್ಬ ಸಾಮಾನ್ಯ ರೈತ ಕುಟುಂಬದಿಂದ ಪ್ರಧಾನಿ ಆದಾಗ ಈ ದೇಶದ ರೈತರ ಬಗ್ಗೆ ದೇಶದ ಒಟ್ಟಾರೆ ಅಭಿವೃದ್ಧಿ ಬಗ್ಗೆ ಯಾವ ರೀತಿಯಿಂದ ಚಿಂತನೆ ಮಾಡಿದ್ದಾರೆ ಎನ್ನತಕ್ಕಂಥದ್ದು ಆ ಬಜೆಟ್‌ನಲ್ಲಿ ವ್ಯಕ್ತವಾಗುತ್ತದೆ. ಸನ್ಮಾನ್ಯ ಮೊಯಿಲಿಯವರು ಹೇಳಿದರು-Accelerated Irrigation benefit Scheme ತ್ವರಿತ ಫಲಪ್ರದಾಯ ನೀರಾವರಿ ಕಾರ್ಯಕ್ರಮ ಇದಕ್ಕೆ ಪ್ರಧಾನಮಂತ್ರಿಗಳು ದುಡ್ಡು ಕೊಟ್ಟಿದ್ದೇವೆಂದು ಹೇಳುತ್ತಾರೆ, ಆದರೆ ಅದು ನಿಜವಾಗಿ ಕೊಟ್ಟಿರತಕ್ಕಂಥದ್ದು ಅಲ್ಲ ಕೊಟ್ಟಿದ್ದೇವೆಂದು ತೋರಿಸಿ ಬೇರೆ ಬೇರೆ ಪ್ಲಾನ್ ಅಸಿಸ್ಟೆನ್ಸ್‌ನಲ್ಲಿ ಕೊಡತಕ್ಕಂಥ ಹಣದಿಂದ ತೆಗೆದು ಕೊಟ್ಟಿಬಿಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಬಹುಶಃ ಅವರೆಲ್ಲಾ ಅದನ್ನು ಸ್ವಾಗತ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಕೇಂದ್ರ ಸರ್ಕಾರದ ಯೋಜನೆಯಾಗಿರುವ ಈ Accelerated Irrigation Benefit Scheme ಅದು ಪ್ರಥಮಬಾರಿಗೆ ಕರ್ನಾಟಕಕ್ಕೆ ನೀರಾವರಿ

ಯೋಜನೆಗಳಿಗೆ ಕೇಂದ್ರದಿಂದ ಬರುತ್ತಿರತಕ್ಕಂಥ ಸಹಾಯ, ಅದು ಸಾಲದ ರೂಪದಲ್ಲಿ ಇರಬಹುದು. ಆದರೆ ಇದನ್ನು ಪ್ರಥಮ ಬಾರಿಗೆ ಬಂದಿರತಕ್ಕಂಥ ಸಹಾಯ ಎನ್ನತಕ್ಕಂಥ ಮಾತನ್ನು ಅವರಿಗೆ ತಿಳಿಸಲಿಕ್ಕೆ ನಾನು ಬಯಸುತ್ತಿದ್ದೇನೆ. ಇದು ನೀರಾವರಿ ಬಗ್ಗೆ ಇರುವ ಅವರ ಕಳಕಳಿಯನ್ನು ವ್ಯಕ್ತಪಡಿಸುತ್ತದೆ ಎನ್ನತಕ್ಕಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಹಾಗೆಯೇ 1997ನೇ ಆಗಸ್ಟ್ 15ನೇ ತಾರೀಖಿನಂದು ನಮಗೆ ಸ್ವಾತಂತ್ರ್ಯ ಬಂದು 50 ವರ್ಷ ಆದ ಪ್ರಯುಕ್ತ ಅದರ ಆಚರಣೆಯನ್ನು ಮಾಡುತ್ತಿದ್ದೇವೆ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಇನ್ನೂ ಹಳ್ಳಿಗಳಲ್ಲಿನ ಸಾಮಾನ್ಯ ಜನರಿಗೆ ಮೂಲಭೂತ ಸೌಕರ್ಯಗಳನ್ನು ಕೊಡಲಿಕ್ಕೆ ಆಗಲಿಲ್ಲ. ಅದನ್ನೇ ವಾಟಾಳ್ ನಾಗರಾಜ್‌ರವರು ಗಾಂಧೀಜಿಯವರನ್ನು ಏಕೆ ನೆನೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಸ್ವಾತಂತ್ರ್ಯ ಭಾರತ ಹೇಗೆ ಇರಬೇಕೆಂದು ಗಾಂಧೀಜಿಯವರು ಹೇಳಿದ ಮಾತು ಅದು. ಎಲ್ಲರಿಗೂ ದೇಶದಲ್ಲಿ ಸಿಕ್ಕತಕ್ಕಂಥ ಎಲ್ಲಾ ಸೌಲಭ್ಯಗಳೂ ಹಂಚಿಕೆಯಾಗಬೇಕು. ಜನರಿಗೆ ಅವರ ಬದುಕಿಗೆ ಅದು ಅವರು ಸುಧಾರಣೆ ಮಾಡಿಕೊಳ್ಳಲಿಕ್ಕೆ, ಅವರ ಜೀವನಮಟ್ಟ ಮೇಲಕ್ಕೆ ಹೋಗಬೇಕಾದರೆ ಎಲ್ಲಾ ಸೌಕರ್ಯ ಕೆಲವೇ ಜನರಿಗೆ ಸಿಗುವುದು ಅಲ್ಲ, ಎಲ್ಲರಿಗೂ ಸಿಗಬೇಕು ಎನ್ನತಕ್ಕಂಥ ಸ್ವತಂತ್ರ್ಯ ಭಾರತವನ್ನು ನಾನು ಕನಸು ಕಾಣುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದಂಥ ಮಾತನ್ನು ಹೇಳಿದ್ದರು. ಆ ಹಿನ್ನೆಲೆಯಲ್ಲಿ ನಾನು ಈ 50ನೇ ವರ್ಷದಲ್ಲಿ ಗಾಂಧಿಜಿಯವರನ್ನು ಅವರು ಹೇಳಿದಂಥ ಮಾತುಗಳನ್ನು, ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಅವರಿಗೆ ಹೇಳುವುದಕ್ಕೆ ಬಯಸಿದ್ದೇನೆ ಇಷ್ಟು ವರ್ಷ ಆದರೂ ಕೂಡ ಇನ್ನು ಅನೇಕ ಹಳ್ಳಿಯಲ್ಲಿ ಕುಡಿಯಲಿಕ್ಕೆ ನೀರು ಇಲ್ಲದೆ ಇರತಕ್ಕಂಥದ್ದು, ರಸ್ತೆಗಳು ಇಲ್ಲದೆ ಇರತಕ್ಕಂಥದ್ದು, ನಿರುದ್ಯೋಗ ಸಮಸ್ಯೆ, ಬಡವರಿಗೆ ಸೂರು ಇಲ್ಲದೆ ಇರತಕ್ಕಂಥದ್ದು, ಶಾಲೆಗಳು ಇಲ್ಲದೆ ಇರತಕ್ಕಂಥದ್ದು, ಇವೆಲ್ಲಾ ಮೂಲಭೂತ ಸಮಸ್ಯೆಗಳನ್ನು ನಾವು ಕಾಣುತ್ತಿದ್ದೇವೆ.

ಶ್ರೀಮಾನ್ ಹೆಚ್. ಡಿ. ದೇವೇಗೌಡರು ಪ್ರಧಾನಿಯಾದ ತಕ್ಷಣ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಈ Minimum needs programme ಇದಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ದಿಕ್ಕಿನಲ್ಲಿ ಹೆಚ್ಚು ಪ್ರಯತ್ನವನ್ನು ಅವರ ಆಯವ್ಯಯದಲ್ಲಿ ಮಾಡಿರತಕ್ಕಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ನಮ್ಮ ಆದ್ಯತೆಗಳು, ಹಳ್ಳಿಗಾಡಿನಲ್ಲಿ ಅಭಿವೃದ್ಧಿ, ಹಳ್ಳಿಗಾಡಿನಲ್ಲಿ ರಸ್ತೆಯನ್ನು ಮಾಡತಕ್ಕಂಥದು, ಬಡವರಿಗೆ ಮನೆಗಳನ್ನು ಕೊಡತಕ್ಕಂಥದ್ದು, ಕಡಿಮೆ ದರದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸತಕ್ಕಂಥದ್ದು, ನೀರಾವರಿಯನ್ನು

ಮಾಡತಕ್ಕಂಥದ್ದು, ಅದು ನಾವು ಅಧಿಕಾರಕ್ಕೆ ಬಂದಾಗಿನಿಂದ ಇವುಗಳನ್ನು ನಮ್ಮ ಆದ್ಯತೆಯ ವಲಯಗಳನ್ನಾಗಿ ಮಾಡಿದ್ದೇವೆ. ಪ್ರಾಥಮಿಕ ಶಿಕ್ಷಣ, ಆರೋಗ್ಯ ಅದನ್ನು ಮುಂದುವರೆಸತಕ್ಕಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದಕ್ಕೆ ನಾನು ನನ್ನ ಭಾಷಣದಲ್ಲಿ ಅವರು ಹೇಳಿರತಕ್ಕಂತಹ ವಿಚಾರವನ್ನು ಸ್ವಾಗತ ಮಾಡುತ್ತಾ, ಈ ವಲಯಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರ ಒದಗಿಸಬೇಕು ಎನ್ನತಕ್ಕಂಥ ಒತ್ತಾಯವನ್ನೂ ಕೂಡ ಮಾಡಿದ್ದೇನೆ. ತಮಗೆ ಗೊತ್ತಿರುವಂತಹ ರೀತಿಯಲ್ಲಿ ರಾಜ್ಯಕ್ಕೆ ದೊರಕ್ಕತಕ್ಕಂತಹ ಸಂಪನ್ಮೂಲಗಳು ಸೀಮಿತ. ಆದರೆ ಕೇಂದ್ರ ಸರ್ಕಾರಕ್ಕೆ ದೊರಕತಕ್ಕಂತಹ ಸಂಪನ್ಮೂಲಗಳ ವ್ಯಾಪ್ತಿ ಬಹಳ ವಿಸ್ತಾರವಾಗಿದೆ. ಆ ಕಾರಣದಿಂದ ನನ್ನ ಹಿಂದಿನ ಎರಡೂ ಆಯವ್ಯಯದಲ್ಲಿಯೂ ಕೂಡ ಮತ್ತೆ ಈ ವರ್ಷ ಕೂಡ ನಾನು ಪ್ರಸ್ತಾಪ ಮಾಡಿದ್ದೇನೆ. ಕೇಂದ್ರ ಪಡೆದುಕೊಳ್ಳತಕ್ಕಂತಹ ತೆರಿಗೆಗಳಲ್ಲಿ ಒಟ್ಟು ತೆರಿಗೆ ಆದಾಯದಲ್ಲಿ ರಾಜ್ಯಕ್ಕೆ ಕನಿಷ್ಟ 40 ಪರ್ಸೆಂಟ್ ಅದರೂ ಕೂಡ ವರ್ಗಾವಣೆಯನ್ನು ಮಾಡಬೇಕು ಎನ್ನುವುದು ನಮ್ಮ ಒತ್ತಾಯ ಇದರ ಬಗ್ಗೆ ಕಳೆದ ವರ್ಷ ಕೂಡ ಒತ್ತಾಯವನ್ನು ಮಾಡಿದ್ದೆ. ಕಳೆದ ವರ್ಷ 10ನೇ ವಿತ್ತ ಆಯೋಗದ ಶಿಫಾರಸ್ಸಿನಲ್ಲಿ ಹೇಳಿರತಕ್ಕಂತಹ ಶಿಫಾರಸ್ಸುಗಳನ್ನು ಜಾರಿಗೆ ಮಾಡಬೇಕು. ಏನು 29 ಪರ್ಸೆಂಟ್ ಆದಾಯಗಳ ಮೇಲೆ ವರ್ಗಾವಣೆಯಾಗಬೇಕೆಂದು ಹೇಳಿದ್ದೇನೆ. ಅದರ ಜೊತೆಗೆ 29 ಪರ್ಸೆಂಟ್ ರಿಂದ 40 ಪರ್ಸೆಂಟ್ ಆಗಬೇಕೆಂದು ಒಂದು ಒತ್ತಾಯವನ್ನು ಮಾಡಿದ್ದೆ. ಶ್ರೀ ಚಿದಂಬರಂರವರು ಅವರ ಆಯವ್ಯಯದಲ್ಲಿ ಆ 20 ಸಿಂಗಲ್ ಡಿವಿಜಬಲ್ ಪೂಲ್ ಅದನ್ನು ಒಪ್ಪಿಕೊಂಡು, 29 ಪರ್ಸೆಂಟ್ ಆದಾಯವನ್ನು ರಾಜ್ಯಗಳಿಗೆ ವರ್ಗಾವಣೆಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅದರ ಜೊತೆಗೆ ನಾನು ಏನು ಪ್ರತಿಪಾದನೆಯನ್ನು ಮಾಡಿಕೊಂಡು ಬಂದಿದ್ದೇನೆ, ಅದರಂತೆ 29 ಪರ್ಸೆಂಟ್ ಕಡಿಮೆಯಾಗುತ್ತದೆ. ಅದನ್ನು 40 ಪರ್ಸೆಂಟ್‌ಗೆ ಅದರೂ ಕೂಡ ರಾಜ್ಯಗಳಿಗೆ ಕೊಡತಕ್ಕಂತಹ ಪಾಲನ್ನು ಹೆಚ್ಚಿಸಬೇಕು ಎನ್ನುವಂತಹ ಒತ್ತಾಯವನ್ನು ಈಗಲೂ ಕೂಡ ನಾನು ಮಾಡಲಿಕ್ಕೆ ಬಯಸುತ್ತೇನೆ ಎಂದು ಹೇಳುತ್ತಾ ಅದರ ಜೊತೆಗೆ ರಾಜ್ಯಾಂಗ ತಿದ್ದುಪಡಿಯಾಗಬೇಕು. ಇದನ್ನು ತಿದ್ದುಪಡಿ ಮಾಡುವಾಗ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆಯನ್ನು ಮಾಡಿ ರಾಜ್ಯದ ಪಾಲನ್ನು ಇನ್ನೂ ಹೆಚ್ಚು ಮಾಡಲಿಕ್ಕೆ ಅದನ್ನು ಅವರು ಆಯವ್ಯಯದಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಹೆಚ್ಚು ಮಾಡಲಿಕ್ಕೆ ಕೇಂದ್ರ ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು ಎನ್ನತಕ್ಕಂತಹ ಒತ್ತಾಯವನ್ನೂ ಕೂಡ ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಅದರ ಜೊತೆಗೆ ಕೇಂದ್ರ ಸರ್ಕಾರ ಪ್ಲಾನ್ ಅಸಿಸ್ಟೆಂಟ್ಸ್ ಏನು ಕೊಡುತ್ತಿದ್ದಾರೆ ಅದನ್ನು 70:30ರ ಅನುಪಾತದಲ್ಲಿ ಕೊಡುತ್ತಿದ್ದಾರೆ. 70

ಪರ್ಸೆಂಟ್ ಸಾಲ 30 ಪರ್ಸೆಂಟ್ ಅನುದಾನದ ರೂಪಾದಲ್ಲಿ ಕೊಡುತ್ತಿದ್ದಾರೆ. ಇವೊತ್ತು ರಾಜ್ಯದ ಮೇಲೆ ಖರ್ಚಿನ ಹೊರೆ ಹೆಚ್ಚಾಗುತ್ತದೆ. ರಾಜ್ಯದ ಬೆಳವಣಿಯಾಗಬೇಕಾದರೆ, ಮೂಲಭೂತವಾದಂತಹ ಸೌಕರ್ಯಗಳನ್ನು ಅಭಿವೃದ್ಧಿಪಡಿಸತಕ್ಕಂತಹ, ವ್ಯವಸಾಯಕ್ಕೆ, ವಿದ್ಯುತ್, ನೀರಾವರಿಗೆ ಹೆಚ್ಚು ಹಣವನ್ನು ಖರ್ಚುಮಾಡಬೇಕಾಗಿರುವುದು ಅನಿವಾರ್ಯವಾಗಿರುವುದರಿಂದ ನಾನು ಅದನ್ನು ಶೇಕಡ 50:50ರ ಅನುಪಾತದಲ್ಲಿ ಕೇಂದ್ರ ಸರ್ಕಾರ ಕೊಡಲಿಕ್ಕೆ ಚಿಂತನೆಯನ್ನು ಮಾಡಬೇಕೆಂದೂ ಕೂಡ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ ಮಾರುಕಟ್ಟೆ, ಬಾರೋಯಿಂಗ್ಸ್ ಏನಿದೆ ಅದನ್ನು ಪ್ಲಾನಿಂಗ್ ಕಮಿಷನ್‌ರವರು ನಿರ್ಧಾರ ಮಾಡುತ್ತಾರೆ. ಅದಕ್ಕೆ ಯಾವುದೇ ಮಾನದಂಡವಾಗಲಿ ಅಥವಾ ಅಳತೆಗೋಲಾಗಲಿ ಯಾವ ರಾಜ್ಯ ಚೆನ್ನಾಗಿ ಹಣಕಾಸಿನ ನಿರ್ವಹಣೆ ಮಾಡಿದೆ. ಡೆಟ್‌ಸರ್ವಿಸ್‌ನ ಕಡಿಮೆ ಇಟ್ಟುಕೊಂಡಿದೆ, ಬೆಳವಣೆಯ ದಿಕ್ಕಿನಲ್ಲಿ ನಡೆಯುತ್ತದೆ. ಇದು ಯಾವ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಳ್ಳದೇ ಅದಕ್ಕೆ ಮಾನದಂಡಗಳನ್ನು ಮಾಡದೇ ಯೋಜನಾ ಆಯೋಗದವರು ಇದನ್ನು ನಿರ್ಧಾರ ಮಾಡುತ್ತಾರೆ. ಆದುದರಿಂದ ಈ ರೀತಿಯ ಒಂದು ಮಾನದಂಡವನ್ನು ಇಟ್ಟುಕೊಂಡು ವೈಜ್ಞಾನಿಕವಾಗಿ ಮಾರುಕಟ್ಟೆ ಬಾರೋಯಿಂಗ್ಸ್ ಬಗ್ಗೆ ನಿರ್ಧಾರವನ್ನು ಮಾಡಿದರೆ ರಾಜ್ಯಕ್ಕೆ ಹೆಚ್ಚಿನ ಹಣಕಾಸು ನೆರವು ಬರುತ್ತದೆ. ಆ ದಿಕ್ಕಿನಲ್ಲಿ ಕೇಂದ್ರ ಸರ್ಕಾರ ಆಲೋಚನೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಅದರ ಜೊತೆಗೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಬಗ್ಗೆ ಚರ್ಚೆಯಾಗಿ ಒಂದು ತೀರ್ಮಾನವನ್ನು ಮಾಡಿದ್ದಾರೆ. ಮಾರ್ಕೆಟ್ ಬಾರೋಯಿಂಗ್ಸ್‌ನಲ್ಲಿ ಅವನ್ನು ಖರ್ಚು ಮಾಡತಕ್ಕಂತಹ ಹಣದಲ್ಲಿ ಶೇಕಡ 80ರಷ್ಟು ಹಣವನ್ನು ರಾಜ್ಯಗಳಿಗೆ ವರ್ಗಾವಣೆಯನ್ನು ಮಾಡಬೇಕು. ಆದ್ಯತೆಗಳನ್ನು ಕೇಂದ್ರ ಸರ್ಕಾರದವರು ಗುರುತಿಸದೆ ರಾಜ್ಯಗಳಿಗೆ ಆದ್ಯತೆಗಳನ್ನು ಗುರುತಿಸುವುದಕ್ಕೆ ಅವಕಾಶಗಳು ಇರಬೇಕೆಂದು ಚರ್ಚೆಯಾಗಿ ಅದಕ್ಕೆ ಒಪ್ಪಿಗೆ ದೊರತಿದೆ. ಇದನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ. ಒಟ್ಟು ಸೆಂಟ್ರಲಿ ಸ್ಪಾನ್‌ಸರ್ಡ್ ಸ್ಕೀಮ್‌ಗಳಲ್ಲಿ ಸರ್ಕಾರಗಳಿಗೆ ಶೇಕಡ 80ರಷ್ಟಾದರೂ ವರ್ಗಾವಣೆಯನ್ನು ಮಾಡಬೇಕು ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರವನ್ನು ಕೋರುತ್ತೇನೆ. ಆ ಕಾರಣದಿಂದ ಕೇಂದ್ರ ಸರ್ಕಾರ ಇವೊತ್ತು ಕೆಲವನ್ನು ಅವರ ಬಜೆಟ್‌ನಲ್ಲಿ ತೆಗೆದುಕೊಂಡಿರತಕ್ಕಂತಹ ತೀರ್ಮಾನಗಳು ರಾಜ್ಯದ ಹಿತದೃಷ್ಟಿಯಿಂದ ಸ್ವಾಗತಾರ್ಹವಾಗಿದೆ. ಇನ್ನು ಕೆಲವು ತೀರ್ಮಾನಗಳನ್ನು ಮಾಡಬೇಕು ಎನ್ನುವಂತಹ ಒತ್ತಾಯವನ್ನು ಮಾಡುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಮಾತನ್ನು ಹೇಳಿದರು ಚಿದಂಬರಂರವರ ಬಜೆಟ್ ಅವರು ಯಾವ ದೃಷ್ಟಿಕೊನವನ್ನು ಇಟ್ಟುಕೊಂಡು ಬಜೆಟ್‌ನ್ನು ತಯಾರು ಮಾಡಿದ್ದಾರೆ,

ಮಂಡಿಸಿದ್ದಾರೆ, ಅದೇ ದಿಕ್ಕಿನಲ್ಲಿ ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮಾಡುವುದಕ್ಕೆ ಹೋಗಿ ಎಡವಿಬಿಟ್ಟಿದ್ದಾರೆ, ಎನ್ನತಕ್ಕಂತಹ ಮಾತನ್ನು ಪ್ರಸ್ತಾಪ ಮಾಡಿದರು. ನಾವು ಕಳೆದ ಎರಡು ವರ್ಷಗಳಲ್ಲಿ ಯಾವ ದೃಷ್ಟಿ ಕೋನವನ್ನು ಇಟ್ಟುಕೊಂಡು ಹೊರಟಿದ್ದೇವೆ ಅದು ರಾಜ್ಯದ ಹಿತದೃಷ್ಟಿಯಿಂದ ಯಾವುದನ್ನು ನಮ್ಮ ಆದ್ಯತೆಗಳು ಎಂದು ಗುರುತಿಸಿಕೊಂಡಿದ್ದೇವೆ. ಅದರಲ್ಲಿ ಎಲ್ಲಿಯೂ ಕೂಡ ವಿಚಾಲಿತರಾಗಿಲ್ಲ ಎನ್ನುವುದನ್ನು ನಾನು ಸ್ಪಷ್ಟಪಡಿಸಲಿಕ್ಕೆ ಇಚ್ಛೆಯನ್ನು ಪಡುತ್ತಿದ್ದೇನೆ. ಆ ಕಾರಣದಿಂದ ಕೇಂದ್ರ ಸರ್ಕಾರದವರು ಬಜೆಟ್‌ನಲ್ಲಿ ಅವರು ಯಾವ ಆದ್ಯತೆಗಳನ್ನು ಇಟ್ಟುಕೊಳ್ಳುತ್ತಾರೆ ಅದಕ್ಕೆ ಅವರಿಗೆ ಶಹಭಾಸ್‌ಗಿರಿ ಸಿಕ್ಕಿದೆ. ಇವೊತ್ತು ನಾನು ಕೂಡ ಒಟ್ಟಾರೆ ಕೇಂದ್ರ ಸರ್ಕಾರದ ಬಜೆಟನ್ನು ಸ್ವಾಗತ ಮಾಡುತ್ತೇನೆ.

11.30 ಎ.ಎಂ

ತೆರಿಗೆ ಆದಾಯ ಬೆಳವಣಿಗೆಯ ದೃಷ್ಟಿಯಿಂದ ಒಟ್ಟಾರೆ ಎಲ್ಲಾ ಜನರ ಭದ್ರತೆಯನ್ನು ಕಾಪಾಡತಕ್ಕ ಬಜೆಟ್ ಎಂದು ಕೇಂದ್ರ ಸರ್ಕಾರದ ಅಯವ್ಯವನ್ನು ನಾನು ಸ್ವಾಗತ ಮಾಡುತ್ತೇನೆ. ಹಾಗೆಂದು ಹೇಳಿ ಅವರು ಮಾಡಿದ್ದನ್ನು ಮಾಡುವುದಕ್ಕೆ ಅದರ ಪಡಿಯಚ್ಚು ರೀತಿಯಲ್ಲಿ ಹೊರಟಿದ್ದೇನೆಂದು ಅಲ್ಲ. ನನ್ನ ಈ 1997-98ರ ಆಯವ್ಯಯವನ್ನು ಸಾರ್ವತ್ರಿಕವಾಗಿ ಹೆಚ್ಚು ಕಡಿಮೆ ಸ್ವಾಗತ ಮಾಡಿದ್ದಾರೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ವಿಶೇಷವಾಗಿ ಕಳೆದ ಎರಡು ವರ್ಷಗಳಿಂದ ನಾವು ಈ ತೆರಿಗೆಯಲ್ಲಿ ಏನು ಹೊಸ ಪದ್ಧತಿಗೆ ಹೋಗಬೇಕೆಂಬ ಪ್ರಯತ್ನ ಮಾಡಿದ್ದೇವೆ, ತೆರಿಗೆ ಸುಧಾರಣೆಗಳನ್ನು ಮಾಡಿ, ಸರಳೀಕರಣ ಮಾಡಿ, ಅದು ಹೆಚ್ಚು ಪಾರದರ್ಶಕವಾಗಿರಬೇಕೆಂದು ಮಾಡಿ ಆ ಮೂಲಕ ರಾಜ್ಯದ ಕೈಗಾರಿಕೆ, ವ್ಯಾಪಾರ ಅಭಿವೃದ್ಧಿ ಆಗಬೇಕು, ತೆರಿಗೆ ಕೊಡತಕ್ಕವರು ಹೆಚ್ಚು ತೆರಿಗೆ ಕೊಡತಕ್ಕ ವಾತಾವರಣ ನಿರ್ಮಾಣವಾಗಬೇಕು, ಪಕ್ಕದ ರಾಜ್ಯದಲ್ಲಿ ಏನು ತೆರಿಗೆಯ ದರಗಳು ಇವೆ ಅದಕ್ಕೆ ಸರಿಸಮಾನವಾಗಿ ಹೆಚ್ಚು ಕಡಿಮೆ ಇರತಕ್ಕ ರೀತಿಯಲ್ಲಿ ನೋಡಿಕೊಳ್ಳಬೇಕು. ನಮ್ಮಲ್ಲಿರತಕ್ಕ ವಾಣಿಜ್ಯ ವ್ಯವಹಾರಗಳು ವ್ಯಾಪಾರ ಕೈಗಾರಿಕೆ ಪಕ್ಕದ ರಾಜ್ಯಕ್ಕೆ ಹೋಗಬಾರದು, ಆ ಮೂಲಕ ಹೆಚ್ಚು ತೆರಿಗೆ ನಮ್ಮ ಈ ರಾಜ್ಯಕ್ಕೆ ಬರಬೇಕೆಂಬ ಉದ್ದೇಶ ಇಟ್ಟುಕೊಂಡು ಮತ್ತು ಅವೆಲ್ಲದರ ಮೂಲಕ ಈ VAT ಸಿಸ್ಟಂನ್ನು ಅಂದರೆ Value Added Tax System ಅನ್ನು ಇವತ್ತು ಎಲ್ಲಾ ಮುಂದುವರಿದ ರಾಷ್ಟ್ರಗಳು ಏನು ಅಳವಡಿಸಿಕೊಂಡಿವೆ ಆ ದಿಕ್ಕಿಗೆ ನಾವು ಇವತ್ತಲ್ಲದಿದ್ದರೂ ಇನ್ನು 2-3 ವರ್ಷಗಳಲ್ಲಾದರೂ ಹೋಗಬೇಕಾಗುತ್ತದೆ. ಆ VAT ಸಿಸ್ಟಂ ಅನ್ನು ನಮ್ಮ ದೇಶದಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಕೆಲವು ರಾಜ್ಯಗಳು ಕೆಲವು ಪದಾರ್ಥಗಳ ಮೇಲೆ ಈ ಪದ್ಧತಿಯನ್ನು ಜಾರಿಗೆ ತಂದಿದೆ. ಪಶ್ಚಿಮ ಬಂಗಾಳದಲ್ಲಿ

ವ್ಯಾಟ್‌ಸಿಸ್ಟಂ ಅನ್ನು ಜಾರಿಗೆ ತಂದಿದ್ದಾರೆ. ತಮಿಳ್ನಾಡು, ಆಂಧ್ರ, ಮಹಾರಾಷ್ಟ್ರ ಈ ರಾಜ್ಯಗಳಲ್ಲಿ ಈಗಾಗಲೇ ಅವರು ಕೆಲವು ಸರಕುಗಳ ಮೇಲೆ ವ್ಯಾಟ್ ಸಿಸ್ಟಂ ಅನ್ನು ಜಾರಿಗೆ ತಂದಿದ್ದಾರೆ. ಪೂರ್ಣವಾಗಿ ಅವರು ವ್ಯಾಟ್ ಸಿಸ್ಟ್‌ಂಗೆ ಹೋಗಿಲ್ಲ. ನಾವು ಇವತ್ತು ವ್ಯಾಟ್‌ಸಿಸ್ಟ್‌ಂಗೆ ಹೋಗಬೇಕಾಗುತ್ತದೆ. ಈ ದೇಶದಲ್ಲಿ ಇವತ್ತಲ್ಲ ನಾಳೆ ಮುಕ್ತ ಮಾರುಕಟ್ಟೆ ನಿರ್ಮಾಣವಾಗುತ್ತದೆ. ಸರಕುಗಳು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಓಡಾಡತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆಂದಾಗ ನಮ್ಮ ತೆರಿಗೆ ಅತ್ಯಂತ ಸರಳೀಕರಣವಾಗಿ ಬೇರೆ ರಾಜ್ಯಗಳಿಗೆ ಹೋಲಿಕೆ ಇದ್ದು ಹೆಚ್ಚು ಪಾರದರ್ಶಕವಾಗಿರತಕ್ಕ ವ್ಯವಸ್ಥೆ ನಿರ್ಮಾಣವಾಗಬೇಕಾಗುತ್ತದೆ. ಇದನ್ನು ಮಾನ್ಯ ಮೊಯಿಲಿಯವರು ಸ್ವಾಗತಿಸಿದ್ದಾರೆ. ಅದಕ್ಕೆ ಅವರಿಗೆ ನನ್ನ ಅಭಿನಂದನೆಗಳು. ತೆರಿಗೆ ಸುಧಾರಣೆ ಮಾಡತಕ್ಕ ಕೆಲಸ ಮಾಡಿದ್ದಾರೆಂಬ ಮಾತನ್ನು ಹೇಳಿದ್ದಾರೆ. ವಿಶೇಷವಾಗಿ ಎಲ್ಲಾ ವೃತ್ತ ಪತ್ರಿಕೆಗಳು ಅದನ್ನು ಸ್ವಾಗತ ಮಾಡಿವೆ. ನಾನು ಹಣಕಾಸಿನ ಮಂತ್ರಿಯಾದಾಗ 21 ತೆರಿಗೆಯ ದರಗಳು ಇದ್ದವು. ಅದನ್ನು 2-4-8-12 ಈ 4 ದರಗಳಿಗೆ ಮತ್ತು ಎರಡು ವಿಶೇಷ ದರಗಳು 1 ಮತ್ತು 20 ಈ ತರಹ ಕೆಲವು ದರಗಳನ್ನು ಬಿಟ್ಟರೆ ಶೇಕಡ 99ರಷ್ಟು ಕಮಾಡಿಟೀಸ್ ಈ ನಾಲ್ಕು ದರಗಳ ವ್ಯಾಪ್ತಿಯಲ್ಲಿ ಬರತಕ್ಕ ಪ್ರಯತ್ನ ಮಾಡಿರತಕ್ಕದ್ದು ಇಡೀ ದೇಶದಲ್ಲಿ ಕರ್ನಾಟಕ ರಾಜ್ಯವೇ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತಿದ್ದೇನೆ. ಇದರ ಬಗ್ಗೆ ಎಲ್ಲಾ ರಾಜ್ಯಗಳ ಹಣಕಾಸಿನ ಮಂತ್ರಿಗಳು ಕೂಡಿ ಚರ್ಚೆ ಮಾಡಿದ್ದಾರೆ. ಶ್ರೀ ರಾಜಾ ಚೆಲ್ಲಯ್ಯನವರು ಕೊಟ್ಟಿರತಕ್ಕ ವರದಿಯ ಮೇಲೆ ಚರ್ಚೆಯಾಗಿ ಇದನ್ನು ಮಾಡಬೇಕೆಂದು ಒಪ್ಪಂದ ಆಗಿದ್ದರೂ ಕೂಡ ಈ ದಿಸೆಯಲ್ಲಿ ಪ್ರಯತ್ನ ಮಾಡಿರತಕ್ಕದ್ದು ಕರ್ನಾಟಕ ರಾಜ್ಯವೇ ಮೊದಲನೆಯ ರಾಜ್ಯ ಎಂದು ಹೇಳಬಯಸುತ್ತೇನೆ. ಜೊತೆಗೆ ತೆರಿಗೆ ವಿಧಿಗಳು ಏನಿವೆ, ಸೇಲ್ಸ್ ಟ್ಯಾಕ್ಸ್, ಸರ್ಚಾರ್ಜ್, ಎಂಟ್ರಿಟ್ಯಾಕ್ಸ್, ಪರ್ಚೇಸ್ ಟ್ಯಾಕ್ಸ್ ಈ ತರಹ ತೆರಿಗೆ ವಿಧಿಗಳು ಏನಿವೆರೆ, ಸೇಲ್ಸ್ ಟ್ಯಾಕ್ಸ್, ಸರ್ಚಾರ್ಜ್, ಎಂಟ್ರಿಟ್ಯಾಕ್ಸ್, ಪರ್ಚೇಸ್‌ಟ್ಯಾಕ್ಸ್ ಈ ತರಹ ತೆರಿಗೆ ವಿಧಿಗಳು ಏನಿವೆ ಇವು ಕಡಿಮೆ ಆಗಬೇಕಾಗುತ್ತದೆ. ಅದಕ್ಕಾಗಿ ಕಳೆದ ವರ್ಷ ನಾನು ತೆರಿಗೆ ದರಗಳನ್ನು ಕಡಿಮೆ ಮಾಡಿದೆ. ಈ ಸಾರಿ ತೆರಿಗೆ ವಿಧಿಗಳನ್ನು ಕಡಿಮೆ ಮಾಡತಕ್ಕ ಪ್ರಯತ್ನ ಮಾಡಿದ್ದೇನೆ. ಮೊದಲನೆಯ ಹಂತವಾಗಿ ಸಂಪೂರ್ಣ ಸರ್‌ಚಾರ್ಜ್ ತೆಗೆದುಹಾಕಿದ್ದೇನೆ. ಈ ಸಾರಿ ನಾನು ಆಯವ್ಯಯವನ್ನು ಮಂಡಿಸುವುದಕ್ಕೆ ಮುಂಚಿತವಾಗಿ ಎಲ್ಲಾ ಕೈಗಾರಿಕೆಗಳವರು, ತೆರಿಗೆ ಕೊಡತಕ್ಕವರು, ಸಂಘಸಂಸ್ಥೆಗಳು ಅವರೊಡನೆ ದೀರ್ಘವಾಗಿ ಚರ್ಚೆ ಮಾಡಿದೆ. ಯಾರು ಎಕ್ಸ್‌ಪರ್ಟ್ಸ್ ಇದ್ದಾರೆ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನಾನು ಅರ್ಥಶಾಸ್ತ್ರಜ್ಞ ಅಲ್ಲ. ನಿನ್ನೆ ಮಾನ್ಯ ಮೊಯಿಲಿಯವರು ಒಂದು ಮಾತು ಹೇಳಿದರು. ಬಜೆಟ್‌ನಲ್ಲಿ

ಬ್ಯೂರೋಕ್ರಟಿಕ್ ಛಾಯೆ ಇದೆ, ಹಣಕಾಸಿನ ಮಂತ್ರಿಗಳ ದೃಷ್ಟಿಕೋನ ಕಾಣುವುದಿಲ್ಲವೆಂದು ಹೇಳಿದರು. ಅಂಕಿಅಂಶ ಕೊಡುವವರು ಅವರೇ ಅಂದರು. ಇವರಿಗೆಲ್ಲಾ ಯಾರು ಅಂಕಿಅಂಶಗಳನ್ನು ಕೊಡುತ್ತಿದ್ದರೋ ಅದು ನನಗೆ ಗೊತ್ತಿಲ್ಲ. ನಾನು ಅರ್ಥಶಾಸ್ತ್ರಜ್ಞ ಅಲ್ಲದೇ ಹೋದರೂ ಕೂಡ ರಾಜ್ಯದ ಬೆಳವಣಿಗೆ ಆಗಬೇಕು, ಒಳ್ಳೆಯ ಆರ್ಥಿಕ ನಿರ್ವಹಣೆ ಇರಬೇಕು, ತೆರಿಗೆ ಕೊಡತಕ್ಕವರು ಸರಳವಾಗಿ ತೆರಿಗೆ ಕೊಡತಕ್ಕ ವಾತಾವರಣ ನಿರ್ಮಾಣವಾಗಬೇಕು, ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಇವತ್ತು ತೆರಿಗೆ ಸುಧಾರಣೆ ಮಾಡತಕ್ಕ ಕ್ರಮವನ್ನು ಮಾಡಿದ್ದೇವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸುಮಾರು 150 ಕೋಟಿ ರೂಪಾಯಿ ಮೇಲ್ನೋಟಕ್ಕೆ ಸರ್ಚಾರ್ಜ್‌ನಿಂದ ಕಡಿಮೆಯಾಗುತ್ತದೆಂದು ಕಾಣುತ್ತದೆ. ಇದರಿಂದ ಎಲ್ಲಾ ಪದಾರ್ಥಗಳ ಮೇಲೆ ಸರ್‌ಚಾರ್ಜ್ ತೆಗೆದಿರುವುದರಿಂದ ಸಾಮಾನ್ಯ ಜನರು ಬಳಸತಕ್ಕ ಪದಾರ್ಥಗಳ ಬೆಲೆ ಕಡಿಮೆಯಾಗುತ್ತದೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಇದು ಸಾಮಾನ್ಯ ಜನರ ಹಿತದೃಷ್ಟಿಯಿಂದ ಮಾಡಿರತಕ್ಕ ತೆರಿಗೆ ಸುಧಾರಣಾ ಕ್ರಮ ಎಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಕಳೆದ ವರ್ಷ ಕೂಡ ಬಳಸತಕ್ಕ ಯಾವ ಪದಾರ್ಥಗಳ ಮೇಲೂ ತೆರಿಗೆ ಹಾಕಿಲ್ಲ, ರೈತರ ಮೇಲೆ ಹೊರೆ ಆಗತಕ್ಕ ಯಾವುದೇ ತೆರಿಗೆ ಹಾಕಿಲ್ಲ. ಈ ವರ್ಷ ಕೂಡ ಹಾಕಿಲ್ಲ. ನಿನ್ನೆ ಮಾನ್ಯ ಮೊಯಿಲಿಯವರು ಮಾತನಾಡುತ್ತಾ, ತೆರಿಗೆ 186 ಏನು ತೋರಿಸಿದ್ದೀರಿ ಈ ತರಹ ಅಯವ್ಯಯವನು ಯಾವ ಕಾಲದಲ್ಲಿ ಕೂಡ ನೋಡಿರಲಿಲ್ಲವೆಂದು ಹೇಳಿದರು. ಟ್ಯಾಕ್ಸ್ ರಿಫಾರ್ಮ್ಸ್ ಮಾಡುವಾಗ ವ್ಯಾಟ್ ಸಿಸ್ಟಂಗೆ ಹೋಗತಕ್ಕ ದಾರಿಯಲ್ಲಿ ಇರುವುದರಿಂದ ಈ ತರಹ ತೆರಿಗೆ ವಿಧಿಗಳನ್ನು ಕಡಿಮೆ ಮಾಡತಕ್ಕದ್ದು, ತೆರಿಗೆ ದರಗಳನ್ನು ಕಡಿಮೆ ಮಾಡತಕ್ಕದ್ದು ರಾಜ್ಯದ ಆರ್ಥಿಕ ಬೆಳವಣಿಗೆಯ ಹಿತದೃಷ್ಟಿಯಿಂದ ತೆಗೆದುಕೊಂಡಿರತಕ್ಕ ಕಾರ್ಯಕ್ರಮ ಎಂಬುದನ್ನು ನಾನು ಸ್ಪಷ್ಟಪಡಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿದ್ಧರಾಮಯ್ಯ : (ಮುಂದು.) ಇದರಿಂದ ಟ್ಯಾಕ್ಸ್ ಬಯಾನ್ಸಿ ಹೆಚ್ಚಾಗುತ್ತದೆ. ಕಮರ್ಷಿಯಲ್ ಟ್ಯಾಕ್ಸ್ ಕಳೆದ 2 ವರ್ಷಗಳಲ್ಲಿ ಅಂದರೆ, 1994-95ರಲ್ಲಿ 2,800 ಕೋಟಿ ಇದ್ದದ್ದು, 1995-96ರಲ್ಲಿ 3,500 ಕೋಟಿಗೆ ಹೋಗಿದೆ. ಅಂದರೆ, ಗ್ರೋಥ ರೇಟ್ 20 ಪಸೆಂಟ್ ಹೆಚ್ಚಾಯಿತು. ಹಿಂದೆ ಯಾವಾಗಲೂ ಕೂಡ 12 ಪರ್ಸೆಂಟ್, 13 ಪರ್ಸೆಂಟ್‌ಗಿಂತ ಹೆಚ್ಚು ಗ್ರೋಥ್‌ರೇಟ್ ಆಗಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ಅದರಲ್ಲಿ 10 ಪರ್ಸೆಂಟ್ ಇನ್‌ಫ್ಲೇಷನ್ ಇರುತ್ತದೆಂದು. ಇನ್‌ಫ್ಲೇಷನ್ 6 ಪರ್ಸೆಂಟ್, 7 ಪರ್ಸೆಂಟ್ ಇದ್ದೇ ಇರುತ್ತದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೂ 20 ಪರ್ಸೆಂಟ್ ಬೆಳವಣಿಗೆಯಾಗಿದೆ. ಈ ವರ್ಷವೂ ಕೂಡ ಅಂದರೆ, 1996-97ರಲ್ಲಿ 3,500 ಕೋಟಿಯಿಂದ

4,200 ಕೋಟಿಗೆ ನಾವು ಏನು ಗುರಿಯನ್ನಿಟ್ಟುಕೊಂಡಿದ್ದೇವೆ, ಅದನ್ನು ತಲುಪುತ್ತೇವೆಂಬ ಭರವಸೆಯಿದೆ. ಮತ್ತೆ 18 ಪರ್ಸೆಂಟ್, 20 ಪರ್ಸೆಂಟ್ ಗುರಿಯನ್ನು ನಾವು ತಲುಪುತ್ತೇವೆ. ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇದರಿಂದ ನಾವು ಕಳೆದ ವರ್ಷವೂ ಕೂಡ ಅಂದರೆ, 1995-96ರಲ್ಲಿ ಸುಮಾರು 46 ಕೋಟಿ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. ಈ ವರ್ಷವೂ ಕೂಡ ನಮಗೆ ತೆರಿಗೆ 186 ಕೋಟಿ ಕಡಿಮೆಯಾಗುತ್ತದೆ ಎಂದು ನಾನು ಬಜೆಟ್‌ನಲ್ಲಿ ಹೇಳಿದ್ದೇನೆ. ಆದರೆ, ಅದರಲ್ಲಿ ಹೆಚ್ಚು ಸಾರಾಯಿಯಿಂದ ನಮಗೆ ಕಡಿಮೆಯಾಗುತ್ತದೆ. ಈಗೇನು ಹೊಸ ಪದ್ಧತಿಗೆ ನಾವು ಹೋಗಬೇಕೆಂದು ವಿಚಾರ ಮಾಡಿದ್ದೇವೆ, ಅದರಿಂದ 150 ಕೋಟಿ ಕಡಿಮೆಯಾಗುತ್ತದೆ. 150 ಕೋಟಿ ಪ್ಲಸ್ ತೆರಿಗೆಗಳಲ್ಲೂ 36 ಕೋಟಿ ಕಡಿಮೆಯಾಗುತ್ತದೆ. 150 ಕೋಟಿ ಪ್ಲಸ್ ತೆರಿಗೆಗಳಲ್ಲೂ 36 ಕೋಟಿ ಕಡಿಮೆಯಾಗುತ್ತದೆಂದು ಹೇಳುತ್ತೇನೆ. ನಾವು ಈ ಸಾರಿ ಸುಮಾರು 28 ಪದಾರ್ಥಗಳ ಮೇಲೆ ತೆರಿಗೆಗಳನ್ನು ಕಡಿಮೆ ಮಾಡಿ, 13 ಪದಾರ್ಥಗಳ ಮೇಲೆ ತೆರಿಗೆಯನ್ನು ಹೆಚ್ಚು ಮಾಡಿರತಕ್ಕದ್ದು. ಅದರಲ್ಲೂ ಯಾವುದರ ಮೇಲೆ ತೆರಿಗೆ ಹೆಚ್ಚು ಮಾಡಿದ್ದೇವೆಂದರೆ, ಯಾರು ಹೆಚ್ಚಾಗಿ ಶ್ರೀಮಂತರು ಉಪಯೋಗಿಸತಕ್ಕ ಪದಾರ್ಥಗಳಿವೆ ಅಂದರೆ, ಬೀರ್, ವಿಸ್ಕಿ, ಬ್ರಾಂದಿ, ರೆಕ್ಟಿಫೈಡ್ ಸ್ಪಿರಿಟ್ ಸಿಗರೇಟ್, 5 ಸ್ಟಾರ್ ಹೋಟೆಲ್‌ಗಳು, ಪ್ಲಾಸ್ಟಿಕ್ ಸಾಮಾನುಗಳು, ಗುಟ್ಕಾ ಇತ್ಯಾದಿ ಸಾರಾಯಿ ವಿಷಯಕ್ಕೆ ಆಮೇಲೆ ಬರೋಣ. ಮಾನ್ಯ ಖರ್ಗೆಯವರೇ, ನಾನು ಪಟೇಲರು ಯಾವ ಬ್ಯಾಕ್‌ಗ್ರಾಂಡ್‌ನಲ್ಲಿ ಬಂದಿದ್ದರು, ಆ ಬ್ಯಾಕ್‌ಗ್ರಾಂಡ್ ಇಲ್ಲಿ ಗೊತ್ತಾಗುತ್ತಿಲ್ಲವೆಂದು ಹೇಳಿದರು. ಇದೇ ಆ ಬ್ಯಾಕ್‌ಗ್ರಾಂಡ್ ಗೊತ್ತಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಾಟ್ಲಿಂಗ್ ಮಾಡಿದ್ದಾ?

ಶ್ರೀ ಸಿದ್ದರಾಮಯ್ಯ : ಬಾಟ್ಲಿಂಗ್ ಮಾಡುವುದನ್ನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 150 ಕೋಟಿ ರೂಪಾಯಿ ಎಕ್ಸೈಜ್‌ನವರಿಗೆ ಗಿಫ್ಟ್ ಕೊಟ್ಟಿರಲ್ಲಾ ಅದೇ.

ಶ್ರೀ ಸಿದ್ಧರಾಮಯ್ಯ : ಬಾಟ್ಲಿಂಗ್ ವಿಷಯಕ್ಕೆ ಕೊನೆಯಲ್ಲಿ ಬರುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಬೀಡಿ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡಿದ್ದರಿಂದ 22-23ಪೈಸೆ ಹೆಚ್ಚು ಬೀಳುತ್ತದೆ. ಇದರಿಂದ ಬೀಡಿ ಉದ್ಯಮವೇ ಇಲ್ಲಿಂದ ಕಿತ್ತುಕೊಂಡು ಹೊರಟು ಹೋಗುತ್ತದೆ.

ಶ್ರೀ ಸಿದ್ದರಾಮಯ್ಯ : ಬೀಡಿಗೆ ತೆರಿಗೆ ಹಾಕಿಲ್ಲ. ಸಿಗರೇಟಿಗೆ ಮಾತ್ರ ಹಾಕಿರುವುದು. ಬೀಡಿ ಮೇಲೆ ತೆರಿಗೆ ಇಲ್ಲ. ಇಲ್ಲಿ ಸ್ವಲ್ಪ ದುಶ್ಚಟಗಳ ಮೇಲೆ ಹಾಕಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚಿದಂಬರಂರವರು ಬೀಡಿ ಮೇಲೆ ಹಾಕಿದರೂ ಸಿಗರೇಟ್ ಮೇಲೆ ಜಾಸ್ತಿ ಹಾಕಿದರೂ ಅದಕ್ಕೆ ಏನೂ ಅಬ್ಜೆಕ್ಷನ್ ಇಲ್ಲ. ಬೀಡಿ ಮೇಲೆ ಅವರು ತೆರಿಗೆ ಹಾಕಿದರು. ತಂಬಾಕಿನ ಮೇಲೆ ಇವರು ಹಾಕಿದರು.

ಶ್ರೀ ಸಿದ್ಧರಾಮಯ್ಯ : ಬೀಡಿಗೆ ಟ್ಯಾಕ್ಸ್ ಇಲ್ಲ. ತಂಬಾಕಿನ ಮೇಲೆ ಹಾಕಿದರೆ ದುಶ್ಚಟಗಳ ಮೇಲೆ ಸ್ವಲ್ಪ ಹೊರೆ ಇರಲಿ ಎನ್ನುವುದು ಇದರ ಉದ್ದೇಶ. ಅದು ಬಡವರ ಮೇಲೆ ಹಾಕಬೇಕು ಎನ್ನುವ ಹೊರೆ ಅಲ್ಲ. ನಮ್ಮ ಆಲೋಚನೆ ಏನೆಂದರೆ, ಬಡವರಿಗೆ ತೆರಿಗೆ ಕಡಿಮೆಯಾಗಿ, ಪದಾರ್ಥಗಳು ಕಡಿಮೆ ಬೆಲೆಗೆ ಸಿಗಬೇಕು ಎನ್ನತಕ್ಕದ್ದು ಶ್ರೀಮಂತರು, ವಿಲಾಸಿ ಜೀವನ ಮಾಡತಕ್ಕವರಿಗೆ ಸ್ವಲ್ಪ ಹೆಚ್ಚು ತೆರಿಗೆ ಹಾಕಬೇಕೆನ್ನತಕ್ಕದ್ದು ಬಹಳ ಸ್ಪಷ್ಟವಾಗಿ ತೆಗೆದುಕೊಂಡಿರತಕ್ಕ ತೀರ್ಮಾನದಿಂದ ಗೋಚರವಾಗುತ್ತದೆ ಎನ್ನತಕ್ಕ ಮಾತನ್ನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಲು ಬಯಸುತ್ತೇನೆ. ಮತ್ತೆ, ಮಾನ್ಯ ಖರ್ಗೆಯವರು ಯಾವುದರ ಮೇಲೆ ಹೆಚ್ಚಿಗೆ ಮಾಡಿಬಿಟ್ಟಿದ್ದೀರಿ ನೀವು ಎಂದರು. ನಾವು 30 ಎಂಟ್ರಿ ಟ್ಯಾಕ್ಸ್‌ನಲ್ಲಿ ಸೇರಿಸಿದರೆ ಸ್ವಲ್ಪ 150 ಕೋಟಿ ಸರ್‌ಚಾರ್ಜ್ ಸರಿದೂಗಿಸಬೇಕೆಂದು ಹೇಳಿ ಮಾಡಿದ್ದೇವೆ. ಎಂಟ್ರಿ ಟ್ಯಾಕ್ಸ್ ಯಾರು ಹೊರಗಡೆ ರಾಜ್ಯದಿಂದ ತೆಗೆದು ಕೊಂಡು ಬಂದುತಮ್ಮಸ್ವಂತಕ್ಕೆ ಬಳಸುತ್ತಾರೆ, ಅವರು ಮಾತ್ರ ಎಂಟ್ರಿ ಟ್ಯಾಕ್ಸ್ ಕೊಡಬೇಕು. ಯಾರು ಹೊರ ರಾಜ್ಯಗಳಿಂದ ತೆಗೆದುಕೊಂಡು ಬಂದ ಪದಾರ್ಥಗಳನ್ನು ಇಲ್ಲಿ ಸ್ವಂತಕ್ಕೆ ಬಳಸುತ್ತಾರೆ, ನಮ್ಮ ರಾಜ್ಯದಲ್ಲಿ ದೊರೆಯತಕ್ಕ ಪದಾರ್ಥಗಳನ್ನು ಬಿಟ್ಟು ಬೇರೆ ರಾಜ್ಯಕ್ಕೆ ಹೋಗಿ ಪದಾರ್ಥಗಳನ್ನು ತೆಗೆದುಕೊಂಡು ಬಂದು ಇಲ್ಲಿ ಬಳಸುತ್ತಾರೆ, ಅವರು ಎಂಟ್ರಿ ಟ್ಯಾಕ್ಸ್ ಕೊಡಬೇಕಾಗುತ್ತದೆ. ಆದರೆ, ಇದರಲ್ಲಿ ಪೆಟ್ರೋಲಿಯಂ ಪ್ರಾಡಕ್ಟ್ಸ್‌ಗೆ ಮಾತ್ರ ರೀಸೇಲ್‌ಗೂ ಕೂಡ ಟ್ಯಾಕ್ಸ್ ಇದೆ. ಅದು ಒಂದನ್ನು ಹೊರತುಪಡಿಸಿ, ಇನ್ನುಳಿದ ಎಲ್ಲಾ ಕಮಾಡಿಟೀಸ್‌ಗಳು ಹೊರ ರಾಜ್ಯದ ಅಂದರೆ, ಏಕೆ ಇದನ್ನು ಮಾಡಿದ್ದೇನೆಂದರೆ, ವ್ಯಾಪಾರ ನಮ್ಮ ರಾಜ್ಯದಲ್ಲಿ ಆಗಬೇಕು, ಬೇರೆ ರಾಜ್ಯಗಳಿಂದ ತೆಗೆದುಕೊಂಡು ಬಂದು ಇಲ್ಲಿ ತೆರಿಗೆ ಕೊಡದೇನೇ ಉಪಯೋಗಿಸಬಾರದು. ಯಾರು ಕೊಂಡುಕೊಂಡು ಅದನ್ನು ಉಪಯೋಗಿಸುತ್ತಾರೆ, ಅವರು ಈ ರಾಜ್ಯದಲ್ಲಿಯೇ ಕೊಂಡುಕೊಳ್ಳಬೇಕು, ಈ ರಾಜ್ಯದಲ್ಲಿಯೇ ತೆರಿಗೆ ಕೊಡಬೇಕು ಎನ್ನತಕ್ಕ ಉದ್ದೇಶದಿಂದ ಈ ತೆರಿಗೆಗಳನ್ನು ಹಾಕಿರುವಂಥದ್ದೇ ಹೊರತು ರೀಸೇಲ್ ಮೇಲಲ್ಲ. ನಿಮ್ಮ ಶಹಬಾದ್ ಕಲ್ಲು ಅದರಲ್ಲಿಯೇ ಸೇರಿರತಕ್ಕದ್ದು. ಇಲ್ಲಿ ಯಾರು ತೆಗೆದುಕೊಳ್ಳುತ್ತಾರೆ ಅವರಿಗೆ ತೆರಿಗೆ ಇಲ್ಲ. ಆಂಧ್ರದಿಂದ ತೆಗೆದುಕೊಂಡು ಬಂದು ಇಲ್ಲಿ ಬಳಸುತ್ತಾರೆ ಅವರಿಗೆ ತೆರಿಗೆ

ಇಲ್ಲ ಆಂಧ್ರದಿಂದ ತೆಗೆದುಕೊಂಡು ಬಂದು ಇಲ್ಲಿ ಬಳಸುತ್ತಾರೆ ಅಥವಾ ಇಲ್ಲಿ ರಿಸೀಟ್‌ಗಳನ್ನು ಸೃಷ್ಟಿಮಾಡಿಕೊಂಡಿರುತ್ತಾರೆ, ಇದನ್ನು ತಪ್ಪಿಸಲಿಕ್ಕೋಸ್ಕರ ಮಾಡಿರತಕ್ಕದ್ದು ಖರ್ಗೆಯವರೆ, ಬಡವರ ಮೇಲೆ ಇದು ಹೊರೆಯಾಗಬೇಕೆಂದು ಹಾಕಿರತಕ್ಕದ್ದಲ್ಲ. ಬಹುಶಃ ನಿಮಗೆ ಸ್ಪಷ್ಟವಾಯಿತೆಂದು ನಾನು ನಂಬಿದ್ದೇನೆ. I hope that you are convinced.

ಶಹಬಾದ್ ಕಲ್ಲು ಸಿಕ್ಕತಕ್ಕದ್ದು ಗುಲ್ಬರ್ಗದ ಆ ಭಾಗದಲ್ಲಷ್ಟೇ. ಅದನ್ನು ಬಡವರು ಉಪಯೋಗಿಸುತ್ತಾರೆನ್ನುವುದು ನಿಜ. ಅದನ್ನು ಇಲ್ಲಿ ತೆಗೆದುಕೊಳ್ಳುವವರಿಗೆ ತೆರಿಗೆ ಇಲ್ಲ. ಹೊರ ರಾಜ್ಯದಿಂದ ತೆಗೆದುಕೊಂಡೆವು ಎಂದು ಹೇಳಿ ಇಲ್ಲಿ ಉಪಯೋಗಿಸುವವರು ಮಾತ್ರ ತೆರಿಗೆ ಕೊಡಬೇಕಾಗುತ್ತದೆ. ಹೊರಗಡೆ ತಂದಿದ್ದವರಿಗೆ ಇದೆ. ತರದಿದ್ದವರಿಗೆ ಇಲ್ಲ. ಅಲ್ಲಿ ಸಿಕ್ಕತಕ್ಕದ್ದನ್ನು ಇಲ್ಲಿ ತೆಗೆದುಕೊಂಡು ಬಂದವರಿಗೆ ಅಥವಾ ಇಲ್ಲಿ ಸೃಷ್ಟಿ ಮಾಡಿಕೊಂಡಿರುತ್ತಾರೆ. ಆ ಕಾರಣದಿಂದ ಅದು ಬಡವರಿಗೆ ಹೊರೆಯಾಗುವಂಥಾದ್ದಲ್ಲ.

ಅಧ್ಯಕ್ಷರು : ನಮ್ಮ ಜಯಪ್ರಕಾಶ್ ಹೆಗ್ಡೆಯವರು ಯಾವಾಗಲೂ ಹೇಳುತ್ತಿರುತ್ತಾರೆ, ಬೆಂಗಳೂರ ಆ್ಯಪಲ್ ಎಂದು ಹೇಳಿ ಲೋಕಲ್ ಆ್ಯಪಲ್ ಕೊಟ್ಟು ಬಿಟ್ಟರೆಂದು. ಶಹಬಾದ್ ಕಲ್ಲು ಶಹಬಾದ್‌ನಲ್ಲಿ ಸಿಗುವುದು ಎಂದು ಅವರಿಗೆ ಹೇಳುತ್ತಿರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶಹಬಾದ್ ಕಲ್ಲು ತಾಂಡೂರಿನಲ್ಲಿ ಸಿಗುವುದಿಲ್ಲ. ತಾಂಡೂರಿನಲ್ಲಿ ಸಿಗುವ ಕಲ್ಲೇ ಬೇರೆ. ನಾನು ಹೇಳುತ್ತಿರುವುದೇನೆಂದರೆ, ಸಾಮಾನ್ಯವಾಗಿ ಈ ಸುಣ್ಣದ ಕಲ್ಲು, ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲೇ ಹೆಚ್ಚು ಪ್ರಮಾಣದಲ್ಲಿ ಇರತಕ್ಕದ್ದು. ನಾವು ಹೊರಗಡೆ ಕಳುಹಿಸುತ್ತೇವೆಯೇ ಹೊತಾಗಿ ಹೊರಗಿನದು ಒಳಗಡೆ ಬರತಕ್ಕದ್ದು ಬಹಳ ಕಡಿಮೆ.

ಶ್ರೀ ಸಿದ್ಧರಾಮಯ್ಯ : ಹೊರಗಡೆ ಹೋಗುವುದಕ್ಕೆ ಟ್ಯಾಕ್ಸ್ ಇಲ್ಲ. ಒಳಗಡೆ ಬರುವುದಕ್ಕೆ ಮಾತ್ರ ಟ್ಯಾಕ್ಸ್ ಇರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದೆರೆಡು ಬಿಟ್ಟರೆ, ಇಲ್ಲವೇ ಇಲ್ಲ.

ಶ್ರೀ ಸಿದ್ಧರಾಮಯ್ಯ : ಇದು ನಮ್ಮಿಂದ ಹೊರಗಡೆ ಹೋಗುವುದಕ್ಕೆ ಟ್ಯಾಕ್ಸ್ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಊದು ಬತ್ತಿಗೆ ತೆರಿಗೆ ಕಡಿಮೆ ಮಾಡಿದ್ದೀರಿ. ಬೆಳಿಗ್ಗೆ ಎದ್ದು ಹಚ್ಚಿಸಿ ಇಂಥ ಸರ್ಕಾರ ಬಂತಲ್ಲಪ್ಪ ಎಂದೂ ಬರಬಾರದು ಎಂದು ಹೇಳಿ..

ಶ್ರೀ ಸಿದ್ಧರಾಮಯ್ಯ : 8 ಪರ್ಸೆಂಟ್ ಇದ್ದರೆ ಸರ್ಕಾರ ಒಳ್ಳೆಯದು ಎಂದು ಹೇಳುತ್ತಾರಾ?

ಶ್ರೀ ವಾಟಾಳ್ ನಾಗರಾಜ್ : ಆಗ ಹಚ್ಚುವುದನ್ನೇ ಕಡಿಮೆ ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ : ನೀವು ಊದು ಬತ್ತಿ ಹಚ್ಚಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಊದು ಬತ್ತಿ ಹಚ್ಚುವ ಪ್ರಶ್ನೆ ಅಲ್ಲ. ಊದುಬತ್ತಿ ತಯಾರಾಗುವ ಬಗ್ಗೆ ಮಾತನಾಡುತ್ತಾ ಹೋದರೆ ಅದು ಯಾವ ಯಾವ ಹಂತದಲ್ಲಿ ಯಾವಾಗ ತಯಾರಾಗುತ್ತದೆನ್ನುರ ಪ್ರಶ್ನೆ ಬೇರೆ. ಪರಿಸ್ಥಿತಿ ಏನೆಂದು ಹೇಳಿದರೆ ತೆರಿಗೆ ಕಡಿಮೆ ಮಾಡಿರುವುದು ನಿಜ. ಬಹಳ ಕಷ್ಟದಲ್ಲಿ ಮೊದಲು ಪ್ರತಿದಿನ ಬೆಳಿಗ್ಗೆ ಒಂದು ಸಾರಿ ಊದುಬತ್ತಿ ಹಚ್ಚುತ್ತಿದ್ದರು ಅಧ್ಯಕ್ಷರೇ ಇವರು ತೆರಿಗೆ ತೆಗೆದ ಮೇಲೆ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಊದು ಬತ್ತಿ ಹಚ್ಚಿ ದೇವರೇ ಈ ಸರ್ಕಾರ ಸಾಕಪ್ಪ ನಮಗೆ ಎಂದು ಹೇಳುವಂಥ ಪರಿಸ್ಥಿತಿ ಬಂದಿದೆ.

ಶ್ರೀ ಸಿದ್ಧರಾಮಯ್ಯ : ಅಧ್ಯಕ್ಷರೆ, ಊದು ಬತ್ತಿಯನ್ನು ಸಾಮಾನ್ಯ ಜನರು ಬಳಸತಕ್ಕದ್ದು ಮತ್ತು ಸಾಮಾನ್ಯ ಜನರು ತಯಾರು ಮಾಡತಕ್ಕದ್ದು. ಸಾಮಾನ್ಯ ಜನರು ಮನೆ ಮನೆಗಳಲ್ಲಿ ತಯಾರು ಮಾಡುತ್ತಾರೆ. ವಾಟಾಳ್ ನಾಗರಾಜ್‌ರವರೇ, ನಿಮಗೆ ಗೊತ್ತಿರಬೇಕಲ್ಲ ನಿಮ್ಮ ಕಡೆಯಲ್ಲಿ ಮೈಸೂರಿನಲ್ಲಿ ಮನೆ ಮನೆಗಳಲ್ಲಿ ಊದುಬತ್ತಿಯನ್ನು ಉಜ್ಜುತ್ತಾರೆ. ಅವರಿಗೆ ಸಹಾಯವಾಗಬೇಕೋ ಬೇಡವೋ?

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಸಹಾಯವಾಗಬೇಕು, ಆ ಪ್ರಶ್ನೆ ಬೇರೆ. ನನ್ನ ಉದ್ದೇಶವೇನೆಂದರೆ, ಅಧ್ಯಕ್ಷರೆ..

ಅಧ್ಯಕ್ಷರು : ಅವರ ಕ್ಷೇತ್ರದಲ್ಲೇ ಇದ್ದಾರಾ·?

ಶ್ರೀ ಸಿದ್ಧರಾಮಯ್ಯ : ಹೌದು ಅವರ ಕ್ಷೇತ್ರದಲ್ಲೇ ಇದ್ದಾರೆ, ಚಾಮರಾಜನಗರದಲ್ಲೂ ಇದ್ದಾರೆ.

ಅಧ್ಯಕ್ಷರು : ಅವರಿಗೆ ಅನುಕೂಲವಾಗುವುದು ಬೇಡವೆಂದು ಇವರು ಹೇಳಿದರೆಂದು ತಿಳಿಸುವುದಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳವರು ಇಬ್ಬರೂ ಮಾತನಾಡಿಕೊಂಡೇ ನಮ್ಮ ಜಿಲ್ಲೆಗಳಿಗೆ ಇದು ಅನುಕೂಲವಾಗುತ್ತದೆ, ಮಾಡೋಣವೆಂದು ಮಾತನಾಡಿಕೊಂಡೇ ಮಾಡಿದ ಹಾಗೆ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಊದು ಬತ್ತಿಯನ್ನು ಇವರ ಜಿಲ್ಲೆಗೆ ಹೋಲಿಸೋಣ. ನಮ್ಮದೇನೂ ಇಲ್ಲ.

ಅಧ್ಯಕ್ಷರು : ಗುರುಮಿಠ್‌ಕಲ್

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನನ್ನ ಕಾನ್‌ಸ್ಟಿಟ್ಯೂಯೆನ್ಸಿ ಹೆಸರನ್ನೂ ಹೇಳಲೂ ಬರುವುದಿಲ್ಲವಲ್ಲಾ, ಅದು ಗುರುವಿನ ಮಠ, ಗುರುಮಠಕಲ್. ಅದನ್ನೂ ಹೇಳಲೂ ಬರುವುದಿಲ್ಲವಲ್ಲಾ ಅವರಿಗೆ.

ಅಧ್ಯಕ್ಷರು : ಅಲ್ಲ, ನೀವು ಊದುಬತ್ತಿ ಎಂದು ಹೇಳಿ ಹೋಗುತ್ತಾ ಹೋಗುತ್ತಾ ಅಲ್ಲಿ ಬರೀ ಹತ್ತಿ ಹಚ್ಚುವ ಕೆಲಸ ಮಾಡಬೇಡಿ ಒಬ್ಬರಿಗೊಬ್ಬರು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಊದು ಬತ್ತಿ ಬಡವರು ತಯಾರು ಮಾಡತಕ್ಕದ್ದು ಮತ್ತು ಸಾಮಾನ್ಯ ಜನರು ಅದನ್ನು ಬಳಸತಕ್ಕದ್ದು ಎಂಬ ಕಾರಣಕ್ಕೋಸ್ಕರ 8 ಪರ್ಸೆಂಟ್ ಕಡಿಮೆ ಮಾಡಿದ್ದೇನೆ. ಮತ್ತೆ, ಎಲ್ಲಾ ರಸಗೊಬ್ಬರಗಳ ಮೇಲಿದ್ದ ತೆರಿಗೆಯನ್ನು ರದ್ದುಮಾಡಿದ್ದೇನೆ. ಮಾನ್ಯ ಖರ್ಗೆಯವರು ಮತ್ತು ಮಾನ್ಯ ಮೊಯಿಲಿಯವರು ಸಿಮೆಂಟ್ ಮೇಲೆ ನೀವು 15 ಮಾಡಿಬಿಟ್ಟಿದ್ದೀರಿ ಎನ್ನತಕ್ಕ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಸಿಮೆಂಟ್ ಮೇಲೆ ತೆರಿಗೆ 12 ಪರ್ಸೆಂಟ್ ಇತ್ತು. ಅದನ್ನು 15 ಮಾಡಿರುವುದು ಏಕೆ ಮಾಡಿದೆ ಅಂದರೆ, ಬಹಳ ಮುಖ್ಯವಾಗಿ ಸಿಮೆಂಟ್‌ಗೆ ಆಂಧ್ರ ಮತ್ತು ತಮಿಳುನಾಡಿನಲ್ಲಿ 16 ಪರ್ಸೆಂಟ್ ತೆರಿಗೆ ಇದೆ. ಮಹಾರಾಷ್ಟ್ರದಲ್ಲಿ 13 ಪರ್ಸೆಂಟ್ ಇದೆ. ನಾವು ಸರ್‌ಛಾರ್ಜ್ ತೆಗೆದುಹಾಕಿದ್ದೇವೆ ಈಗ. ಸರ್‌ಛರ್ಜ್ ಪ್ಲಸ್ 12 ಪರ್ಸೆಂಟ್ ಬೇಸಿಕ್ ಟ್ಯಾಕ್ಸ್ ಅದರೆ 13.8% ಪರ್ಸೆಂಟ್ ಕೊಡುತ್ತಿದ್ದರು ಹಾಲಿ ತೆರಿಗೆಯನ್ನು ಈಗ ಸರ್‌ಚಾರ್ಜ್ ತೆಗೆದುಹಾಕಿ 15 ಪರ್ಸೆಂಟ್ ಮಾಡಿರುವುದರಿಂದ ನೆರೆ ರಾಜ್ಯಗಳಿಗೆ ಇದು ಸಮಾನವಾಗಿರುವುದರಿಂದ ಈಗ ಅವರಿಗೆ ಹೊರೆ ಬೀಳತಕ್ಕದ್ದು 1.2 ಪರ್ಸೆಂಟ್ ಅಷ್ಟೆ. ಅಂದರೆ ವ್ಯಾಪಾರ ಇಲ್ಲಿ ಆಗಬೇಕು ಎಂಬ ಕಾರಣಕ್ಕೋಸ್ಕರ. ಡೈವರ್ಟ್ ಆಗಬಾರದು ಎಂಬ ಕಾರಣಕ್ಕೋಸ್ಕರ ಮಾಡಿರುವುದೇ ಹೊರತು ಯಾರಿಗೂ ಹೊರೆ ಮಾಡಬೇಕು ಎಂಬ ಕಾರಣದಿಂದ ಹಾಕಿಲ್ಲ ಮತ್ತೆ ಇನ್ನೊಂದು ಹೇಳಿದ್ದೀರಿ ಆಕ್ಸಿಜೆನ್ ಗ್ಯಾಸ್ ಬಗ್ಗೆ ಮೊಯಿಲಿಯವರು ಹೇಳಿದಿರಿ. ಅದು ಲೈಫ್ ಸೇವಿಂಗ್ ಡ್ರಗ್ಸ್ ಎಂದು. ಅದಕ್ಕೆ ಟ್ಯಾಕ್ಸ್ ಹಾಕಿಲ್ಲ. ಇದು industrial gas such as oxygen ಎಂದು ಬರೆದಿದ್ದೇವೆ. ಅಂದರೆ ಇಂಡಸ್ಟ್ರೀಸ್‌ಗೆ ಉಪಯೋಗಿಸತಕ್ಕದ್ದು. ಮತ್ತೆ ಆಸ್ಪತ್ರೆಗಳು ಯಾವುದೇ ಗ್ಯಾಸ್ ತೆಗೆದುಕೊಂಡರೂ ಅವರು ಡೀಲರ್ ಅಲ್ಲ. ಆದ್ದರಿಂದ ಅವರಿಗೆ ಟ್ಯಾಕ್ಸ್ ಹಾಕತಕ್ಕಂಥ ಪ್ರಶ್ನೆಯೇ ಇಲ್ಲ. They are totally exempted. ಅವರಗೆ ತೆರಿಗೆ ಹಾಕಿದ್ದೇವೆ ಎಂಬ

ಪ್ರಶ್ನೆ ಉದ್ಭವಿಸುವುದಿಲ್ಲ. Industrial gas such as oxygen ಎಂದು ಸ್ಪೆಸಿಫಿಕ್ಕಾಗಿ ಬರೆದಿದ್ದೇವೆ. ಮತ್ತೊಮ್ಮೆ ಸ್ಪಷ್ಟಪಡಿಸುತ್ತಿದ್ದೇನೆ ಇದರಲ್ಲಿ ಯಾವುದೇ ಜೀವನಾವಶ್ಯಕವಾದ ಪದಾರ್ಥಗಳ ಮೇಲೆ ಒಂದು ತೆರಿಗೆಯನ್ನೂ ಈ ವರ್ಷ ಹಾಕಿಲ್ಲ. ಕಳೆದ ವರ್ಷ ಏನೇನು ತೆಗೆದುಹಾಕಿದ್ದೆವೋ ಅವು ಈ ವರ್ಷವೂ ಮುಂದುವರೆಸಿ ಕೊಂಡು ಹೋಗುತ್ತಿದ್ದೇವೆ. ಈ ವರ್ಷ ರೈತರು ಬಳಹಸತಕ್ಕ ಪದಾರ್ಥಗಳ ಮೇಲೆ ತೆರಿಗೆ ತೆಗೆದುಹಾಕಿದ್ದೇವೆ. ಸರ್‌ಚಾರ್ಜ್ ತೆಗೆದಿರುವುದರಿಂದ ಬಡವರಿಗೆ ಅನುಕೂಲವಾಗಿದೆ. ಕೆಲವು ಬಡವರು ಉಪಯೋಗಿಸುವ, ಸಾಮಾನ್ಯ ಜನರು ಬಳಸತಕ್ಕ ಪದಾರ್ಥಗಳ ಮೇಲೆ ತೆರಿಗೆ ತೆಗೆದುಹಾಕಿದ್ದೇವೆ. ಒಟ್ಟಾರೆ ಹೆಚ್ಚು ರ್‍ಯಾಷನಲೈಸ್ ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನು ಕೂಡ ಮಾಡಿದ್ದೇನೆ ಎಂಬ ಮಾತನ್ನೂ ಕೂಡ ಹೇಳುತ್ತೇನೆ. ಇನ್ನೊಂದು ಅವರು ಹೇಳಿದ್ದೇನೆಂದರೆ ಪಿ.ಡಿ.ಎಸ್. ಸೀಮೆಎಣ್ಣೆ ಸೀಮೆಎಣ್ಣೆ ಪಿ. ಡಿ. ಎಸ್. ನಲ್ಲಿ 4 ಪರ್ಸೆಂಟ್ ಇರುವುದು. ನಾನ್ ಪಿ.ಡಿ.ಎಸ್. ಸೀಮೆಎಣ್ಣೆಗೆ 6 ಪರ್ಸೆಂಟ್ ಇತ್ತು. 6 ಪರ್ಸೆಂಟ್ 8 ಪರ್ಸೆಂಟ್ ಏತಕ್ಕಾಯಿತೆಂದರೆ 6 ಪಸೆಂಟ್ ಟ್ಯಾಕ್ಸ್ ಇರತಕ್ಕದ್ದನ್ನು ದರ ತೆಗೆದುಹಾಕಿದ್ದೇವೆ. ಆ ದರ ಇಲ್ಲ. 6 ಪರ್ಸೆಂಟ್ ಟ್ಯಾಕ್ಸ್ ತೆಗೆದು ಹಾಕಿರುವುದರಿಂದ ಅದನ್ನು ನಾನು ನಾಲ್ಕು ಮಾಡಬೇಕಾಗಿತ್ತು ಅಥವಾ 8 ಮಾಡಬೇಕಾಗಿತ್ತು. ಹಾಗಾಗಿ ನಾನ್ ಪಿಡಿಎಸ್ ಸೀಮೆಎಣ್ಣೆ 8 ಪರ್ಸೆಂಟ್ ಆಗಿದೆಯೇ ಹೊರತು ಮತ್ತೆ ಅದನ್ನು ಇಂಡಸ್ಟ್ರೀಗಳು ಮೆಷಿನ್‌ಗಳು ಬೇರೆ ಬೇರೆಯುದಕ್ಕೆ ಉಪಯೋಗಿಸುತ್ತಿದ್ದಾರೆ. ಮತ್ತು ಜನರೂ ಕೂಡ ಅದನ್ನು ಕೊಂಡುಕೊಳ್ಳುತ್ತಾರೆ. ನಾನ್ ಪಿಡಿಎಸ್ ಸೀಮೆಎಣ್ಣೆಗೆ ಲೀಟರ್‌ಗೆ 9-10 ರೂಪಾಯಿ ಇದೆ. ಪಿಡಿಎಸ್ ಸೀಮೆಎಣ್ಣೆ ಬರೀ ಮೂರು ರೂಪಾಯಿ. 9 ರೂಪಾಯಿ 10 ರೂಪಾಯಿ ಕೊಡುವವರು 20 ಪೈಸೆ ಹೆಚ್ಚು ಕೊಡಬೇಕಾಗುತ್ತದೆ. ಆದ್ದರಿಂದ ಆ ದೃಷ್ಟಿಕೋನ ಇಟ್ಟುಕೊಂಡು 8 ಪರ್ಸೆಂಟ್ ಮಾಡಿರುವುದೇ ಹೊರತು ಸಾಮಾನ್ಯ ಜನರಿಗೆ ಹೊರೆ ಆಗಲಿ ಎಂಬ ದೃಷ್ಟಿಯಿಂದ ಅಲ್ಲ. ಮತ್ತು ಆ ಉದ್ದೇಶ ಕೂಡ ಇಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟಪಡಿಸ ಬಯಸುವುದಕ್ಕೆ ಇಚ್ಛಿಪಡುತ್ತೇನೆ. ಸಣ್ಣ ಕೈಗಾರಿಕೆಗಳು, ಮಿನಿ ಸಿಮೆಂಟ್ ಪ್ಲಾಂಟ್‌ಗಳು ಏಳೆಂಟು ಇವೆ. ಎಲ್ಲಾ ನಷ್ಟದಲ್ಲಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 44

ಶ್ರೀ ಸಿದ್ಧರಾಮಯ್ಯ : ಅದರಲ್ಲಿ ಕೆಲಸ ಮಾಡುತ್ತಾ ಇರುವುದು ಏಳೋ ಎಂಟೋ ಇವೆ. ಮಿಕ್ಕಿದೆಲ್ಲಾ ಮುಚ್ಚಿರೆ. ಅದಕ್ಕೆ ಸೀಮಿತವಾಗಿ ತೆರಿಗೆಯನ್ನು ಏರಿಸುವುದಿಲ್ಲ. 12 ಪರ್ಸೆಂಟೇ ಉಳಿಯುತ್ತದೆ. ಅದು ಬಿಟ್ಟು ಸಾಮಾನ್ಯ ಜನರಿಗೆ ಹೊರೆಯಾಗತಕ್ಕದ್ದಿಲ್ಲ.

ನಾನು ಹೆಚ್ಚಿಸಿರುವುದು ಯಾವುದೇಂದರೆ ಶ್ರೀಮಂತರು ಬಳಸತಕ್ಕ ಪದಾರ್ಥಗಳಿಗೆ ತೆರಿಗೆ ಹೆಚ್ಚು ಮಾಡಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ : ಹೊರರಾಜ್ಯದಲ್ಲಿ ಮಿನಿ ಸಿಮೆಂಟ್ ಘಟಕಗಳಿಗೆ ಕೊಟ್ಟಿರತಕ್ಕದ್ದು ಮೂರು ವರ್ಷ ನಾಲ್ಕು ವರ್ಷ ಎಂದು ಕೊಟ್ಟಿದ್ದಾರೆ. ಈಗ ತಾವು ಕನ್‌ಸೆಷನ್ 12 ಪರ್ಸೆಂಟ್ ಏನು ಕೊಟ್ಟಿದ್ದೀರಿ ಇದು ಎಷ್ಟು ವರ್ಷ ಇರುತ್ತದೆ?

ಶ್ರೀ ಸಿದ್ಧರಾಮಯ್ಯ : ಇದು ಮುಂದುವರೆಯುತ್ತದೆ. ಪುನಃ ಹೆಚ್ಚು ಮಾಡುವವರೆಗೂ ಅದು ಮುಂದುವರೆಯುವುದೇ. ನಾವೇ ಇರುತ್ತೇವೆ. ಹೆಚ್ಚು ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋಡೋಣ.

ಶ್ರೀ ಸಿದ್ಧರಾಮಯ್ಯ : ಎಲೆಕ್ಷನ್ ಬಂದಾಗ ನೋಡೋಣ. ಜನ ತಾನೇ ತೀರ್ಪು ಕೊಡುವವರು. ನಾವೇ ಇರುತ್ತೇವೆ ಎಂಬ ನಂಬಿಕೆ ಇದೆ ನನಗೆ.

ಶ್ರೀ ಧರ್ಮಸಿಂಗ್ : ಎಲೆಕ್ಷನ್ ಮಾಡಿಸಿ.

ಶ್ರೀ ಸಿದ್ಧರಾಮಯ್ಯ : ನೀವು ಅಧ್ಯಕ್ಷರಾದಮೇಲಾ? ಹಾಗೇನಿಲ್ಲ. ಇಲ್ಲಿ ರಾಮನಗರ ಎಲೆಕ್ಷನ್ ಗೆದ್ದತಕ್ಷಣ ರಾಜ್ಯವೇ ನಮ್ಮ ಕೈಗೆ ಬಂದುಬಿಡ್ತು ಎಂದು ಇದ್ದೀರಿ. ಸಾಧ್ಯವಿಲ್ಲ ಬಿಡಿ ಧರ್ಮಸಿಂಗ್ ಅವರೇ.

ಶ್ರೀ ಧರ್ಮಸಿಂಗ್ : ಪಂಜಾಬಿನಲ್ಲಿ ಏನಾಗಿದೆ? ನೀವು 2 ಪರ್ಸೆಂಟ್ ತೆಗೆದುಕೊಂಡಿದ್ದೀರಿ. ಯುನೈಟೆಡ್ ಫ್ರಂಟ್‌ಗೆ ಎಲ್ಲಿ ಬಂದಿದೆ? ಯು.ಪಿ.ನಲ್ಲಿ ಏನಾಗಿದೆ ?

ಶ್ರೀ ಸಿದ್ಧರಾಮಯ್ಯ : ನೀವೇನಾದಿರಿ ಹೇಳಿ. ನಮ್ಮದು ಪಂಜಾಬಿನಲ್ಲಿ ಏನೂ ಇಲ್ಲ.

ಶ್ರೀ ಧರ್ಮಸಿಂಗ್ : ಪಂಜಾಬಿನಲ್ಲಿ ನಾವು 28 ಪರ್ಸೆಂಟ್ ತೆಗೆದುಕೊಂಡಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಶ್ರೀ ಧರ್ಮಸಿಂಗ್‌ರವರೇ, Congress was ruling in punjab before the elections. Waht happened to you?

ಶ್ರೀ ಧರ್ಮಸಿಂಗ್ : ಅಲ್ಲಿ ಏನಾಗಿದೆ, Nobody participated..

SRI SIDDARAMAIAH : When nobody participated you won. when akalidal participated, you lost.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಪಂಜಾಬಿನಲ್ಲಿ ನೀವು ಬರೀ 2 ಪಸೆಂಟ್ ತೆಗೆದು ಕೊಂಡಿದ್ದೀರಿ. ನಾವು 27 ಪರ್ಸೆಂಟ್ ತೆಗೆದುಕೊಂಡೆವು ನಾವು ಕಡೇಪಕ್ಷ ಇವತ್ತಲ್ಲ ನಾಳೆ ಬರುವ ಛಾನ್ಸ್ ಇದೆ. ನೀವಂತೂ ಸೆಲ್ಲರ್‌ನಲ್ಲೇ ಹೋಗಿದ್ದೀರಲ್ಲಾ. ಪಾತಾಳಕ್ಕೆ ಹೋಗಿದ್ದೀರಿ.

ಶ್ರೀ ಎಂ. ಶ್ರೀನಿವಾಸ್ : ಮುಂದೆ ಚುನಾವಣೆ ಬಂದರೆ ಬಿ.ಜೆ.ಪಿ.ನೇ ಬರುವುದು. ಇನ್ನು ಮುಂದೆ ದೇಶದಲ್ಲಿ ಬಿ.ಜೆ.ಪಿ.ನೇ ಅಧಿಕಾರಕ್ಕೆ ಬರುವುದು.

ಶ್ರೀ ಸಿದ್ಧರಾಮಯ್ಯ : ಅಕಾಲಿದಳ ಗೆದ್ದಿರುವುದು ಅಲ್ಲಿ. ನೀವಲ್ಲ. ನೀವು ಅಕಾಲಿದಳದ ಜೊತೆ ಇರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಲ್ಲಿ ನಾವು ಅಧಿಕಾರದಲ್ಲಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಅಕಾಲಿ ದಳದ ಜೊತೆ ಸೇರಿಕೊಂಡಿದ್ದೀರಿ. ನೀವು ಹೀಗೇ ಬರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ : ನೀವು 13 ಪಾರ್ಟಿ ಜೊತೆ ಸೇರಿ ಅಧಿಕಾರ ನಡೆಸುತ್ತಿದ್ದೀರಲ್ಲಾ ಹಾಗೆ.

ಶ್ರೀ ಸಿದ್ಧರಾಮಯ್ಯ : ಶಿವಸೇನ, ಬಿ.ಎಸ್.ಪಿ. ಇದನ್ನು ಒಂದು ಸಾರಿ ಕಿತ್ತು ಹಾಕುತ್ತೀರಿ, ಒಂದು ಸಾರಿ ಹಿಡಿದುಕೊಳ್ಳುತ್ತೀರಿ, ಅದೇನೇನು ಮಾಡುತ್ತೀರೋ ಈಗ ಗೊತ್ತಾಗುವುದಿಲ್ಲ ನಮಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆಯವರಾದರೆ ಅಡ್ರೆಸ್ಸಾದರೂ ಸಿಗುತ್ತದೆ. ನಿಮ್ಮದು ಅಡ್ರೆಸ್ಸೇ ಇಲ್ಲವಲ್ಲಾ. ಎಲ್ಲಿ ಕೊಡಬೇಕು ಟಪಾಲು?

ಶ್ರೀ ಸಿದ್ಧರಾಮಯ್ಯ : ಈ ದೇಶದ ಪ್ರಧಾನಿ ಜನತಾ ದಳದವರು. ಅಡ್ರೆಸ್ ಬೇರೆ ಬೇಕಾ ಇದಕ್ಕೆ? ಶ್ರೀಮಾನ್ ದೇವೇಗೌಡರು ಕರ್ನಾಟಕದವರು, ಜನತಾದಳದವರು ಈ ದೇಶದ ಪ್ರಧಾನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದರೆ ಟಪಾಲ್ ಅಡ್ರೆಸ್ ಏನೆಂದರೆ ಹೊಳೇನರಸೀಪುರ ಎಂದೇ ಹೋಗುತ್ತದೆ.

ಅಧ್ಯಕ್ಷರು : ಇಲ್ಲ. ಇಲ್ಲ.

ಶ್ರೀ ಎಂ. ಮಲ್ಲಿಕಾಜುನ ಖರ್ಗೆ : ಹೌದು. ಪೋಸ್ಟಲ್ ಅಡ್ರೆಸ್ ಸಾರ್.

Mr. Speaker : As Speaker I have a duty to clarify. ನೀವು ಅಡ್ರೆಸ್ ಇಲ್ಲ ಎಂದು ಹೇಳಿದಿರಿ. ಅವರ ಅಡ್ರೆಸ್ ಇದೆ ಅದು ನಿಮ್ಮ ಕೇರ್ ಆಫ್ ಅಡ್ರೆಸ್

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಪೋಸ್ಟಲ್ ಅಡ್ರೆಸ್ ಹರದನಹಳ್ಳಿ, ತಾಲ್ಲೂಕ ಹೊಳೇನರಸೀಪುರ, ಜಿಲ್ಲಾ ಹಾಸನ ಅಂತಲೇ ಹೋಗುವುದು ಅದು

ಅಧ್ಯಕ್ಷರು : ಇಲ್ಲ, ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಡೆಲ್ಲಿ ಅಡ್ರೆಸ್ ಮೇಲೆ ಯಾವುದೂ ಹೋಗುವುದಿಲ್ಲ.

Mr. Speaker : Their address is your C/o address"

ಶ್ರೀ ಸಿದ್ಧರಾಮಯ್ಯ : ಅಧ್ಯಕ್ಷರೇ, ಈಗ ನಮ್ಮ ಪೋಸ್ಟಲ್ ಅಡ್ರೆಸ್ಸೂ ಕೂಡ ನಮ್ಮೂರೇ.

ಶ್ರೀ ವಾಟಾಳ್ ನಾಗರಾಜ್ : ಈಗ ಅವರು ರಷ್ಯದಲ್ಲಿದ್ದರೂ ಕೂಡ ಅವರಿಗೆ ಹೋಳೇನರಸೀಪುರದ್ದೇ ಚಿಂತೆ ಅದರಲ್ಲೇನೂ ಅನುಮಾನ ಪಡುವುದಕ್ಕೆ ಹೋಗಬೇಡಿ. ರಷ್ಯದಲ್ಲಿದ್ದರೂ ಹೊಳೇನರಸೀಪುರದ್ದೇ ಚಿಂತೆ. ಎಷ್ಟು ಜನರಿಗೆ ಫೋನ್ ಮಾಡಿದ್ದಾರೆ ನಿಮಗೆ ಗೊತ್ತಾ? ಬಹಳ ಜನಕ್ಕೆ ಮಾಡಿದ್ದಾರೆ. ಅದರ ಬಗ್ಗೆ ಹೇಳುವುದು ಬೇಡ.

ಅಧ್ಯಕ್ಷರು : ನಿಮಗೆ ಮಾಡಿದ್ದರಾ?

ಶ್ರೀ ಎಸ್. ಕೃಷ್ಣಪ್ಪ : ವಾಟಾಳ್ ನಾಗರಾಜ್ ಅವರು ನರಸೀಪುರದವರು. ಆದರೂ ಅವರಿಗೆ ಯಾವಾಗಲೂ ವಾಟಾಳ್ ಚಿಂತೆಯೇ ನರಸೀಪುರದವರು ಅವರು. ಆದರೆ ಅವರ ಚಿಂತನೆ ಮಾತ್ರ ವಾಟಾಳ್‌ದೇ.

ಶ್ರೀ ಸಿ. ಎಂ. ಲಿಂಗಪ್ಪ : ಮಾನ್ಯ ಅರ್ಥಸಚಿವರು ಹೇಳುತ್ತಾರೆ ರಾಮನಗರದಲ್ಲಿ ಒಂದು ಸ್ಥಾನ ಗೆದ್ದಾಕ್ಷಣಕ್ಕೆ ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಬಂತು ಎಂದು ನೀವೇನೂ ಭ್ರಮೆ ಪಟ್ಟುಕೊಳ್ಳಬೇಡಿ ಎಂದು ಹೇಳುತ್ತಾರೆ. ಇರಲಿ, ಒಪ್ಪಿಕೊಳ್ಳೋಣ. ಹಾಗಾದರೆ ರಾಮನಗರದಲ್ಲಿ ನೀವು ಸೋತಿದ್ದಕ್ಕೆ ಏನು ಹೇಳುತ್ತೀರಿ?

ಶ್ರೀ ಸಿದ್ಧರಾಮಯ್ಯ : ಆಮೇಲೆ ಹೇಳೋಣ ಬಿಡಿ. ಈಗಾಗಲೇ ಹೇಳಿ ಆಯಿತಲ್ಲಾ. ನಮ್ಮ ಅಡ್ರೆಸ್ ಇದೆಯೋ ಇಲ್ಲವೋ ಎಂಬುದು ಈಗ ಸಾಬೀತಾಗಿದೆ. ಎಲ್ಲಿದೆ ನಮ್ಮ ಅಡ್ರೆಸ್ ಎಂಬುದು ಸಾಬೀತಾಗಿದೆ. ನಿಮ್ಮ ಅಡ್ರೆಸ್ ಏನಾಯಿತು ಎಂದು ಹುಡುಕಬೇಕಾಗಿದೆ

ನಾವು. ನಿಮ್ಮ ಅಡ್ರೆಸ್ ಹೋಯಿತಲ್ಲಾ. ದೇಶದಲ್ಲಿ ನೀವೇ ಅಧಿಕಾರದಲ್ಲಿದ್ದಿರಿ. ಆದರೂ ನಿಮ್ಮ ಅಡ್ರೆಸ್ ಹೋಯಿತಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ : ನಮ್ಮ ಅಡ್ರೆಸ್ ಇರುವುದರಿಂದ ಡೆಲ್ಲಿಯಲ್ಲಿ ನೀವಿದ್ದೀರಿ.

ಶ್ರೀ ಸಿದ್ಧರಾಮಯ್ಯ : ದೇಶದ ಒಳಿತಿಗಾಗಿ ನಿಮ್ಮ ಅಡ್ರೆಸ್ ಉಳಿದಿದೆ, ನಮ್ಮ ಅಡ್ರೆಸ್ಸೂ ಉಳಿದಿದೆ. ಈಗ ಅಡ್ರೆಸ್ ಬಗ್ಗೆ ಚರ್ಚೆ ಮಾಡುವುದು ಬೇಡ. ನಿಮ್ಮ ಅಡ್ರೆಸ್ ಸ್ವಲ್ಪ ನೋಡಿಕೊಳ್ಳಿ.

ಶ್ರೀ ಬಿ. ಬಿ. ಶಿವಪ್ಪ : ಅಡ್ರೆಸ್ ಸಿಗದೇ ಇದ್ದರೆ ಕೇರಾಫ್ ಬಿ.ಜೆ.ಪಿ. ಎಂದು ಹಾಕಿಕೊಳ್ಳಲಿ. ನಾವು ಉದಾರವಾಗಿರುತ್ತೇವೆ.

ಶ್ರೀ ಸಿದ್ಧರಾಮಯ್ಯ : 13 ದಿನದಲ್ಲಿ ಕೇಂದ್ರದಲ್ಲಿ ಹೋದ ಸರ್ಕಾರ ಇತಿಹಾಸದಲ್ಲಿ ಯಾವುದಾದರೂ ಇದೆಯೇ? ಹೇಳಿ. ಒಂದು ಇತಿಹಾಸ ನಿರ್ಮಾಣ ಮಾಡಿದ್ದೀರಿ.

ಅಧ್ಯಕ್ಷರು : ದಯವಿಟ್ಟು ಅಡ್ರೆಸ್‌ನಿಂದ ಟ್ಯಾಕ್ಸ್‌ಗೆ ಬನ್ನಿ.

ಶ್ರೀ ಸಿದ್ದರಾಮಯ್ಯ : ಅಡ್ರೆಸ್‌ಗೆಲ್ಲಾ ಟ್ಯಾಕ್ಸ್ ಹಾಕುವುದಿಲ್ಲ. ನಾನು.

ಶ್ರೀ ಬಿ. ಬಿ. ಶಿವಪ್ಪ : 13 ದಿವಸಗಳ ಆಡಳಿತ ಹೇಗಿತ್ತು ಎಂದು ಇಡೀ ಪ್ರಪಂಚದಲ್ಲಿ ಯೋಚನೆ ಮಾಡುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಬಿಡಿ ಕಷ್ಟ ನೀವು ಬರುವುದು. ನಿಮ್ಮ ಕೈಯಲ್ಲಿ ಆಗುವುದಿಲ್ಲ. ನಾವು ಇವರು ಮಾಡಬೇಕೇ ಹೊರತು ನಿಮ್ಮ ಕೈಯಲ್ಲಿ ಆಗುವುದಿಲ್ಲ. ಇದೆಲ್ಲಾ ಸಾಧ್ಯವೇ ಇಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳು ಹೇಳುತ್ತಾರೆ ಈ ದೇಶದಲ್ಲಿ ನಾವು ಮತ್ತು ಬಿ.ಜೆ.ಪಿ.ಯವರು ಮಾತ್ರ ಸಾಧ್ಯ ಕಾಂಗ್ರೆಸ್ ನುಡಿ ಸಾಧ್ಯವಿಲ್ಲ ಉಪಮುಖ್ಯಮಂತ್ರಿಗಳು ನಾವು ಮತ್ತು ಕಾಂಗ್ರೆಸ್ ಎಂದು ಹೇಳುತ್ತಾರೆ. ಇದೇನು ಭಿನ್ನಮತವೇ?

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಸಿದ್ಧರಾಮಯ್ಯನವರು ಸತ್ಯ ಹೇಳಿಬಿಟ್ಟರು. ನಮ್ಮಿಬ್ಬರಲ್ಲೇ ಪಾಲಾಗಬೇಕು. ಬೇರೆಯವರಿಗೆ ಸಾಧ್ಯವೇ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಕಾಂಗ್ರೆಸ್ಸಿನವರು ವಾಕೌಟ್ ಮಾಡುವಾಗ ಈ ದೇಶದಲ್ಲಿ ಉಳಿಯುವುದು ನಾವು ಮತ್ತು ಬಿ.ಜೆ.ಪಿ.ಯವರು. ಕಾಂಗ್ರೆಸ್ಸಿನವರು ಲೆಕ್ಕಕ್ಕೆ ಇಲ್ಲ ಎಂದು ಹೇಳಿದರು.

12.00 ಪಿ. ಎಂ.

ಈಗ ಮಾನ್ಯ ಉಪಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ, ನಾವು ಇವರು ಚೆನ್ನಾಗಿರುತ್ತೇವೆ, ಬಿಜೆಪಿ ಲೆಕ್ಕಕ್ಕೆ ಇಲ್ಲ ಎಂದು ಅಂದರೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಇದೆಯೇ ಎಂದು ಕೇಳುಬೇಕಾಗುತ್ತದೆ.

ಅಧ್ಯಕ್ಷರು : ನೀವು ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲಿಲ್ಲ. ಮುಖ್ಯಮಂತ್ರಿಗಳು ಮತ್ತು ಅವತ್ತು ಹೇಳಿದ್ದು ವಿರೋಧವಾಗಿ ನಮಗೆ ಉಳಿಯುವುವರು ನೀವು ಒಬ್ಬರೇ ಎಂದು ಬಿ.ಜೆ.ಪಿ. ಕುರಿತಾಗಿ ಹೇಳಿದರು. ಇವತ್ತು ಹೇಳಿದ್ದು ಏನೆಂದರೆ ಆಡಳಿತ ನಿರ್ವಹಣೆಗೆ ನಾವು, ಕಾಂಗ್ರೆಸ್‌ನವರು ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳುತ್ತೇವೆ ಹೇಗೋ ಅಡ್ಜಸ್ಟ್ ಮಾಡಿಕೊಳ್ಳುತ್ತೇವೆ ಎಂದು ಎರಡರ ಅರ್ಥ ಒಂದೇ ಆಯಿತಲ್ಲಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಿಮೆಂಟ್, ಪ್ಲಾಂಟ್ - ಇದು ಎಲ್ಲೆಲ್ಲಿಗೋ ಹೋಗುತ್ತಿದೆ..

ಅಧ್ಯಕ್ಷರು : ಎಲ್ಲಿಯೂ ಹೋಗಿಲ್ಲ, ಇಲ್ಲೇ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆಂದರೆ, ಕೆಲವು ಸಲ ಸಂದರ್ಭ ಬಂದಾಗ ಆಗುತ್ತದೆ. ಅದನ್ನೆ ನೀವು ದೊಡ್ಡದಾಗಿ ಹೇಳಬೇಡಿ.

ಶ್ರೀ ವಾಟಾಳ್ ನಾಗರಾಜ್ : ಈಗ ಏನು ಆಯಿತು, ಅದರ ಬಗ್ಗೆ ನನಗೆ ಸ್ವಲ್ಪ ಅನುಮಾನ ಬಂದಿದೆ. ನಿನ್ನೆ ಮುಖ್ಯಮಂತ್ರಿಗಳು ಹೇಳಿದರು. ನಿಮಗೆ ತಾಕತ್ತು ಇದ್ದರೆ ಬಿಟ್ಟುಹೋಗಿ ಎಂದು ಉಪಮುಖ್ಯಮಂತ್ರಿಗಳು ಹೇಳಿದರು ನಾವು ಇವರು ಒಂದೇ ಎಂದು ನಾವು ಯಾರ ಮಾತನ್ನು ನಂಬೋಣ? ಇದು ಒಬ್ಬರಲ್ಲೂ ದ್ವಂದ್ವದಿಂದ ಕೂಡಿದ ವಿಚಾರಗಳು ಇವೆ. ಅವರು ನೇರವಾಗಿ ನಿನ್ನೆ ಹೇಳಿದರು, ನೀವು ಬಿಟ್ಟು ಹೋಗಿ ಎಂದು ಈಗ ಇವರು ಹೇಳುತ್ತಾರೆ ನಮಗೂ, ಇವರಿಗೂ ಚೆನ್ನಾಗಿ ಇದೆ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾಕತ್ತು ಇದ್ದರೆ ತೆಗೆದುಕೊಳ್ಳಿ ಎಂದು ನೀವು ವಾಪಸ್ಸು ತೆಗೆದು ಕೊಳ್ಳಿ ಎಂದು ಅವರು ಏತಕ್ಕೆ ಅಂದರೆ ನಾವು ಇಲ್ಲಿ ಎಂ.ಎಲ್.ಎ. ಆಗಿದ್ದೀವಲ್ಲಾ. ನಾವು ಎಂ.ಪಿ.ಗಳಾಗಿದ್ದರೆ ಈ ಮಾತನ್ನು ಅಲ್ಲಿ ಹೇಳಿದ್ದರೆ ತೋರಿಸುತ್ತಿದ್ದೆವು.

ಆದರೆ ನಾವು ಇಲ್ಲಿ ಎಂ.ಎಲ್.ಎ.ಗಳಾಗಿದ್ದೇವೆ. ಓಟಿನ ಅಧಿಕಾರ ನಮಗೆ ಇಲ್ಲ, ಅವರನ್ನು ತೆಗೆಯಲಿಕ್ಕೆ ಅದ್ದರಿಂದ ನಾವೂ ಕೂಡ ಒಂದು ಚಾಲೆಂಜ್ ಮಾಡಬಹುದು, ಅವರು ಮಾಡಿದಹಾಗೆ, ಅವರಿಗೆ ತಾಕತ್ತು ಇದ್ದರೆ ಅವರ ಪ್ರಧಾನಮಂತ್ರಿಗಳು ರಾಜ್ಯಸಭೆಯ ಸದಸ್ಯರಾಗಿ ಪ್ರಧಾನಮಂತ್ರಿಯಾಗಿದ್ದಾರೆ. ಅವರಿಗೆ ತಾಕತ್ತು ಇದ್ದರೆ ಲೋಕಸಭೆಗೆ ಗೆದ್ದುಹೋಗಿ ಪ್ರಧಾನಮಂತ್ರಿಗಳಾಗಲಿ, ನೋಡೋಣ. ಆಗ ನೀವು ಹೇಳಿದ್ದನ್ನು ನಾವು ಕೇಳುತ್ತೇವೆ. ಹಾಸನದಲ್ಲಿ ನಿಲ್ಲಿಸುತ್ತೀರೋ ಅವರು ಜನರಿಂದ ಗೆದ್ದುಹೋಗಿ ಪ್ರಧಾನಮಂತ್ರಿಗಳಾಗಲಿ, ಆಗ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಸಿದ್ದಾರಾಮಯ್ಯ : ಶ್ರೀಮತಿ ಇಂದಿರಾಗಾಂಧಿಯವರು ಆಗಿದ್ದರಲ್ಲಾ ಆವಾಗ ಏನು ಮಾಡುತ್ತಿದ್ದಿರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹತ್ತು ವರ್ಷ ಉಳಿಯಲಿಲ್ಲ. ತಾತ್ವಿಕವಾದ ಸಂದರ್ಭದಲಲ್ಲಿ ಆದರೇ ಹೊರತಾಗಿ ನಿಮ್ಮ ಹಾಗೆ...

(ಗೊಂದಲ)

ಶ್ರೀ ಸಿದ್ಧರಾಮಯ್ಯ : ತಾತ್ವಿಕತೆ, ತತ್ವಗಳು ಅದು ಆರು ತಿಂಗಳು, ಮೂರು ತಿಂಗಳು ಎಂದು ಇರುವುದಿಲ್ಲ. ಅದು ಯಾವಾಗಲೂ ಶಾಶ್ವತವಾಗಿ ಇರುವಂಥಾದ್ದು. ಮೂರು ತಿಂಗಳಿಗೆ, ಆರು ತಿಂಗಳಿಗೆ, ಒಂದು ವರ್ಷಕ್ಕೆ ಎಂದು ಅದು ಇರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪುನಃ ಚುನಾವಣೆಯಲ್ಲಿ ನಿಂತು ನೀವು ನಿಮ್ಮ ತಾಕತ್ತು ತೋರಿಸಿ. ನಮ್ಮ ತಾಕತ್ತು ಇಲ್ಲಿ ಕೇಳಿ, ಹೇಳುತ್ತೇವೆ. ಇನ್ನೊಂದು ಊರಿನ ಬಗ್ಗೆ ತಾಕತ್ತು ಇಲ್ಲಿ ಕೇಳಿದರೆ ಹೇಗೆ?

ಶ್ರೀ ಕೆ. ಜಯಪ್ರಕಾಶ ಹೆಗಡೆ : ಒಂದೂವರೆ ವರ್ಷದಿಂದ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹಿಂದೆ ಗೆದ್ದಿದ್ದು ಅವರು ಮೂರು ಸಾವಿರ ಮತಗಳ ಅಂತರದಿಂದ ಹೇಗೆ ಗೆದ್ದರು ಎಂಬುದು ಗೊತ್ತಿದೆ. ಹಾಸನದ ಜನರಿಗೆ ಎಲ್ಲಾ ಗೊತ್ತಿದೆ.

ಅಧ್ಯಕ್ಷರು : ಇರಿ, ಜಯಪ್ರಕಾಶ ಹೆಗೆಡೆಯವರು ಏನೋ ಹೇಳುತ್ತಾರಂತೆ.

ಶ್ರೀ ಜಯಪ್ರಕಾಶ ಹೆಗೆಡೆ : ಮೊದಲಿನ ಒಂದೂವರೆ ವರ್ಷಕಾಲ ನಾವು ವಿಧಾನಸಭೆಯಲ್ಲಿ ಇದ್ದದ್ದು ನೆನಪಾಗುತ್ತಿತ್ತು. ಆಮೇಲೆ ಲೋಕಸಭೆಯಲ್ಲಿ ಇದ್ದೇವೋ,

ವಿಧಾನಸಭೆಯಲ್ಲಿ ಇದ್ದೇವೋ ಎಂದು ಕೆಲವು ಸಲ ಕನ್‌ಫ್ಯೂಶನ್ ಆಗುತ್ತದೆ. ಏಕೆಂದರೆ, ಹೆಚ್ಚಿನ ಸಮಯ ಇಲ್ಲಿ ದೇವೇಗೌಡರ ಬಗ್ಗೆಯೇ ಚರ್ಚೆಯಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಇವರ ಮೊದಲನೇ ಬಜೆಟ್ ಭಾಷಣವೇ ದೇವೇಗೌಡರಿಂದ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ದೇವೇಗೌಡರ ನಾಮ ಇಲ್ಲದೆ ಅವರು ಏನೂ ಮಾತನಾಡುವಹಾಗಿಲ್ಲ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಈಗ ಚುನಾವಣೆ ಬಂದಾಗ ದೇವೇಗೌಡರು ಲೋಕಸಭೆಗೆ ನಿಲ್ಲುತ್ತಾರೋ, ಗೆಲ್ಲುತ್ತಾರೋ ಎಂದು ಅದೆಲ್ಲಾ ನೋಡಿದ್ದೇವೆ. ಹಿಂದೆ ಅವರು ಆರು ಸಾರಿ ಜನರಿಂದ ಆಯ್ಕೆಯಾಗಿದ್ದಾರೆ. ಅವರು ಯಾವತ್ತೂ ಚುನಾವಣೆಯಲ್ಲಿ ನಿಂತುಕೊಳ್ಳುವುದಕ್ಕೆ ಹೆದರುವುದಿಲ್ಲ. ಇವತ್ತೂ ಗೆಲ್ಲುತ್ತಾರೆ. ನಾಳೆಯೂ ಗೆಲ್ಲುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಬನ್ನಿ, ಅವರನ್ನು ಕರೆಸಿ, ಅವರನ್ನು ಇನ್‌ವೈಟ್ ಮಾಡಿ.

ಶ್ರೀ ಸಿದ್ಧರಾಮಯ್ಯ : ಅವರು ಹಿಂದುಗಡೆಯಿಂದ ಬಂದು ರಾಜಕಾರಣ ಮಾಡುವವರಲ್ಲ. ಆರು ಸಾರಿ ವಿಧಾನಸಭೆಯಿಂದ ಗೆದ್ದಿಲ್ಲವೇನು? ಲೋಕಸಭೆಗೆ ಗೆದ್ದಿಲ್ಲವೇನು? ಅದರ ಬಗ್ಗೆ ಏನು ಮಾತನಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಷ್ಟೋ ಜನ 7 ಸಲ ಗೆಲ್ಲುತ್ತಾರೆ, 8ನೇ ಸಲ ಸೋಲುತ್ತಾರೆ. ಇವತ್ತು ತಾಕತ್ತಿನ ಪ್ರಶ್ನೆ ಬಂದಿದೆ. ನಿಮ್ಮ ಪ್ರಧಾನಿಗಳನ್ನು ಚುನಾವಣೆಗೆ ನಿಲ್ಲಿಸಿ ನಿಮ್ಮ ತಾಕತ್ತನ್ನು ತೋರಿಸಿರಿ.

ಶ್ರೀ ಸಿದ್ಧರಾಮಯ್ಯ : ಲೋಕಸಭೆಗೆ ಚುನಾವಣೆ ಬಂದಾಗ ನೋಡಿಕೊಳ್ಳೋಣ, ಜನ ಏನು ಮಾಡುತ್ತಾರೆ ಎಂದು ನೋಡೋಣ.

ಶ್ರೀ ಎಂ. ಶ್ರೀನಿವಾಸ್ : ಜನ ನೋಡುತ್ತಾರೆ, ತಾಕತ್ತು ಜನರು ತೋರಿಸುತ್ತಾರೆ. ಅದು ಇಲ್ಲಿ ಅಲ್ಲ, ತಾಕತ್ತು ತೋರಿಸಬೇಕಾದದ್ದು ಹಳ್ಳಿಗಳಲ್ಲಿ. ಒಂದು ಸಲ ಅವರು ಹಾಸನದಿಂದ ಸೋತಿದ್ದರಲ್ಲಾ...

ಅಧ್ಯಕ್ಷರು : ಉತ್ತರವನ್ನು ಮುಂದುವರೆಸಿ.

ಶ್ರೀ ವಾಟಾಳ್ ನಾಗರಾಜ್ : ಅವರು ತಾಕತ್ತು ಎಂದರೆ, ಇವರೂ ತಾಕತ್ತು ಬಂದು ಹೇಳಿದ್ದಾರೆ. ತಾಕತ್ತಿನ ಸವಾಲನ್ನು ಯಾರಾದರೂ ಒಬ್ಬರು ಸ್ವೀಕಾರ ಮಾಡಬೇಕಲ್ಲಾ?

ಶ್ರೀ ಸಿದ್ಧರಾಮಯ್ಯ : ಲೋಕಸಭೆಯಲ್ಲಿ ಸ್ವೀಕಾರ ಮಾಡುತ್ತಾರೆ.

ಅಧ್ಯಕ್ಷರು : ಇದು ಜಾಗ ಅಲ್ಲ.

ಶ್ರೀ ಸಿದ್ಧರಾಮಯ್ಯ : ಲೋಕಸಭೆಯಲ್ಲಿ ಸ್ವೀಕಾರ ಮಾಡುತ್ತಾರೆ.

ಅಧ್ಯಕ್ಷರು : ಇದು ಜಾಗ ಅಲ್ಲ.

ಶ್ರೀ ಸಿದ್ಧರಾಮಯ್ಯ : ಲೋಕಸಭೆ ಚುನಾವಣೆ ಬಂದಾಗ ಸ್ವೀಕಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ತಾಕತ್ತು ಇದ್ದರೆ ಅಲ್ಲಿ ಲೋಕಸಭೆಯಲ್ಲಿ ನಿಮ್ಮ ಬೆಂಬಲವನ್ನು ಹಿಂತೆಗೆದುಕೊಳ್ಳಿ ಎಂದು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವತ್ತು ಮಾನ್ಯ ಸಿದ್ಧರಾಮಯ್ಯನವರು ಹೇಳುತ್ತಾರೆ. ನಾವು ಇವರು ಒಂದು ಎಂದು ಆದ್ದರಿಂದ ಮುಖ್ಯಮಂತ್ರಿಗಳ ತಾಕತ್ತಿನ ಬಗ್ಗೆ ನಂಬಿಕೆ ಇಟ್ಟುಕೊಳ್ಳೋಣವೇ ಅಥವಾ ಸಿದ್ಧರಾಮಯ್ಯನವರ ಹೊಂದಾಣಿಕೆ ಬಗ್ಗೆ ನಂಬಿಕೆ ಇಟ್ಟುಕೊಳ್ಳೋಣವೇ? ಇದಕ್ಕೆ ಮುಖ್ಯ ಮಂತ್ರಿಗಳು ಸಭೆಗೆ ಬಂದಿದ್ದರೆ ಚೆನ್ನಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜ್ ಅವರಿಗೆ ಗೊತ್ತಿರುತ್ತದೆ. ಅವರು ಅನೇಕ ಸಾರಿ ಮುಖ್ಯಮಂತ್ರಿಗಳ ಮಾತುಕತೆಯಲ್ಲಿ ಸಾಕಷ್ಟು ಮಾಹಿತಿಯನ್ನು ತಂದುಕೊಂಡಿರುತ್ತಾರೆ. ಅವರಿಗೆ ಎಲ್ಲಾ ಮಾಹಿತಿ ಇರುತ್ತದೆ. ಆದ್ದರಿಂದ ನೀವೇ ಬಹಿರಂಗಪಡಿಸಿಬಿಡಿ ಅದು ಏನು ಇದೆ ಎಂದು.

ಶ್ರೀ ವಾಟಾಳ್ ನಾಗರಾಜ್ : ಅವರು ನೇರವಾಗಿ ಖರ್ಗೆಯವರಿಗೆ ಹೇಳಿದರು, ನಿಮಗೆ ತಾಕತ್ತು ಇದ್ದರೆ ಎಂದು..

ಅಧ್ಯಕ್ಷರು : ದಯಮಾಡಿ ಒಂದು ನಿಮಿಷ. ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ವಿಚಾರದಲ್ಲಿ ಹೇಳಿದ್ದನ್ನು ನಿರ್ಣಯ ಮಾಡುವುದಕ್ಕೆ ಇದು ವೇದಿಕೆ ಅಲ್ಲ ಅವರು ಲೋಕಸಭೆಯಲ್ಲಿ ನಿಲ್ಲಬಹುದು ಅಥವಾ ಅಲ್ಲಿ ಬಿಟ್ಟು ಇನ್ನೆಲ್ಲಿಗಾದರೂ ಹೋಗಬೇಕು ಎಂದ ನಿರ್ಣಯ ಮಾಡುವುದಕ್ಕೆ ಇದು ವೇದಿಕೆ ಅಲ್ಲ. ವಿಚಾರವನ್ನು ಅಲ್ಲಿಗೇ ಮುಕ್ತಾಯ ಮಾಡಿಬಿಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂತಹ ಒಂದು ಸಂದರ್ಭದಲ್ಲಿ ಅವರು ಪ್ರಸ್ತಾಪ ಮಾಡಿದರು. ಅದಕ್ಕೆ ನಾನು ಹೇಳಿದೆ, ಅವರಿಗೆ ತಾಕತ್ತು ಇದ್ದರೆ ಲೋಕಸಭೆಗೆ ಚುನಾವಣೆಗೆ ನಿಲ್ಲಲಿ ಎಂದು.

ಅಧ್ಯಕ್ಷರು : ಅದಕ್ಕೆ ಸೂಕ್ತ ವೇದಿಕೆ ಯಾವುದು ಇದೆಯೋ ಅಲ್ಲಿ ಸಂಬಂಧಪಟ್ಟವರು ಚರ್ಚೆ ಮಾಡುತ್ತಾರೆ, ನಿರ್ಣಯ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆಂದರೆ ಜನರಿಂದ ಆರಿಸಿ ಹೋಗಲಿ, ಪ್ರಧಾನ ಮಂತ್ರಿಗಳಾಗಿ ಇರಲಿ. ನಾವು ಬೇಡ ಎನ್ನುವುದಿಲ್ಲ.

ಅಧ್ಯಕ್ಷರು : ಅದು ನಿಮ್ಮ ಅಭಿಪ್ರಾಯ. ಅದನ್ನು ಹೇಳುವವರು ಬೇರೆ ಕಡೆಗೆ ಇದ್ದಾರೆ. ತಮ್ಮ ಉತ್ತರವನ್ನು ಮುಂದುವರೆಸಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಸಭಾಧ್ಯಕ್ಷರೇ, ಇವತ್ತು ತೆರಿಗೆ ಸುಧಾರಣೆಯಲ್ಲಿ ಸಾಮಾನ್ಯ ವ್ಯಾಪಾರಗಾರರಿಗೂ ಅನುಕೂಲವಾಗಬೇಕೆಂಬ ದೃಷ್ಟಿಯಿಂದ 5ಲಕ್ಷದ ವರಗೆ ಕಾಂಪೋಸಿಷನ್ ಟ್ಯಾಕ್ಸ್ ಮಾಡಿರತಕ್ಕಂಥಾದ್ದು. ಅವರು ಲೆಕ್ಕ ಇಡಬೇಕಾಗಿಲ್ಲ. ಸುಮಾರು ಮೂರು ಲಕ್ಷದವರೆಗೆ ವ್ಯಾಪಾರ ಮಾಡುವವರು ಒಂದೂವರೆ ಸಾವಿರ ಕೊಟ್ಟು ಬಿಟ್ಟರೆ ಅವರು ಲೆಕ್ಕ ಇಡಬೇಕಾಗಿಲ್ಲ. ಮೂರು ಲಕ್ಷಕ್ಕಿಂತ ಹೆಚ್ಚಿಗೆ ಇದ್ದರೆ ಅದರ ಮೇಲೆ 2 ಪರ್ಸೆಂಟ್ ತೆರಿಗೆ ಕೊಡಬೇಕಾಗುತ್ತದೆ. ಮತ್ತೆ ಟಿ.ಒ.ಟಿ. ಬಗ್ಗೆ ಬಹಳ ಚರ್ಚೆಯಾಗುತ್ತಿತ್ತು. ಅದನ್ನೂ ಕೂಡ ಈ ಸಾರಿ ಸರಳೀಕರಣ ಮಾಡಿದ್ದೇವೆ. 15 ಲಕ್ಷದವರೆಗೆ ವಹಿವಾಟು ಇದ್ದರೆ ಯಾರೂ ಕೂಡ ಟಿ.ಒ.ಟಿ. ಕೊಡಬೇಕಾಗಿಲ್ಲ. 15 ಲಕ್ಷದ ಮೇಲೆ 5 ಕೋಟಿವರೆಗೆ ಒಂದು ಪರ್ಸೆಂಟ್ ಟ್ಯಾಕ್ಸ್ ಕೊಡಬೇಕಾಗುತ್ತದೆ. 5 ಕೋಟಿಯಿಂದ 10 ಕೋಟಿವರೆಗೆ 2 ಪರ್ಸೆಂಟ್ ಟ್ಯಾಕ್ಸ್ 10 ಕೋಟಿಗಿಂತ ಜಾಸ್ತಿ ಇದ್ದರೆ ಅವರು 3 ಪರ್ಸೆಂಟ್ ಟ್ಯಾಕ್ಸ್ ಕೊಡಬೇಕಾಗುತ್ತದೆ. ಇಲ್ಲಿ ಕೂಡ ಬಹಳ ಸರಳೀಕರಣ ಮಾಡತಕ್ಕಂಥಾದ್ದು ರ್‍ಯಾಶಲೈಸೇಷನ್ ಮಾಡತಕ್ಕಂಥ ಪ್ರಯತ್ನ ಮಾಡಿದ್ದೇವೆ. ಮತ್ತೆ ಸಂಬಳ ತೆಗೆದುಕೊಳ್ಳುವವರಿಗೆ ಒಂದೂವರೆ ಸಾವಿರವರೆಗೆ ಪ್ರೊಫೆಶನಲ್ ಟ್ಯಾಕ್ಸ್ ಮಿತಿ ಇತ್ತು ಅದನ್ನು ಮೂರು ಸಾವಿರದವರೆಗೆ ಏರಿಸಿದ್ದೇವೆ. ಯಾರು ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕಂಥವರು, ಸಣ್ಣ ಕೆಲಸ ಮಾಡತಕ್ಕಂಥವರು ಇದ್ದಾರೆ, ಅವರಿಗೆ ಮೊದಲು ಒಂದೂವರೆ ಸಾವಿರದವರೆಗೆ ಪ್ರೊಫೆಷನಲ್ ಟ್ಯಾಕ್ಸ್ ಮಿತಿ ಇತ್ತು. ಅದನ್ನು ಮೂರು ಸಾವಿರ ರೂಪಾಯಿಗಳವರೆಗೆ ಏರಿಸಿ, ಈ ಸಣ್ಣ ಸಂಬಳ ತೆಗೆದುಕೊಳ್ಳುವವರಿಗೆ ಅವರು ವೃತ್ತಿ ತೆರಿಗೆ ಕಟ್ಟಬೇಕಾಗಿಲ್ಲ ಎಂದು ಆ ಕೆಲಸವನ್ನು ಕೂಡ ಮಾಡಿದ್ದೇವೆ. ಆಮೇಲೆ ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್ ಬಗ್ಗೆ ಶಿಮಾನ್ ಯಡಿಯೂರಪ್ಪನವರು ಭಾರಿ ಕೋಪ ಮಾಡಿಕೊಂಡು

ಆವರು ಆವತ್ತು ರೌದ್ರಾವತಾರ ತೋರಿಸಿದ್ದರು. ನಾನು ಅವತ್ತು ಅವರ ಮುಖವನ್ನೇ ನೋಡಲಿಲ್ಲ.

ಆವತ್ತು ನಾನು ಬಜೆಟ್ ಭಾಷಣವನ್ನು ಓದುವಾಗ ನಿಮ್ಮ ಮುಖವನ್ನು ನೋಡಿ ನನಗೆ ಬಹಳ ಹೆದರಿಕೆಯಾಯಿತು, ಭಾರಿ ರೌದ್ರಾವತಾರ ಮಾಡಿಕೊಂಡು ರೈತರಿಗೆ ಅನ್ಯಾಯ ಮಾಡಿಬಿಟ್ಟಿರಿ, ರೈತರನ್ನೆಲ್ಲಾ ಹಾಳು ಮಾಡಿಬಿಟ್ಟಿರಿ ಎಂದು ಹೇಳಿ ನಿಮಗೂ ಪುಸ್ತಕವನ್ನು ತಂದು ತೋರಿಸಿದರು ರೈತರ ಮೇಲೆ ಯಾವ ತೆರಿಗೆಯನ್ನೂ ಹಾಕಿಲ್ಲ, ಹಿಂದೆ ಕೂಡ ಕಾಫಿ ಮೇಲೆ ಇಂಥ 6 ಪರ್ಸೆಂಟ್‌ನ್ನು 4 ಪರ್ಸೆಂಟ್ ಮಾಡಿದ್ದೇವೆ. ಕಂಪನಿಗಳಿಗೆ 60 ರಿಂದ 50ರವರೆಗೆ ಕಡಿಮೆ ಮಾಡಿದ್ದೇವೆ. ಇದು ಶಿವಪ್ಪನವರಿಗೂ ಅನುಕೂಲವಾಗಿದೆ, ರೈತರಿಗೆ ಕೃಷಿ ವರಮಾನ ತೆರಿಗೆ ಹಾಕಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ಆವತ್ತು ಸಭಾಧ್ಯಕ್ಷರು ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಇವರು ಪ್ಲಾಸ್ಟಿಕ್ ಮೇಲೆ ಏಕೆ ಹಾಕಿದ್ದೀರೆಂಬುದನ್ನು ಹೇಳಿ ಸೀಮೆಂಟು ಬೆಲೆ ರೂ.1-20 ಜಾಸ್ತಿ ಆಯಿತೆಂದು ಹೇಳುವುದು ಸರಿಯಲ್ಲ. I am sorry ಇವರು ಈ ರೀತಿ ಹೇಳುವುದಾರೆ ಯಾರೂ ಕೂಡ ಮಾತನಾಡಬಾರದೆಂದು ಹೇಳಿದಂತಾಗುತ್ತದೆ. ಹಾಗಾದರೆ ಮಾನ್ಯ ಯಡಿಯೂರಪ್ಪನವರು ಅದಕೋಸ್ಕರವೇ ಮಾತನಾಡಿದರೇನು ?

Mr. Speakar : It is unfortunate.

(ಗೊಂದಲ)

ಅಧ್ಯಕ್ಷರು : ನೋಡಿ ನಾರಾಯಣಸ್ವಾಮಿ ಅವರು ಹಿರಿಯ ಸದಸ್ಯರು ಈ ರೀತಿ ಮಾತನಾಡಬಾರದು ಅದು ತಪ್ಪಾಗುತ್ತದೆ. ಯಾರೂ ಈ ರೀತಿ ಮಾತನಾಡಬೇಡಿ.

Dear don't it to go on records. That observation will not find a place in the records. It is not fair. It is not in good taste. It is unfortunate.

ಶ್ರೀ ಸಿದ್ಧರಾಮಯ್ಯ : ಈ ವ್ಯವಸ್ಥೆಯನ್ನು ಇಟ್ಟಿಕೊಂಡಿರುವುದೇ ಪ್ರಚಾರಕ್ಕೋಸ್ಕರ

ಶ್ರೀ ವಾಟಾಳ್ ನಾಗರಾಜ್ : ಸಾರ್ ನಾವೇನು ಮೈಲಿಗೆಯಲ್ಲಿ ಬಂದಿಲ್ಲ, ನಮಗೆ ಪ್ರಚಾರ ಬೇಕು, ಫೋಟೋಬೇಕು, ವಿಡಿಯೋ ಬೇಕು, ಪ್ರಚಾರ ಎನ್ನತಕ್ಕಂಥದ್ದು ಬೇಡ ಎನ್ನುವುದಕ್ಕೆ ನಾವೇನು ಸನ್ಯಾಸಿಗಳೇ ?

ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರ ವಿಚಾರದಲ್ಲಿ ಆ ರೀತಿ ಹೇಳತಕ್ಕಂಥದ್ದು ಗೌರವ ಅಲ್ಲ. It is a very unfortunate thing. ತಾವು ದಯಮಾಡಿ ಯಾರೂ ಕೂಡ ಆ ರೀತಿ ಮಾತನಾಡಬಾರದು.

ಶ್ರೀ ಸಿದ್ಧರಾಮಯ್ಯ : ಅಧ್ಯಕ್ಷರೆ, ನಾನು ಪ್ಲಾಸ್ಟಿಕ್ ಬಗ್ಗೆ ಒಂದು ವಿವರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಈ ಪ್ಲಾಸ್ಟಿಕ್ ಸ್ಕ್ರ್ಯಾಫ್‌ನಿಂದ ತಯಾರು ಮಾಡತಕ್ಕಂಥದ್ದಕ್ಕೆ ವಿನಾಯಿತಿ ಇತ್ತು. ಗ್ರ್ಯಾನ್ಯೂಲ್‌ನಿಂದ ತಯಾರು ಮಾಡತಕ್ಕಂಥ ಪ್ಲಾಸ್ಟಿಕ್‌ಗೆ 8 ಪರ್ಸೆಂಟ್ ಇತ್ತು. ಬಹಳ ಜನ ತಯಾರಕರು ಗ್ರ್ಯಾನ್ಯೂಲ್ಸ್‌ನಿಂದ ತಯಾರು ಮಾಡಿದರೂ ಕೂಡ ನಾವು ಸ್ಕ್ರ್ಯಾಫ್‌ನಿಂದ ತಯಾರು ಮಾಡಿರುವುದು ಎಂದು ಹೇಳಿ ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ಇದು ನನ್ನ ಗಮನಕ್ಕೆ ಬಂದಮೇಲೆ ಎನು ಮಾಡಿದೆನೇಂದರೆ ಈ ರೀತಿ ತೆರಿಗೆ ಕೊಡುವುದನ್ನು, ತಪ್ಪಿಸಿಕೊಳ್ಳುವುದನ್ನು ತಡೆಯಲು. ಪ್ಲಾಸ್ಟಿಕ್ ಸ್ಕ್ರ್ಯಾಪ್‌ನಿಂದ ತಯಾರು ಆಗುವಂಥಾದ್ದಕ್ಕೂ ಕೂಡ 8 ಪರ್ಸೆಂಟ್ ತೆರಿಗೆ ಹಾಕಿದ್ದೇನೆ, ಕಾರಣ ಗ್ರ್ಯಾನ್ಯೂಲ್‌ಗೆ 8 ಪರ್ಸೆಂಟ್ ಇತ್ತು. ಇದು ಸರಿಸಮಾನವಾಗಿರಲಿ ಎಂದು ಪರ್ಸೆಂಟ್ ಹಾಕಿದ್ದೇನೆ. ಯಾರು ಪ್ಲಾಸ್ಟಿಕ್‌ನ್ನು ಮನೆಯ ಬಳಕೆಗೆ ಉಪಯೋಗಿಸುತ್ತಾರೆ, ಅವರಿಗೆ ಕಡಿಮೆ ಮಾಡುತ್ತೇವೆ ಆಗ ಯಾರಿಗೂ ಕೂಡ ಹೊರೆಯಾಗುವುದಿಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಷ್ಟು ಪರ್ಸೆಂಟ್ ಕಡಿಮೆ ಮಾಡಿದ್ದೀರಿ?

ಶ್ರೀ ಸಿದ್ಧರಾಮಯ್ಯ : 4 ಪರ್ಸೆಂಟ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲು ಸ್ಕ್ರ್ಯಾಫ್‌ನಿಂದ ಮಾಡುವವರಿಗೆ ಟ್ಯಾಕ್ಸ್ ಇರಲಿಲ್ಲ ಅವರು ಈಗ 4 ಪರ್ಸೆಂಟ್ ಕೊಡಬೇಕಾಗಿದೆ..

ಶ್ರೀ ಸಿದ್ಧರಾಮಯ್ಯ : ರಾ-ಮೇಟೀರಿಯಲ್ಸ್‌ನ್ನು ಉಪಯೋಗಿಸಿ ನಾವು ಗ್ರ್ಯಾನ್ಯೂಯಲ್‌ನಿಂದ ತಯಾರು ಮಾಡುವುದಿಲ್ಲ ಸ್ಕ್ರ್ಯಾಪ್ ಪ್ಲಾಸ್ಟಿಕ್‌ನಿಂದ ತಯಾರುಮಾಡಿದ್ದೇವೆಂದು ಎಲ್ಲಾ ಪ್ಲಾಸ್ಟಿಕ್ ಪಾದಾರ್ಥಗಳಿಗೂ ತೆರಿಗೆಗಳನ್ನು ಕೊಡುವುದನ್ನು ವಂಚನೆ ಮಾಡುತ್ತಿದ್ದರು.

ಅಧ್ಯಕ್ಷರು : ಗ್ರ್ಯಾನ್ಯೂಯಲ್ಸ್‌ನಿಂದ ಮಾಡುವುದು ಈ ಕನ್ನಡಕದ ಫ್ರೇಮ್ ಮುಂತಾದ್ದದು.

ಶ್ರೀ ಸಿದ್ಧರಾಮಯ್ಯ : ಬೇಕಾದಷ್ಟು ಬೇರೆ ಬೇರೆ ಪೈಪ್‌ಗಳು ಬರುತ್ತವೆ.

ಅಧ್ಯಕ್ಷರು : ಸ್ಕ್ಯ್ಯಾಪ್‌ನಿಂದ ಮಾಡತಕ್ಕ ವಸ್ತುಗಳೇ ಬೇರೆ.

ಶ್ರೀ ಟಿ. ಬಿ. ಜಯಚಂದ್ರ : ಅಧ್ಯಕ್ಷರೆ, ತಾವು ಹೇಳತಕ್ಕಂಥದ್ದು ಅದು ಒರಿಜಿನಲ್ ಗ್ರ್ಯಾನ್ಯೂಯಲ್ಸ್‌ನಿಂದ ಮಾಡತಕ್ಕಂಥದ್ದು, ಹಳ್ಳಿಗಳಲ್ಲಿ ಉಪಯೋಗಿಸತಕ್ಕಂಥ ಚೋಂಬು, ಪೈಪ್‌ಗಳು ಎಲ್ಲಾವೂ ಕೂಡ ರೀಪ್ರೋಸೆಸ್ ಮೆಟಿನಿಯಲ್ಸ್‌ನಿಂದ ಮಾಡುವಂಥಾದ್ದು.

ಅಧ್ಯಕ್ಷರು : ಮನೆ ಬಳಕೆ ಪದಾರ್ಥಗಳ ತಯಾರಿಕೆಗೆ ಎನು ಉಪಯೋಗಿಸುತ್ತಾರೆ ಅವೆಲ್ಲಾ ಕೂಡ ಗ್ರ್ಯಾನ್ಯೂಯಲ್‌ನಿಂದ ತಯಾರು ಮಾಡುವಂಥಾದ್ದಲ್ಲ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್ : ಬಡವರು ಉಪಯೋಗಿಸುವಂಥ ಚಂದು, ಮುಂತಾದವು ಸ್ಕ್ಯ್ಯಾಫ್‌ನಿಂದ ತಯಾರಾಗುತ್ತದೆ, ಸ್ಕ್ಯ್ಯಾಫ್‌ನಿಂದ ಒಳ್ಳೆಯ ಕ್ವಾಲಿಟಿ ಪ್ಲಾಸ್ಟಿಕ್ ಸಾಮಾನುಗಳನ್ನು ತಯಾರಿಸುವುದಕ್ಕೆ ಆಗುವುದಿಲ್ಲ ಅದು ಬಡವರ ವಸ್ತುಗಳು ಅಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಗ್ರಾನ್ಯೂಯಲ್‌ನಿಂದ ಮಾಡಿದ್ದು 30-35 ರೂಪಾಯಿ ಬೆಲೆ ಇದ್ದರೆ ಸ್ಕ್ಯ್ರಾಫ್‌ನಿಂದ ತಯಾರು ಮಾಡಿದ್ದಕ್ಕೆ 7 ರೂ.ನಿಂದ 12ರೂ.ವರೆಗೆ ದೊರೆಯುತ್ತದೆ. ಅದನ್ನು ಬಡ ಬಗ್ಗರು ಉಪಯೋಗಿಸುತ್ತಾರೆ, ಅದೇನು ಹೆಚ್ಚು ದಿನ ಬಾಳಿಕೆ ಬರುವುದಿಲ್ಲ, ಆದ್ದರಿಂದ ಅದಕ್ಕೆ ಪೂರ್ಣ ತೆರಿಗೆ ತೆಗೆದು ಹಾಕುವುದು ಒಳ್ಳೆಯದು ಎಂದು ನನ್ನ ಸಲಹೆ.

ಅಧ್ಯಕ್ಷರು : ಅದು ಒಳ್ಳೆಯ ಸಲಹೆ. I agree with you.

ಶ್ರೀ ಸಿದ್ಧರಾಮಯ್ಯ : ಸ್ಕ್ಯ್ಯಾಪ್‌ನ್ನು ಎನು ಮಾಡುತ್ತಾರೆ, ಅದರ ಮೇಲೆ ತೆರಿಗೆ ಇಲ್ಲ, ಆದರೆ ಈ ಸ್ಕ್ಯ್ಯಾಪ್‌ನ್ನು ಉಪಯೋಗಿಸಿ ತಯಾರಿಸಿದ ವಸ್ತುಗಳನ್ನು ರೀಸೇಲ್ ಮಾಡುತ್ತಾರಲ್ಲ ಅದರ ಮೇಲೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಎನು ಹೇಳಿದ್ದೇವೆಂದರೆ, ಅಂತಿಮವಾಗಿ ಏನಾಗಿದೆ ಎಂದರೆ ಬಕೇಟ್ ಆಗಲಿ, ಚೊಂಬಾಗಲಿ, ಇವೆಲ್ಲಾ ಬಡವರು ತೆಗೆದುಕೊಳ್ಳುವುದು. ಈ ತೆರಿಗೆ ಗ್ರಾಹಕರ ಮೇಲೆ ಬೀಳುತ್ತದೆ. Ultimately it will pass on to consumers.

ಅಧ್ಯಕ್ಷರು : ನನ್ನ ಅಭಿಪ್ರಾಯವಾದರೂ ಇಷ್ಟೇ, ನಮ್ಮಲ್ಲಿ ಇವತ್ತು ಪ್ಲಾಸ್ಟಿಕ್ ಇಂಡ್‌ಸ್ಟ್ರೀಸ್ ಬಂದಮೇಲೆ ಮಡಕೆ ಮಾಡುವುದಿಲ್ಲ, ಇದರಿಂದ ಕುಂಬಾರರು ನಿರುದ್ಯೋಗಿಗಳಾಗಿದ್ದಾರೆ, ಅತಿಸಾಮಾನ್ಯ ಜನ ತೀರ ಕೆಳವರ್ಗದ ಜನ ನೀರು ತರುವುದಕ್ಕೆ ನೀರನ್ನು ಶೇಖರಿಸಿ ಉಪಯೋಗಿಸುವುದಕ್ಕೆ ಕೆಲವು ಕಡೆ ಬೋರ್‌ವೆಲ್‌ನಿಂದ ಬಾವಿಯಿಂದ ನೀರು ತರಲಿಕ್ಕೆ, ಕೆಲವು ಕಡೆ ಬೋರ್‌ವೆಲ್‌ನಿಂದ, ಬಾವಿಯಿಂದ ನೀರು ತರಲಿಕ್ಕೆ ಕೆಲವು ಕಡೆ ಸೈಕಲ್ ಮೇಲೆ ಆ ಕಡೆ ಈ ಕಡೆ ಪ್ಲಾಸ್ಟಿಕ್ ಬಿದಿಗೆ ಕಟ್ಟಿ ತರುತ್ತಾರೆ. ಅತಿ ಬಡವರು ಉಪಯೋಗಿಸುವಂಥ ವಸ್ತುಗಳು ಇವು. ಇಷ್ಟು ದಿವಸ ಇರಲಿಲ್ಲ. ಈಗ ಏತಕ್ಕೆ ಹಾಕುತ್ತೀರೆಂದು ಮಾನ್ಯ ಸದಸ್ಯರ ಪ್ರಶ್ನೆ. ರೆಡ್ಯೂಸ್ ಮಾಡುವ ವಿಚಾರ ಅಲ್ಲ ಇದು.

ಶ್ರೀ ಟಿ. ಬಿ. ಜಯಚಂದ್ರ : ಈ ರೀಪ್ರೋಸೆಸ್ ಮೇರಿಯಲ್ಸನ್ನು ತಯಾರಿಸುವುದೂ ಎಲ್ಲವೂ ಸ್ಮಾಲ್‌ಸ್ಕೇಲ್ ಸೆಕ್ಟಾರ್‌ನಿಂದ ಬರುವಂಥಾದ್ದು.

ಅಧ್ಯಕ್ಷರು : ಇದರಲ್ಲಿ ಬರುವುದು ಎರಡೇ ಪದಾರ್ಥ, ಒಂದು ಬಕೇಟ್, ಚೆಂಬು, ಮಗ್ಗ್.

ಶ್ರೀ ಸಿದ್ಧರಾಮಯ್ಯ : ಈ ಮೊದಲು 8 ಪರ್ಸೆಂಟ್ ತೆರಿಗೆ ಇತ್ತು ಆಗ ಈ ಸ್ಕ್ರಾಪ್ ಉಪಯೋಗಿಸಿಕೊಂಡು ಮಾಡುತ್ತಿದ್ದೇವೆಂದು ತಯಾರಕರು ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಿದ್ದರು.

ಅಧ್ಯಕ್ಷರು : ನೀರು ಹಾಕಿಕೊಳ್ಳಲು, ಉಪಯೋಗಿಸುವ ಮಗ್, ಚೆಂಬು, ಬಿಂದಿಗೆ ಇಂಥದ್ದೆಲ್ಲಾ ಇವೆಲ್ಲವೂ ಬಡವರು ಉಪಯೋಗಿಸುವಂಥ ವಸ್ತುಗಳಾಗಿರುವುದರಿಂದ ತೆರಿಗೆಯಿಂದ ವಿನಾಯಿತಿ ನೀಡುವ ಪ್ರಯತ್ನ ಮಾಡಿ.

ಶ್ರೀ ಸಿದ್ಧರಾಮಯ್ಯ : ಅದಕ್ಕೆ ಕಡಿಮೆ ಮಾಡುತ್ತೇವೆ, ಮಹೆಯ ಬಳಕೆ ಪ್ಲಾಸ್ಟಿಕ್‌ನಿಂದ ಮಾಡಿದ ಯಾವ ಯಾವ ವಸ್ತುಗಳಿವೆ ಅವುಗಳಿಗೆಲ್ಲಾ 4 ಪರ್ಸೆಂಟ್ ಹಾಕಿದ್ದೇವೆ, ಸ್ಟೀಲ್ ಪಾತ್ರೆಗಳಿಗೂ 8 ರಿಂದ 4 ಪರ್ಸೆಂಟ್‌ಗೆ ಇಳಿಸಿದ್ದೇನೆ ಮಾಡಿದ್ದೇವೆ.

ಅಧ್ಯಕ್ಷರು : 2 ಪರ್ಸೆಂಟ್ ತಾನೇ ಏತಕ್ಕೆ ; ಸಂಪೂರ್ಣ ತೆಗೆದುಹಾಕಿಬಿಡಿ.

ಶ್ರೀ ಸಿದ್ಧರಾಮಯ್ಯ : All utemcils made of plastic. ಅವಕ್ಕೆ 4 ಪರ್ಸೆಂಟ್ ಏತಕ್ಕೆಂದರೆ ಈ ಸ್ಟೀಲ್ ಪಾತ್ರೆಗಳಿಗೆ 8 ರಿಂದ 4 ಪರ್ಸೆಂಟ್ ಏತಕ್ಕೆ ? You exempt it. Are you getting 4-5 crores ? ಅತಿ ಹೆಚ್ಚು ಎಂದರೆ 20-30 ಲಕ್ಷ ಬರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಸ್ಟೀಲ್‌ದವರಿಗೆ 8 ಇದ್ದದ್ದು 4 ಪರ್ಸೆಂಟ್ ಮಾಡಿದ್ದೀರಿ. ಇವರಿಗೆ ಏನೂ ಇಲ್ಲದವರಿಗೆ 4 ಪರ್ಸೆಂಟ್ ಏತಕ್ಕೆ? You exempt it are you getting 4-5 crores? ಅತಿ ಹೆಚ್ಚು ಎಂದರೆ 20-30 ಲಕ್ಷ ಬರಬಹುದು.

ಅಧ್ಯಕ್ಷರು : ಎಲ್ಲಾ ಸೇರಿಸಿದರೂ 2-3 ಕೋಟಿ ರೂ. ಆಗಬಹುದು.

ಶ್ರೀ ಜೆ. ಹೆಚ್. ಪಟೇಲ್ : ದುಡ್ಡು ಬಹಳ ಬರುತ್ತದೆಂದಲ್ಲ. ತಾವು ಒಂದು ವಿಷಯವನ್ನು ಗಮನಿಸಬೇಕು.ಈ ಪ್ಲಾಸ್ಟಿಕ್ ಬಂದು ಕುಂಬಾರ ಸತ್ತು ಹೋದ. ಪಾಸ್ಟಿಕ್ ಚಪ್ಪಲಿ ಬಂದು ಚಮ್ಮಾರರು ಸತ್ತು ಹೋದ, ಪ್ಲಾಸ್ಟಿಕ್ ಫ್ರೇಮ್‌ಗಳು ಬಂದು ಬಾಡಿಗೆಯವರು ಸತ್ತರು ಈ ಎಲ್ಲಾ ಹಳ್ಳಿಗಾಡಿನ ಸಣ್ಣ ಕೈಗಾರಿಕೆಯವರನ್ನು ಸಾಯಿಸುತ್ತಿರುವ ಕಾರ್ಖಾನೆಗಳವರಿಗೆ ಪ್ರೋತ್ಸಾಹ ನೀಡ ಬಾರದೆಂಬುದೇ ಈ ಸರ್ಕಾರದ ಉದ್ದೇಶ ದುಡ್ಡು ಬರುತ್ತದೆ ಎಂದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ತಮ್ಮ ಬಹಳ ಬುದ್ಧಿವಂತಿಕೆಯ ಸ್ಟೇಟ್‌ಮೆಂಟ್ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು, ನೀವು, ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ಪ್ರಕಾಶ್‌ರವರು, ಮಾನ್ಯ ನಜೀರ್‌ರವರು ಎಲ್ಲಾ ಸೇರಿ ಮೀಟಿಂಗ್‌ನಲ್ಲಿ ಹೇಳಿರುವ ವಿಚಾರ ಟಾಟ-ಬಾಟಾದವರು ಬಂದು ಇವರನ್ನೆಲ್ಲಾ ಸಾಯಿಸಿಲ್ಲ. ನೀವು ಯಾರನ್ನೋ ತಂದು ಯಾರಿಗೋ ಅಡ್ಡ ಹಾಕುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಕಟ್ಟಿಗೆ ಸಿಕ್ಕುವುದಿಲ್ಲವೆಂದು ಪ್ಲಾಸ್ಟಿಕ್ ಫ್ರೇಮ್ ಮಾಡುತ್ತಿದ್ದಾರೆ, ಕಟ್ಟಿಗೆ ಸಿಕ್ಕಿದರೆ ಎಲ್ಲರೂ ಮಾಡುತ್ತಾರೆ. ಅದರೆ ಅದನ್ನು ಫೀಲಾಸಫಿ ಕಡೆಗೆ ತಿರುಗಿಸಬೇಡಿ.

Mr. Speaker : It is only Rs.3 Crores. I think you can exempt it.

ಶ್ರೀ ಸಿದ್ದರಾಮಯ್ಯ : ಈ ಬಾಬಿನಲ್ಲಿ ನಮಗೆ 2-3 ಕೋಟಿ ಹೋಗಬಹುದು ವಿನಾಯಿತಿ ಮಾಡುವುದಕ್ಕೆ ನನಗೇನೂ ತೊಂದರೆಯಿಲ್ಲ, ಸರ್ಕಾರದ ಬೊಕ್ಕಸಕ್ಕೆ ಕೊಡಬೇಕಾದ ತೆರಿಗೆಯನ್ನು ತಪ್ಪಿಸಿಕೊಳ್ಳುತ್ತಿರುವುದನ್ನು ತಡೆಗಟ್ಟಬೇಕೆಂದು 2 ಪರ್ಸೆಂಟ್ ಆದಾಯವಿರಲಿ ಎಂದು ಮಾಡಿದ್ದೇನೆ.

ಅಧ್ಯಕ್ಷರು : ನೀವು ಬಡವರಿಗೆ ಸ್ಪಂದಿಸುತ್ತಿರುವ ಹೃದಯವುಳ್ಳವರು, ಆ ಮಾತನ್ನು ಸದನದ ಪ್ರಾರಂಭದಲ್ಲಿ ಸರ್ಕಾರದ ಪರವಾಗಿ ಹೇಳಿದ್ದೀರಿ, ಮಾನ್ಯ ಸಭಾನಾಯಕರ ಪರವಾಗಿ ಹೇಳಿದ್ದೀರಿ, ನಿಮ್ಮ ಗೌರವ ಬಡಜನರ ಹೃದಯದಲ್ಲಿ ಹೆಚ್ಚಾಗುವುದುಕ್ಕೋಸ್ಕರ ದಯಮಾಡಿ

2 ಪರ್ಸೆಂಟ್ ಏನು ಹಾಕಿದ್ದೀರ ಅದನ್ನು ವಿನಾಯಿತಿ ನೀಡಿ.. ಅದು ಅಷ್ಟು ದೊಡ್ಡ ಮೊತ್ತವೇನೂ ಅಲ್ಲ. He is a very liberal man as far as poor people are concerned.

Sri Siddaramaiah : You have become very liberal now.

(Interruptions)

Sri Siddaramaiah : He never pleaded for that.

(Interruptions)

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಬಜೆಟ್‌ನಿಂದಾಗಿ ನೀವು ಜನರಿಂದ ದೂರವಾಗುತ್ತಿದ್ದೀರಿ, ಈ ರೀತಿ ವಿನಾಯಿತಿಯನ್ನು ನೀಡಿ ಇನ್ನಾದರೂ ಸ್ವಲ್ಪ ಹತ್ತಿರವಾಗಿ ಎಂದು ಮಾನ್ಯ ಅಧ್ಯಕ್ಷರು ಅವರಿಗೆ ಒಂದು ಕಿವಿ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಟೋಕಸೆಟ್ಯಾಕ್ಸ್ ಎಂದು 2 ಪರ್ಸೆಂಟ್ ಇರಲಿ, ಇಲ್ಲದಿದ್ದರೆ ತೆರಿಗೆ ತಪ್ಪಿಸಿಕೊಳ್ಳುತ್ತಿರುವವರನ್ನು ತಡೆಗಟ್ಟುವುದುನಮಗೆ ಬಹಳ ಕಷ್ಟವಾಗುತ್ತದೆ ಆ ಕಾರಣದಿಂದ ಈ 2 ಪರ್ಸೆಂಟ್‌ನ್ನು ಹಾಕುತ್ತಿದ್ದೇನೆಯೇ ಹೊರತು not because that I should burden them.

ಅಧ್ಯಕ್ಷರು : ಆಗಬಹುದು, ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ವಸ್ತುಗಳು ಬಡವರು ಉಪಯೋಗಿಸುವಂಥವು.

ಅಧ್ಯಕ್ಷರು : ಈಗ ತಮಗೆ ಒಂದು ಆಶ್ವಾಸನೆ ಕೊಡುತ್ತೇನೆ. ಮಾನ್ಯ ಯಡಿಯೂರಪ್ಪನವರ ಸಂಪುಟದಲ್ಲಿ ನಿಮ್ಮನ್ನೇ ಹಣಕಾಸಿನ ಮಂತ್ರಿಯನ್ನಾಗಿ ಮಾಡುವಂತೆ ಹೇಳುತ್ತೇನೆ. ಆಗ ನೀವು ಪೂರ್ಣ ವಿನಾಯಿತಿ ಮಾಡಿ.

ಶ್ರೀ ಚಂದ್ರಕಾಂತ್ ಬೆಲ್ಲದ್ : ನನ್ನ ಅನೇಕ ಸಲಹೆಗಳನ್ನು ಅವರು ಒಪ್ಪಿಕೊಳ್ಳಬೇಕಾಗುತ್ತದೆ. ಹಣಕಾಸಿನ ವಿಚಾರಗಳ ಸಂಬಂಧಪಟ್ಟಂತೆ ಈಗಲೂ ಕೂಡ ನನ್ನ ಅನೇಕ ಸಲಹೆಗಳನ್ನು ಅವರು ಒಪ್ಪಿಕೊಳ್ಳಬೇಕಾಗುತ್ತದೆ, 1983ನೇ ಇಸವಿಯಿಂದಲೂ ನಾನು ಅನೇಕ ಸಲಹೆಗಳನ್ನು ಪ್ರತ್ಯಕ್ಷನಾಗಿ, ಪರೋಕ್ಷನಾಗಿ ನೀಡುತ್ತಾ ಬಂದಿದ್ದೇನೆ.

Mr. Speaker : Every potential political party must have a shadow Government. They were the official opposition party.

(Interruptions)

ಶ್ರೀ ವಾಟಾಳ್ ನಾಗರಾಜ್ : ಯಡಿಯೂರಪ್ಪನವರ ಸಂಪುಟದಲ್ಲಿ, ಇವರನ್ನು ಹಣಕಾಸು ಸಚಿವರನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಆಗ, ಅಧ್ಯಕ್ಷರು ಯಾರು ಸ್ವಾಮಿ?

ಅಧ್ಯಕ್ಷರು : ನಾನೇ ಇರುವುದಕ್ಕೆ ಪ್ರಯತ್ನಪಡುತ್ತೇನೆ. ಇದೊಂದು ಜಾಗಕ್ಕೆ ನೀವು ಯಾರೂ ಬರಬೇಡಿ. ಉಳಿದ ಜಾಗಗಳಿಗೆ ನೀವು, ಯಾರು ಏನೇ ಹಂಚಿಕೆ ಮಾಡಿಕೊಳ್ಳಿ. ಅದರ ಬಗ್ಗೆ ನನಗೇನೂ ಅಭ್ಯಂತರವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಂತೂ ನೀವು ಸಂಪೂರ್ಣ ಅಲ್ಲಿಯೇ ಇರಬೇಕೆಂದು ತೀರ್ಮಾನ ಮಾಡಿದ್ದೀರಿ, ಒಳ್ಳೆಯದಾಯಿತು. ನೀವು ಆ ಜಾಗ ಬಿಡುವುದಕ್ಕೆ ತಯಾರಾಗಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಅಧ್ಯಕ್ಷರಾದವರು ಪಕ್ಷಾತೀತರಾಗಿರುವುದಿಂದ, ಅವರ ವಿರುದ್ಧವಾಗಿ ಯಾವ ರಾಜಕೀಯ ಪಕ್ಷಗಳೂ ಚುನಾವಣೆಗೆ ಅಭ್ಯರ್ಥಿಗಳನ್ನು ನಿಲ್ಲಿಸುವುದಿಲ್ಲ. ಹೊಸ ಸಂಪ್ರದಾಯ ಕರ್ನಾಟಕದಲ್ಲಿ ಪ್ರಾರಂಭವಾಗಲಿ, ಮಾನ್ಯ ರಮೇಶ್‌ಕುಮಾರ್‌ರವರ ವಿರುದ್ಧ ಯಾವುದೇ ಪಕ್ಷಗಳು ಅಭ್ಯರ್ಥಿಗಳನ್ನು ನಿಲ್ಲಿಸದೇ ಇದ್ದರೆ, ಅವರೇ ಮುಂದುವರೆಯುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಒಂದನ್ನು ಯೋಚನೆ ಮಾಡುತ್ತಾ ಇದ್ದೇವೆ. ಕರ್ನಾಟಕದ 5 ಕೋಟಿ ಜನತೆಯ ಆಶೀರ್ವಾದ ಸಿಕ್ಕಿದರೆ, ಯಾರು ಹಿಂದೆ ಒಳ್ಳೆಯ ಹಣಕಾಸಿನ ಸಚಿವರಾಗಿದ್ದರು, ಒಳ್ಳೆಯ ಅಧ್ಯಕ್ಷರಾಗಿ, ತಮ್ಮಂತಹವರು ಕೆಲಸ ಮಾಡಿದ್ದಾರೆ, ಅಂಥಂಥವರೇ ಆ ಸ್ಥಾನದಲ್ಲಿರ ಬೇಕು. ಪಕ್ಷಬೇಧ ಮರೆತು, ಒಂದು ಒಳ್ಳೆಯ ಆಡಳಿತವನ್ನು ಕೊಡಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ.

ಶ್ರೀವಾಟಾಳ್ ನಾಗರಾಜ್ : ನನಗೆ ಅರ್ಥವಾಯಿತು, ಅದಕ್ಕಾಗಿ ಇತ್ತೀಚೆಗೆ ಯಡಿಯೂರಪ್ಪನವರು ತಮ್ಮ ಸಿಟ್ಟನ್ನು ಬಿಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಒಟ್ಟಾರೆ ಈ ತೆರಿಗೆ ಸರಳೀಕರಣ, ಸುಧಾರಣೆ ಕ್ರಮಗಳಲ್ಲಿ ಪ್ರಗತಿದಾಯಕವಾದ ಹೆಜ್ಜೆಯನ್ನು ನಮ್ಮ ಸರ್ಕಾರ ಇಟ್ಟಿದೆ. ಇದರಿಂದ ವರ್ತಕರಿಗೆ, ಕೈಗಾರಿಕೋದ್ಯಮಿಗಳಿಗೆ ಮತ್ತೆ ಕೈಗಾರಿಕೆ ಬೆಳವಣಿಗೆ, ಇನ್‌ವೆಸ್ಟ್‌ಮೆಂಟಿಗೂ ಕೂಡ ಇದರಿಂದ ಅನುಕೂಲವಾಗುತ್ತದೆ. ಏಕೆಂದರೆ, ಇನ್‌ವೆಸ್ಟ್‌ಮೆಂಟ್ ಬರಬೇಕಾದರೂ ಕೂಡ ಬೇರೆ

ರಾಜ್ಯಗಳ ಜೊತೆ ಏನು ತೆರಿಗೆ ರಿಯಾಯಿತಿಗಳಿವೆ, ಇಲ್ಲಿ ಯಾವ ತರಹ ಮೂಲಭೂತ ಸೌಕರ್ಯಗಳು ಇವೆ ಎಂಬುದನ್ನೆಲ್ಲಾ ಅವರು ನೋಡಿಕೊಂಡು ಇಲ್ಲಿ ಕೈಗಾರಿಕೆಗಳನ್ನು ಅಥವಾ ಇನ್‌ವೆಸ್ಟ್‌ಮೆಂಟ್ ಮಾಡುವುದು ಆಗುತ್ತದೆ. ಇವೆಲ್ಲಾ ದೃಷ್ಟಿ ಕೋನವನ್ನು ಗಮನದಲ್ಲಿಟ್ಟು ಕೊಂಡು, ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಸರ್ಕಾರ ಪ್ರಗತಿದಾಯಕವಾದ ಹೆಜ್ಜೆಯನ್ನು ಇಟ್ಟಿದೆ ಎಂಬ ಮಾತನ್ನು ಹೇಳುತ್ತೇನೆ. ವರ್ತಕರೂ ಕೂಡ, ತೆರಿಗೆ ಕೊಡತಕ್ಕವರೂ ಕೂಡ ಇದನ್ನು ಗಮನಿಸಿ ಹೆಚ್ಚು ತೆರಿಗೆಯನ್ನು ಕೊಡುತ್ತಾರೆ, ಹೆಚ್ಚು ಕಂಪ್ಲೈಯನ್ಸ್ ಆಗುತ್ತದೆ ಎಂಬದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮೂಲಭೂತ ಸೌಕರ್ಯಗಳನ್ನು ಹೆಚ್ಚು ಮಾಡಬೇಕೆಂದು ನಮ್ಮ ಸರ್ಕಾರ ಗಂಭೀರವಾಗಿ ಆಲೋಚನೆಯನ್ನು ಮಾಡುತ್ತಿದೆ. ಏಕೆಂದರೆ, ಭಾರತದಂಥ ದೇಶ ಅಥವಾ ವ್ಯವಸಾಯ ಪ್ರಧಾನವಾದಂಥ ದೇಶದಲ್ಲಿ ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ, ಕೈಗಾರಿಕೆ ಬೆಳವಣಿಗೆಯಾಗಬೇಕಾದರೆ, ಮೂಲಭೂತ ಸೌಕರ್ಯಗಳಿಗೆ ಅಭಿವೃದ್ಧಿಯಾಗಬೇಕಾಗುತ್ತದೆ. ಆ ದೃಷ್ಟಿಯಿಂದ ಈ ಸಾರಿ ನಮ್ಮ ಬಜೆಟ್‌ನಲ್ಲಿ ಸುಮಾರು 57 ಪರ್ಸೆಂಟ್ ಮೂಲಭೂತ ಸೌಕರ್ಯಗಳಿಗೆ ಹೋಗುತ್ತಾದೆ ಎನ್ನುವುದನ್ನೂ ಪ್ರಸ್ತಾಪ ಮಾಡಿದ್ದೇವೆ. ಅದಕ್ಕಾಗಿ ರಸ್ತೆಗಳು ಚೆನ್ನಾಗಿರ ಬೇಕು, ರಸ್ತೆಗಳ ಅಭಿವೃದ್ಧಿಯಾಗಬೇಕು, ಟ್ರಾನ್ಸ್‌ಪೋರ್ಟ್, ವಿದ್ಯುಚ್ಛಕ್ತಿ....

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರಿನಿಂದ ಚಾಮರಾಜ ನಗರಕ್ಕೆ ಹೋಗಬೇಕಾದರೆ, ರಸ್ತೆಗಳು ಯಾವ ರೀತಿ ಇವೆ ಎಂಬುದು ಅವರಿಗೇ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಅದಕ್ಕೋಸ್ಕರವೇ 1997-98ಕ್ಕೆ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ 40 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದೇನೆ. ಇನ್ನೂ ಹೆಚ್ಚು ಮಾಡಬೇಕೆಂಬ ಆಸೆ ಇದೆ. ಮತ್ತೆ ರಸ್ತೆ ನಿಧಿಯನ್ನೂ ಕೂಡ ಮಾಡಬೇಕೆಂದು ನಾನು ಪ್ರಸ್ತಾಪ ಮಾಡಿದ್ದೇನೆ. ಗ್ರಾನೈಟ್, ಕಬ್ಬಿಣದ ಅದಿರುಗಳು ಮತ್ತು ಖನಿಜ ವಸ್ತುಗಳು ಇವು ಎಲ್ಲೆಲ್ಲಿ ಹೆಚ್ಚು ಸಾಗಾಣಿಕೆ ಇವೆ, ಆ ರಸ್ತೆಗಳನ್ನು ಅಭಿವೃದ್ಧಿಮಾಡಬೇಕು. ಏಕೇಂದರೆ, ಹೆಚ್ಚು ಭಾರ ಇರತಕ್ಕಂಥ ವಾಹನಗಳು ಹೋಗುವುದು ಮತ್ತು ಟ್ರಾಫಿಕ್ ಅಲ್ಲಿರುವುದರಿಂದ ರಸ್ತೆ ಮೇಲೆ ಒತ್ತಡವಾಗುತ್ತದೆ. ಗ್ರಾನೈಟ್‌ಸಾಗಾಣಿಕೆಯಾಗುವ ಕಡೆ, ಕಬ್ಬಿಣದ ಅದಿರು ಸಾಗಣಿಕೆಯಾಗುವ ಕಡೆ, ರಸ್ತೆಗಳು ಸುಧಾರಣೆಯಾಗಬೇಕು. ಮತ್ತೆ ಟಿಂಬರ್ ಸಾಗಣಿಕೆ ಇರುವ ಬಗ್ಗೆ ನಾನು ಯೋಚನೆ ಮಾಡಿಲ್ಲ. ರಾಯಲ್ಟಿ ಮೇಲೆ ಸೆಸ್ ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ಸೆಸ್ ಹಾಕಿ, ರಸ್ತೆ ನಿಧಿ ಎಂದು ಮಾಡಿ, ಈ ಭಾಗದ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂಬ ವಿಚಾರವನ್ನು ಮಾಡಿಕೊಂಡಿದ್ದೇವೆ. ಇದರ ಜೊತೆಗೆ ಕೆಲವು ಜಿಲ್ಲೆಗಳಲ್ಲಿ ವಿಮಾನ ಕೇಂದ್ರಗಳನ್ನೂ ಅಭಿವೃದ್ಧಿ ಮಾಡಬೇಕೆಂದು 10 ಕೋಟಿ

ರೂಪಾಯಿಗಳನ್ನು ಅಲ್ಲಿ ಜಮೀನು ಖರೀದಿ ಮಾಡುವುದಕ್ಕಾಗಿ ಇಟ್ಟಿದ್ದೇನೆ. ಏಕೆಂದರೆ, ಇವತ್ತು ಕರ್ನಾಟಕ ಇಡೀ ಜಗತತಿನಲ್ಲೇ ಒಂದು ದೊಡ್ಡ ಕೈಗಾರಿಕಾ ಕೇಂದ್ರವಾಗಿ ಬೆಳೆಯತಕ್ಕ ಎಲ್ಲಾ ಅರಕಾಜಶಗಳೂ ಇರುವುದರಿಂದ, ಎಲ್ಲಾ ಕಡೆ ಜನಸಂಪರ್ಕ ಆಗಬೇಕಾದರೆ, ಸಾಗಯಣಿಕೆ ಅತ್ಯಂತ ಅವಶ್ಯಕ ಎನ್ನುವ ಕಾರಣಕ್ಕಾಗಿ ಕೆಲವು ಜಿಲ್ಲಾ ಕೇಂದ್ರಗಳಲ್ಲಿ ಇದನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತು ಖಾಸಗಿಯವರಿಂದಲೂ ಕೂಡ ಬಂಡವಾಳ ಹೂಡಿಸಬೇಕೆಂಬ ಅಭಿಪ್ರಾಯವೂ ಇದೆ. ಈ ದಿಕ್ಕಿನಲ್ಲಿ ಮೂಲಭೂತ ಸೌಕರ್ಯಗಳನ್ನು ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಮತ್ತೆ ಮಂಗಳೂರು ಕರಾವಳಿ ಪ್ರದೇಶದಲ್ಲಿ ಬಂದರು ಅಭಿವೃದ್ಧಿಮಾಡುವುದಕ್ಕೆ ಒಂದು ಯೋಜನೆಯನ್ನು ಮಾಡಿಕೊಂಡಿದ್ದೇವೆ. ಆದ್ದರಿಂದೆ ಈ ಸಾಗಾಣಿಕೆ, ಟ್ರಾನ್ಸ್‌ಪೋರ್ಟನ್ನು ಹೆಚ್ಚು ಅಭಿವೃದ್ಧಿಪಡಿಸತಕ್ಕಂಥಾದ್ದು ಮತ್ತು ವಿದ್ಯುತ್ತನ್ನೂ ಕೂಡ ಸುಧಾರಣೆ ಮಾಡಬೇಕೆಂಬ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ವಿದ್ಯುತ್ ಬಗ್ಗೆ ಎಲ್ಲಾ ಸುಧಾರಣೆಯಾಯಿತು ಎನ್ನುವ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ಈ ವಿದ್ಯುತ್ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನು ಅದರ ಬಗ್ಗೆ ದೀರ್ಘವಾಗಿಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರ ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದೆ, ಅದಕ್ಕಾಗಿ ವಿದ್ಯುಚ್ಛಕ್ತಿ ಮಂಡಳಿಯನ್ನು ಒಂದು ಕಂಪನಿಯಾಗಿ ಪರಿವರ್ತನೆ ಮಾಡಬೇಕು, ಅದಕ್ಕೆ ಖಾಸಗಿ ಬಂಡವಾಳ ಹೂಡಿಸುವುದಕ್ಕೆ ತಕ್ಕ ವಾತಾವರಣ ನಿರ್ಮಾಣ ಮಾಡಬೇಕು. ಇವತ್ತಿನವರೆಗೆ ಪವರ್ ಅಡಿಟ್ ಆಗಿರಲಿಲ್ಲ. ಆ ಪವರ್ ಅಡಿಟ್ ಮಾಡುವುದನ್ನು ನಾವು ಪ್ರಾರಂಭ ಮಾಡಿದ್ದೇವೆ. ಕೆ.ಇ.ಬಿ.ಹುಟ್ಟಿದಾಗಿನಿಂದ ಬಂದಂಥ ಪವರ್ ಎಲ್ಲಿ ಹೋಗುತ್ತದೆ, ಎಷ್ಟು ದುಡು ಬರುತ್ತದೆ ಎಂಬ ಲೆಕ್ಕವನ್ನೇ ಇಟ್ಟಿರಲಿಲ್ಲ. ಅದಕ್ಕೋಸ್ಕರವಾಗಿ ಪವರ್ ಅಡಿಟ್ ಮಾಡುವುದನ್ನು ಪ್ರಾರಂಭ ಮಾಡಿದ್ದೇವೆ. ಈ ಪವರ್ ಆಡಿಟ್ ವರದಿ ಬಂದಮೇಲೆ, ಬೆಳವಣಿಗೆಯನ್ನು ಹೇಳುತ್ತೇವೆ. ಇದಕ್ಕೆ ಎನರ್ಜಿ ಆಡಿಟ್ ಎಂದು ಕರೆಯುತ್ತೇವೆ. ಇದರಲ್ಲಿ ನಷ್ಟ ಆಗಿರುವುದ್ದು ನಿಜ, ನಾನು ಇಲ್ಲಿ ಎಂದು ಹೇಳುವುದಿಲ್ಲ.

SRI B. S. YEDIYURAPPA : Latest Power Audit report prepared by Intelligence Bureau of KEB, ಏನು ಎಂದು ನಾನು ಕೇಳಿದ್ದೆ. ನೀವು ಪವರ್ ಅಡಿಟ್ ಮಾಡಿಸಿದಿರಿ, ಇಟೆಲಿಜೆನ್ಸ್ ಬ್ಯೂರೋದಿಂದ, ಒಂದು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ನಷ್ಟವಾಗಿದೆ ಎನ್ನತಕ್ಕಂಥ ರಿಪೋರ್ಟ್ ಇದೆ. ಅದು ಬಂದಿದೆಯೇ ರಿಪೋರ್ಟ್ ಇದೆಯೋ ಇಲ್ಲವೋ ಎಂಬುದನ್ನೂ ಹೇಳಿ.

ಶ್ರೀ ಜೆ. ಹೆಚ್. ಪಟೇಲ್ : ನಾವು ಟ್ರಾನ್ಸ್‌ಮಿಷನ್ ಲೈನುಗಳನ್ನು ಹಾಕುವುದರಿಂದ ತುಮಕೂರು ಕಡೆಗೆ ಎಷ್ಟು ಪವರ್ ಟ್ರಾನ್ಸ್‌ಮಿಟ್ ಆಯಿತು, ಆ ಏರಿಯಾದಲ್ಲಿ ಬಿಲ್ ಕಲೆಕ್ಷನ್ ಎಷ್ಟಾಗುತ್ತಾ ಇದೆ, ಇದರ ವ್ಯತ್ಯಾಸ ಏನು ಎಂಬುದೇ ಪವರ್ ಆಡಿಲ್. ನೀವು ಸಾವಿರ ಕೋಟಿ ಲುಕ್ಸಾನು ಹೇಳುವುದು ಬೇರೆ, monthly-wise, we have assessed it and roughly,-- ಹೋದ ತಿಂಗಳು ಅಥವಾ ಅದು ಪ್ರಾರಂಭ ಮಾಡಿದ ತಿಂಗಳಿಂದ 5-10 ಕೋಟಿ ಜಾಸ್ತಿ ಕಲೆಕ್ಟ್ ಮಾಡುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು ಹೇಳಿದಹಾಗೆ, ಎನರ್ಜಿ ಆಡಿಟ್ ಎಂದರೆ, ಪವರ್ ಎಷ್ಟು ಬಂತು, ಆ ಭಾಗದಲ್ಲಿ ಎಷ್ಟು ಪವರ್ ಹೋಯಿತು, ಎಷ್ಟು ಬಿಲ್ಲಿಂಗ್ ಆಯಿತು, ಇದಕ್ಕೆ ಇದುವರೆಗೂ ಲೆಕ್ಕ ಇರಲಿಲ್ಲ. ಆದ್ದರಿಂದ ಈ ಲೆಕ್ಕ ಬರೆಯುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಈಗ ಹೆಚ್ಚು ಬಿಲ್ಲಿಂಗ್ ಆಗುವುದಕ್ಕೆ ಪ್ರಾರಂಭವಾಗಿದೆ. ಮತ್ತು ಅದರ ವರದಿ ಕೂಡ ಬರಬೇಕು. ನಾನು ಏಕೆ ಹೇಳುತ್ತಿದ್ದೇನೆಂದರೆ, ವಿದ್ಯುಚ್ಛಕ್ತಿಯನ್ನು ಸುಧಾರಣೆ ಮಾಡಬೇಕು, ಇಲ್ಲದೇ ಹೋದರೆ ಕೈಗಾರಿಕೆಗಳು ಬೆಳವಣಿಗೆಯಾಗುವುದಕ್ಕೆ ಕಷ್ಟವಾಗುತ್ತದೆ. ವ್ಯವಸಾಯದ ಬೆಳವಣಿಗೆಯಾಗುವುದು ಕಷ್ಟವಾಗುತ್ತದೆ. ಈ ಕಾರಣಕ್ಕೋಸ್ಕರ ಇದನ್ನು ಮಾಡಬೇಕೆಂಬ ಪ್ರಯತ್ನವನ್ನು ಈಗ ಮಾಡಿದ್ದೇವೆ. ನನ್ನ ಅಧ್ಯಕ್ಷತೆಯಲ್ಲಿಯೇ ಒಂದು ಸಚಿವ ಸಂಪುಟದ ಉಪ ಸಮಿತಿಯನ್ನೂ ಮಾಡಿದ್ದಾರೆ. ಇದನ್ನು ಸುಧಾರಣೆ ಮಾಡುವುದಕ್ಕೋಸ್ಕರ ನಾವು ಕೆಲಸ ಪ್ರಾರಂಭ ಮಾಡಿದ್ದೇವೆ. ಆದ್ದರಿಂದ ಮೂಲಭೂತ ಸೌಕರ್ಯಗಳಿಗೆ, ಹಚ್ಚು ಒತ್ತು ಕೊಟ್ಟು ಈ ರಾಜ್ಯದ ಆರ್ಥಿಕ ಬೆಳವಣಿಗೆ ಮಾಡಬೇಕೆಂಬುದು ನಮ್ಮ ಸರ್ಕಾರದ ಉದ್ದೇಶ. ಅದಕ್ಕೋಸ್ಕರ ನಮ್ಮ ಆಯವ್ಯಯ ಬೆಳವಣಿಗೆಗೆ ಪೂರಕವಾದಂಥ ಆಯವ್ಯಯ, ಆರ್ಥಿಕ ಬೆಳವಣಿಗೆಗೆ ಪೂರಕವಾದಂಥ ಆಯವ್ಯಯ. ಸಾಮಾನ್ಯ ಜನರಿಗೆ ಮೂಲಭೂತವಾದ ಸೌಲಭ್ಯಗಳನ್ನು ಒದಗಿಸುವಂತಹ ಆಯವ್ಯಯ. ಇದನ್ನು ಮಾನ್ಯ ಸದಸ್ಯರಿಗೆ ನಾನು ಸ್ಪಷ್ಟಪಡಿಸುವುದಕ್ಕೆ ಇಚ್ಛಿಪಡುತ್ತೇನೆ. ಮತ್ತು ಜೊತೆಗೆ ಮಾನ್ಯ ಮೊಯಿಲಿಯವರು ಈಗ ನಾನ್ ಡೆವಲಪ್‌ಮೆಂಟ್ ಖರ್ಚು ಜಾಸ್ತಿಯಾಗುತ್ತಿದೆ, ಡೆವಲಪ್‌ಮೆಂಟ್ ಖರ್ಚು ಕಡಿಮೆ ಆಗುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳಿದರು, ನಿಜ. ನಾನು ಇಲ್ಲ ಎಂದು ಹೇಳುವುದಿಲ್ಲ. ಎಕೆಂದರೆ ಸಂಬಳ, ಪೆನ್‌ಷನ್, ಗ್ರ್ಯಾಂಟ್ಸ್ ಸಬ್ಸಿಡಿ ಇವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿವೆ. ಕೆ.ಇ.ಬಿ.ಗೆ ಸಬ್ಸಿಡಿ ಕಡಿಮೆ ಮಾಡಬೇಕ ಎನ್ನುವುದು ನಮ್ಮ ಪ್ರಯತ್ನ. ಕೆ.ಎಸ್.ಆರ್.ಟಿ.ಸಿಗೆ ಏನು ಸಬ್ಸೀಡಿಯನ್ನು ಕೊಡುತ್ತಿದ್ದೇವೆ ಅದನ್ನು ನಿಲ್ಲಿಸಬೇಕು ಎನ್ನುವುದು ನಮ್ಮ ಪ್ರಯತ್ನ. 5 ಪರ್ಸಂಟ್ ಸರ್ಕಾರಿ ನೌಕರಿಗಳಲ್ಲಿ ಎಲ್ಲೆಲ್ಲಿ ಅನಗತ್ಯವಾಗಿ ಇವೆ. ಅವಶ್ಯಕ ಸೇವೆಗಳಲ್ಲಿ ಅಲ್ಲ. ಎಲ್ಲೆಲ್ಲಿ ಅನಗತ್ಯವಾಗಿ ಸಿಬ್ಬಂದಿ

ಇದ್ದಾರೆ ಅಲ್ಲಿ ಕಡಿಮೆ ಮಾಡಬೇಕು ಎನ್ನತಕ್ಕಂಥದ್ದು. ಉದಾಹರಣೆಗೆ ನಮ್ಮ ತಲ್ಲೂಕು ಪಂಚಾಯತಿಗಳಲ್ಲಿ ಬಿ.ಡಿ.ಒ ಇದ್ದಾರೆ ಇ.ಓಗಳು ಇದ್ದಾರೆ. ಹಾಗೆಯೇ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಎ.ಇ.ಒ ಇದ್ದಾರೆ ಬಿ.ಇ.ಓ ಇದ್ದಾರೆ. ಮೊದಲು ಸೃಷ್ಟಿ ಮಾಡಿದರು. ಆದರೆ ಅವುಗಳನ್ನು ಹಾಗೆಯೇ ಇಟ್ಟುಕೊಳ್ಳಬೇಕೇ? ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ಹೇಳಿ. ಅದನ್ನು ನಾವು ಈಗ ಬದಲಾವಣೆ ಮಾಡುತ್ತಿದ್ದೇವೆ. ಇದನ್ನು ಕಡಿಮೆ ಮಾಡುವುದಕ್ಕೆ ನನ್ನ ಅಧ್ಯಕ್ಷತೆಯಲ್ಲಿ ಒಂದು ಕ್ಯಾಬಿನೇಟ್ ಉಪ ಸಮಿತಿಯನ್ನು ನೇಮಕ ಮಾಡಿದ್ದಾರೆ ಅದರ ಅಧ್ಯಕ್ಷ ನಾನೇ, ನಾವು ಈಗಾಗಲೇ ಎರಡು ಮೂರು ಮೀಟಿಂಗ್‌ಗಳನ್ನು ಮಾಡಿದ್ದೇವೆ. ಡಿವಿಜನಲ್ ಕಮಿಷನರ್ಸ್, ಮತ್ತು ಸೆಕ್ರೆಟರಿಯೇಟ್‌ನಲ್ಲಿ ಕೆಲವು ಹುದ್ದೆಗಳು ಅನಗತ್ಯವಾಗಿ ಇರತಕ್ಕಂಥದ್ದು..

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಬೇಸರ ಮಾಡಿಕೊಳ್ಳಬಹುದು. ಆದರೆ ನನ್ನ ಒಂದು ಸಲಹೆ ಏನೆಂದರೆ ನಮ್ಮಲ್ಲಿ ಈಗ ಪುಷ್ಪಕ್ ಬಸ್ಸುಗಳು ಇವೆ. ಸಾವಿರಾರು ವಾಹನಗಳನ್ನು ನಮ್ಮ ಇಲಾಖಾಧಿಕಾರಿಗಳ ಕಾರುಗಳನ್ನು ವಿಧಾನ ಸೌಧದ ಮುಂದೆ ತಂದು ನಿಲ್ಲಿಸುತ್ತಾರೆ. ಅದಕ್ಕೆ ಒಬ್ಬರು ಡ್ರೈವರ್. ಅವರಿಗೆ ಬೇರೆ ಏನೂ ಕೆಲಸ ಇಲ್ಲ. ಆ ಅಧಿಕಾರಿಗಳನ್ನು ಕರೆದುಕೊಂಡು ಬರುವುದು ಮತ್ತು ಸಾಯಂಕಾಲ ಕರೆದುಕೊಂಡು ಮನೆಗೆ ಹೋಗುವುದು. ಯಾರೂ ಪ್ರವಾಸ ಮಾಡುವುದಿಲ್ಲ ಹೊರಗಡೆ ಹೋಗುವುದಿಲ್ಲ ವಿಧಾನ ಸೌಧಕ್ಕೆ ಬಂದು ಹೋಗುವವರಿಗೆ ಪುಷ್ಪಕ್ ಬಸ್ಸು ಕೊಡಿ. ಬೆಳಗ್ಗೆ 9-00 ಗಂಟೆಯಿಂದ 10-00 ಗಂಟೆಯವರೆಗೂ ಫ್ರೀ ಆಗಿ ಓಡಿಸಿ. ಆ ನಷ್ಟವನ್ನು ನಾವು ಕೆ.ಎಸ್.ಆರ್.ಟಿ.ಸಿ ಗೆ ತುಂಬಿ ಕೊಡೋಣ. ಇದರಿಂದ ಕನಿಷ್ಟ 4-5 ಕೋಟಿ ರೂಪಾಯಿಗಳನ್ನು ಉಳಿಸಬಹುದು. ನಾವು ಈಗ ಡ್ರೈವರ್‌ಗೆ ಸುಮ್ಮನೆ ಸಂಬಳ ಕೊಡುತ್ತಿದ್ದೇವೆ. ಅವರಿಗೆ ಕೆಲಸ ಇಲ್ಲ. ವಾಹನ ವಿಧಾನ ಸೌಧದ ಮುಂದೆ ನಿಂತಿರುತ್ತದೆ.ಡಿವಿಜಲ್ ಕಮಿಷನರ್ ಆಫೀಸು ಮುಂದೆ ನಿಂತಿರುತ್ತದೆ. ಯಾರು ಹೊರಗಡೆ ಪ್ರವಾಸ ಮಾಡುತ್ತಾರೋ ಅವರಿಗೆ ಇರಲಿ. ವಿಧಾನ ಸೌಧಕ್ಕೆ ಬಂದು ವಾಪಸ್ಸು ಹೋಗುವವರಿಗೆ ಒಂದು ವಾಹನ ಅವರಿಗೆ ಟಿ.ಎ.ಡಿ.ಎ ಅವರಿಗೆ ಒಬ್ಬ ಡ್ರೈವರ್. ಈ ವಿಷಯ ವೀರೇಂದ್ರಪಾಟೀಲರ ಕಾಲದಲ್ಲಿ ಚರ್ಚೆ ಆಯಿತು. ಬಿ.ಡಿ.ಒ ಕಛೇರಿಯಲ್ಲಿ ಇಬ್ಬಬ್ಬರು ಇದ್ದಾರೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಇಬ್ಬಿಬ್ಬರು ಇದ್ದಾರೆ. ಈ ಬಗ್ಗೆ ಇವತ್ತೇ ತೀರ್ಮಾನ ತೆಗೆದುಕೊಳ್ಳಿ. ಇದಕ್ಕೆ ಸಮಿತಿ ಏಕೆ ಸ್ವಾಮಿ? ತಾವು ತಕ್ಷಣ ಕ್ರಮ ತೆಗೆದುಕೊಳ್ಳಿ ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಎಂ. ಶ್ರೀನಿವಾಸ್ : ಗೌರ್ನಮೆಂಟ್‌ಆಫ್ ಇಂಡಿಯಾ ಫ್ಯಾಕ್ಟರಿಗಳಲ್ಲಿ ಜನರಲ್ ಮ್ಯಾನೇಜರ್ಸ್ ವ್ಯಾನ್ಸ್‌ನಲ್ಲಿ ಬರುತ್ತಾರೆ. ವಿಧಾನ ಸೌಧಕ್ಕೆ ಬರುವ ಅಧಿಕಾರಿಗಳಿಗೆ ಒಂದು ಮಿನಿ ಬಸ್ಸು ಕೊಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಏನು ಸಲಹೆ ಕೊಟ್ಟಿದ್ದಾರೆ ಅದನ್ನೂ ಕೂಡ ನಾವು ವಿಚಾರ ಮಾಡುತ್ತಿದ್ದೇವೆ. ನಾವು ಬಹಳ ಗಂಭೀರವಾಗಿ ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವಾಗ ಈ ವಿಷಯವನ್ನು ಪಕ್ಷಭೇದಬಿಟ್ಟು ಚರ್ಚೆಮಾಡಬೇಕಾಗುತ್ತದೆ. ನಾನು ತಮಗೆ ಒಂದು ಮಾತು ಹೇಳುತ್ತೇನೆ. ನಾನು ಈ ವಿಷಯವನ್ನು ನನ್ನ ಬಜೆಟ್ ಭಾಷಣದಲ್ಲಿ ಸಹ ಪ್ರಸ್ತಾಪ ಮಾಡಿದ್ದೇನೆ. 1990-91ನೇ ಸಾಲಿನಲ್ಲಿ ನಾನ್ ಡೆವಲಪ್‌ಮೆಂಟ್‌ಗೆ ಹೋಗಿರತಕ್ಕಂಥಾದ್ದು 51 ಪರ್ಸೆಂಟ್. ಇವತ್ತು 1996-97ನೇ ಸಾಲಿನಲ್ಲಿ ನಾನ್ ಡೆವಲಪ್‌ಮೆಂಟ್‌ಗೆ ಹೋಗಿರುವುದು 68 ಪರ್ಸೆಂಟ್. 1990-91ರಲ್ಲಿ ಅಭಿವೃದ್ಧಿಗೆ ನಾವು ಖರ್ಚು ಮಾಡಿರುವುದು 49 ಪರ್ಸೆಂಟ್ ಇತ್ತು. ಆದರೆ ಇವತ್ತು 32 ಪರ್ಸೆಂಟ್ ಇದೆ. ನಾವು ರಾಜ್ಯ ಅಭಿವೃದ್ಧಿಯನ್ನು ಇಟ್ಟುಕೊಂಡಿರುವಾಗ ಇದಕ್ಕೆ ಕಡಿವಾಣ ಹಾಕದೇ ರಾಜ್ಯದ ಅಭಿವೃದ್ಧಿ ಬರೀ ಮಾತಿನಿಂದ ಭಾಷಣದಿಂದ ಮಾಡಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ನಾವು ಕೆಲವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಅದಕ್ಕೆ ತಮ್ಮ ಸಹಕಾರ ನಮಗೆ ಬೇಕಾಗುತ್ತದೆ.

ಇವತ್ತು ಸಬ್ಸಿಡಿ ಕೊಡತಕ್ಕಂಥಾದ್ದು ಸಂಬಳ ಕೊಡತಕ್ಕಂಥಾದ್ದು ಪೆನ್‌ಷನ್ ಕೊಡತಕ್ಕಂಥಾದ್ದು ಗ್ರ್ಯಾಂಟ್ ಕೊಡತಕ್ಕಂಥಾದ್ದು ಇದೆ. ಇದು ಇವತ್ತುಯದ್ವಾತದ್ವಾ ಏರಿಕೊಂಡು ಹೋಗುತ್ತಿದೆ. ಇದಕ್ಕೆ ನಾವು ತಡೆ ಹಾಕದೇ ಇದ್ದರೆ ನಮ್ಮ ರಾಜ್ಯದ ಬೆಳವಣಿಗೆಯನ್ನು ನಾವು ನಿರೀಕ್ಷಿಸಿದ ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನಾವು ಇವತ್ತು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೊರಟಿದ್ದೇವೆ. ಅದಕ್ಕೆ ಮಾನ್ಯ ಖರ್ಗೆಯವರು ಮಾತನಾಡುತ್ತಾ ಅದನ್ನು ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದರು. ಡಿಸ್‌ಇನ್ ವೆಸ್ಟ್‌ಮೆಂಟ್ 76 ಕಂಪನಿಗಳ ಮೇಲೆ 9 ಸಾವಿರ ಕೋಟಿ ರೂಪಾಯಿಗಳು ಇದೆ. 4100 ಕೋಟಿ ರೂಪಾಯಿಗಳು ನಮ್ಮ ಇಕ್ವಿಟಿ ಮತ್ತು ಸಾಲ ಇದೆ. ಅದರ ಮೇಲೆ ನಾವು12 ಪರ್ಸೆಂಟ್ ಬಡ್ಡಿಯನ್ನು ಕೊಡುತ್ತಿದ್ದೇವೆ. ತೆಗೆದುಕೊಂಡಿರತಕ್ಕಂಥ ಸಾಲವನ್ನು ಮೇಲೆ ಇದಕ್ಕೆ ಹೊಣೆಗಾರಿಕೆ ಯಾರದು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾರ ಹೊಣೆಗಾರಿಕೆ ಇರಲಿ ನಮಗೆ ವಾಪಸ್ಸು ಬರತಕ್ಕಂಥಾದ್ದು 0.82 ಪರ್ಸೆಂಟ್. ಅದು ಯಾವುದರಲ್ಲಿ .ಎಸ್.ಎಫ್.ಸಿ, ಹಟ್ಟಿ ಚಿನ್ನದ ಗಣಿ ಕೆ.ಐ.ಡಿ.ಬಿ, ಎಂ.ಎಸ್.ಐ.ಎಲ್ ಈ ತರಹದ ಕಂಪನಿಗಳಲ್ಲಿ ಬರುವುದು ಬಿಟ್ಟರೆ ಉಳಿದ 949 ಕೋಟಿ

ರೂಪಾಯಿಗಳು ನಷ್ಟ. ಇದರ ಬಗ್ಗೆ ಡಿಸ್‌ಇನ್ವೆಸ್ಟಮೆಂಟ್ ಮಾಡಬೇಕೋ ಬಿಡಬೇಕೋ ಎನ್ನುವ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ರಾಜ್ಯದ ಅಭಿವೃದ್ಧಿ ಆಗಬೇಕಾದರೆ ತತ್ವ ಸಿದ್ಧಾಂತಗಳನ್ನು ನಾವು ಒಂದು ಕಡೆ ಒಪ್ಪಿ ಇರಬೇಕು ಎಂಬ ವಿಚಾರ ತೆಗೆದುಕೊಂಡರೂ ಕೂಡ ಪ್ರಾಗ್‌ಮ್ಯಾಟಿಕ್ ಆಗಿ ಈ ರಾಜ್ಯದ ಬೆಳವಣಿಗೆ ಆಗಬೇಕಾದರೆ ಯಾವುದು ನಮ್ಮ ರಾಜ್ಯದ ಉತ್ಪತ್ತಿಯನ್ನು ತಿನ್ನುತ್ತದೆ ಅದಕ್ಕೂ ಕೂಡ ಕಡಿವಾಣ ಹಾಕತಕ್ಕಂಥಾದ್ದು ಅತ್ಯಂತ ಅಗತ್ಯ ಮತ್ತು ಅನಿವಾರ್ಯ ಎನ್ನತಕ್ಕಂಥಾದ್ದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಅದಕ್ಕಾಗಿಯೇ ನಾನು ಈ ವಿಚರಗಳನ್ನು ಪ್ರಸ್ತಾಪ ಮಾಡಿರತಕ್ಕಂಥಾದ್ದು ಇನ್ನೂ ಡಿಸ್‌ಇನ್‌ವೆಸ್ಟಿಮೆಂಟ್. ನಾನು ಮೊನ್ನೆ ಕೇರಳಕ್ಕೆ ಹೋಗಿದ್ದೆ. ಅಲ್ಲಿ ಕಮ್ಯುನಿಸ್ಟ್ ಸರ್ಕಾರ ಇದೆ. ಅವರು ಹೇಳಿದರು ಆರ್ಥಿಕವಾಗಿ ನೋಡುವ ದೃಷ್ಟಿಕೋನ ಬೇರೆ. ಆದರೆ ವಸ್ತು ಸ್ಥಿತಿಯನ್ನು ವಾಸ್ತವಿಕವಾಗಿ ನೋಡತಕ್ಕಂಥದ್ದು ಬೇರೆ ವಿಚಾರ ಎಂದು ಹೇಳಿದರು. ಇವತ್ತು ಅನಗತ್ಯವಾಗಿ ಉತ್ಪಾದನೆ ಮಾಡತಕ್ಕಂಥ ಸಾರ್ವಜನಿಕ ಉದ್ದಿಮೆಗಳು ನಮಗೆ ಏಕೆ ಬೇಕು? ನಾವು ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಸಾಲ ತಂದು ಹಾಕಿ ಏಕೆ ಇಟ್ಟಕೊಳ್ಳಬೇಕು? ಈಗ ನಮಗೆ ಮತ್ತು ನಿಮಗೆ ಜ್ಞಾನೋದಯವಾಗಿದೆ. ಅದಕ್ಕೆ ನಾವು ನೀವು ಇವತ್ತು ಇದನ್ನು ಹೇಳುತ್ತಿರುವುದು. ಇದು ಬಹಳ ಹಿಂದೆಯೇ ಆಗಬೇಕಾಗಿತ್ತು. ಆಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇನ್ನೊಂದು ತಪ್ಪು ಕಲ್ಪನೆ ಜನರಿಗೆ ಹೋಗಬಾರದು ಏಕೆಂದರೆ ಸಾರ್ವಜನಿಕ ಉದ್ದಿಮೆಗಳು ಅಂದರೆ ಇವೆಲ್ಲಾ ನಷ್ಟದಲ್ಲಿವೆ ಸಾರ್ವಜನಿಕ ಉದ್ದಿಮೆಗಳು ಹೊಸದಾಗಿ ಯಾವುವೂ ಬರಬಾರದು ಎನ್ನುವಂತಹ ಅಭಿಪ್ರಾಯವನ್ನು ತಾವು ಮೂಡಿಸಿದರೆ ಅದು ಒಂದು ಬೇರೆ ರೀತಿಯ ತಿರುವನ್ನು ತೆಗೆದುಕೊಳ್ಳುತ್ತದೆ. ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳು ಸೋಪ್ ಅಂಡ್ ಡಿಟರ್ಜಂಟ್ ಗೊಡ್ಸ್ ತಯಾರು ಮಾಡಬಹುದು ಅಥವಾ ಪೇಪರ್ ಮಿಲ್ ಇರಬಹುದು ಹಿಂದೆ ಈ ಕಾರ್ಖಾನೆಗಳನ್ನು ತೆರೆದಿದ್ದು ಏಕೆಂದರೆ ಎಂಪ್ಲಾಯಿಮೆಂಟ್ ಜನರೇಟ್ ಮಾಡುವುದಕ್ಕೆ ಉದ್ಯೋಗಗಳನ್ನು ಕೊಡುವುದಕ್ಕೆ ಹಿಂದೆ ಆ ದೃಷ್ಟಿಕೋನ ಇರಲಿಲ್ಲ ಇವು ಏಕೆ ಬೇಕು ಎಂದು ಹೇಳಿ ಸ್ಟೀಲ್‌ಫ್ಯಾಕ್ಟರಿ ನಿಮಗೆ ಅವಶ್ಯಕ ಇದ್ದರೂ ಕೂಡ ಅದರ ಜೊತೆಯಲ್ಲಿ ಸೋಪ್ಸ್ ಅಂಡ್ ಡಿಟರ್ಜಂಟ್ ತೆಗೆದಿದ್ದು ಅಥವಾ ಮೈಸೂರು ಲ್ಯಾಂಪ್ಸ್ ತೆಗೆದಿದ್ದು, ಆ ಕಾಲದಲ್ಲಿ ಅವಿದ್ಯಾವಂತ ಯುವಕರಿಗೆ ಉದ್ಯೋಗ ಕೊಟ್ಟು ಅವರಿಗೆ ಜೀವನ ಕಲ್ಪಿಸಬೇಕು ಎನ್ನುವ ಕಾರಣಕ್ಕಾಗಿ ತೆಗೆದಿದ್ದು. ಇವತ್ತು ಅದು ನಷ್ಟದಲ್ಲಿ ಇದೆ ಅಂದರೆ ಅಲ್ಲಿ ಸುಮಾರು 16 ಲಕ್ಷ ಜನ ವಿದ್ಯಾವಂತರು ಏನು ಇದ್ದಾರೆ ಅವರಿಗೆ ಏನು ಕೆಲಸ ಕೊಡುತ್ತೀರಿ ಅವರನ್ನು

ಏನು ಮಾಡುತ್ತೀರಿ? ಅವರಿಗೆ ಏನಾದರೂ ಅವಕಾಶಕೊಡಬೇಕಲ್ಲಾ. ಬೇರೆ ಯಾವುದಾದರೂ ಒಂದು ರೀತಿಯಲ್ಲಿ ಅವರನ್ನು ತೆಗೆದುಕೊಳ್ಳಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾವು ಅದನ್ನೆಲ್ಲಾ ಮುಚ್ಚಿ ಬಿಡುತ್ತೇವೆಂದು ಹೇಳಲಿಲ್ಲ. ಈಗ ಮೈಸೂರಿನಲ್ಲಿರತಕ್ಕಂಥಾ ವಿಕ್ರಾಂತ್ ಫ್ಯಾಕ್ಟರಿ. ಗ್ಲೋಬಲ್ ಟೆಂಡರ್ ಕರೆದು ಜಿ.ಕೆ.ಟೈರ್ಸ್‌ನವರು 51 ಪರ್ಸೆಂಟ್ ಷೇರು ತೆಗೆದುಕೊಂಡು ನಮ್ಮದು 21 ಪರ್ಸೆಂಟ್ ಷೇರು, ಕೆ.ಐ.ಡಿ.ಬಿ 26 ಪರ್ಸೆಂಟ್ ಷೇರು ಇದೆ. ಅಲ್ಲಿ ಕೆಲಸ ಮಾಡುತ್ತಿರುವಂತಹವರನ್ನು ಯಾವುದೇ ಕಾರಣಕ್ಕೆ ತೆಗೆಯಬಾರದು ಎಂದು ಹೇಳಿ ಒಪ್ಪಂದ ಮಾಡಿಕೊಂಡು ಮಾಡಿದ್ದೇವೆ. ಅಲ್ಲಿರುವಂತಹ ನೌಕರರಿಗೆ ಕೆಲಸ ಹೋಗತಕ್ಕಂಥಾದ್ದು ಇಲ್ಲ. ಅಲ್ಲಿ ಇರತಕ್ಕಂಥವರಿಗೆ ಕೆಲಸ ಉಳಿಸಿಕೊಂಡು ನಾವು ಏನು ಹಣ ತೊಡಗಿಸುತ್ತಿದ್ದೇವೆ ಅದನ್ನು ನಿಲ್ಲಿಸತಕ್ಕಂಥ ಮತ್ತು ನಷ್ಟ ತಪ್ಪಿಸತಕ್ಕಂಥ ಕೆಲಸ ಏನು ಮಾಡುತ್ತಿದ್ದೇವೆ. ಅದು ನಾನು ಹೇಳುವುದು. ಈಗ ಕೆ.ಎಸ್.ಆರ್.ಟಿ.ಸಿ, ಕೆ.ಇ.ಬಿ ಮತ್ತು ಕೆ.ಪಿ.ಸಿ. ಮುಚ್ಚಿಬಿಡುತ್ತೇವೆಂದು ಅಲ್ಲ. ಯಾವ ಅಗತ್ಯಸೇವೆಗಳು ರಾಜ್ಯದ ಹಿತದೃಷ್ಟಿಯಿಂದ ಅಗತ್ಯ ಇದೆ, ಅವುಗಳನ್ನು ಉಳಿಸಿಕೊಳ್ಳ ಬೇಕಾಗುತ್ತದೆ. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡತಕ್ಕಂಥದ್ದು ಮಾಡಬೇಕಾಗುತ್ತದೆ. ಈಗ ಕೆ.ಐ.ಡಿ.ಬಿ. ನಾವು ಬೇರೆಯವರಿಗೆ ಕೊಡುತ್ತೇವೆಂದು ಅಲ್ಲ, ಕೆ.ಎಸ್.ಎಫ್.ಸಿ. ಬೇರೆಯವರಿಗೆ ಕೊಟ್ಟು ಬಿಡುತ್ತೇವೆ ಎನ್ನುವುದಲ್ಲ. ಮೈಸೂರು ಲ್ಯಾಂಪ್ಸ್‌ನವರು ಲ್ಯಾಂಪ್ಸ್ ತಯಾರು ಮಾಡುತ್ತಾರೆ. ನಾವು ಆತ್ಮಾವಲೋಕನ ಮಾಡಿಕೊಳ್ಳೋಣ. ಇಷ್ಟು ವರ್ಷ ನಿಮ್ಮ ಡಾ।। ಮನಮೋಹನ್ ಸಿಂಗ್‌ನವರು ಹೇಳಿದಾಗ ಅದನ್ನು ನೀವು ಒಪ್ಪಿಕೊಳ್ಳಲಿಲ್ಲವೋ? ಉದಾರೀಕರಣ ನೀತಿಯಲ್ಲಿ ನೀವು ಮಾಡಲೇಬೇಕು ಎಂದು ಪ್ರತಿಪಾದನೆ ಮಾಡಿದಾಗ ನೀವೆಲ್ಲಾ ಒಪ್ಪಿಕೊಂಡಿದ್ದೀರೆಲ್ಲಾ. ಆದ್ದರಿಂದ ರಾಂಗ್ ಮೆಸೇಜ್ ಹೋಗತಕ್ಕಂಥ ಪ್ರಶ್ನೆನೇ ಇಲ್ಲ. ನೌಕರರ ಭದ್ರತೆ, ನೌಕರಿಯ ಭದ್ರತೆ ಇದ್ದೇ ಇರುತ್ತದೆ. 300 ಕೋಟಿ ರೂಪಾಯಿಗಳು ಡಾ।। ಮನಮೋಹನ್ ಸಿಂಗ್‌ರವರ ಕಾಲದಲ್ಲಿ ಡಿಸ್‌ಇನ್‌ವೆಸ್ಟ್‌ಮೆಂಟ್ ಆಗಿದೆ. ಮಾಡಿ ಎಂದು ಹೇಳಿ ಅದಕ್ಕೋಸ್ಕರ ಬಹಳ ಕಷ್ಟದಿಂದ ಮಾಡಿ ಎಂದು ಏಕೆ ಹೇಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಸ್ವಲ್ಪ ಕೇಳಿ, ಅದೇ ನನ್ನ ಹತ್ತಿರ ಒಂದು ಪೋರ್ಟ್‌ಫೋಲಿಯೋ ಬಂದಾಗ ನಾನು ಯೋಚನೆ ಮಾಡತಕ್ಕಂಥದ್ದು ಅಥವಾ ಅದಕ್ಕೆ ಯಾವರೀತಿ ಸಹಾಯ ಮಾಡಬೇಕೆಂದು ಇರುತ್ತದೆ. ಇನ್ನೊಬ್ಬರು ಡಿಸ್ ಇನ್‌ವೆಸ್ಟ್‌ಮೆಂಟ್ ಮಾಡಬೇಕು, ಇದರ ಸುಧಾರಣೆಯೇ ಬೇಡ, ನಾವು ಪ್ರೈವೇಟೈಸೇಷನ್ ಮಾಡಬೇಕು ಎಂದು ತಿಳಿದುಕೊಂಡರೆ ಆ ದೃಷ್ಟಿಕೋನವೇ ಬೇರೆ ಇರುತ್ತದೆ. ನಮ್ಮ ಮನಮೋಹನ್ ಸಿಂಗ್ ಬೇರೆ ಅಲ್ಲ ನಿಮ್ಮ ಮನಮೋಹನ್‌ಸಿಂಗ್ ಬೇರೆ ಅಲ್ಲ, ಇವತ್ತು ಅವರೇ ನಿಮಗೆ ಅಡ್ವೈಜ್ ಮಾಡುವವರು, ನೀವು ಕೇಳುವವರು, ಆ ಮಾತು ಬೇರೆ. ನಾನು ಹೇಳುವುದೇನೆಂದರೆ ಇದು ನಮ್ಮ ನಂಬಿಕೆ ಪ್ರಶ್ನೆ. ಆ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕು ಅಂದಾಗ ಆ ಒಂದು ಪಬ್ಲಿಕ್ ಅಂಡರ್ ಟೇಕಿಂಗ್‌ನಲ್ಲಿ ಸುಧಾರಣೆ ತರತಕ್ಕಂಥದ್ದು ಮಾಡಬೇಕೇ ಹೊರತಾಗಿ ನೆಗಡಿ ಬಂದಿದೆ ಅಂದ ಕೂಡಲೇ ಮೂಗನ್ನು ಕೊಯ್ದು ಕೊಳ್ಳುವುದು, ತಲೆ ನೋವು ಬಂತು ಅಂದರೆ ತಲೆಯನ್ನು ಕತ್ತರಿಸಿಕೊಳ್ಳವುದು ಅಂಥದ್ದನ್ನು ಮಾಡುವುದಕ್ಕೆ ಹೋಗಬೇಡಿ. ಇದು ಆ ಕಾಲದಲ್ಲಿ ಎಮ್ಪ್ಲಾಯ್‌ಮೆಂಟ್ ಕೊಡುವುದಕ್ಕೆ ಮಾಡಿದ್ದು. ಇವತ್ತು ಈ ಕಾಲದಲ್ಲಿ ಕನ್‌ಸ್ಯೂಮರ್ ಗೂಡ್ಸ್ ತೆಗೆದುಹಾಕಬೇಕು, ಅದರ ಅವಶ್ಯಕತೆ ಇಲ್ಲ, ಎಂದು ತಿಳಿದುಕೊಂಡಿದ್ದಾರೂ ಕೂಡ ಅಂದಿನ ಕಾಲದಲ್ಲಿ ಟೆಕ್ನೋಕ್ರಾಟ್ಸ್ ಮತ್ತು ಆನ್ ಎಂಪ್ಲಾಯ್ಡ್ ಗ್ರಾಜುಯೇಟ್ಸ್‌ಗೆ ಎಂಪ್ಲಾಯ್‌ಮೆಂಟ್ ಕೊಡಲೇಬೇಕೆಂಬ ದೃಷ್ಟಿಯಿಂದ ಸರ್.ಎಂ. ವಿಶ್ವೇಶ್ವರಯ್ಯನವರ ಕಾಲದಿಂದ ಚಿಂತನೆ ಮಾಡಿಕೊಂಡು ಕೆಲವು ಇಂಡಸ್ಟ್ರೀಸ್ ಮಾಡಿದ್ದು, ಇವತ್ತು ಅವು ನಿಮಗೆ ಅವಶ್ಯಕತೆ ಇಲ್ಲ ಅಂದರೆ ಬಿಡತಕ್ಕಂಥದ್ದು ಬೇರೆ. ಆದರೆ ಬೇರೆ ಏನಾದರೂ ಕಾರ್ಖಾನೆಗಳು ಹುಟ್ಟಬೇಕಲ್ಲಾ, ಬೇರೆ ಏನಾದರೂ ಬರಬೇಕಲ್ಲಾ.

ಶ್ರೀ ಬಿ. ಎಸ್. ಯಡಿಯೂರಪ್ಪ : ಬಜೆಟ್ ಡಿಸ್ಕಷನ್ ಸಮಯದಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಉದಾಹರಣೆಗೆ ಎನ್.ಜಿ.ಇ.ಎಫ್. ನಾನು ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯಲ್ಲಿ ಇದ್ದೆ ಡೆಲ್ಲಿ ಮತ್ತಿತರ ಸ್ಥಳಗಳಿಗೆ ಹೋಗಿ ಎಲ್ಲೆಲ್ಲಿ ಈ ಸಂಸ್ಥೆಗಳು ನಡೆಯುತ್ತಿವೆ ಎನ್ನುವುದನ್ನು ನೋಡಿಕೊಂಡು ಬಂದೆವು. ಇಡೀ ದೇಶದಲ್ಲಿ ನಮ್ಮ ಮಾರ್ಕೆಟ್ ಇದೆ. ಇಲ್ಲಿ ತಯಾರು ಮಾಡುವ ಎಲ್ಲಾ ವಸ್ತುಗಳಿಗೆ ಮಾರ್ಕೆಟ್ ಇದೆ ಇದನ್ನು ಮುಚ್ಚುವಂತಹ ಸ್ಥಿತಿಯಲ್ಲಿ ನಾವು ಬೇರೆಯವರಿಗೆ ಕೊಡಲು ಹೊರಟಿದ್ದೇವೆ. ಟೈರ್ಸ್ ಕಂಪನಿಯನ್ನು ಲಾಭಾದಾಯಕವಾಗಿ ನಡೆಸಬೇಕಾದ್ದನ್ನು ಬಿಟ್ಟು, ಅಲ್ಲಿ ಸೋರು ಹೋಗುತ್ತಿರುವುದರಿಂದ ಅದನ್ನು ಇವತ್ತು ಮಾರುವ ಸ್ಥಿತಿಗೆ ತಂದು ಬೇರೆಯವರಿಗೆವಹಿಸಿ ಕೊಡುವುದಕ್ಕೆ ನಾವು ಹೊರಟಿದ್ದೇವೆ. ತಾವು ಅಲ್ಲಿ ಕುಳಿತು ಆಡಳಿತ ನಡೆಸುವವರು, ಇಲ್ಲಿ ನಾವು ಸಲಹೆ ಕೊಡುವುವರು.

ಮಾನ್ಯ ಯಡಿಯೂರಪ್ಪನವರೇ, ಈಗ ಎರಡು ವರ್ಷಗಳ ಹಿಂದೆ ಈ ಸ್ಥಿತಿ ಇತ್ತು. ಈಗ ಇಷ್ಟು ಸುಧಾರಣೆ ಮಾಡಿದ್ದೇವೆ, ಇಂತಿಂಥ ಕ್ರಮ ಕೈಗೊಂಡಿದ್ದೇವೆ, ಎಂದು ಹೇಳಿದರೆ ಕೇಳುವುದಕ್ಕೆ ಚೆಂದ, ಸರ್ಕಾರ ಇದರ ಬಗ್ಗೆ ಬಿಗಿ ನಿಲುವು ತೆಗೆದುಕೊಂಡಿದೆ. ಎಂಬುದು ಗೊತ್ತಾಗುತ್ತದೆ. ಅಲ್ಲಿ ಟೆಕ್ನೋಕ್ರಾಟ್ಸ್ ಹಾಕುತ್ತೇವೆ, ಆಡಿಟ್ ವ್ಯವಸ್ಥೆ ಮಾಡುತ್ತೇವೆ ಇಲ್ಲಿ ಲೂಟಿ ಆಗುವುದನ್ನು ನಿಲ್ಲಿಸುತ್ತೇವೆ, ಈ ತರಹ 3-4 ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಇಲ್ಲಿ ಲುಕ್ಸಾನ್ ಕಡಿಮೆ ಮಾಡಿದ್ದೇವೆ, ಎಂದು ಹೇಳಿದರೆ ನಾವು ಅದನ್ನೂ ಅಪ್ರಿಶಿಯೇಟ್ ಮಾಡಬಹುದು. ಇಲ್ಲದೆ ಹೋದರೆ ಇದೊಂದು ಉಪದೇಶ ಆಗುತ್ತದೆ. ಇಲ್ಲದೆ ಇದ್ದರೆ ಒಂದು ವಾಡಿಕೆಯಂತೆ ಸಲಹೆ, ಚರ್ಚೆ ಇಲ್ಲಿಗೆ ಮುಗಿದು ಹೋಗುತ್ತದೆ. ನೀವು ಏನಾದರೂ ದಿಟ್ಟವಾದ ಕ್ರಮತೆಗೆದುಕೊಂಡಿದ್ದರೆ ಇಂಥವನ್ನು 2-3 ನಾನು ಮಾಡಿದ್ದೇನೆಂದು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹೇಳಿದರೆ ನಮಗೆ ಸಂತೋಷವಾಗುತ್ತದೆ. ನಮಗೆ ಸಲಹೆ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಕೆಲವು ಉದ್ದಿಮೆಗಳು ಏನಿವೆ, ಇವತ್ತು ನಮ್ಮ ವಿಚಾರದಲ್ಲಿ ಕನ್ಸೂಮರ್ ಐಟಮ್ಸ್ ಇರುವಂಥದ್ದು..

ಅಧ್ಯಕ್ಷರು : ಮಾನ್ಯ ಚಂದ್ರಕಾಂತ್ ಬೆಲ್ಲದ್ ಅವರೇ ತಾವು ದಯಮಾಡಿ ಕುಳಿತುಕೊಳ್ಳಿ. ಇದು ಬರೀ ಉದ್ದಿಮೆಗಳಿಗೆ ಸಂಬಂಧಿಸಿದಂತೆ ವಿಚಾರವಾಗಿ ಮಾತನಾಡತಕ್ಕಂಥ ವಿಷಯ ಅಲ್ಲ. ಪ್ರಮುಖವಾಗಿ ಬಹಳ ಮೂಲಭೂತವಾದಂಥ ಒಂದು ತತ್ವ ಇದರಲ್ಲಿ ಅಡಕವಾಗಿದೆ. 1960ರ ದಶಕದಲ್ಲಿ ಇಡೀ ವಿಶ್ವದಲ್ಲಿ ಇದ್ದಂಥ ಹವಮಾನ, 70-80ರ ದಶಕದಲ್ಲಿ ಇದ್ದಂಥ ವಾತವಾರಣ ಈಗ ಉದ್ಭವವಾಗಿರತಕ್ಕಂಥ ಹೊಸ ವಾತಾವರಣ, ಇವೆಲ್ಲವನ್ನೂ ಕೂಡ ನಾವು ಮನಸ್ಸಿನಲ್ಲಿ ಇಟ್ಟುಕೊಂಡು ಮಾತನಾಡಬೇಕಾಗಿದೆ. ಇಡೀ ವಿಶ್ವದ ಆರ್ಥಿಕ ವ್ಯವಸ್ತೆ ಒಂದು ರೀತಿಯ ಬದಲಾವಣೆಗೆ ಒಳಗಾಗಿದೆ. ಯಾವುದೇ ತತ್ವ ಅಥವಾ ಸಿದ್ಧಾಂಥ ಮಡಿವಂತಿಕೆಯಿಂದ ನೋಡತಕ್ಕಂಥದಲ್ಲ. ವಿಕಾಸಗೊಳ್ಳತಕ್ಕ ಸಮಯದಲ್ಲಿ ಆಗಿಂದಾಗ್ಗೆ ಅದನ್ನೂ ಕೂಡ ನಾವು ಪುನರ್ ವಿಶ್ಲೇಷಣೆ ಮಾಡಬೇಕಾಗುತ್ತದೆ. ಮಾನ್ಯ ಖರ್ಗೆರವರು ಹೇಳಿದಂತೆ ಉದೋಗ ಕೊಡುವುದಕ್ಕಿಂತಲೂ ಹೆಚ್ಚಾಗಿ ಉತ್ಪಾದನಾ ಮೂಲಗಳ ಪೂರ್ಣ ಹತೋಟಿ ರಾಜ್ಯದ ವಶದಲ್ಲಿ ಇರಬೇಕು. ಉತ್ಪಾದನೆ ವಿತರಣೆ ಕೂಡ ರಾಜ್ಯದ ಅಧೀನದಲ್ಲಿ ಇರಬೇಕು, ಎನ್ನತಕ್ಕಂಥ ಒಂದು ಮೂಲ ಮಾರ್ಕ್ಸಿಸ್ಟ್ ಸಿದ್ಧಾಂತದ ಮೇಲೆ ಇದೆಲ್ಲಾ ಪ್ರಾರಂಭವಾಗಿರುತ್ತದೆ. ಆದರಲ್ಲಿ ಜಾಯಿಂಟ್ ಸೆಕ್ಟಾರ್ ಬಂತು, ಉತ್ಪಾದನಾ ಮೂಲಗಳು ರಾಜ್ಯದ ಹತೋಟಿಯಲ್ಲಿಯೂ ಇದ್ದವು, ಖಾಸಗಿ ವಲಯದಲ್ಲಿ ಕೂಡ ಇದ್ದವು. ಹಾಗಾಗಿ ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದರು ದಿನ ಬಳಕೆ ಪದಾರ್ಥಗಳು ಏನಿವೆ, ನಾವು

ಮಾನಿಫ್ಯಾಕ್ಚರ್ ಮಾಡಿ, ಪ್ರೈವೇಟ್‌ರವರು ಮ್ಯಾನುಫ್ಯಾಕ್ಚರ್ ಮಾಡಿ ಅವರಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆ ಆಗಿ ನಮಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಹೆಚ್ಚಾಗಿ ನಾವು ಮಾರುಕಟ್ಟೆಯಲ್ಲಿ ಎಡವಿ ಬಿದ್ದಾಗ ಸರ್ಕಾರ ಸಾಲ ತರುವುದು, ಬಡ್ಡಿ ಕಟ್ಟುವುದು ಆಗುತ್ತದೆ, ಅದು ಅವಾಸ್ತವಾದ ಮಾತು ಎಂದು ಹೇಳಿದ್ದು, ಅವರು ಉತ್ತರ ಕೊಡಲಿ, ಆಮೇಲೆ ಸ್ಪಷ್ಟೀಕರಣ ಕೇಳಿ ನಿಮಗೆಲ್ಲಾ ಅವಕಾಶ ಕೊಡುತ್ತೇನೆ...

ಶ್ರೀ ಎ. ರಾಮದಾಸ್ : ವಿಕ್ರಾಂತ್ ಟೈರ್ಸ್ ಫ್ಯಾಕ್ಟರಿಯಲ್ಲಿ ಇರತಕ್ಕಂಥ ನೌಕರರ ಬಗ್ಗೆ ಯಾವುದೇ ರೀತಿಯಾದ ಸಮಸ್ಯೆಗಳೂ ಇಲ್ಲ. ಆದರೆ ಮಾರ್ಚ್ 11ನೇ ತಾರೀಖು ಎಂ.ಓ.ಯು.ಗೆ ಸಹಿ ಮಾಡುವ ಸಮಯದಲ್ಲಿ ಒಂದು ವಿಚಾರ ಬಂತು ಅಲ್ಲಿನ ಕೆಲಸಗಾರರಿಗೆ ಸೆಕ್ಯೂರಿಟಿ ಕೊಡುವ ವಿಚಾರ ಇದ್ದರೂ ಕೂಡ ರ್‍ಯಾಷನಲೈಸ್ ಮಾಡಬೇಕು ಎಂಬ ಒಂದು ಪದವನ್ನು ಸೇರಿಸಿ, ಮೈಸೂರಿನಲ್ಲಿ ಇರುವಂಥ ಕೆಲಸಗಾರರನ್ನು ಪಂಜಾಬಿನಲ್ಲಿ ಎಲ್ಲೋ ಒಂದು ಕಡೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟು, ಇಂಡೈರೆಕ್ಟಾಗಿ ಅವರನ್ನು ತೆಗೆಯುವಂಥ ವ್ಯವಸ್ಥೆ ಏನಾಗಿದೆ ಇಂಥ ವಿಚಾರದಲ್ಲಿ ಕಾರ್ಮಿಕರ ಬಗ್ಗೆ ನಮಗೆ ಕಾಳಜಿಯೇ ಹೊರತು ಕೇವಲ ವಿಕ್ರಾಂತ್ ಟೈರ್ಸ್ ಅನ್ನು ಪಬ್ಲಿಕ್ ಲಿಮಿಟೆಡ್ ಕಂಪನಿ ಆಗಿ ಉಳಿಸಿ ಕೊಳ್ಳಬೇಕು ಎಂಬುದು

ಅಧ್ಯಕ್ಷರು : ಈ ಸಭೆಯ ಪದ್ಧತಿ ಕೇಳಿ, ತಾವು ಹೊಸಬರು, ಹಣಕಾಸಿನ ಮಂತ್ರಿಗಳು ಪೂರ್ಣ ಉತ್ತರ ಮುಗಿಸಿದ ನಂತರ ಸ್ಪಷ್ಟೀಕರಣ ಕೇಳತಕ್ಕ ಅವಕಾಶ ತಮಗೆ ಇರುತ್ತದೆ. ಎಲ್ಲೆಲ್ಲೋ ಒಂದೊಂದು ಕಡೆ ಹಿರಿಯ ನಾಯಕರು ಕೆಲವು ವಿಚಾರಗಳನ್ನು ಪ್ರಸ್ತಾಪಮಾಡಿದಾಗ ಅವರು ಈಲ್ಡ್ ಆಗುತ್ತಾರೆ. ನಾನು ನಿಮಗೆ ಉತ್ತರ ಕೊಡಿಸುತ್ತೇನೆ. ಅದಕ್ಕೆ ಸ್ಪಷ್ಟೀಕರಣ ಅನಂತರ ಕೇಳಬಹುದು.

ಶ್ರೀ ಎ. ರಾಮ್‌ದಾಸ್ : ರ್‍ಯಾಷನಲೈಸೇಷನ್ ಎಂ.ಓ.ಯುಗೆ ಸಹಿ ಮಾಡಿದಾಗ ಏಕೆ ಬಂತು ಎಂದು ಅಷ್ಟೇ ನಾನು ಕೇಳಿದ್ದುದು.

ಅಧ್ಯಕ್ಷರು : ಮೊದಲು ಸರ್ಕಾರದ ಉತ್ತರ ಪೂರ್ಣ ಅಗಲ್ಲಿ ಅನಂತರ ತಮ್ಮ ಸ್ಪಷ್ಟೀಕರಣ ಕೇಳಬಹುದು.

ಶ್ರೀ ಸಿದ್ಧರಾಮಯ್ಯ : ಮಾನ್ಯಅಧ್ಯಕ್ಷರೆ, ವಿಕ್ರಾಂತ್ ಟೈರ್ಸ್ ಬಗ್ಗೆ ಕೂಡ ಎಲ್ಲಾ ಟ್ರೇಡ್ ಯ್ಯೂನಿಯನ್ ಲೀಡರ್ಸ್ ಕರೆದು ಅವರ ಜೊತೆ ಬಹಳ ದೀರ್ಘವಾಗಿ ಚರ್ಚೆ ಮಾಡಿರ ತಕ್ಕಂಥದ್ದು ಉಂಟು. ನಾನು ಒಂದೆರಡು ಮೀಟಿಂಗ್‌ನಲ್ಲಿ ಭಾಗಿಯಾಗಿದ್ದೆ, ಅವರು ಬಂದಂಥ ಸಂದರ್ಭದಲ್ಲಿ ಸರ್ವಸಮ್ಮತವಾಗಿ ಆಗಿರತಕ್ಕಂಥದ್ದು ಮತ್ತು ಬಹಳ ಪಾರದರ್ಶಕವಾಗಿ

ಗ್ಲೋಬಲ್ ಟೆಂಡರ್ ಕರೆದು ಅವರಿಗೆ ಜಾಬ್ ಸೆಕ್ಯೂರಿಟಿಯನ್ನು ಕೊಟ್ಟು ಆಮೇಲೆ 200 ಕೋಟಿ ರೂಪಾಯಿಗಳ ಬಂಡವಾಳ ಹೂಡಬೇಕೆಂದು ತೀರ್ಮಾನವಾಗಿದೆ. ಏಕೆಂದರೆ ಇವತ್ತು ಹೈಟೆಕ್ ಹೊಸ ಟೆಕ್ನಾಲಾಜಿ, ಬಹಳ ಮುಂದುವರಿದ ಟೆಕ್ನಾಲಜಿ, ತಂತ್ರಜ್ಞಾನಗಳು ಎಲ್ಲಾ ಇವೆ ಆ ತಂತ್ರಜ್ಞಾನವನ್ನು ಬಳಸಬೇಕಾಗುತ್ತದೆ. ಅದನ್ನು ರಿವೈವ್ ಮಾಡಬೇಕಾದರೆ ಸುಮಾರು 200 ಕೋಟಿರೂಪಾಯಿಗಳ ಬಂಡವಾಳ ಹೂಡಬೇಕಾಗುತ್ತದೆ. ಅಷ್ಟು ಬಂಡವಾಳವನ್ನು ರಾಜ್ಯ ಸರ್ಕಾರ ಎಲ್ಲಿಂದ ತರುವುದಕ್ಕಾಗುತ್ತದೆ? ಹೀಗೆ ಪ್ರತಿಯೊಂದು ನಷ್ಟವಾಗುವುದನ್ನು ರಿವೈವ್ ಮಾಡಿ ಅದಕ್ಕೆ ಹೊಸ ಪ್ಯಾಕೇಜ್ ಎಲ್ಲಾ ಮಾಡಬೇಕಾಗುತ್ತದೆ. ಇದನ್ನೆಲ್ಲಾ ಮಾಡಬೇಕಾದರೆ ರಾಜ್ಯ ಸರ್ಕಾರ ಎಲ್ಲಿಂದ ಬಂಡವಾಳ ತರುವದಾಗುತ್ತದೆ? ಈಗ ಎನ್.ಜಿ.ಇ.ಎಫ್. ಬಗ್ಗೆ ಮಾನ್ಯ ಯಡಿಯೂರಪ್ಪನವರು ಹೇಳಿದರು, ನಾವುಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದರೂ ಈ ಕಂಪನಿ ಸರಿಯಾಗುತ್ತಿಲ್ಲ. ಅದು ಬಿ.ಐ.ಎಫ್.ಆರ್ .ಗೆ ಹೋಯಿತು, ಆದು ಎಲ್ಲಾ ಮಾಡಿ ನಾವು ಅದಕ್ಕೆ ಏನೇನು ಬೇಕೋ ಅದನ್ನು ರಾಜ್ಯ ಸರ್ಕಾರದಿಂದ ಕೊಟ್ಟ 20-30 ಕೋಟಿ ರೂಪಾಯಿ ನಾವು ಸಹಾಯ ಮಾಡಿ ಎಲ್ಲ ಮಾಡಿದರೂ ಕೂಡ ಅದು ಒಂದು ಹೆಜ್ಜೆ ಕೂಡ ಮುಂದಕ್ಕೆ ಹೋಗಲಿಲ್ಲ. ನಾವು ಪ್ರಯತ್ನ ಮಾಡಿಲ್ಲವೆಂದು ಅಲ್ಲ. ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೇವೆ. ವಿಕ್ರಾಂತ್‌ನಲ್ಲಿ ನಾವು ಎಲ್ಲಾ ಪ್ರಯತ್ನ ಮಾಡಿ ನಷ್ಟ ಸ್ವಲ್ಪ ಕಡಿಮೆ ಮಾಡತಕ್ಕಂಥ ಪ್ರಯತ್ನವನ್ನೂ ಕೂಡ ಮಾಡಿದ್ದೇವೆ. ಅದರೆ ಬಂಡವಾಳ ಹೂಡದೆ ಅದನ್ನು ರಿವೈವ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೊಸ ಟೆಕ್ನಾಲಜಿಯನ್ನು ಅಲ್ಲಿ ಅಳವಡಿಸುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಮೆಷನ್‌ರಿಗಳನ್ನು ಬದಲಾಯಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಎಲ್ಲಾ ಕಾರಣಕ್ಕೋಸ್ಕರವಾಗಿ ಇದನ್ನು ರಿವೈವ್ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರು ಹೇಳಿದಂತೆ ಇವತ್ತು ಬದಲಾವಣೆ ಅದಂಥ ವಾತಾವರಣ ಆವತ್ತಿನ ಎಕನಾಮಿಕ್ಸ್ ಬೇರೆ. ಇವತ್ತಿನ ಎಕನಾಯಕ್ಸ್ ಬೇರೆ 60ರ ದಶಕದಲ್ಲಿ ಇರುವ ಎಕನಾಮಿಕ್ಸ್ ಬೇರೆ. ಇವತ್ತು ಉದಾರೀಕರಣ, ಓಪನ್ ಮಾರ್ಕೆಟ್ ಇವೆಲ್ಲಾ ಬಂದಿರತಕ್ಕಂಥ ಸಂದರ್ಭದಲ್ಲಿ ನಾವು ಬಹಳ ಕನ್ಸರ್‌ವೇಟಿವ್ ಆಗಿರಬೇಕಾಗುತ್ತದೆ. ಈ ರಾಜ್ಯದ ಬೆಳವಣಿಗೆಯ ದೃಷ್ಟಿಯಿಂದ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿದ್ದರಾಮಯನವರೇ ಇಂತಹ ಕೆಟ್ಟ ಬಜೆಟ್ ನೋಡಬಾರದೆಂದು ಮಾನ್ಯ ಅಧ್ಯಕ್ಷರು ಡಾರ್ಕ್ ಗ್ಲಾಸ್ ಹಾಕಿಕೊಂಡಿದ್ದಾರೆ.

ಅಧ್ಯಕ್ಷರು : ನನ್ನ ಕಣ್ಣಿಗೆ ಏನೋ ತೊಂದರೆ ಇದೆ, ಬೆಳಿಗ್ಗೆಯಿಂದ ಒದ್ದಾಡಿ ಒದ್ದಾಡಿ ಈಗ ಗ್ಲಾಸ್ ತರಿಸಿಕೊಂಡು ಹಾಕಿಕೊಂಡಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಖರ್ಗೆಯವರೇ ನಿಮಗೂ ಒಳಗಡೆ ಒಳ್ಳೆಯ ಬಜೆಟ್ ಅನ್ನಿಸುವುದಿಲ್ಲವೋ ಎಂದು ಹೇಳಿ ನೋಡೋಣ, ನೀವು ಅಂತರಿಕವಾಗಿ ಒಪ್ಪಿ ಕೊಂಡಿದ್ದೀರಿ ಅದರೆ ವಿರೋಧಪಕ್ಷದ ನಾಯಕರಾಗಿ ಏನಾದರೂ ಹೇಳಬೇಕಲ್ಲಾ ಅದ್ದರಿಂದ ಹೇಳುತ್ತಿದ್ದೀರಿ...

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೆ, ಇದು ಏನು ತೋರಿಸುತ್ತದೆ ಅಂದರೆ ಪಬ್ಲಿಕ್ ಲಿಮಿಟೆಡ್ ಕಂಪನಿ ಹೇಗಾಗಿದೆ ಅಂದರೆ ಈ ಹೆಲ್ತ್ ಕ್ಲಬ್ ಬೆಳಿಗ್ಗೆ ಇನ್ನಾಗುರೇಷನ್ ಅದ ತಕ್ಷಣವೇ ಸನ್ಮಾನ್ಯ ಅಧ್ಯಕ್ಷರಿಗೆ ಕಣ್ಣು ನೋವು ಬಂದಿದೆಯಲ್ಲಾ ಆ ತರಹ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ಲಾಸ್ಟಿಕ್, ಸಿಮೆಂಟ್‌ಕೆರೋಸಿನ್ ಇದರ ದರ ಹೆಚ್ಚಿಗೆ ಮಾಡಿದ್ದನ್ನು ಬಜೆಟ್‌ನಲ್ಲಿ ಹೇಳಿ ಬಡವರಗೆ ಒಳ್ಳೆಯದನ್ನು ಮಾಡಿದ್ದೇವೆಂದು ಹೇಗೆ ಹೇಳುತ್ತೀರಿ? ತಾವು ಹೋಗಿ ಬಂದು ಆ ಸಿನೆಮಾಥಿಯೇಟರ್‌ಗೆ ಗಂಟು ಬಿದ್ದಿದ್ದೀರಲ್ಲಾ ಅದನ್ನೂ ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಸಿನೆಮಾ ಆಯಿತು. ಮಾನ್ಯ ಅಧ್ಯಕ್ಷರೆ, ನಮಗೆ ಹೊಸ ಚಿಂತನೆ, ಹೊಸ ದೃಷ್ಟಿಕೋನ. ನಾವು ಅನಗತ್ಯವಾಗೀ ಖರ್ಚು ಮಾಡತಕ್ಕಂಥದ್ದನ್ನು ತಡೆಗಟ್ಟಿದ್ದೇವೆ. ನಾವು ಹೂಡತಕ್ಕಂಥ ಬಂಡವಾಳಕ್ಕೆ ಕನಿಷ್ಟಪಕ್ಷ ರಿಟರ್ನ್ಸ್ ಇರಬೇಕು. ಉದಾಹರಣೆಗೆ ಹ್ಯೂಮ್ಯನ್ ರಿಸೋರ್ಸ್ ಡೆವಲಂಪ್‌ಮೆಂಟ್ಸ್ ಅಲ್ಲಿ ಶಿಕ್ಷಕರನ್ನು ನೇಮಕ ಮಾಡಿದ್ದೇವೆ. ನಾವು ಅಲ್ಲಿ ರಿಟರ್ನ್ ಅಪೇಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ವಿದ್ಯಾರ್ಥಿಗಳಿಗೆ ವಿದ್ಯೆ ಕೊಡಬೇಕು, ಆದಕ್ಕೆ ನಾವು ಪ್ರತಿ ವರ್ಷ ಉಪಾಧ್ಯಾಯರುಗಳನ್ನು ನೇಮಕ ಮಾಡಲು ಹೊರಟಿದ್ದೇವೆ. ಕಳೆದ 2 ವಷಗಳಲ್ಲಿ ಒಟ್ಟು 8ನೇ ಯೋಜನೆಯಲ್ಲಿ 57 ಸಾವಿರ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದರೆ, ನಾವು ಎರಡು ವರ್ಷಗಳಲ್ಲಿ 26,500 ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ, ಈ ರೀತಿ ಹೇಳಿ ಎಸೆನ್‌ಷಿಯಲ್ ಸರ್ವಿಸ್‌ಸ್‌ನಲ್ಲಿ ವೈದ್ಯರು, ಉಪಾಧ್ಯಾಯರು, ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಪೋಲೀಸರು, ಈ ರೀತಿ ನಾವು ನೇಮಕ ಮಾಡುವಾಗ ನಾನ್ ಪ್ಲಾನ್ ಎಂದು ಹೇಳಿದರೂ, ಇವೆಲ್ಲಾ ಪ್ಲಾನ್‌ನಲ್ಲಿ ಇರತಕ್ಕಂಥದ್ದು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡತಕ್ಕಂಥದ್ದೂ ಕೂಡ ಹ್ಯೂಮನ್ ರಿಸೋರ್ಸ್‌ಸ್ ಡೆವಲಪ್‌ಮೆಂಟ್‌ನಲ್ಲಿ ಅಗತಕ್ಕದ್ದು. ಅಲ್ಲಿ ನಾವು ತಡೆಗಟ್ಟುತ್ತೇವೆ. ಅದು ಅನುಪಯುಕ್ತ ಎಂದು ಹೇಳುವುದಕ್ಕೆ ಆಗುವುದಿಲ್ಲ. ಎಲ್ಲಿ ಅನುಪಯುಕ್ತವಾಗುತ್ತದೆ ಎಂದರೆ ಎಲ್ಲಿ ರಾಜ್ಯದ ಬೆಳವಣಿಗೆಗೆ ಪೂರಕ ಆಗುವುದಿಲ್ಲ ಅಲ್ಲಿ ಅನುಪಯುಕ್ತವಾಗುತ್ತದೆ. ಮಾನವ ಅಭಿವೃದ್ಧಿಗೆ ನೀಡತಕ್ಕಂಥದ್ದು ಹೇಗೆ? ಪರ್ ಕ್ಯಾಪಿಟಾ

ಇನ್‌ಕಂ ಹೆಚ್ಚು ಆಯಿತೋ ಇಲ್ಲವೋ? ಅವನ ಲೈಫ್ ಎಕ್ಸ್‌ಫೆಕ್ಟೆನ್ಸಿ ಹೆಚ್ಚು ಆಯಿತೋ ಇಲ್ಲವೊ? ಶಿಶು ಮರಣ ಕಡಿಮೆ ಆಗಿದೆಯೋ ಇಲ್ಲವೊ? ಭರ್ತ್ ರೇಟ್ ಕಡಿಮೆ ಆಗಿದೆಯೋ ಇಲ್ಲವೋ? ಅವಿದ್ಯಾವಂತರ ಸಂಖ್ಯೆ ಕಡಿಮೆ ಆಗುತ್ತಿದೆಯೋ ಇಲ್ಲವೊ? ಇದು ಅಭಿವೃದ್ಧಿಯನ್ನು ನೋಡತಕ್ಕಂಥ ಮಾನದಂಡಗಳು.

ಶ್ರೀ ಬಿ. ಎಸ್. ಯಡಿಯೂರಪ್ಪ : ದೇಶಕ್ಕೆ ಸ್ವಾತಂತ್ರ ಬಂದು 50 ವರ್ಷಗಳಾದರೂ ಸಹ ಗ್ರಾಮೀಣ ಜನರಿಗೆ ಮೂಲ ಭೂತ ಸೌಲಭ್ಯಗಳೂ ಸಿಕ್ಕಿಲ್ಲ ಎನ್ನುವ ಮಾತನ್ನು ಅವರು ಪ್ರಾರಂಭದಲ್ಲೇ ಹೇಳಿದ್ದಾರೆ. ಈ ಎಲ್ಲಾ ಕೆಲಸಗಳನ್ನು ಮಾಡಲು ಪೊಲೆಟಿಕಲ್ ವಿಲ್, ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ಇಲ್ಲ. ಫ್ರೀಯಾಗಿ ಕೆಲಸ ಮಾಡುವುದಕ್ಕೆ ಬಿಡದಂಥ ಪರಿಸ್ಥಿತಿಯಲ್ಲಿ ಅವರು ಸಿಕ್ಕಿಹಾಕಿಕೊಂಡಿದ್ದಾರೆ.ಇದರಲ್ಲಿ ನಾನು ರಾಜಕಾರಣ ಮಾಡುತ್ತಿಲ್ಲ. ಹಿಂದೆ ಸರ್. ಎಂ. ವಿಶ್ವೇಶ್ವರಯ್ಯನವರು ಇದ್ದಾಗ ಭಾಕ್ರಾನಂಗಲ್ ಡ್ಯಾಮ್ ಕಟ್ಟುವುದಕ್ಕೆ ಮುಂಚಿತವಾಗಿಯೇ ಮೈಸೂರಿನಲ್ಲಿ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದುದರ ಜೊತೆಗೆ ಏಷ್ಯಾದಲ್ಲೇ ಪ್ರಥಮವಾಗಿ ಶಿವನ ಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಸ್ಥಾವರವನ್ನು ಸ್ಥಾಪನೆ ಮಾಡಿದರು. ಅವರು ಮಾಡಿದಂಥ ಒಳ್ಳೆಯ ಕೆಲಸಗಳನ್ನು ಇವತ್ತಿನ ದಿವಸ ತಾವು ಮುಂದುವರಿಸಿಕೊಂಡು ಹೋಗುವುದಕ್ಕಾಗುತ್ತಿಲ್ಲ. ಆದುದರಿಂದ, ಅಭಿವೃದ್ಧಿ ಬಗ್ಗೆ ಸೀರಿಯಸ್ ಆಗಿ ಗಮನ ಕೊಡಬೇಕು. ಮಾನ್ಯ ರಾಮ್‌ಮನೋಹರ ಲೋಹಿಯಾ ಅವರ ಮಾರ್ಗದರ್ಶನದಲ್ಲಿ ಮಾನ್ಯ ಜೆ. ಹೆಚ್. ಪಟೇಲರು ನಡೆಯುತ್ತಿದ್ದಾರೆ, ಮಾನವತಾವಾದಿಯಾದ ಮಾನ್ಯ ದೀನ್‌ದಯಾಳ್ ಉಪಾಧ್ಯಾಯರ ಮಾರ್ಗದರ್ಶನದಲ್ಲಿ ನಾವು ನಡೆಯುತ್ತಿದ್ದೇವೆ, ಮಹಾತ್ಮಾ ಗಾಂಧೀಜಿಯವರ ರಾಮರಾಜ್ಯದ ಕಲ್ಪನೆ ಮಾರ್ಗದರ್ಶನದಲ್ಲಿ ಬಂದಿರತಕ್ಕಂಥ ಕಾಂಗ್ರೆಸ್ ಪಕ್ಷದವರು ಇದ್ದಾರೆ, ಅಭಿವೃದ್ಧಿ ಕಾರ್ಯಗಳಲ್ಲಿ ಭಿನ್ನಾಭಿಪ್ರಾಯ ಮಾಡದೆ ರಾಜಕೀಯವನ್ನು ಬೆರಸದೆ ಕೆಲಸವನ್ನು ಮಾಡಿದರೆ ನಾವು ಅಪ್ರೀಷಿಯೆಟ್ ಮಾಡುತ್ತೇವೆ. ಇವತ್ತಿನ ದಿವಸದಲ್ಲಿ ವಿದ್ಯುತ್ತಿನ ಅಭಾವ ಇದೆ, ನೀರಾವರಿಗೆ ಹೆಚ್ಚಿನ ಆದ್ಯತೆ ಕೊಟ್ಟಿಲ್ಲ. ಪಬ್ಲಿಕ್ ಅಂಡರ್ ಟೇಕಿಂಗ್ಸ್ ಸರಿಪಡಿಸುವುದಕ್ಕೆ ಆಗುತ್ತಿಲ್ಲ. ಇದನ್ನೆಲ್ಲಾ ನೋಡಿದರೆ, ಯಾವುದಾದರೂ ಬೇರೆ ದೇಶದವರನ್ನು ಕರೆದು, ತಿಂಗಳಿಗೆ ಇಷ್ಟು ಆದಾಯವನ್ನು ಕೊಟ್ಟು ಎಲ್ಲವನ್ನೂ ನಡೆಸಿಕೊಂಡು ಹೋಗಿ ಎಂದು ಹೇಳುವ ಮಟ್ಟಕ್ಕೆ ಬರಬಹುದು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಯಾವುದನ್ನೂ ನಡೆಸುವುದಕ್ಕೆ ಆಗುತ್ತಿಲ್ಲವೆಂದಲ್ಲ ಆ ರೀತಿ ಅನಿವಾರ್ಯತೆಗಳು ನಿರ್ಮಾಣಗೊಂಡಿವೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಪಬ್ಲಿಕ್ ಅಂಡರ್ ಟೇಕಿಂಗ್ಸ್ ಬಂದ ಮೇಲೆ ನಾವು 9

ಸಾವಿರ ಕೋಟಿ ರೂಪಾಯಿಗಳನ್ನು ಹಾಕಿದ್ದೇವೆಯೇ? ಇದು ಮೊದಲಿನಿಂದಲೂ ಬಂದಿದೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಹಣವನ್ನು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಮೇಲೆ ಬಂಡವಾಳವನ್ನು ಹೂಡಿಕೊಂಡು ಬರಲಾಗಿದೆ. ಈ 949 ಕೋಟಿ ರೂಪಾಯಿ ಲಾಸ್ ನಾವು ಬಂದ ಮೇಲೆ ಆಗಿದೆಯಾ? ಈ ಎಲ್ಲಾ 949 ಕೋಟಿ ರೂಪಾಯಿ ಲಾಸನ್ನು ತೆಗೆದುಹಾಕಿ ಎಲ್ಲಾ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳನ್ನು ಇಂಪ್ರೂವ್ ಮಾಡುತ್ತೇವೆಂದು ಹೇಳುವುದು ಸರಿಯಾಗುತ್ತದೆಯೇ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಕೆಲವು ಇಂಡಸ್ಟ್ರೀಗಳು ಜನರಿಗೆ ಅನುಕೂಲವಾಗುವಂಥವು ಇವೆ. ಅವುಗಳನ್ನು ಮುಚ್ಚುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಉದಾರೀಕರಣ ಮತ್ತು ಹೈ ಟೆಕ್ನಾಲಜಿ ಬಂದಿರುವುದರಿಂದ ಓಪನ್ ಮಾರ್ಕೇಟ್‌ನಲ್ಲಿ ನಿಲ್ಲುವುದಕ್ಕೆ ಸಸ್ಟೈನಿಬಿಲಿಟಿ ಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸಂಪತ್ತನ್ನು ಅಭಿವೃದ್ಧಿಪಡಿಸುವ ಬಗ್ಗೆ ತಿಂಕಿಂಗ್ ಚೇಂಜ್ ಆಗಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಸದಸ್ಯರು ಸ್ವಲ್ಪ ಕಾಮ್ ಆಗಿ ಕೇಳಿದರೆ ನಾನು ಹೇಳುವುದು ಗೊತ್ತಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಕಳೆದ 50 ವರ್ಷಗಳಿಂದ ಕೈಗಾರಿಕರಣಕ್ಕೆ ನಾವು ಆದ್ಯತೆ ಕೊಟ್ಟಿದ್ದರೂ ಆ ಕೈಗಾರಿಕರಣದಿಂದ ನಾವು ಸಫಲರಾಗದೇ ಫೇಲ್ ಆಗಿದ್ದೇವೆ. ಮಹಾತ್ಮ ಗಾಂಧೀಜಿಯವರ ಕನಸಿನ ರಾಮರಾಜ್ಯದ ಗುಡಿ ಕೈಗಾರಿಕೆಗಳನ್ನು ಹಳ್ಳಿಗಳಲ್ಲೇ ಸಿಗುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಅಭಿವೃದ್ಧಿ ಮಾಡಬೇಕಾಗಿದೆ. ಇವತ್ತಿನ ದಿವಸ ಎಕ್ಸ್‌ಪೋರ್ಟ್ ಡ್ಯೂಟಿ ಜಾಸ್ತಿಯಾಗಿರುವುದರಿಂದ ನಮ್ಮ ಕಾರ್ಖಾನೆಗಳು ತಯಾರು ಮಾಡಿರುವ ವಸ್ತುಗಳನ್ನು ಹೊರಗೆ ಕಳುಹಿಸುವುದಕ್ಕಾಗುತ್ತಿಲ್ಲ, ಇಂಪೋರ್ಟ್ ಡ್ಯೂಟಿ ಕಡಿಮೆ ಇವುದರಿಂದ ಹೊರ ದೇಶಗಳಲ್ಲಿ ತಯಾರಾದ ವಸ್ತುಗಳು ನಮ್ಮ ದೇಶಕ್ಕೆ ಬಂದು ನಮ್ಮಲ್ಲಿರುವ ಕೈಗಾರಿಕೆಗಳು ಬಾಗಿಲು ಮುಚ್ಚುವಂಥ ಪರಿಸ್ಥಿತಿಗೆ ಬಂದಿದೆ. ಇಡೀ ದೇಶದ ಬಗ್ಗೆ ನಾನು ಹೇಳದೇ ಇದ್ದರೂ ನಮ್ಮ ಕರ್ನಾಟಕದಲ್ಲಾದರೂ ಗುಡಿ ಕೈಗಾರಿಕೆಗಳಿಗೆ ಆದ್ಯತೆ ಕೊಡಲಾಗುತ್ತದೆಯೋ ಎಂದು ಕೇಳುತ್ತೇನೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡುವ ಹುಚ್ಚು ಅವರಿಗೆ ಬಿಟ್ಟರೆ ಮಾತ್ರ ಆಗ ಏನಾದರೂ ಸ್ವಲ್ಪ ಒಳ್ಳೆಯದಾಗಬಹುದು.

ಶ್ರೀ ಜೆ. ಹೆಚ್. ಪಟೇಲ್ : ಕೆಲವು ಕೈಗಾರಿಕೆಗಳಿಗೆ ಸಬ್ಸಿಡಿ ಕೊಟ್ಟು ಎನ್ಕರೇಜ್ ಮಾಡಿ ಅವುಗಳನ್ನು ಉಳಿಸುವ ವಿಚಾರ ಬೇರೆ. ಉದಾಹರಣೆಗೆ ಹೇಳುವುದಾದರೆ, ಬಿಜಾಪುರ ಅಥವಾ ದಾವಣಗೆರೆಯ ಇಂಡಸ್ಟ್ರೀಯಲ್ ವರ್ಕಿಂಗ್ ಶೆಡ್‌ನಲ್ಲಿ ತಯಾರಾಗುವ ಗುಂಡು

ಸೂಜಿಯು 1 ರೂಪಾಯಿಗೆ 3 ಸಿಗುವುದಾದರೆ, ಅದೇ ಮಲ್ಟಿ ನ್ಯಾಷನಲ್ ಕಂಪನಿಯರು ಬಾಂಬೆಯಲ್ಲಿ ತಯಾರು ಮಾಡುವ ಗುಂಡು ಸೂಜಿಯು 1 ರೂಪಾಯಿಗೆ 15 ಸಿಗುತ್ತವೆ. ಆಗ 1 ರೂಪಾಯಿಗಳ 15 ಗುಂಡು ಸೂಜಿಗಳು ಬರುವ ಕಂಪನಿಯಿಂದಲೇ ಕೊಂಡು ಕೊಳ್ಳಬೇಕಾಗುತ್ತದೆ. ಆಮೇಲೆ, ಇನ್ನೊಂದು ಉದಾಹರಣೆ, ಇಂಪ್ರೂವ್ಡ್ ಟೆಕ್ನಾಲಜಿ ಪ್ರಕಾರ ಈಗ ಒಂದು ಗಂಟೆಯಲ್ಲಿ 10 ಸಾವಿರ ಬೀಡಿಗಳನ್ನು ಕಟ್ಟುವಂಥ ಒಂದು ಮೆಷನ್ ಕೋರಿಯಾದಲ್ಲಿ ತಯಾರಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅದನ್ನು ಇಲ್ಲಿಗೆ ತರಬೇಡಿ.

ಶ್ರೀ ಜೆ. ಹೆಚ್. ಪಟೇಲ್ : ಅದನ್ನೇ ಅವರು ಹೇಳುತ್ತಿರುವುದು. ಸ್ಮಾಲ್ ಸ್ಕೇಲ್ ಸೆಕ್ಟಾರ್‌ನಲ್ಲಿ ಮತ್ತು ಕಾಟೇಜ್ ಇಂಡಸ್ಟ್ರೀಗಳಲ್ಲಿ ರೀಟೈನ್ ಮಾಡಬೇಕೆಂದು ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ ಆದರೆ, ಕೇಂದ್ರದ ಪಾಲಿಸಿಯಲ್ಲಿ ಏನಾಗಿದೆ ಎಂದರೆ.. I don't disagree with Dr.Manmohan Singh's liberalisation, globalisation, privatisation and ultimately I don't Know what `isation' ರಾಷ್ಟ್ರೀಯ ಹಿನ್ನೆಲೆಯಲ್ಲಿ ನಮ್ಮ ಸರ್ಕಾರದ ಬಂಡವಾಳವನ್ನು ಯಾವ ರೀತಿ ಉತ್ತಮವಾಗಿ ಉಪಯೋಗಿಸಬಹುದೆಂಬ ಬಗ್ಗೆ ಅವರು ಹೇಳುತ್ತಿದ್ದಾರೆ. ಸಿಕ್ ಇಂಡಸ್ಟ್ರಿಗಳನ್ನು ರಿವೈವ್ ಮಾಡುವುದಕ್ಕಾಗದೆ, ಪ್ರತಿ ವರ್ಷ ಕೋಟ್ಯಾಂತರ ರೂಪಾಯಿಗಳನ್ನು ಕೊಡುವ ಬದಲು ಅದನ್ನು ಡಿಸ್ ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆಂದು ಅವರು ಹೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಮ್ಮಲ್ಲೇ ದೊಡ್ಡ ಎಸ್ಟಾಬಿಲಿಷ್‌ಮೆಂಟ್ ಇರುವಾಗ ರೋಡ್‌ಗಳನ್ನು ಮಾಡುವುದಕ್ಕೆ ಹೊರ ದೇಶವರನ್ನು ಕರೆಸುವ ಅಗತ್ಯ ಏನಿತ್ತು? ಹೊರ ದೇಶದವರಿಗೆ ಕೆಲಸವನ್ನು ಕೊಟ್ಟ ಮೇಲೆ ನಮ್ಮ ಎಸ್ಟಾಬ್ಲಿಷ್‌ಮೆಂಟ್‌ಗೆ ಸುಮ್ಮನೆ ಸಂಬಳ ಕೊಟ್ಟು ಕೂರಿಸಬೇಕೇ? ನಮ್ಮ ಇಂಜಿನೀಯರ್ಸ್‌ಗೆ ರೋಡ್‌ಗಳನ್ನು ಮಾಡುವುದಕ್ಕೆ ಗೊತ್ತಿಲ್ಲವೇ?

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಮತ್ತು ಗುಡಿ ಕೈಗಾರಿಕೆಗಳಿಗೆ ಉತ್ತೇಜನ ಕೊಡುತ್ತಿದ್ದೇವೆ ಎನ್ನುವ ಮಾತನ್ನೇ ಹೇಳುತ್ತಿದ್ದೇನೆ. ಎನ್ನುವ ಮಾತನ್ನೇ ಹೇಳುತ್ತಿದ್ದೇನೆ. ಆದರೆ, ಕೆಲವು ಇಂಡಸ್ಟ್ರಿಗಳು ಅನೇಕ ವರ್ಷಗಳಿಂದ ಸತ್ತುಹೋಗಿ ಸಿಕ್ ಇಂಡಸ್ಟ್ರಿಗಳಾಗಿವೆ. ಅವುಗಳನ್ನು ರಿವೈವ್ ಮಾಡಬೇಕಾದರೆ ಮತ್ತೆ ಬಂಡವಾಳವನ್ನು ಹೊಡಬೇಕಾಗುತ್ತದೆ. ಕೆಲವು ಇಂಡಸ್ಟ್ರೀಗಳಲ್ಲಿ ಡಿಸ್‌ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದೇನೆಯೇ ಹೊರತು ಎಲ್ಲಾ ಇಂಡಸ್ಟ್ರಿಗಳನ್ನು ಮುಚ್ಚಿಬಿಡುತ್ತೇವೆ, ಎಲ್ಲಾ ಕಾರ್ಮಿಕರುಗಳಿಗೆ

ಕೆಲಸ ಇಲ್ಲದ ಹಾಗೆ ಮಾಡುತ್ತೇವೆಂದು ಇದರ ಅರ್ಥವಲ್ಲ. ಅಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ ಕೆಲಸ ಕೊಟ್ಟು ಆ ಇಂಡಸ್ಟ್ರೀಗಳನ್ನು ನಡೆಸುತ್ತೇವೆಂದು ಖಾಸಗಿಯವರು ಅಥವಾ ಜಂಟಿ ವಲಯದವರು ಬಂದರೆ ಪ್ರೋತ್ಸಾಹ ಕೊಟ್ಟು ಅಲ್ಲಿಗೆ ಕೊಡತಕ್ಕಂಥ ಹಣವನ್ನು ಉಳಿಸಿ ಮಾನದ ಸಂಪನ್ಮೂಲ ಅಭಿವೃದ್ಧಿಗೆ ಅಂದರೆ, ಎಜುಕೇಷನ್ ಕೊಡಲು, ರಸ್ತೆಗಳನ್ನು ಮಾಡಲು, ಹೆಲ್ತ್ ಫೆಸಿಲಿಟಿ ಕೊಡಲು, ಕಾಡುಗಳನ್ನು ಬೆಳೆಸಲು, ವ್ಯವಸಾಯ ಅಭಿವೃದ್ಧಿಪಡಿಸಲು ಆ ಹಣವನ್ನು ಖರ್ಚು ಮಾಡಲಾಗುತ್ತದೆ ಎಂದು ಹೇಳಿದ್ದೇನೆ. ಸಿಕ್ ಇಂಡಸ್ಟ್ರೀಗಳನ್ನು ಸುಮ್ಮನೆ ಇಟ್ಟುಕೊಂಡು ಪ್ರತಿ ತಿಂಗಳು ಸಮ್ಮನೆ ಅವರಿಗೆ ಸಂಬಳ ಕೊಟ್ಟುಕೊಂಡು ಹೋದರೆ ರಾಜ್ಯದ ಅಭಿವೃದ್ಧಿಯಾಗುವುದಿಲ್ಲವೆನ್ನುವ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲವೆಂದು ಸ್ಪಷ್ಟಪಡಿಸಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಈ ದಿಕ್ಕಿನಲ್ಲಿ ಒಂದು ಹೊಸ ಹೆಜ್ಜೆಯನ್ನು ರಾಜ್ಯದ ಆರ್ಥಿಕ ಬೆಳವಣಿಗೆ ದೃಷ್ಟಿಯಿಂದ ಇಡಬೇಕೆಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ನಾನು ಎಕನಾಮಿಕ್ ಸರ್ವೆನಲ್ಲಿ ಹೇಳಿದ್ದೇನೆ. ಆ ಬಗ್ಗೆ ಮತ್ತೊಮ್ಮೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

1.00 ಪಿ.ಎಂ

ಇವತ್ತು ಎಕಾನಮಿ ಬೆಳವಣಿಗೆ ಬಹಳ ವೇಗವಾಗಿ ಆಗಿದೆ ಎಂದು ನಾನು ಹೇಳುವುದಿಲ್ಲ. 1994-95ರಲ್ಲಿ 95-96ರಲ್ಲಿ 5.4 ಇತ್ತು 95-96ರಲ್ಲಿ 5.6 ಆಗಿದೆ. 96-97ಕ್ಕೆ ಅದು 5.8 ಆಗಬಹುದು ಎಂಬ ಲೆಕ್ಕಾಚಾರ ಇಟ್ಟಿದ್ದೇವೆ. ರಾಷ್ಟ್ರದ ಬಳವಣಿಗೆಗೆ ಹೋಲಿಕೆ ನೋಡಿದರೆ ಕಡಿಮೆ ಇದೆ. ಇವತ್ತು 5.4 ರಿಂದ 5.8ಕ್ಕೆ ತೆಗೆದುಕೊಂಡು ಹೋಗುವ ವಿಚಾರವನ್ನು ಇಟ್ಟುಕೊಂಡಿದ್ದೇವೆ. 9ನೇ ಪಂಚವಾರ್ಷಿಕ ಯೋಜನೆಯಲ್ಲಿ 9ನೇ ಪ್ಲಾನ್ ಅಪ್ರೋಚ್ ಪೇಪರಿನಲ್ಲಿ ಕೇಂದ್ರ ಯೋಜನಾ ಆಯೋಗದವರು 7 ಪರ್ಸೆಂಟ್ ಆಗಲೇಬೇಕು ಎಂದು ಹೇಳಿದ್ದಾರೆ. ಆ 7 ಪರ್ಸೆಂಟ್ ಗ್ರೋತ್ ಅನ್ನು ಕಾರ್ನಾಟಕ ರಾಜ್ಯದಲ್ಲಿ ಮಾಡಲಿಕ್ಕೆ ಅದಕ್ಕೆ ಬೇಕಾದ ಎಲ್ಲಾ ಪ್ರಯತ್ನಗಳನ್ನು ಮಾಡಲಿಕ್ಕೆ ಪೂರಕವಾಗಿಂತಹ ಎಲ್ಲಾ ವ್ಯವಸ್ಥೆಗಳನ್ನು ಮಾಡಲಿಕ್ಕೆ ರಾಜ್ಯ ಸರಕಾರ ಚಿಂತನೆ ಮಾಡುತ್ತಿದೆ ವಿಚಾರ ಮಾಡುತ್ತಿದೆಂದು ಹೇಳಬಯಸುತ್ತೇನೆ. 8ನೇ ಯೋಜನೆ ಈಗ ಮುಗಿಯಿತು. 1996-97ಕ್ಕೆ ಮುಗಿಯುತ್ತದೆ. 1997-98ಕ್ಕೆ 9ನೇ ಯೋಜನೆ ಬರುತ್ತದೆ. ಮೊದಲನೇ ವರ್ಷಕ್ಕೆ ಹೋಗುತ್ತಿದ್ದೇವೆ. ಮಾನ್ಯ ಮೊಯಿಲಿಯವರು ನಿಮ್ಮದು ಏನು ಅಪ್ರೋಚ್ ಎಂದು ಕೇಳಿದರು. ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ದೇಶದಲ್ಲಿ ಚರ್ಚೆಯಾಗಿದೆ. ಅಲ್ಲಿ ನಮ್ಮ ವಿಚಾರಗಳನ್ನು ಸ್ಪಷ್ಟಪಡಿಸಿದ್ದೇವೆ. 9ನೇ ಯೋಜನೆಯಲ್ಲಿ ನಾವು ಕೂಡ ಪ್ಲಾನಿಂಗ್ ಕಮಿಷನ್ ಜೊತೆ

ಚರ್ಚೆ ಮಾಡಿ ನಿಗದಿ ಮಾಡಬೇಕಾಗಿದೆ. ಇದರ ಬಗ್ಗೆ ಸಂಪೂರ್ಣ ಎಕ್ಸರ್‌ಸೈಸ ಮಾಡಿ ಆ ಹಿನ್ನೆಲೆಯಲ್ಲಿ 9ನೇ ಪಂಚವಾರ್ಷಿಕ ಯೋಜನೆಯ 97-98 ಮೊದಲನೇ ವರ್ಷದಲ್ಲಿ 4545 ಕೋಟಿ ರೂಪಾಯಿ ಯೋಜನಾ ಗಾತ್ರವನ್ನು ಮಾಡಿದ್ದೇವೆ. ಮಾನ್ಯ ಖರ್ಗೆಯವರು ಮಾನ್ಯ ಮೊಯಿಲಿಯವರು ಎಲ್ಲರೂ ನೀವು ಯೋಜನೆ ಮಾಡಿ ನಿಗದಿ ಮಾಡಿದ್ದೀರಿ ಅದನ್ನು ಮುಟ್ಟಲಿಕ್ಕಾಗಿಲ್ಲವೆಂದು ಹೇಳಿದರು. 8ನೇ ಪಂಚವಾರ್ಷಿಕ ಯೋಜನೆಯನ್ನು ನೋಡಿದರೆ ಸುಮಾರು 92 ಪರ್ಸೆಂಟ್ ಕನ್‌ಸ್ಟೆಂಟ್ ಪ್ರೈಸ್‌ಗೆ ರೀಚ್ ಆಗಿದ್ದೇವೆ. 12,300 ಕೋಟಿ ಒಟ್ಟು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿಯಾಗಿತ್ತು. ಅದರಲ್ಲಿ 11,309 ಕೋಟಿಗೆ ನಾವು ತಲುಪಿದ್ದೇವೆ. ಇದು ಒಟ್ಟಾರೆ ಅಂದರೆ 92-93ರ ರೇಟಿನಲ್ಲಿ ಲೆಕ್ಕ ಹಾಕಿಕೊಂಡರೆ 14,894 ಕೋಟಿಯಾಗುತ್ತದೆ. ಕನ್‌ಸ್ಟೆಂಟ್ ಪ್ರೈಸ್‌ನಲ್ಲಿ 11,309 ಕೋಟಿಯಾಗುತ್ತದೆ. 12,300 ಕೋಟಿಯಾಗಬೇಕಾಗಿತ್ತು. ಅದರಲ್ಲಿ 900 ಕೋಟಿಯಷ್ಟು ಕಡಿಮೆಯಾಗಿದೆ. ಇದು ಇಡೀ ದೇಶದಲ್ಲಿ ಕೆಲವೇ ರಾಜ್ಯಗಳು 90 ಪರ್ಸೆಂಟಿಗಿಂತ ಹೆಚ್ಚು ಪ್ಲಾನ್‌ಅನ್ನು ರೀಚ್ ಆಗಿರುವುದರಲ್ಲಿ ಕರ್ನಾಟಕವೂ ಒಂದು ಎಂದು ಮಾನ್ಯ ಸದಸ್ಯರಿಗೆ ತಿಳಿಸ ಬಯಸುತ್ತೇನೇ. ಮಾನ್ಯ ಮೊಯಿಲಿಯವರು ನೆನ್ನೆ ಪ್ಲಾನ್ ಎಕ್ಸ್‌ಪೆಂಡಚರ್ ನನ್ನ ಕಾಲದಲ್ಲಿ ಬಹಳ ಮೇಲೆ ಇತ್ತು ನೀವು ಈಗ ಕೆಳಗೆ ಹೋಗಿಬಿಟ್ಟಿದ್ದೀರಿ ಎಂದು ಹೇಳಿದರು. ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಮಹಾರಾಷ್ಟ್ರ ಬಿಟ್ಟರೆ ಕರ್ನಾಟಕವೇ ಎರಡನೇ ಸ್ಥಾನದಲ್ಲಿದೆ. ರಾಜ್ಯಗಳನ್ನು ಹೋಲಿಕೆ ಮಾಡುವುದೂ ಕೂಡ ಸರಿಯಲ್ಲ. ಆದರಿಂದ ಸರಿಯಾದ ಚಿತ್ರ ಕೊಡುವುದಿಲ್ಲ. ಕಾವೇರಿಗೆ ನಾನ್ ಪ್ಲಾನ್‌ನಲ್ಲಿ 150-170 ಕೋಟಿಯನ್ನು ಖರ್ಚು ಮಾಡುತ್ತೇವೆ ಅದನ್ನೂ ನಾವು ಪ್ಲಾನ್ ಎಂದು ಲೆಕ್ಕ ಹಾಕಿ ಇದಕ್ಕೆ ಸೇರಿಸಿಕೊಂಡರೆ ಹೆಚ್ಚಾಗುತ್ತದೆ. ಅದರ ಬೇರೆ ಬೇರೆ ಕಾರಣಗಳಿಗೋಸ್ಕರವಾಗಿ ನಮ್ಮಲ್ಲಿ ವಿವಾದ ಇರುವುದರಿಂದ ನಾನ್ ಪ್ಲಾನ್‌ನಲ್ಲಿ ಖರ್ಚು ಮಾಡುತ್ತೇವೆ ಅದನ್ನೂ ನಾವು ಪ್ಲಾನ್ ಸೇರಿಸಿದರೆ ಬೇರೆ ಎಲ್ಲಾ ರಾಜ್ಯಗಳಿಗಿಂತ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ನಾವು ಮೇಲೆ ಬರುತ್ತೇವೆ. ಮಾನ್ಯ ಮೊಯಿಲಿಯವರು ಸಿದ್ಧರಾಮಯ್ಯನವರು ಹಣಕಾಸು ಮಂತ್ರಿಯಾದ ಮೇಲೆ ಜನತಾ ದಳ ಸರಕಾರ ಬಂದ ಮೇಲೆ ಏನು ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಪಾತಾಳಕ್ಕೆ ಹೋಯಿತು ಎಂದು ಹೇಳಿದರು, ಅದರಲ್ಲಿ ಏನೇನೂಹುರುಳು ಇಲ್ಲ. ಪ್ಲಾನ್ ಎಕ್ಸೆಪೆಂಡಿಚರ್‌ನಲ್ಲಿ ಕಳೆದ ವರ್ಷ 1995-96ರಲ್ಲಿ 3758 ಕೋಟಿ ಇಟ್ಟಿದ್ದು ಅದರಲ್ಲಿ ರೀಚ್ ಆದದ್ದು 3391 ಕೋಟಿ ಅಲ್ಲಿ ಕಡಿಮೆಯಾಗಿದೆ. 5 ವರ್ಷದ ಅವರ ಕಾಲದಿಂದಲೇ ತೆಗೆದುಕೊಂಡರೆ 92-93ರಲ್ಲಿ 2033 ಕೋಟಿ ಅವರು ಮಾಡಿದ್ದಾರೆ. 3022 ಕೋಟಿಗೆ 2797 ಕೋಟಿ ಮಾಡಿದ್ದಾರೆ. 2800, 3075 ಕೋಟಿಗೆ 3000 ಕೋಟಿಯಾಗಿದೆ. ಅದರಲ್ಲಿ ನಮ್ಮದೂ 3 ತಿಂಗಳು ಸೇರಿಕೊಂಡಿದೆ. 3750

ಕೋಟಿಯಲ್ಲಿ 3391 ಕೋಟಿಯಾಗಿದೆ. ಈ ವರ್ಷ 4360 ಕೋಟಿರೂಪಾಯಿ ಪ್ಲಾನ್ ಸೈಜ್ ಇದ್ದು ಇದರಲ್ಲಿ 660 ಕೋಟಿಯಷ್ಟು ಕಡಿಮೆಯಾಗಿದೆ. 3700 ಕೋಟಿ ಎಂದು ನಾವು ಅಂದಾಜು ಇಟ್ಟುಕೊಂಡಿದ್ದೇವೆ. ಅದು ನೂರು ಇನ್ನೂರು ಕೋಟಿ ಹೆಚ್ಚಾಗಬಹುದು. ಈ ವರ್ಷ ನಮ್ಮ ಅಂದಾಜಿನ ಪ್ರಕಾರ 3700 ಕೋಟಿಗೆ ತಲುಪುತ್ತೇವೆ. ಏಕೆ ಕಡಿಮೆಯಾಯಿತು. ಈ ವರ್ಷ ನಮ್ಮ ಅಂದಾಜಿನ ಪ್ರಕಾರ 3700 ಕೋಟಿಗೆ ತಲುಪುತ್ತೇವೆ. ಏಕೆ ಕಡಿಮೆಯಾಯಿತು ಎಂದರೆ, ಕೆ.ಇ.ಬಿ.ಗೆ ನಾವು 186 ಕೋಟಿ ನಾನ್ ಪ್ಲಾನ್‌ನಲ್ಲಿ ಇಟ್ಟು ಕೊಂಡಿದ್ದೇವೆ ಅದಕ್ಕೆ ಸಬ್ಸಿಡಿ 285 ಕೋಟಿ ಹಣವನ್ನು ನಾನ್ ಪ್ಲಾನ್‌ನಲ್ಲಿ ಹೆಚ್ಚಿಗೆ ಕೊಡಬೇಕಾಗಿ ಬಂತು. ಎಕ್ಸ್‌ಟ್ರಾ ಆರ್ಡಿನರಿ ಏಡೆಡ್ ಪ್ರಾಜೆಕ್ಟ್‌ಗಳಲ್ಲಿ ಆ ಕಾರ್ಯಕ್ರಮಗಳು ಲೇಟಾಗಿ ಪ್ರಾರಂಭವಾದದ್ದರಿಂದ ನಾವು ಅದನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಅದರಲ್ಲಿ 172 ಕೋಟಿ ರೂಪಾಯಿ ಕಡಿಮೆಯಾಗಿದೆ ತೆರಿಗೆ ವಸೂಲಿಯಲ್ಲಿ ನೀವೆಲ್ಲಾ ಬಿದ್ದು ಹೋಗಿದ್ದೀರಿ ಎಂದು ಹೇಳಿದರು. ಎಕ್ಸ್‌ಫ್ಟ್ ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಬಿಟ್ಟು ಬಾಕಿ ಎಲ್ಲಾ ವಸೂಲಾಗಿದೆ. ಬೆಂಗಳೂರು ಸುತ್ತಮುತ್ತ 95-96ರಲ್ಲಿ 60 ಪರ್ಸೆಂಟ್ ಗ್ರೋತ್ ರೇಟ್ ಇತ್ತು. ಅದೇ ಪ್ರಮಾಣದಲ್ಲಿ ಗ್ರೋತ್ ಆಗುತ್ತದೆಂದು ನಾವು ಅವರಿಗೆ 690 ಕೋಟಿ ಗುರಿ ಕೊಟ್ಟಿದ್ದೆವು. ಆದರೆ ಬೆಂಗಳೂರು ನಗರ ಸುತ್ತಮುತ್ತ ಕಳೆದ ವರ್ಷ ಆಸ್ತಿಪಾಸ್ತಿಗಳ ರೇಟ್ ಕಡಿಮೆಯಾಯಿತು. ರಿಜಿಸ್ಟ್ರೇಷನ್ ಕೂಡ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಹಾಗಾಗಿ ನಾವು ಅಲ್ಲಿ ಗುರಿ ತಲುಪುವುದಕ್ಕೆ ಸಾಧ್ಯವಾಗಲಿಲ್ಲ. ಅಲ್ಲಿ 140 ಕೋಟಿ ರೂಪಾಯಿ ತೆರಿಗೆ ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ಬರತಕ್ಕಂತಹ ಗುರಿಯಲ್ಲಿ ಕಡಿಮೆಯಾಗಲಿಕ್ಕೆ ಸಾಧ್ಯವಾಯಿತು.

ಶ್ರೀ ಎಂ. ಶ್ರೀನಿವಾಸ್ : ನೂರು ರೂಪಾಯಿ ಸ್ಟ್ಯಾಂಫ್ ಡ್ಯೂಟಿ ಇದ್ದದ್ದಕ್ಕೆ ಒಂದು ಸಾವಿರ ರೂಪಾಯಿ ಹಾಕಿದ್ದೀರಿ. ಬೆಂಗಳೂರು ಸುತ್ತಮುತ್ತ ವ್ಯಾಲ್ಯುಯೇಷನ್ ಕಡಿಮೆಯಾಗಿದೆ ಎಂದು ಹೇಳಿದಿರಿ.

ಶ್ರೀ ಸಿದ್ಧರಾಮಯ್ಯ : ಸ್ಟ್ಯಾಂಪ್ ಡ್ಯೂಟಿ ಹೆಚ್ಚಾಗಿದೆ ಕಡಿಮೆಯಾಗಿದೆ ಎಂದು ಅಲ್ಲ ಪ್ರಾಪರ್ಟಿ ಬೆಲೆ ಕಡಿಮೆಯಾಗಿದೆ. ಆದುದರಿಂದಾಗಿ ನಂಬರ್ ಆಫ್ ರಿಜಿಸ್ಟ್ರೇಷನ್ ಕಡಿಮೆಯಾಗಿರುವುದರಿಂದ ನಾವು ನಿಗದಿಪಡಿಸಿದಂತಹ ಗುರಿಯನ್ನು ತಲುಪುವುದಕ್ಕೆ ಕಷ್ಟವಾಯಿತು.

ಹೀಗಾಗಿ ಅನಿವಾರ್ಯವಾಗಿ ನಾವು ಪ್ಲಾನನ್ನು ಕಟ್ ಮಾಡಬೇಕಾಯಿತು. ಕೆ.ಎಸ್.ಆರ್.ಟಿ.ಸಿ ಯಲ್ಲಿ 111 ಕೋಟಿ ರೂಪಾಯಿ ನಮಗೆ ತೆರಿಗೆ ಬರಬೇಕಾಗಿತ್ತು,

ಮೋಟಾರ್ ವೈಹಿಕಲ್ ಟ್ಯಾಕ್ಸ್ ಅದು ನಷ್ಟದಲ್ಲಿ ಇರುವುದರಿಂದ ನಾವೇ ಅದಕ್ಕೆ ಸಬ್ಸಿಡಿ ಕೊಡಬೇಕಾದಂಥ ಪರಿಸ್ಥಿತಿ ಬಂತು. ಸುಮಾರು 30 ಕೋಟಿ ರೂಪಾಯಿ ನಾವೇ ಅದಕ್ಕೆ ಸಬ್ಸಿಡಿ ಹೆಚ್ಚಿಗೆ ಕೊಡಬೇಕಾಗಿ ಬಂತು. ಮೋಟರ್ ವಹಿಕಲ್ ಟ್ಯಾಕ್ಸ್ ಇಲ್ಲ. ಮತ್ತೆ ನಾವೇ 30 ಕೋಟಿ ಹೆಚ್ಚಿಗೆ ಕೊಡಬೇಕಾಗಿ ಬಂತು. ಹಾಗಾಗಿ ಅಲ್ಲಿ ಮೋಟಾರ್ ವೈಹಿಕಲ್ ಟ್ಯಾಕ್ಸ್ ಬೇರೆ ಖಾಸಗಿ ವಾಹನಗಳಿಂದ ಬರತಕ್ಕಂಥದ್ದು ಹೆಚ್ಚಾಗಿದೆ. ಸುಮಾರು 60 ಕೋಟಿ ರೂಪಾಯಿ ನಮ್ಮ ಗುರಿಗಿಂತ ಹೆಚ್ಚಾಗಿ ಹೋಗಿದೆ. ಅದರೆ ಕೆ.ಎಸ್.ಆರ್.ಟಿ.ಸಿ. ಯಿಂದ ಬರತಕ್ಕಂಥದ್ದು ಕಡಿಮೆಯಾಗಿದೆ. ಅದಕ್ಕೋಸ್ಕರ ನಾನು ಈ ವರ್ಷ ಕೆ. ಎಸ್.ಆರ್.ಟಿ.ಸಿ. ಸುಧಾರಣೆ ಮಾಡುವುದಕ್ಕೋಸ್ಕರ ಟ್ಯಾಕ್ಸ್‌ನ್ನು 12 ಪರಸೆಂಟ್‌ದಿಂದ ಮೊಫಿಸಿಯಲ್ ಏರಿಯಾಗಳಿಗೆ 8 ವರ್ಷಂಟಿಗೆ ಇಳಿಸಿ ಬೆಂಗಳೂರು ಅರ್ಬನ್ ಏರಿಯಾಕ್ಕೆ 12 ಪರ್ಸೆಂಟ್‌ದಿಂದ 5 ಪರ್ಸೆಂಟ್‌ಗೆ ಇಳಿಸತಕ್ಕಂಥ ತೀರ್ಮಾನ ಮಾಡಿದ್ದೇವೆ. ಈ ಕಾರಣದಿಂದ ಕೆ.ಎಸ್.ಆರ್.ಟಿ.ಸಿ.ಯನ್ನು ಭದ್ರ ಪಡಿಸಬೇಕು ಹೆಚ್ಚು ಸರ್ವಿಸ್‌ನ್ನು ಇಂಪ್ರೂವ್ ಮಾಡಬೇಕು ಎನ್ನುವ ಕಾರಣಕ್ಕೋಸ್ಕರ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಿಂಧ್ಯ ಅವರ ಪ್ರೀತಿಯ ಮೇಲೆ ಒಂದು ಕಡೆ ಟ್ಯಾಕ್ಸ್ ಕಡಿಮೆ ಮಾಡಿದಿರಿ, ಅವರ ವೆಹಿಕಲ್ಸ್‌ಗೆ ಇನ್ನೊಂದು ಕಡೆ ಸಬ್ಸಿಡಿಯನ್ನೂ ಕೊಟ್ಟಿರಿ ಮುಂದೆ ವಿಕ್ರಾಂತ್ ಟೈಯರ್ಸ್‌ನ್ನು ಕೊಟ್ಟು ಬಿಡಿ, ಸರಿ ಹೋಗುತ್ತದೆ ಎಲ್ಲಾ ಫ್ರಾಫಿಟ್‌ನಲ್ಲಿ ಬರುತ್ತದೆ.

ಶ್ರೀ ಸಿದ್ಧರಾಮಯ್ಯ : ಇಲ್ಲಾ ಅದನ್ನು ಆಮೇಲೆ ನೋಡೋಣ. ಅಡ್ವಲರಂ ಮೇಲೆ ಅವರು ತೆರಿಗೆ ಕೊಡುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿಯವರು ಏನು ಮಾಡುತ್ತಿದ್ದಾರೆಂದರೆ, ಅವರಿಗೆ ಒಂದು ವರ್ಷದ ವಹಿವಾಟು ಎಷ್ಟು ಇರುತ್ತದೆ ಅದರ ಮೇಲೆ ಅವರು 12 ಪರ್ಸೆಂಟ್ ಕೊಡುತ್ತಾರೆ, ಬೇರೆಯವರೆಲ್ಲಾ ಖಾಸಗಿಯವರು ಎಲ್ಲಾ ಹೇಗೆ ಕೊಡುತ್ತಾರೆಂದರೆ, ಪರ್‌ಸೀಟ್ ತೆರಿಗೆ ಕೊಡುತ್ತಾರೆ. ಹಾಗಾಗಿ ಕೆ.ಎಸ್.ಆರ್.ಟಿ.ಸಿ.ಯವರಿಗೆ ಟ್ಯಾಕ್ಸ್ ಕೂಡ ಹೆಚ್ಚು ಇತ್ತು. ಆ ಹೆಚ್ಚಿನ ಟ್ಯಾಕ್ಸ್‌ನ್ನು ಕಡಿಮೆ ಮಾಡಿ ಖಾಸಗಿಯವರೇನು ಮೋಟಾರ್ ವೆಹಿಕಲ್ ಟ್ಯಾಕ್ಸ್ ಕೊಡುತ್ತಿದ್ದಾರೆ, ಅದಕ್ಕೆ ಸಮಾನವಾಗಿ ತರಬೇಕೆನ್ನುವ ಕಾರಣಕ್ಕೋಸ್ಕರ ಕಡಿಮೆ ಮಾಡಿರುವುದು. ಅದಕ್ಕೆ ಸಿಂಧ್ಯ ಅವರ ಮೇಲಿ ಪ್ರೀತಿ ಅಲ್ಲ. ಒಟ್ಟಾರೆ ಕೆ.ಎಸ್.ಆರ್.ಟಿ.ಸಿ.ಯನ್ನು ಶುದ್ಧ ಮಾಡಬೇಕು, ಅದರ ಸರ್ವೀಸ್ ಉತ್ತಮ ಪಡಿಸಬೇಕೆನ್ನುವ ಕಾರಣದಿಂದ ಇದನ್ನು ಮಾಡಿರುವುದು, ಪ್ರೀತಿ ಇರುತ್ತದೆ ಅದು ಬೇರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಜೆಟ್‌ನಲ್ಲಿ ನೋಡಿದ ಮೇಲೆ ಎಲ್ಲಿಲ್ಲಿ ನಿಮ್ಮ ಪ್ರೀತಿ ಇದೆ, ಆ ಸೆಕ್ಟಾಗಳಿಗೆ ಸ್ವಲ್ಪ ಹೆಚ್ಚಿಗೆ ಹೋಗಿದೆ, ಉದಾಹರಣೆಗೆ ಕೆ.ಎಸ್.ಆರ್.ಟಿ.ಸಿ ಕೆ.ಎಂ.ಎಫ್.ಆದರೊಳಗೂ ಈ ಸಾರಿ 3 ಕೋಟಿ ರೂಪಾಯಿ 5 ಕೋಟಿ ರೂಪಾಯಿ ಹೆಚ್ಚಾಗಿದೆ, ರೇವಣ್ಣನವರ ಇಲಾಖೆಗೆ ಸ್ವಲ್ಪ ಹೆಚ್ಚಿಗೆ ಕೊಟ್ಟಿರುತ್ತೀರಿ ಇಲ್ಲ ಎಂದು ಹೇಳುವುದಿಲ್ಲ. ಪ್ರೀತಿ ಇದ್ದಂಥ ಕೆಲವು ಸೆಕ್ಟರ್‌ಗಳಿಗೆ ಸ್ವಲ್ಪ ಹೆಚ್ಚಿಗೆ ಇಡುತ್ತೀರೆಂದು ಹೇಳಿದೆ.

ಶ್ರೀ ಸಿದ್ಧರಾಮಯ್ಯ : ಅನಿಮಲ್ ಹಸೆಟೆಂಡರಿಯಲ್ಲಿ ಹೆಚ್ಚಾಗಿರುವುದು, ಏಕೆಂದರೆ 200 ಪಶುವೈದ್ಯಕೀಯ ಆಸ್ಪತ್ರೆಗಳನ್ನು ಕೊಡುತ್ತಾ ಇದ್ದೇವೆ. ಆದರಿಂದ ಜಾಸ್ತಿಯಾಗಿಯೇ ಹೊರತು ಇದು ಪ್ರೀತಿಗೋಸ್ಕರ ದುಡ್ಡು ಖರ್ಚುಮಾಡುವುದಿಲ್ಲ. ಪ್ರೀತಿಗೆಲ್ಲಾ ಖರ್ಚು ಮಾಡುವುದು ಮನೆಗೆ ಕರೆದುಕೊಂಡು ಹೋಗಿ ಒಬ್ಬಟ್ಟು ಮತ್ತು ಮಾಂಸದ ಊಟ ಹಾಕುವುದು ಇರುತ್ತದೆ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ತಪ್ಪು ತಿಳಿದುಕೊಂಡಿದ್ದೀರಿ, ನಾನು ಪ್ರೀತಿ ಎಂದು ಹೇಳಲಿಲ್ಲ, ಪ್ರೀತಿ ಇರುವ ಕಡೆ ಸ್ವಲ್ಪ ಹೆಚ್ಚಿಗೆ ಕೊಟ್ಟಿದ್ದೀರೆಂದು ಹೇಳಿದೆ.

ಶ್ರೀ ಸಿದ್ಧರಾಮಯ್ಯ : ಹಾಗೇನಿಲ್ಲ, ರಾಜ್ಯದ ಅಭಿವೃದ್ಧಿ ನೋಡಿಕೊಂಡು ಸಮತೋಲನವಾಗಿ ಖರ್ಚು ಮಾಡತಕ್ಕಂಥದ್ದು, ಅಲೋಕೇಷನ್ ಮಾಡತಕ್ಕಂಥದ್ದು ಇದು. ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಯಾವ ಇಲಾಖೆಗೆ ಮಾಡಬೇಕು, ಯಾವ ಇಲಾಖೆಗೆ ಖರ್ಚು ಮಾಡಬಾರದು ಎಂದು ವಿಚಾರ ಮಾಡಬೇಕೇ ಹೊರತು ಪ್ರೀತಿ, ವಿಶ್ವಾಸ, ಸ್ನೇಹ ಅವೆಲ್ಲಾ ಬರುವುದಿಲ್ಲ. ರಾಜ್ಯದ ಹಿತ ಬಹಳ ಮುಖ್ಯ. ಆ ದೃಷ್ಟಿ ಇಟ್ಟುಕೊಂಡು ಮಾಡಿರತಕ್ಕಂಥದ್ದು. ಹಾಗಾದರೇ ನೀರಾವರಿಗೆ ಹೆಚ್ಚು ಮಾಡಿದ್ದೇವೆ ಅದು ಕಮ್ಮಿ ಅಂತಾನೆ? 27.35 ನೀರಾವರಿಗೆ ಖರ್ಚು ಮಾಡುತ್ತಿದ್ದೇವೆ. ಅದು ಯಾರ ಸ್ನೇಹಕ್ಕೋಸ್ಕರ ಮಾಡಿರುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 1120 ಕೋಟಿ ರೂಪಾಯಿಗಳನ್ನು ಹೋದ ಸಲ ಕೊಟ್ಟಿದ್ದೀರಿ. ಈ ಸಾರಿ 1120 ಕೋಟಿ ರೂಪಾಯಿ ಪ್ರಾಜೆಕ್ಟ್ ಮಾಡಿದಿರಿ. 10 ಪರ್ಸೆಂಟ್ ಇನ್‌ಫ್ಲೇಷನ್ ಇಲ್ಲ, ನಿಮ್ಮ ಪ್ರಕಾರ 8 ಪರ್ಸೆಂಟ್ ಹಿಡಿದರೂ ಕೂಡ ಕಡಿಮೆ ಆಗುತ್ತದೆ, ಅದು ಹೆಚ್ಚಿಗೆ ಏನೂ ಆಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ ಒಂದು ಕಡೆ ತೆರಿಗೆ ಹಾಕುವಂತಿಲ್ಲ, ಕರ್ನಾಟಕ ರಾಜ್ಯ ಹೈಯಸ್ಟ್ ಟ್ಯಾಕ್ಸ್ ಸ್ಟೇಟ್ ಎಂದು ಹೇಳುತ್ತಾರೆ. ಹಾಗಾದರೆ, ಟ್ಯಾಕ್ಸ್ ಎಲ್ಲಿ ಹಾಕುತ್ತೀರಿ? ಯಾರಿಗೆ ತೆರಿಗೆ ಹಾಕುತ್ತೀರಿ? ಆಗುವುದಿಲ್ಲ. ನಿಜ ಹೇಳುತ್ತೇನೆ, ತೆರಿಗೆ

ಸೋರಿ ಹೋಗುವುದನ್ನು ತಪ್ಪಿಸಬೇಕು. ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಒಂದು ವರ್ಷದಲ್ಲಿ ಎರಡು ವರ್ಷದಲ್ಲಿ ಇದು ನಿಂತು ಹೋಗುತ್ತದೆ ಎನ್ನುವುದು ಕಷ್ಟ. ಏಕೆಂದರೆ ನಮ್ಮ ವ್ಯವಸ್ಥೆ ಹಾಗೆ ಇದೆ. ನಮ್ಮ ಈಗಿನ ವ್ಯವಸ್ಥೆ ಏನಿದೆ ಅದನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಅದೇ ಅಧಿಕಾರಿಗಳ ಮೂಲಕ ಇರತಕ್ಕಂಥ ವ್ಯವಸ್ಥೆ ಮೂಲಕ ತೆರಿಗೆ ಸೋರುವುದನ್ನು ಕಡಿಮೆ ಮಾಡುವಂಥೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ, ಹಾಗೆಂದು ತೆರಿಗೆ ಕೊಡುವವರ ಮುಲಾಜಿಗೆ ಒಳಗಾಗಿದ್ದೇವೆ ಅಥವಾ ಇನ್ನಾರದೋ ಮುಲಾಜಿಗೆ ಒಳಗಾಗಿದ್ದೇವೆ ಎನ್ನತಕ್ಕಂಥ ಪ್ರಶ್ನೆಯೇ ಇಲ್ಲ. ನಾವು ಎದೆ ತಟ್ಟಿ ಹೇಳುತ್ತೇವೆ. ಯಾವ ಲಾಭಿ ಇರಬಹುದು ಹೆಂಡದ ಲಾಭಿ ಇರಬಹುದು, ಇನ್ನಾವುದೋ ತೆರಿಗೆ ಕೊಡುವವರ ಲಾಭಿ ಇರಬಹುದು, ಯಾವುದೇ ಲಾಭಿ ಇರಲಿ ಅದಕ್ಕೆ ಒಳಗಾಗುವ ಪ್ರಶ್ನೆಯೇ ಇಲ್ಲ. ನಾವು ಇಲ್ಲಿಯವರೆಗೆ ಎರಡುವರೆ ವರ್ಷಗಳ ಕಾಲ ಅಧಿಕಾರ ಮಾಡಿದ್ದೇವೆ ಯಾವುದಾದರೊಂದು ಸ್ಕ್ಯಾಂಡಲ್‌ಗೆ ಈ ಸರ್ಕಾರ ಸಿಕ್ಕಿ ಹಾಕಿಕೊಂಡಿದೆಯೇ ಎಂಬುದನ್ನು ಹೇಳಿ ನೋಡೋಣ? ಸುಮ್ಮನೇ ಏನೋ ಆರೋಪ ಮಾಡಬೇಕು, ಆರೋಪ ಮಾಡುವುದು ಅದು ಬೇರೆ ಪ್ರಶ್ನೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆರೋಪ ಅಂದರೆ ಇದೇ ಆರೋಪ, ಏನು ಅಂದರೆ, ಸೆಕೆಂಡ್ಸು ಬಹಳಷ್ಟು ಹೋಗುತ್ತಿದೆ.

ಶ್ರೀ ಸಿದ್ಧರಾಮಯ್ಯ : ನಿಮ್ಮ ಕಾಲದಲ್ಲಿ ಇರಲಿಲ್ಲವಾ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಯಾರ ಕಾಲದಲ್ಲಿ ಎಂದರೆ, ಅಬಕಾರಿಯಿಂದ ನೀವು ಇವತ್ತು ಏನು ತೆರಿಗೆ ಅಪೇಕ್ಷೆಮಾಡಿದ್ದೀರಿ, ಅದಕ್ಕಿಂತ ಹೆಚ್ಚು ಹಣ ಬರಬೇಕಲ್ಲಾ. ಅಬ್ಕಾರಿಯಲ್ಲಿ ಜಾಸ್ತಿ ಸೋರಿ ಹೋಗತಕ್ಕಂಥದ್ದು, ಅದನ್ನು ತಡೆಗಟ್ಟುವಂತಹ ವಿಧಾನ ಏನು ಇತ್ತು, ಸೇಲ್ಸ ಇಂಟರ್‌ನ್ಯಾಷನಲ್‌ಗೆ ನಮ್ಮ ಸೋಲ್ ಏಜೆಂಟ್ ಮಾಡಿಕೊಟ್ಟರೆ ಇದಕ್ಕಿಂತ ಹೆಚ್ಚಿನ ಹಣ ಬರುತ್ತದೆ ಅದನ್ನು ಮಾಡಿ ಎಂದು ಹಿಂದೆ ಕಾನೂನು ಕೂಡ ಮಾಡಿದ್ದೇವೆ. ಈ ರೂಲ್ಸ್ ಎಲ್ಲವನ್ನೂ ಇವತ್ತು ಅಮೆಂಡ್‌ಮೆಂಟ್ ಮಾಡಿ ನಿಮಗೆ ಬೇಕಾದವರಿಗೆ ಕೊಡುವುದಕ್ಕೋಸ್ಕರ ಇವತ್ತಿನ ದಿವಸ ಪುನಃ ಅದನ್ನು ರಿಲ್ಯಾಕ್ಸ್ ಮಾಡಿದ್ದೀರಿ. ಅಮೇಲೆ ಸಾಜೆಟ್ಸ್ ತೆಗೆದು ಬಾಟ್ಲಿಂಗ್ ಇಂಟ್ರಡ್ಯೂಸ್ ಮಾಡಿದಿರಿ, ಇವೆಲ್ಲವೂ ಕೂಡ ಏನಾಗುತ್ತದೆ ಎಂದರೆ ಸೋರುವುದಕ್ಕೆ ಅವಕಾಶವಾಗುತ್ತದೆ. ನಿಮಗೆ ಧೈರ್ಯ ಇದ್ದರೆ ಹೇಳಿ ಅಂದರೆ ಇದೇ ಈ ಧೈರ್ಯ ನಮಗೆ ಇರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಈ ಜವಾಬ್ದಾರಿ ಸ್ಥಾನದಲ್ಲಿ ನಿಂತು ಒಂದು ಆರೋಪ ಮಾಡಿದ್ದೆ. ಸದನದಲ್ಲಿ ರೇಕಾರ್ಡ್ ಇದೆ, ಏನೆಂದರೆ ಹಿಂದೆ ಎಕ್ಸೈಜ್‌ನಲ್ಲಿ ಸೆಕೆಂಡ್ಸ್ ಎಂದು ಇತ್ತು, ಈಗ ಅದು ಥರ್ಡ್ಸ್ ಎಂದು ಆಗಿದೆ. ಆ ಬಾಟಲ್ ಮೇಲೆ ಹಾಕುವಂಥ ನಿಮ್ಮ ಸರ್ಕಾರಿ ಲೇಬಲ್‌ಗಳು ಏನಿದೆ, ಟ್ಯಾಕ್ಸ್ ಲೇಬಲ್‌ಗಳು ಏನಿದೆ ಇವತ್ತು ಕೋಟ್ಯಾಂತರ ರೂಪಾಯಿ ಥರ್ಡ್ಸ್ ಲೋಟಿ ನಡೆಯುತ್ತಿದೆ, ಎಂದು ಹೇಳಿದ್ದೆ. ನಿಮ್ಮ ಕಸ್ಟಡಿಯಲ್ಲಿರ ಬೇಕಾದಂಥ ರಿಸೀಟ್ಸ್ ನನ್ನ ಕೈಲಿತ್ತು. ನಾನು ಪ್ರಕಟ ಮಾಡಿದೆ ಅದು ಪತ್ರಿಕೆಯಲ್ಲಿ ಬಂತು. ನಿಮ್ಮ ಅಧಿಕಾರಿಗಳು ಯಾರೂ ನಮ್ಮನ್ನು ಬಂದು ಕೇಳಲಿಲ್ಲ. ನಿಮ್ಮ ಎಕ್ಸೈಜ್ ಕಮೀಷನರ್ ಬಂದು ಕೇಳಲಿಲ್ಲ. ಅದು ಡೂಪ್ಲಿಕೇಟ್ ಇರಬಹುದೆಂದು ಇನ್ನೊಂದು ತರಿಸಿಬಿಟ್ಟು ನಾನು ಹೇಳಿದ್ದೇನೆ. ತಾವು ಉತ್ತರ ಹೇಳುವ ಸಮಯದಲ್ಲಿ ದಯಮಾಡಿ ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿಸಿ ಅಥವಾ ಹೈಕೋರ್ಟ್‌ನ ಸಿಟ್ಟಿಂಗ್ ಜಡ್ಜ್‌ರವರಿಂದ ತನಿಖೆ ಮಾಡಿಸಿ. ನಾನು ಪ್ರೂವ್ ಮಾಡದಿದ್ದರೆ, ಇಲ್ಲಿ ಕುಳಿತುಕೊಳ್ಳುವುದಿಲ್ಲ. ಸದನ ಮುಗಿದ ಮೇಲೆ ಹತ್ತು ನಿಮಿಷ ಹೊರಗೆ ಬನ್ನಿ ಎಲ್ಲಿ ನೋಡಿದರೂ ಈ ಲೇಬಲ್ ಹಚ್ಚಿರುವ ಥರ್ಡ್ಸ್ ಬೆಂಗಳೂರಿನಲ್ಲಿ ಇವತ್ತು ಎಲ್ಲಾ ಕಡೆ ಮಾರಾಟವಾಗುತ್ತಿದೆ. ನನ್ನ ಒಂದು ಅಂದಾಜಿನ ಪ್ರಕಾರ ಈ ಇಲಾಖೆಯಲ್ಲಿ 500 ಕೋಟಿ ರೂಪಾಯಿ ಹೆಚ್ಚು ವರಮಾನ ನಿಮಗೆ ಬರಬಹುದು.ಈ ಥರ್ಡ್ಸ್ ಬಂದು ಲೂಟಿ ನಡೆಯುತ್ತಿರುವುದು ನಿಮ್ಮ ಸರ್ಕಾರಕ್ಕೆ ಗೊತ್ತಿಲ್ಲವೋ ನಿಮ್ಮ ಅಧಿಕಾರಿಗಳಿಗೆ ಗೊತ್ತಿಲ್ಲವೇ? ಇಂಥ ವ್ಯವಹಾರ ನಿಮಗೆ ಗೊತ್ತಿಲ್ಲದೇ ನಡೆಯುತ್ತಾ ಇವೆಯೇ? ಇಲ್ಲಾ ಎಂದು ಹೇಳಿ, ನಾನು ಪ್ರೂವ್ ಮಾಡಿ ತೋರಿಸುತ್ತೇನೆ. ಇದು ಸರಿ ಇಲ್ಲ ಎಂದು ಹೇಳಿ, ನಾನು ನನ್ನ ಚಾರ್ಜಿಸ್‌ನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ : ಸರ್ಕಾರಕ್ಕೆ ತೆರಿಗೆ ಬರುವ ಕಡೆ ಮೋಸ ಮಾಡುವಂಥವರು ಯಾರೇ ಅಧಿಕಾರಿ ಇರಲಿ, ಯಾವುದೇ ವ್ಯಕ್ತಿ ಇರಲಿ, ಅಥವಾ ಯಾವುದೇ ವ್ಯಕ್ತಿಗಳ ಗುಂಪು ಇರಲಿ ಅವರ ಬಗ್ಗೆ ನೀವು ನನ್ನ ಗಮನಕ್ಕೆ ತಂದಿರಿ..

ಶ್ರೀ ಬಿ. ಎಸ್. ಯಡಿಯೂರಪ್ಪ : ಹಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಸಿದ್ಧರಾಮಯ್ಯ : ಅವರ ಮೇಲೆ ಕೇಸ್ ಹಾಕಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಕೇಸ್ ಹಾಕಿದ್ದರೆ ಇದು ಬಗೆ ಹರಿಯುತ್ತದೆಯೆ? ಎಕ್ಸೈಜ್ ಅಧಿಕಾರಿಗಳೇ ಶಾಮಿಲಾಗಿ ಆ ಡಿಸ್ಟಲರಿಯಲ್ಲಿ ಇದ್ದುಕೊಂಡು ಜವಾಬ್ದಾರಿಯಿಂದ ನಾವು ಆರೋಪ ಮಾಡಿದಾಗ ದಾಖಲೆ ಕಳುಹಿಸಿ ಕೊಡಿ, ನೋಡೋಣ ಎಂದು ಹೇಳಬೇಕಲ್ಲಾ.

ಶ್ರೀ ಸಿದ್ಧರಾಮಯ್ಯ : ಕೊಡಿ, ಅದನ್ನು ಎನ್‌ಕ್ವೈರಿ ಮಾಡುತ್ತೇವೆ, ನಾವು ಉತ್ತರ ಕೊಡುವುದಕ್ಕೆ ಮುಂಚೆ ಕೊಡಿ, ನಾವು ಇನ್ನೂ ಉತ್ತರ ಕೊಡಲು ಅಲ್ಲಿಗೆ ಬಂದಿಲ್ಲ...

ಶ್ರೀ ಬಿ. ಎಸ್. ಯಡಿಯೂರಪ್ಪ : ಆರು ತಿಂಗಳು ಹಿಂದೆ ಆರೋಪ ಮಾಡಿ ಎಲ್ಲಾ ವಿವರ ಕೊಟ್ಟಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಅದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನನ್ನ ಅಂದಾಜಿನ ಪ್ರಕಾರ ಆ ಒಂದೇ ಇಲಾಖೆಯಲ್ಲಿ 1000 ಕೋಟಿ ರೂಪಾಯಿ ಹೆಚ್ಚಿಗೆ ತೆರಿಗೆ ವಸೂಲಿ ಮಾಡಬಹುದು, ಇದರಲ್ಲಿ ಲೂಟಿ ನಡೆಯುತ್ತಿದೆ, ನೀವು ಯಾವುದೇ ಲಾಭಿಗೆ ಒಳಗಾಗುವುದಿಲ್ಲ ಎಂದು ಹೇಳಿ, ಇದಕ್ಕೆ ನೀವು ರಾಜಾರೋಷವಾಗಿ ಅವಕಾಶ ಕೊಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಎಕ್ಸೈಜ್ ಬಗ್ಗೆ ಮಾತನಾಡುವಾಗ ಅದರ ಬಗ್ಗೆ ಉತ್ತರ ಕೊಡುತ್ತೇನೆ. ನಾನು ಡಿಸ್ಸೈ ಮಾಡುತ್ತಾ ಇಲ್ಲ ಆ ರೀತಿ ಆಗಿರುವುದು ನಿಜ ಲೂಟಿ ನಡೆದಿರುವುದು ನಿಜ, ಹೌದು, ಕೇಸ ಹಾಕಿದ್ದೇವೆ, ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಸ್.ಯಡಿಯೂರಪ್ಪ : ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಸಿದ್ಧರಾಮಯ್ಯ : ಯಾರ ಮೇಲೆ ಅಂದರೆ, ಎಲ್ಲಿ ಲೂಟಿ ನಡೆಯುತ್ತಿತ್ತು ಅಲ್ಲಿ. ಎಲ್ಲಿ ಯಾರು ಪ್ರಿಂಟ್ ಮಾಡಿದರು ಅವರ ಮೇಲೆ.

ಶ್ರೀ ಬಿ. ಎಸ್.ಯಡಿಯೂರಪ್ಪ : ಪ್ರತಿಯೊಂದು ಅಂಗಡಿಯಲ್ಲೂ ಇದು ಇದೆ. ಇಲಾಖೆಯವರೇ ಶಾಮಿಲಾಗಿರುವುದರಿಂದ ನೀವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, 4360 ಕೋಟಿ ರೂಪಾಯಿ ಯೋಜನೆ ಗುರಿಯನ್ನು ತಲುಪಲು ಯೋಚಿಸಿದ್ದೆವು. ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ ಕೆ.ಇ.ಬಿ. ಕೆ.ಎಸ್.ಆರ್.ಟಿ.ಸಿ ಗಳಿಗೆ ಸಬ್ಸಿಡಿ ಕೊಡಬೇಕಾದ ಪರಿಸ್ಥಿತಿ ಬಂದಿರುವುದು ಎಕ್ಸ್‌ಟರ್‌ನಲ್ ಏಡೇಡ್ ಪ್ರಾಜೆಕ್ಟಗಳಲ್ಲಿ ಎಷ್ಟು ಹಣ ಬಳಸಬೇಕೋ ಅಷ್ಟು ಹಣ ಮಾಡಿಕೊಳ್ಳಲು ಆಗದಿದ್ದರಿಂದ ಕಡಿಮೆಯಾಗಿದೆ. ಮತ್ತು ಎಲ್ಲಾ ವರ್ಷಗಳಲ್ಲಿ ಕಡಿಮೆಯಾಗಿದೆ. 1990ರಿಂದ ತೆಗೆದುಕೊಂಡರೂ ಅದಕ್ಕಿಂತ ಹಿಂದಿನ ವರ್ಷ ತೆಗೆದುಕೊಂಡರೂ ಎಲ್ಲ ವರ್ಷಗಳಲ್ಲಿ ಕೂಡ ಯೋಜನಾ ಗುರಿಯನ್ನು ತಲುಪಿರತಕ್ಕಂಥ ನಿದರ್ಶನಗಳು, ಅಲ್ಲಿ ಇಲ್ಲಿ ಒಂದು ಎರಡು ಯೋಜನಾ ಗುರಿಯನ್ನು ತಲುಪಿರತಕ್ಕಂಥ ನಿದರ್ಶನಗಳು, ಅಲ್ಲಿ ಇಲ್ಲಿ ಒಂದು ಎರಡು ವರ್ಷಗಳಲ್ಲಿ ಇರಬಹುದು. ಎಲ್ಲಾ ಕಾಲದಲ್ಲೂ ಕೂಡ ಯೋಜನಾ ಗುರಿ ತಲುಪದೇ

ಇರತಕ್ಕಂಥ ನಿದರ್ಶನಗಳನ್ನೇ ನಾವು ಹೆಚ್ಚು ಕಾಣುತ್ತಿರುವುದರಿಂದ, 92 ಪರ್ಸೆಂಟ್ ಒಟ್ಟು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಗುರಿಯನ್ನು ತಲುಪಿರುತ್ತೇವೆ. ಕೆಲವು ರಾಜ್ಯಗಳಲ್ಲಿ ನಾವೂ ಒಬ್ಬರು ಅನ್ನತಕ್ಕಂಥ ಮಾತನ್ನು ಹೇಳುತ್ತಾ ಪ್ಲಾನಿನಲ್ಲಿ ತಲಾ ಖರ್ಚು ಮಾಡತಕ್ಕಂಥ ನಾವು ಎರಡನೇ ಸ್ಥಾನದಲ್ಲಿದ್ದೇವೆ. ಕಾವೇರಿಗೆ ಖರ್ಚು ಮಾಡತಕ್ಕಂಥ ಹಣದಲ್ಲಿ ನಾವು ಮೊದಲನೇ ಸ್ಥಾನಕ್ಕೆ ಹೋಗುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ ನೀರಾವರಿ ಬಗ್ಗೆ ಮುಂದಿನ ವರ್ಷದ ಪ್ಲಾನ್‌ನಲ್ಲಿ 4545 ಕೋಟಿ ರೂಪಾಯಿಗೆ ನಿಗದಿ ಮಾಡಿರುತ್ತೇವೆ. ಪ್ಲಾನಿಂಗ್ ಕಮೀಷನ್ ಮುಂದೆ 4130 ಕೋಟಿ ರೂಪಾಯಿಗೆ ಒಪ್ಪಿಗೆಯಾಗಿತ್ತು, ಆದರೆ ಕೆಲವು ಇಲಾಖೆಗೆ ಹೆಚ್ಚು ಕಾರ್ಯಕ್ರಮವನ್ನು ಮಾಡಬೇಕಾಗಿ ಬಂದಿರುವುದರಿಂದ 4545 ಕೋಟಿ ರೂಪಾಯಿಗಳನ್ನು ನೀರಾವರಿ ನಿಗಧಿ ಮಾಡಿರುತ್ತವೆ. ಇದರಲ್ಲಿ ಸುಮಾರು 3 ಸಾವಿರ ಕೋಟಿ ರೂಪಾಯಿ ಬಜೆಟ್ ಸಪೋರ್ಟ್, 1480 ಕೋಟಿ ರೂಪಾಯಿಗಳು ಇಂಟರ್‌ನಲ್ ರಿಸೋರ್ಸ್‌ನಿಂದ ಮೋಬಲೈಸ್ ಮಾಡತಕ್ಕಂಥದ್ದು ನನಗೆ ಈ ಸಲ ಭರವಸೆ ಇದೆ, ಎಲ್ಲಾ ನಾನು ಈ ಯೋಜನೆ..

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ಸ್ವಲ್ಪ ಸಹಕರಿಸಬೇಕು. ಪರಸ್ಪರ ಮಾತುಕತೆ ಸದಸ್ಯರುಗಳಲ್ಲಿ ಬಹಳ ಹೆಚ್ಚಾಗಿದೆ. ಮಾನ್ಯ ಉಪ ಮುಖ್ಯ-ಮಂತ್ರಿಗಳು ಬಡ್ಜೆಟ್ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುವಾಗ ಸಹಕರಿಸದೇ ಹೋದರೆ ಸರಿಯಲ್ಲ. ಆ ಕಡೆಯವರು ಗಂಭೀರವಾಗಿ ಕೇಳುತ್ತಿದ್ದಾರೆ. ಈ ಕಡೆಯವರೇ ಪರಸ್ಪರ ಮಾತುಕತೆ ಆಡುತ್ತಿದ್ದರೆ.

ಶ್ರೀ ಸಿದ್ಧರಾಮಯ್ಯ : 4545 ಕೋಟಿ ಏನು ಮಾಡಿದ್ದೇವೆ, ಅದಕ್ಕೆ ರಿಸೋರ್ಸಸ್ ಮೋಬಿಲೈಸೇ ಮಾಡುತ್ತೇವೆಂದು ಗುರಿ ಇಟ್ಟುಕೊಂಡಿದ್ದೇವೆ ಆ ಗುರಿಯನ್ನು ತಲುಪುತ್ತೇವೆ ಎಂಬ ಭರವಸೆ ನಮಗೆ ಇದೆ. ಮುಂದಿನ ವರ್ಷ ಅದನ್ನು ತಲುಪೇ ತಲುಪುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರಾಕ್ಟಿಕಲ್ ಆಗಿ ಹೇಳಿ. 4150 ಕೋಟಿ ಕೊಡುವುದಕ್ಕೆ ಆಗಿಲ್ಲ. ಗುರಿ ಜಾಸ್ತಿ ಇಟ್ಟುಕೊಂಡು ಎಕ್ಸೈಸ್‌ನಲ್ಲಿ ಸೂರುತ್ತಿದೆ. ನಾವು ಟೀಕೆ ಮಾಡಿದ ಮೇಲೆ ಸ್ವಲ್ಪವಾದರೂ ನಾವು ಮುಚ್ಚಿದ್ದೇವೆ. ಆದರೆ ನೀವು ಪೂರ್ತಿ ದೊಡ್ಡ ತೂತು ಮಾಡಿಕೊಂಡರೆ ಕಷ್ಟ.

ಶ್ರೀ ಸಿದ್ಧರಾಮಯ್ಯ : ಪ್ರಾಕ್ಟಿಕಲ್ ಆಗಿಯೇ ಹೇಳುತ್ತಿದ್ದೇನೆ. ಕೆ.ಇ.ಬಿ.ಯಲ್ಲಿ ಫೇರ್ ರಿವಿಜನ್ ಆಗಿದೆ. ಅದನ್ನು ಸುಧಾರಣೆ ಮಾಡಬೇಕೆಂದು ಹೊರಟಿದ್ದೇವೆ. ಖಾಸಗಿಬಂಡವಾಳ ಹೊಡಬೇಕೆಂಬ ಪ್ರಯತ್ನ ಮಾಡಿದ್ದೇವೆ. ಕೆ.ಎಸ್.ಆರ್.ಟಿ.ಸಿ ಯಲ್ಲಿ ಫೇರ್ ರಿವಿಜನ್ ಆಗಿದೆ. ಅದಕ್ಕೆ ತೆರಿಗೆ ಕೊಡುತ್ತಾರೆ. ಮೋಟಾರು ವೆಹಿಕಲ್ ತೆರಿಗೆ

ಕೊಡುತ್ತಾರೆ. ನಾವು ಅವರಿಗೆ ಸಬ್ಸಿಡಿ ಕೊಡಬೇಕಾದ ಪ್ರಮೇಯ ಬರುವುದಿಲ್ಲ. ಯೋಜನೆಗೆ ಖರ್ಚು ಮಾಡಬೇಕಾದಂತಹ ಹಣ ನಾನ್ ಪ್ಲಾನ್‌ಗೆ ಏನು ಖರ್ಚಾಗುತ್ತಿತ್ತು ಅದು ಮುಂದಿನ ವರ್ಷ ಉದ್ಭವವಾಗುವುದಿಲ್ಲ. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಈ ವರ್ಷ ಗುರಿ ತಲುಪಿದ್ದೇವೆ. ಮುಂದಿನ ವರ್ಷ 4850 ಕೋಟಿ ಎಂದು ಗುರಿ ಇಟ್ಟುಕೊಂಡಿದ್ದೇವೆ. ಅದನ್ನೂ ತಲುಪುತ್ತೇವೆ ಅದಕ್ಕಿಂತ ಮುಂದೆ ಹೋಗುತ್ತೇವೆಂಬ ಭರವಸೆ ನಮಗೆ ಇದೆ. ಸರಳೀಕರಣ, ರಿಫಾರ್ಮ್ಸ್ ಮಾಡಿರುವುದರಿಂದ ಬಯಾನ್ಸಿ ಜಾಸ್ತಿಯಾಗುತ್ತದೆ. ಅದರಿಂದ ನಮಗೆ ಹೆಚ್ಚು ತೆರಿಗೆ ಬರುತ್ತದೆ. ನಾವೇನು ಗುರಿಯನ್ನು ಕಳೆದ ಎರಡು ವರ್ಷಗಳಲ್ಲಿ ಇಟ್ಟುಕೊಂಡಿದ್ದೆವು ಆ ಗುರಿ ತಲುಪಿದ್ದೇವೆ. 1995-96ರಲ್ಲಿ 3500 ಕೋಟಿ ಗುರಿ ಇಟ್ಟುಕೊಂಡಿದ್ದೆವು ಆ ಗುರಿ ತಲುಪಿದ್ದೇವೆ. 4200 ಕೋಟಿ ಇಟ್ಟುಕೊಂಡಿದ್ದೇವೆ ಅದನ್ನು ತಲುಪುತ್ತೇವೆ. ನಾವು ಆ ಗುರಿಯನ್ನು ತಲುಪೇ ತಲುಪುತ್ತೇವೆಂಬ ಆತ್ಮ ವಿಶ್ವಾಸದಿಂದ ಹೇಳುತ್ತಿದ್ದೇನೆ. ಮುಂದಿನ ವರ್ಷವೇನು ಗುರಿಇಟ್ಟುಕೊಂಡಿದ್ದೇವೆ ಅದನ್ನು ತಲುಪುತ್ತೇವೆ. 960 ಕೋಟಿ ಇದ್ದು ಅದರಲ್ಲಿ 150 ಕೋಟಿ ಕಡಿಮೆಯಾಗುತ್ತದೆ. ಸುಮಾರು 800 ಕೋಟಿ ತಲುಪುತ್ತೇವೆ. ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ 650 ಕೋಟಿ ಗುರಿ ಇಟ್ಟುಕೊಂಡಿದ್ದೇವೆ. ಅದನ್ನು ತಲುಪುತ್ತೇವೆ. ಕಳೆದ ವರ್ಷ 692 ಕೋಟಿ ಇಟ್ಟುಕೊಂಡಿದ್ದೆವು. ಆದರೆ ಬೆಲೆ ಎಲ್ಲಾ ಕಡಿಮೆಯಾಯಿತು. ನಂತರ 540 ಕೋಟಿಗೆ ಎಂದು ರಿವೈಸ್ಡ್ ಗುರಿ ಅವರಿಗೆ ಕೊಟ್ಟೆ. ಅದರ ಮೇಲೆ 10 ಪರ್ಸೆಂಟ್ ಎಂದರೂ 650 ಕೋಟಿಯಷ್ಟು ಮುಂದಿನ ಸಾರಿ ತಲುಪುತ್ತೇವೆ. ಸ್ಟ್ಯಾಂಪಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ 30 ಕೋಟಿ ಜಾಸ್ತಿ ಬರುತ್ತದೆ. ಮುಂದಿನ ರಿಸೋರ್ಸಸ್ ಅನ್ನು ಮೊಬಿಲೈಸ್ ಮಾಡುವುದರಲ್ಲಿ ನಾವು ಗುರಿ ತಲುಪುತ್ತೇವೆ. ಪ್ಲಾನ್ ಯೋಜನೆಯನ್ನು ಕೂಡ ಮುಟ್ಟುತ್ತೇವೆ. ನೀರಾವರಿ ಬಗ್ಗೆ ಕಳೆದ ವರ್ಷಕ್ಕಿಂತ ಈ ವರ್ಷ ಪ್ಲಾನ್‌ನಲ್ಲಿ 4545 ಕೋಟಿಯಲ್ಲಿ 27.35 ಪರ್ಸೆಂಟ್ ಅನ್ನು ನೀರಾವರಿಗೆ ಇಟ್ಟಿದ್ದೇವೆ. 1242 ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆ. ಹೋದ ವರ್ಷ ಪ್ಲಾನ್‌ನಲ್ಲಿ ಖರ್ಚು ಮಾಡಿದ್ದರೂ ಕೂಡ ಅಪ್ಪರ್ ಕೃಷ್ಣಾಗೇನೂ ಕೂಡ ಖರ್ಚು ಮಾಡಲಿಲ್ಲ. ಎಲ್ಲೆಲ್ಲಿ ಅಗತ್ಯ ಸೇವೆಗಳು ಇವೆ ಅಲ್ಲೆಲ್ಲೂ ಕೂಡ ಕಟ್ ಮಾಡಲಿಲ್ಲ. ಸೋಷಿಯಲ್ ಸೆಕ್ಟಾರ್‌ಗಳಿಗೆ ಎಲ್ಲೂ ಕೂಡ ಕಟ್ ಮಾಡಲಿಲ್ಲ. ಬೇರೆ ಕಡೆ ಅದನ್ನು ಕಟ್ ಮಾಡತಕ್ಕಂಥ ಕೆಲಸ ಮಾಡಿದ್ದೇವೆ. ಮಾನ್ಯ ಮೊಯಿಲಿಯವರು ನಾವು ಬಹಳ ಮಾಡಿದ್ದೆವು. ನೀವೇನೂ ಮಾಡಲಿಲ್ಲವೆಂದು ಹೇಳಿದರು. ಮೇಜರ್ ಅಂಡ್ ಮೀಡಿಯಮ್ ಇರಿಗೇಷನ್‌ನಲ್ಲಿ 90-91ರಲ್ಲಿ 467 ಕೋಟಿ 91-92ರಲ್ಲಿ 547 ಕೋಟಿ 92-93ರಲ್ಲಿ 4.75 ಕೋಟಿ 93-94ರಲ್ಲಿ 713 ಕೋಟಿ ಹೀಗೆ ಒಟ್ಟು 2204 ಕೋಟಿಯನ್ನು ಈ 4 ವರ್ಷಗಳಲ್ಲಿ ಆಗಿದೆ. ಅವರು ಲೆಕ್ಕ ಹಾಕಲಿ. ಮೈನರ್ ಇರಿಗೇಷನ್‌ಗೆ 31.59 37.37 ಕೋಟಿ 51.27,

84 ಕೋಟಿ13 ಲಕ್ಷ ಹೀಗೆ ಒಟ್ಟು 4 ವರ್ಷಗಳಲ್ಲಿ 204 ಕೋಟಿ ಆಗಿದೆ. ಯುಕೆಪಿ ಗೆ 90-91ರಲ್ಲಿ 81 ಕೋಟಿ 91-92ರಲ್ಲಿ 107 ಕೋಟಿ 92-93ರಲ್ಲಿ 155 ಕೋಟಿ 93-94ರಲ್ಲಿ 200 ಕೋಟಿ 1994-95ರಲ್ಲಿ 250 ಕೋಟಿ ಹೀಗೆ ಒಟ್ಟು 545 ಕೋಟಿಗಳನ್ನು ನಾಲ್ಕು ವರ್ಷಗಳಲ್ಲಿ ಕೊಟ್ಟಿದ್ದೇವೆ. 1994-95ರಲ್ಲಿ ನೀವು 9 ತಿಂಗಳು ಇದ್ದಿರಿ ನಾವು 4 ತಿಂಗಳು ಇದ್ದೆವು. 920 ಕೋಟಿ ಬಡ್ಜೆಟ್ ಪ್ರಾವಿಜನ್ ನೀರಾವರಿಗೆ ಇದ್ದುದ್ದು. 1994-95ರಲ್ಲಿ 920 ಕೋಟಿ 1995-96ರಲ್ಲಿ 1070 ಕೋಟಿ 1996-97ರಲ್ಲಿ 1335 ಕೋಟಿ 1997-98ಕ್ಕೆ 1445 ಕೋಟಿ ಇದರಲ್ಲಿ ಕಾವೇರಿ ಕೂಡ ಸೇರಿದೆ.

ಶ್ರೀ ಟಿ. ಬಿ. ಜಯಚಂದ್ರ : ಕೃಷ್ಣ ಜಲಭಾಗ್ಯ ನಿಗಮದಿಂದ ಹೊರತಾಗಿ ಬಡ್ಜೆಟ್ ಪ್ರಾವಿಜನ್ ಎಷ್ಟು? ಕೃಷ್ಣ ಜಲಭಾಗ್ಯ ನಿಗಮವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ. ಅದನ್ನು ಅಡಿಷನಲ್ ಆಗಿ ಇಟ್ಟುಕೊಳ್ಳಿ.

ಶ್ರೀ ಸಿದ್ಧರಾಮಯ್ಯ : ನಿಮ್ಮದರಲ್ಲೂ ಕಾವೇರಿ ಸೇರಿಕೊಂಡೇ ನಾನು ಹೇಳಿದ್ದು. ಅದನ್ನು ಏಕೆ ಲೆಕ್ಕಕ್ಕೆ ತೆಗೆದುಕೊಳ್ಳಬಾರದು, ಸಾಲ ವಾಪಸ್ ಕೊಡುವುದಲಿಲ್ಲವೇ? 150 ಕೋಟಿ ಬಡ್ಡಿ ಕೊಡಬೇಕು. 4780 ಕೋಟಿಯನ್ನು ಈ ಮೂರು ವರ್ಷದ ಬಡ್ಜೆಟ್ಟಿನಲ್ಲಿ ಇಟ್ಟಿರುವುದು. ಅವರು ಇಟ್ಟಿದ್ದು ನಾಲ್ಕು ವರ್ಷಗಳಲ್ಲಿ 2204 ಕೋಟಿ. ಹತ್ತು ಪರ್ಸೆಂಟ್ ಇನ್‌ಫ್ಲೇಷನ್ ಹಾಕಿ ಕೊಳ್ಳೋಣ. 2220 ಕೋಟಿ ಜಾಸ್ತಿಯಾಗುತ್ತದೆ.

ಶ್ರೀ ವೈ ರಾಮಕೃಷ್ಣ : ಇನ್‌ಫ್ಲೇಷನ್ ಇರಬಹುದು. ಈಗ ರೂಪಾಯಿಯ ವ್ಯಾಲ್ಯು ಎಷ್ಟಾಗಿದೆ?

ಶ್ರೀ ಸಿದ್ಧರಾಮಯ್ಯ : ಅವರಿಗಿಂತ ಎರಡರಷ್ಟು ಹಣವನ್ನು ನೀರಾವರಿಗೆ ತೊಡಗಿಸಿದ್ದೇವೆ. ಅವರು 1990-91ರಲ್ಲಿ 80 ಕೋಟಿ ಖರ್ಚು ಮಾಡಿದ್ದರೆ ನಾವು 1994-95ರಲ್ಲಿ 346 ಕೋಟಿ ಖರ್ಚು ಮಾಡಿದ್ದೇವು. 1995-96ರಲ್ಲಿ 500 ಕೋಟಿ 96-97ರಲ್ಲಿ 760 ಕೋಟಿ ಇಟ್ಟಿದ್ದೇವೆ. ಈ ವರ್ಷದಲ್ಲಿ ಇದರಲ್ಲಿ 700 ಕೋಟಿ ಖರ್ಚು ಮಾಡಿದ್ದೇವೆ. ಎರಡು ವರ್ಷಗಳಲ್ಲಿ 1994-95ರಲ್ಲಿ ಒಟ್ಟು ಯು.ಕೆ.ಪಿ ಗೆ ಖರ್ಚಾದಂತಹ ಹಣ 1360 ಕೋಟಿ ಇದು 1965 ರಿಂದ ನಾವು ಎರಡು ವರ್ಷದಲ್ಲಿ 1200 ಕೋಟಿ ಖರ್ಚು ಮಾಡಿದ್ದೇವೆ. ನಾವು ಅವರಿಗಿಂತ ಹಿಂದೆ ಬಿದ್ದಿದ್ದೇವೆಯೇ, 1200 ಕೋಟಿ ಎರಡು ವರ್ಷದಲ್ಲಿ ಖರ್ಚು ಮಾಡಿದರೆ ನಾವು ನೀರಾವರಿಗೆ ಅಲಕ್ಷ್ಯ ಮಾಡಿದ್ದೇವೆಂದು ಹೇಳುತ್ತಾರೆ. ನ್ಯಾಯವಾಗಿ ನೀವು ಈ ಸರಕಾರಕ್ಕೆ ಅಭಿನಂದಿಸಬೇಕು. ರಾಜೀನಾಮೆ ನಾವು ಕೊಡಬೇಕಂತೆ! ಎರಡು ವರ್ಷದಲ್ಲಿ 1200 ಕೋಟಿ ಖರ್ಚು ಮಾಡಿ ರಾಜೀನಾಮೆ ಕೊಡಬೇಕೇ? ಕೃಷ್ಣ ಜಲಭಾಗ್ಯ

ನಿಗಮವನ್ನು ನಾವು ಹುಟ್ಟು ಹಾಕಿದ್ದೆವು ಎಂದು ಹೇಳುತ್ತೀರಿ. ಅದಕ್ಕೆ ಹಣ ಎತ್ತಿದವರು ಯಾರು ಖರ್ಚು ಮಾಡುವವರು ಯಾರು? ಮೊಯಿಲಿಯವರು ನಾನು ಇದ್ದಾಗ ಕರ್ನಾಟಕ ರಾಜ್ಯ ಎಲ್ಲಾ ಸಮೃದ್ಧಿಯಾಗಿತ್ತು. ಸಿದ್ಧರಾಮಯ್ಯನವರು ಬಂದ ಮೇಲೆ ಬ್ಯಾಂಕ್‌ರಫ್ ಆಗಿದೆ ಇದನ್ನು ನಂಬಿಕೊಳ್ಳಬೇಡಿ ಎಂದು ಜನರಿಗೆ ಹೇಳುತ್ತಿದ್ದರು.

ಮಾನ್ಯ ಸದಸ್ಯರು : ಸಂಬಳ ಕೊಡುವುದಕ್ಕೆ 200 ಕೋಟಿರೂಪಾಯಿ ಸಾಲ ಮಾಡಿದ್ದರು.

ಶ್ರೀ ಟಿ. ಬಿ. ಜಯಚಂದ್ರ : ಒಂದು ವರ್ಷಕ್ಕೆ1 ಸಾವಿರ ಕೋಟಿ ಎಂದು ಹೇಳಿದಿರಲ್ಲಾ ಈಗ ಕೇಳಿದರೆ ಎಷ್ಟಾಯಿತು ? 1 ಸಾವಿರ ಕೋಟಿ ಎಂದು ಹೇಳಿ 600 ಕೋಟಿಗೆ ಬಂದಿದ್ದೀರಿ, ಅದಕ್ಕೇ ರಾಜೀನಾಮೆ ಕೇಳಿದ್ದು.

ಶ್ರೀ ಸಿದ್ಧರಾಮಯ್ಯ : ಒಂದು ಸಾವಿರ ಕೋಟಿ ಖರ್ಚು ಮಾಡಬೇಕೆಂಬ ಸದುದ್ದೇಶ ಇದೆ. ನೀವು ಹೇಳಿರುವುದಕ್ಕೆಲ್ಲ ಖರ್ಚು ಮಾಡಿ ನೋಡೋಣ. ಅದು ಆಗುತ್ತಿಲ್ಲ. ಮನೆ ಕಟ್ಟುತ್ತೇವೆಂದು ಹೇಳಿ ಒಬೊಬ್ಬ ಮುಖ್ಯಮಂತ್ರಿಗಳು ಬಂದಾಗ ಎರಡೂವರೆ ಲಕ್ಷವೆಂದರು. ರಾಜೀನಾಮೆ ಕೊಟ್ಟರೋ? ಒಬೊಬ್ಬ ಮುಖ್ಯ ಮಂತ್ರಿಗಳು ಎರಡು ಲಕ್ಷ 3-5 ಲಕ್ಷವೆಂದು ಹೇಳಿದರು, ಕೊಟ್ಟುಬಿಟ್ಟರೋ? ಲಕ್ಷಕ್ಕೇನು ಬೆಲೆ ಇಲ್ಲವೋ ? 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಮನೆ ಕಟ್ಟಿರುವುದು 2,85,000 ಅದರಲ್ಲಿ 1,55,000 ಮನೆಗಳನ್ನು ನಾವು ಕಟ್ಟಿದ್ದೇವೆ. ಇನ್ನು 90,000 ಮನೆಗಳು ವಿವಿಧ ಹಂತಗಳಲ್ಲಿ ಇವೆ. ಎಲ್ಲ ಬಡವರ ಮೇಲೆ ಒಂದು ಸೂರು ಆಯಿತು. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಡವರಿಗೆ ಮನೆ ಕೊಡುತ್ತೇವೆನ್ನುವುದು ಬಹಳ ಆದ್ಯತೆಯ ಕಾರ್ಯಕ್ರಮ.

1.30 ಪಿ.ಎಂ

ಸೈಟನ್ನು ಕೊಟ್ಟಿದ್ದೀರಿ. ನಾನು ಇಲ್ಲಿ ಎಂದು ಹೇಳುವುದಿಲ್ಲ. ಸರ್ಕಾರದ ಜಮೀನುಗಳೆಲ್ಲಾ ಇತ್ತು, ಅವುಗಳನ್ನೆಲ್ಲಾ ತೆಗೆದು ಹಂಚಿದಿರಿ. ಅವರು ಐದು ವರ್ಷ ಹಣಕಾಸಿನ ಮಂತ್ರಿಯಾಗಿದ್ದರು ಹಾಗೂ ಮುಖ್ಯಮಂತ್ರಿಯಾಗಿದ್ದರು. ಪಿಯರಲೆಸ್‌ಕಂಪನಿಯಿಂದ ಸಾಲ ತೆಗೆದುಕೊಂಡು ಬಂದು ಕೆಇಬಿ ಗೆಂದು ಸಂಬಳವನ್ನು ಕೊಟ್ಟಿದ್ದೇವೆಯೇ? ಬಿಲ್‌ಗಳೆಲ್ಲಾ ಟ್ರೆಜರಿಯಲ್ಲಿ ನಿಂತ ಹೋಗಿವೆಯೇ? ವೇಸ್ ಅಂಡ ಮೀನ್ಸ್‌ಗೆ ಪದೇ ಪದೇ 1995-96ರಲ್ಲಿ ಇಷ್ಟು ಹಣವೆಲ್ಲಾ ಖರ್ಚು ಮಾಡಿದರೂ ಕೂಡ ಒಂದು ದಿನ ಓವರ್‌ಡ್ರಾಫ್ಟ್ ತೆಗೆದುಕೊಳ್ಳಲಿಲ್ಲ. ಈ ವರ್ಷ ಮೂರು ಸಾರಿ ಓವರ್‌ಡ್ರಾಫ್ಟ್ ಅದವು ಇವರ ಕಾಲದಲ್ಲಿ 9 ಸಾರಿ, 11 ಸಾರಿ ಎಷ್ಟು ಸಾರಿ ಓವರ್‌ಡ್ರಾಫ್ಟ್ ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲದೇ ಮಾಡಿದ್ದು. ಈಗ ಏನಾದರೂ ಟ್ರೆಜರಿ ಬಿಲ್‌ಗಳೆಲ್ಲಾ ನಿಂತುಹೋಗಿವೆಯೇ? ನಾನು ಅದನ್ನೆಲ್ಲಾ

ಪ್ರಸ್ತಾಪ ಮಾಡಬಾರದು ಎಂದು ಇದ್ದೆ. ಇವರ ಕಾಲದಲ್ಲಿ ಎಲ್ಲಾ ಸಮೃದ್ಧವಾಗಿತ್ತೇ? ನಾವು ಬಂದ ಮೇಲೆ ಹಿನ್ನೆಡೆ ಸಾಧಿಸಿದ್ದೇವೆ ಎಂದು ಹೇಳುತ್ತಾರೆ. ಎಲ್ಲಾ ಸಮೃದ್ಧವಾಗಿ ಬಿಟ್ಟಿತು. ರಾಜ್ಯದ ಆರ್ಥಿಕ ಬೆಳವಣಿಗೆ ಬೆಳೆದು ಹೋಗಿತ್ತು. ನಾವು ಬಂದ ಮೇಲೆ ಎಲ್ಲಾ ಹಿನ್ನಡೆಯಾಗಿಬಿಟ್ಟಿದೆ ಎಂದು ಭಾಷಣ ಮಾಡಿದರಲ್ಲಾ, ಅವೆಲ್ಲಾ ಸತ್ಯಕ್ಕೆ ದೂರವಾದಂಥ ಮಾತು. ವಸ್ತು ಸ್ಥಿತಿಗೆ ದೂರವಾದ ಮಾತು. ಆದ್ದರಿಂದ ನಾನು ಹೆಚ್ಚು ಮಾತನಾಡಿಲಿಕ್ಕೆ ಹೋಗುವುದಿಲ್ಲ. ಅದರಿಂದ ಎರಡು ವರ್ಷದಲ್ಲಿ..

ಅಧ್ಯಕ್ಷರು : ಏನು ಈಗ ಮಾತನಾಡಿರುವುದು ಸಾಲದೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎರಡೂವರೆ ತಾಸು ಮಾತನಾಡಿದ ಮೇಲೆ ಇನ್ನೇನು ಮಾತನಾಡುವುದು?

ಶ್ರೀ ಸಿದ್ಧರಾಮಯ್ಯ : ಇರಿಗೇಷನ್‌ಗೆ, ಎಜ್ಯುಕೇಷನ್‌ಗೆ ಹೆಲ್ತ್‌ಗೆ ನಾವು ಹಣವನ್ನು ಖರ್ಚುಮಾಡುತ್ತಿದ್ದೇವೆ. ಕುಡಿಯುವ ನೀರಿಗೆ ಬೇಕಾದಷ್ಟು ಕಳೆದ ಎರಡು ವರ್ಷದಲ್ಲಿ ಖರ್ಚು ಮಾಡುತ್ತಿದ್ದೇವೆ. ಮಾನ್ಯ ಖರ್ಗೆಯವರು ಒಂದು ಮಾತನ್ನು ಹೇಳಿದರು, ನೀವು ಇನ್‌ಫ್ಲೇಷನ್‌ಗೆ ಅನುಗುಣವಾಗಿ ಹೆಚ್ಚು ಮಾಡುತ್ತಿಲ್ಲ ಇಲಾಖೆಗಳಲ್ಲಿ, ಕೆಲವು ಕಡೆ ಹೆಚ್ಚಾಗಿದೆ, ಕೆಲವು ಕಡೆಗಳಲ್ಲಿ ಕಡಿಮೆಯಾಗಿದೆ. ಏಕೆಂದರೆ ಆದ್ಯತೆಗಳನ್ನು ಗುರುತಿಸಿಕೊಂಡು ನಾವು ಹಣ ಖರ್ಚು ಮಾಡಬೇಕಾಗಿದೆ. ಎಜುಕೇಷನ್‌ಗೆ ಈ ವರ್ಷ 9.7 ಪರ್‌ಸೆಂಟ್ ಆಗಿದೆ. ಏಕೆಂದರೆ ಪ್ಲಾನ್‌ಗೆ ನಾವು ಏನೇನನ್ನು ಸೃಷ್ಟಿಮಾಡಿದ್ದೇವೆ, ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ, ಅವೆಲ್ಲವೂ ಕೂಡ ನಾನ್ ಪ್ಲಾನ್‌ಗೆ ಕಮಿಟೆಡ್ ಎಕ್ಸ್‌ಪೆಂಡಿಚರ್ ಆಗುತ್ತದೆ. ಹಾಗಾಗಿ ಪ್ಲಾನ್‌ನಿಂದ ನಾನ್ ಪ್ಲಾನ್‌ಗೆ ಹೋದಾಗ ಎಕ್ಸ್‌ಪೆಂಡಿಚರ ಜಾಸ್ತಿಯಾಗೇ ಆಗುತ್ತದೆ. The expenditure will be more. The percentage of the total plan will be more. ಆ ಕಾರಣದಿಂದ ನಾವು ಯಾವ ದಾರಿಯಲ್ಲಿ ಹೊರಟಿದ್ದೇವೆ, ಎಜ್ಯುಕೇಷನ್, ಹೆಲ್ತ್, ಸಾಮಾನ್ಯ ಜನರಿಗೆ ಬಡವರಿಗೆ ಕಾರ್ಯಕ್ರಮಗಳು. ಎರಡು ವರ್ಷಗಳಲ್ಲಿ ನಾವು ಎಷ್ಟು ಹಾಸ್ಟೆಲ್‌ಗಳನ್ನು ಕಟ್ಟಿಸಿದ್ದೇವೆ. ಮಾನ್ಯ ರಾಮಕೃಷ್ಣರವರೇ, ಎಸ್.ಸಿ.ಪಿ. ಬಗ್ಗೆ ಹಿಂದಿನ ಸಾರಿ ಹೇಳುತ್ತಿದ್ದಿರಿ. ಈ ವರ್ಷವೇ ಮೊದಲನೇ ಸಾರಿ ವರ್ಷದ ಮೊದಲಲ್ಲಿಯೇ ಆಗಬೇಕು ಎಂದು ಹೇಳಿ ಕ್ರೋಢೀಕರಣ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ನಿಮ್ಮ ಮುಂದೆ ಇಟ್ಟಿದ್ದೇನೆ. 106 ಕೋಟಿ ರೂಪಾಯಿಗಳನ್ನು ಪ್ರಾರಂಭದಲ್ಲಿಯೇ ಅದನ್ನು ಕ್ರೋಢೀಕರಣ ಮಾಡಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನರಿಗೆ ಮನೆ ಕಟ್ಟಿಕೊಡಬೇಕು, ಅವರ ಜಮೀನುಗಳಿಗೆ ನೀರು ಸಾಧ್ಯವಾದ ಮಟ್ಟಿಗೆ ಕೊಡಬೇಕು ಎಂದು ಮಾಡಿದ್ದೇವೆ. 96-97ರಲ್ಲಿ

40 ವಸತಿ ಶಾಲೆಗಳನ್ನು ತೆಗೆದೆವು ಮುಂದಿನ ವರ್ಷ 30 ವಸತಿ ಶಾಲೆಗಳನ್ನು ತೆರೆಯುತ್ತಿದ್ದೇವೆ. 20 ಸಾವಿರ ಎಕರೆವರೆಗಿನ ಜಮಿನುಗಳಿಗೆ ನೀರು ಕೊಡಬೇಕೆಂದು ವಿಚಾರವನ್ನು ಬಜೆಟ್‌ನಲ್ಲಿ ಇಟ್ಟುಕೊಂಡಿದ್ದೇವೆ. ಇದು ಬಡವರ ಪರವಾಗಿರುವ ಕಾರ್ಯಕ್ರಮಗಳೆಲ್ಲವೇ? ಹಿಂದುಳಿದವರಿಗೆ ಅವರಿಗೂ ಕೂಡ ಗಂಗಾಕಲ್ಯಾಣದ ಮೂಲಕ ಅವರ ಜಮೀನುಗಳಿಗೆ ನೀರು ಕೊಡಬೇಕು. ಅವರಿಗೂ ಮನೆಗಳನ್ನು ಕಟ್ಟಿಕೊಡಬೇಕು, ಅವರಿಗೆ ಹಾಸ್ಟೆಲ್‌ಗಳನ್ನು ಕಟ್ಟಿಕೊಡಬೇಕು. ಎಂದು ಮಾಡಿದ್ದೇವೆ. ಹಾಗೆಯೇ ವಿದ್ಯಾರ್ಥಿವೇತನವನ್ನು 100 ರೂಪಾಯಿಗಳಿಗೆ ಹೆಚ್ಚುಮಾಡಿದ್ದೇವೆ. ಹಿಂದುಳಿದವರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆಂದು ಮಾಡಿರುವುದು. ಇವತ್ತು ಪ್ರೈಮರಿ ಶಾಲೆಗಳೆಷ್ಟು? ಇವತ್ತೂ ಕೂಡ ನಾಲ್ಕು ಸಾವಿರ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗೆ ಕಟ್ಟಡ ಇಲ್ಲ ಎಂದು ವರದಿ ಇದೆ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಇದಕ್ಕೆ ಯಾರು ಹೊಣೆ ಎಂದು ಹೇಳುವುದಿಲ್ಲ. ಅದಕ್ಕೆ ನಾನು ಈ ವರ್ಷದ ಆಗಸ್ಟ್‌ನಿಂದ ಮುಂದಿನ ಆಗಸ್ಟ್‌ವರೆಗೆ ನಾಲ್ಕು ಸಾವಿರ ಕೊಠಡಿಗಳನ್ನು ಕಟ್ಟಬೇಕು. ಪ್ರತಿ ಊರಿನಲ್ಲಿಯೂ ಶಾಲಾ ಕಟ್ಟಡ ಇರಬೇಕು. ಎರಡು ಸಾವಿರ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕು. ಎರಡು ಸಾವಿರ ಹೈಯರ್ ಪ್ರೇಮರಿ ಸ್ಕೂಲ್‌ಗಳನ್ನು ತೆರೆಯಬೇಕು ಎಂದು ಹೇಳಿ ಈ ವರ್ಷ ನಾವು ಗುರಿ ಇಟ್ಟುಕೊಂಡಿದ್ದೇವೆ. ಇದನ್ನು ಮಾಡುತ್ತೇವೆ. ಮುಂದಿನ ಆಗಸ್ಟ್‌ನಿಂದ 1998ರ ಆಗಸ್ಟ್ ಒಳಗಡೆ ಇದನ್ನು ಮಾಡುತ್ತೇವೆ. ಸ್ವಾತಂತ್ರ್ಯ ಯೋಧರಿಗೆ 500 ರೂಪಾಯಿ ಕೊಡುತ್ತಿದ್ದರು, ಇದು 50 ನೇ ವರ್ಷ ಎಂದು ಹೇಳಿ ಬಹಳ ದಿನಗಳಿಂದ ಬೇಡಿಕೆ ಇತ್ತು. ಚಿನ್ನದ ಹಬ್ಬ ಆಚರಣೆಮಾಡುತ್ತಿದ್ದಾಗ ಅವರಿಗೆ 500 ರಿಂದ 750 ರೂಪಾಯಿಗಳಿಗೆ ಏರಿಸತಕ್ಕಂಥದ್ದು ಮಾಡಿದ್ದೇವೆ. ಹಾಗೆಯೇ ಇವತ್ತು ವಿಧವೆಯರಿಗೆ, ಅಂಗವಿಕಲರಿಗೆ, ಮುದುಕರಿಗೆ ಕೊಡುತ್ತಿರುವ 75 ರೂಪಾಯಿಂದ 100 ರೂಪಾಯಿಗೆ ಹೆಚ್ಚು ಮಾಡಿದ್ದೇವೆ. ಮತ್ತು ಎಲ್ಲೆಲ್ಲಿ ಸ್ವಾತಂತ್ರ್ಯ ಸಂಗ್ರಾಮ ಸಂದರ್ಭದಲ್ಲಿ ಘಟನೆಗಳು ನಡೆದವೋ, ಅಲ್ಲೆಲ್ಲಾ ಕೂಡ ಸ್ಮಾರಕ ಭವನಗಳನ್ನು ಮಾಡಬೇಕೆನ್ನುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಹಾಗೆಯೇ ಇವತ್ತು ಎರಡು ಸಾವಿರ ಹಳ್ಳಿಗಳಿಗೆ ಅಪ್ರೋಚ್ ರಸ್ತೆಗಳಿಲ್ಲ. ಅದನ್ನು ಒಂದು ವರ್ಷದಲ್ಲಿ ಕಲ್ಪಿಸಿಕೊಡಬೇಕೆನ್ನುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಇಷ್ಟು ವರ್ಷವಾದರೂ ಎರಡೂ ಸಾವಿರ ಹಳ್ಳಿಗಳಿಗೆ ಕೂಡು ರಸ್ತೆಗಳಿಲ್ಲವೆಂದರೆ ಹೇಗೆ? ಈ ಆಗಸ್ಟ್‌ನಿಂದ ಮುಂದಿನ ಆಗಸ್ಟ್ ಒಳಗೆ ಬಗೆಹರಿಸಬೇಕು ಎನ್ನುವ ತೀರ್ಮಾನ ಮಾಡಿದ್ದೇವೆ. ಇವು ಯಾರ ಪರವಾಗಿ ಮಾಡಿರುವ ಕಾರ್ಯಕ್ರಮಗಳು? ಎಷ್ಟೇ ಕಷ್ಟವಾದರೂ ಬಡವರಿಗೆ 3.20 ರೂಪಾಯಿಗಳಲ್ಲಿ ಅಕ್ಕಿಯನ್ನು ಕೊಡುತ್ತಿದ್ದೇವೆ. ಸಬ್ಸಿಡಿ 160 ಕೋಟಿ ರೂಪಾಯಿಗಳಲ್ಲಿ ಅಕ್ಕಿಯನ್ನು ಕೊಡುತ್ತಿದ್ದೇವೆ.

ಸಬ್ಸಿಡಿ 160 ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಶ್ರೀಮಂತರ ಪರವಾಗಿಕೊಟ್ಟಿದ್ದೇವೆಯೇ? ಕೇಂದ್ರ ಸರ್ಕಾರದಲ್ಲಿರುವ ದೇವೇಗೌಡರನ್ನು ನಾವು ಅಭಿನಂಧಿಸಬೇಕಾಗುತ್ತದೆ. ಅವರೂ ಕೂಡ ಇಡೀ ದೇಶದಲ್ಲಿ ಬಡವರಿಗೆ ಕಡಿಮೆ ದುಡ್ಡಿನಲ್ಲಿ ಅಕ್ಕಿಕೊಡುತ್ತೇವೆ ಎನ್ನುವ ತೀರ್ಮಾನ ಮಾಡಿದ್ದಾರೆ. ಬಡವರ ಪರವಾಗಿಮಾಡಿರುವುದು. ಏನು ಟಾಟಾ ಬಿರ್ಲಾಗಳಿಗೆ 3.20 ಪೈಸೆಗೆ ಅಕ್ಕಿಯನ್ನು ಕೊಟ್ಟಿದ್ದೇವೆಯೇ?

ಶ್ರೀ ವಾಟಾಳ್ ನಾಗರಾಜ್ : ಅವರು ಕೇಳುವುದಕ್ಕೆ ಬಂದಾಗ ಪರಿಶೀಲಿಸಿ ಅವರು ಕೇಳುವುದಕ್ಕೆ ಬರಲಿಲ್ಲವೇ?

ಶ್ರೀ ಸಿದ್ಧರಾಮಯ್ಯ : ಆದ್ದರಿಂದ ಇವತ್ತು ಈ ಸರ್ಕಾರ ಯಾರ ಪರವಾಗಿದೆ, ಯಾರ ಪರವಾಗಿ ನಾವು ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡಿದ್ದೇವೆ ಎನ್ನುವುದನ್ನು ತಾವು ನೋಡಬೇಕಾಗುತ್ತದೆ. ವಿರೋಧಕ್ಕೋಸ್ಕರ ವಿರೋಧ ಮಾಡುವುದು ಮಾಡಿ. ಸಂತೋಷ ಆದರೆ ಒಳ್ಳೆಯದನ್ನೂ ಕೂಡ ಸ್ವಲ್ಪ ಸ್ವಾಗತ ಮಾಡತಕ್ಕಂತ ಕೆಲಸ ತಾವು ದಯಮಾಡಿ ಮಾಡಬೇಕು. ನಮಗೂ ಸಹ ಸ್ವಲ್ಪ ಹೆಚ್ಚಿನ ಉತ್ಸಾಹ ಬರುತ್ತದೆ, ಇನ್ನು ಹೆಚ್ಚು ಕೆಲಸ ಮಾಡುವುದಕ್ಕೆ ಎನ್ನತಕ್ಕಂಥ ಮಾತನ್ನುಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಎಜುಕೇಷನ್, ಹೆಲ್ತ್, ಕೃಷಿ ಬಗ್ಗೆ ಹೊಸ ನೀತಿಯನ್ನು ಮಾಡಿದ್ದೇವೆ. ಕೃಷಿ ಮಂತ್ರಿಗಳು ಇಲ್ಲಿಯೇ ಇದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಆಗಲೇ ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದೀರಿ. ನಾನು ಮಧ್ಯದಲ್ಲಿ ಪ್ರಶ್ನೆ ಕೇಳಿದಾಗ ಅಬ್ಕಾರಿ ಬಗ್ಗೆ ಬಹುಶಃ ಆ ಕಡೆ ಈ ಕಡೆ ಕುಳಿತಿರುವ ಸದಸ್ಯರುಗಳು ನಾವೆಲ್ಲರೂ ಕಾತುರದಿಂದ ನೋಡುತ್ತಿದ್ದೇವೆ. ಇವತ್ತು ಮುಖ್ಯಮಂತ್ರಿಗಳ ಜೊತೆಗೆ ತಮ್ಮ ಜೊತೆಗೆ ಶಾಸಕರುಗಳು ಮಾತನಾಡಿದಾಗ ಈ ಒಂದು ಅರ್ರ್ಯಾಕನ್ನು ರದ್ದುಮಾಡುವುದರ ಬಗ್ಗೆ ಒಂದು ವಿಶೇಷ ಅಧಿವೇಶನ ಕರೆದು ಜೂನ್ ಒಳಗೆ ಅದನ್ನು ರದ್ದುಮಾಡುವುದರ ಬಗ್ಗೆ ಅಭಿಪ್ರಾಯ ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳತ್ತೇನೆ ಎಂದು ಮುಖ್ಯಮಂತ್ರಿಗಳು ಹೊರಗಡೆ ಒಪ್ಪಿಕೊಂಡಿದ್ದಾರೆ. ಅಥವಾ ಅದು ಆಗಲಿಲ್ಲ ಎಂದರೆ ಯಾವ ಯಾವ ಶಾಸಕರು ಮುಂದೆ ಬಂದಿದ್ದಾರೋ ಅಲ್ಲಿ ಅದನ್ನು ರದ್ದುಮಾಡುತ್ತೇವೆ ಎನ್ನುವ ಚರ್ಚೆಯೂ ಆಯಿತು. ಅದಕ್ಕೆ ತಾವು ಉತ್ತರ ಕೊಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಲಿ, ಅವರಾಗಲಿ ನಾವು ನಿಮಗೆ ಎಲ್ಲಾ ರೀತಿಯ ಸಹಕಾರ ಕೊಡಬೇಕು ಎನ್ನುವ ಅಪೇಕ್ಷೆ ಇದ್ದರೆ ಒಟ್ಟಾಗಿ ಕುಳಿತು ಮಾತನಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ, ಅದನ್ನು ಈ ಸದನದಲ್ಲಿ ತಮ್ಮ ನಿಲುವೇನು ಎಂದು ಘೋಷಣೆ ಮಾಡಬೇಕು. ತಾವೇ ಹೇಳಿದ್ದೀರಿ, ವಿಶೇಷ ಅದಿವೇಶನ ಕರೆಯುತ್ತೇವೆ, ಇನ್ನು 15-20 ದಿವಸದಲ್ಲಿ ಎಂದು

ಹೇಳಿದ್ದೀರಿ. ಅಲ್ಲಿ ಈ ಒಂದು ಅರ್‍ರ್ಯಾಕನ್ನು ರದ್ದುಮಾಡುವ ತೀರ್ಮಾನ. ಬಹುಮತ ಸಿಕ್ಕಿದರೆ ಅಲ್ಲಿ ಅದನ್ನು ತೆಗೆದು ಕೊಳ್ಳುತ್ತೇವೆ. ಪಕ್ಷಾತೀತವಾಗಿ ಅಲ್ಲಿ ಚರ್ಚೆ ಮಾಡೋಣ ಎನ್ನುವ ಮಾತನ್ನು ತಮ್ಮ ಸಮಕ್ಷಮ, ಸನ್ಮಾನ್ಯ ಪ್ರಕಾಶ್‌ರವರ ಸಮಕ್ಷಮ ಮತ್ತೆ ಕಾನೂನು ಮಂತ್ರಿಗಳ ಸಮಕ್ಷಮ ನಾವು ಒಪ್ಪಿಕೊಂಡಿದ್ದೇವೆ. ಆ ಒಪ್ಪಿಗೆ ಮೇಲೆ ನಾವು ನಿನ್ನೆ ಆ ಒಂದು ವಿಷಯದ ಬಗ್ಗೆ ಮಂಗಳ ಹಾಡಿ ಇವತ್ತು ನಿಮ್ಮ ಉತ್ತರವನ್ನು ನಾವು ಕಾತುರದಿಂದ ನೋಡುತ್ತಿದ್ದೇವೆ. ಎರಡು ಉತ್ತರನ್ನು ನಿಮ್ಮಿಂದ ನಿರೀಕ್ಷೆ ಮಾಡುತ್ತೇನೆ. ವಿಶೇಷ ಅಧಿವೇಶನ ಕರೆಯುತ್ತೇವೆ. ಈ ತೀರ್ಮಾನಕ್ಕೆ ನಾವು ಬದ್ಧರಾಗುತ್ತೇನೆ. ಜೂನ್‌ನಿಂದ ಅರ್‍ರ್ಯಾಕನ್ನು ರದ್ದುಮಾಡುತ್ತೇವೆ ಎನ್ನುವ ಆ ಒಂದು ತೀರ್ಮಾನವನ್ನು ಮಾಡಿ ಎರಡನೆಯದು, ನನ್ನ ಅಂದಾಜಿನ ಪ್ರಕಾರ ಕನಿಷ್ಟ ನಾನು ಲೆಕ್ಕ ಕೊಡುತ್ತೇನೆ, 500 ಕೋಟಿಗೂ ಹೆಚ್ಚು ಲೂಟಿ ನಡೆಯುತ್ತಿದೆ. ಈ ಥರ್ಡ್ಸ್ ಎಂದು ಪ್ರಿಂಟ್ ಮಾಡಿಕೊಂಡು ಹಿಂಬಾಗಿಲಿನಿಂದ ಶರಾಬು, ವಿಸ್ಕಿ, ಬ್ರಾಂದಿಯನ್ನು ಮಾರಿಕೊಂಡು ಮಾರುತ್ತಿದ್ದಾರೆ. ಅದರ ಬಗ್ಗೆ ನಾನ ವಿವರ ಕೊಟ್ಟಿದ್ದೇನೆ. ಅದು ನೀವು ಮಾಡಿರುವುದು ಸರಿ ಇದೆ ಎಂದು ಹೇಳಿದ್ದೀರಿ. ಅದರ ಬಗ್ಗೆ ಏನಾದರೂ ಸಿಟ್ಟಿಂಗ್ ಹೈಕೋರ್ಟ್ ಜಡ್ಜ್‌ರವರಿಂದ ತನಿಖೆ ಮಾಡಿಸುತ್ತೀರೋ ಇವೆರಡರ ಬಗ್ಗೆ ನನಗೆ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಅಬ್ಕಾರಿ ಬಗ್ಗೆ ನಾನು ಐದು ನಿಮಿಷದ ನಂತರ ಬರುತ್ತೇನೆ. ನಮ್ಮ ವಿಚಾರ ಬಡವರ ಪರವಾಗಿ, ಅಶಕ್ತ ವರ್ಗದ ಜನರ ಪರವಾಗಿ ಅನೇಕ ಕಾರ್ಯಕ್ರಮಗಳನ್ನು ಇವತ್ತು ಹಾಕಿಕೊಂಡು ಅವರಿಗೆ ಸೌಕರ್ಯಗಳನ್ನು ಒದಗಿಸುವಂಥದ್ದು, ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಆಗಿರುವ ಬೆಳವಣಿಗೆಗಳನ್ನು ನೋಡಿದರೆ ನಾವು ಯಾವ ದಿಕ್ಕಿನಲ್ಲಿ ಹೊರಟಿದ್ದೇವೆ ನಿಮಗೆ ಗೋಚರವಾಗುತ್ತದೆ.

(ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಎಂ ಮಾಮನಿರವರು ಪೀಠವನ್ನಲಂಕರಿಸಿದರು)

ಮನರಂಜನೆ ತೆರಿಗೆಯ ಬಗ್ಗೆ ಕೆಲವರು ಮಾನ್ಯ ಸದಸ್ಯರು ಮಾತನಾಡಿದರು. ಮನರಂಜನೆ ತೆರಿಗೆಯಲ್ಲಿ ಕಳೆದ ವರ್ಷ ನಾವು ಎಲ್ಲಾ ಕನ್ನಡ ಚಿತ್ರಗಳಿಗೆ ಸಂಪೂರ್ಣ ತೆರಿಗೆ ವಿನಾಯಿತಿಯನ್ನು ಮಾಡಿದ್ದೇವೆ. ಏಕೆಂದರೆ, ಕನ್ನಡ ಚಿತ್ರೋದ್ಯಮ ಬೆಳೆಯಬೇಕು ಎಂಬ ಕಾರಣಕ್ಕಾಗಿ ಅದನ್ನು ಈ ವರ್ಷ ಸಹ ಮುಂದುವರೆಸಿದ್ದೇವೆ. ಕನ್ನಡದಲ್ಲಿ ಒಳ್ಳೆಯ ಗುಣಮಟ್ಟದ ಚಿತ್ರಗಳು ಬರಬೇಕು. ಕ್ರೌರ್ಯ, ಅಶ್ಲೀಲ, ದ್ವಂದ್ವಾರ್ಥ ಬರತಕ್ಕಂಥ ನಿಸಿಮಾಗಳು ಹೋಗಬೇಕು ಎನ್ನುವ ದೃಷ್ಟಿಯಿಂದ ಒಂದು ಕಮಿಟಿ ರಚನೆ ಮಾಡಿದ್ದು, ಆ ಸಮಿತಿಯಲ್ಲಿ ಸಬ್ಸಿಡಿಯನ್ನು ಯಾವುದಕ್ಕೆ ಕೊಡಬೇಕು, ಯಾವುದಕ್ಕೆ ಕೊಡಬಾರದು ಎಂಬುದು ಕಟ್ಟುನಿಟ್ಟಾಗಿ

ತೀರ್ಮಾನವಾಗಬೇಕು. ಏಕೆಂದರೆ, ಸಮಾಜದ ಮೇಲೆ ಬಹಳ ದುಷ್ಪರಿಣಾಮವಾಗತಕ್ಕಂಥ ಮಟ್ಟಿಗೆ ಅನೇಕ ಚಿತ್ರಗಳು ಬರುತ್ತಿರುವುದರಿಂದ ಇದನ್ನು ತಡೆಗಟ್ಟಲು ನಾವು ಸಂಪೂರ್ಣ ತೆರಿಗೆ ವಿನಾಯಿತಿ ಮಾಡಿರುವುದೇ ಹೊರತು ಅಂತಹ ಚಿತ್ರಗಳನ್ನು ತಯಾರಿಸಬೇಕೆನ್ನುವ ಕಾರಣಕ್ಕಾಗಿ ಅಲ್ಲ. ಸಮಾಜದ ಮೇಲೆ ಬೆಳಕು ಚೆಲ್ಲುವ, ಸಮಾಜವನ್ನು ತಿದ್ದುವ ಮಟ್ಟದಲ್ಲಿ ಚಿತ್ರಗಳು ಬರಬೇಕೆಂಬ ದೃಷ್ಟಿಯಿಂದ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಸಹಾಯ ಧನ ಕೊಡುವ ನೀತಿ ಅದಲ್ಲ.

ಶ್ರೀ ಸಿದ್ಧರಾಮಯ್ಯ : ಸಾರಿ, ಸಂಪೂರ್ಣ ತೆರಿಗೆ ವಿನಾಯಿತಿ ಮಾಡಿರುವುದು ಕನ್ನಡ ಚಿತ್ರೋದ್ಯಮ ಬೆಳೆಯಲಿ ಎಂಬ ಕಾರಣಕ್ಕಾಗಿ ಇದನ್ನೂ ಸಹ ಅದಕ್ಕಾಗಿಯೇ ಮಾಡಿರುವುದು. ಆದರೆ, ಹಾಗೆಂದು ಹೇಳಿ ಜನರ ಬದುಕಿನ ಮೌಲ್ಯಗಳಿಗೆ ವಿರುದ್ಧವಾದ ಚಿತ್ರಗಳಾಗಬಾರದು. ಆದುದರಿಂದ ಈ ಕುರಿತು ನಿರ್ಧರಿಸುವುದಕ್ಕೋಸ್ಕರ ಒಂದು ಸಮಿತಿ ರಚಿಸಿರುವುದು. ಕಳೆದ ಎರಡು ವರ್ಷಗಳಿಂದ ಸ್ಲಾಬ್ ಸಿಸ್ಟಂ ತಂದಿದ್ದರಿಂದ ಮನರಂಜನಾ ತೆರಿಗೆಯಲ್ಲಿ ಸರ್ಕಾರಕ್ಕೆ ಬಹಳ ನಷ್ಟವಾಯಿತು. ಅದಕ್ಕಾಗಿ ಎಲ್ಲಾ ಕನ್ನಡ ಚಿತ್ರಗಳಿಗೂ ಸಂಪೂರ್ಣ ತೆರಿಗೆ ವಿನಾಯಿತಿ ಕೊಟ್ಟಿದ್ದೇವೆ. ಬೇರೆ ಭಾಷೆಯ ಚಿತ್ರಗಳಾದ ತಮಿಳು ಹಿಂದಿ, ತೆಲುಗು ಚಿತ್ರಗಳಿಗೆ ಈಗ ಎರಡು ವರ್ಷಗಳಿಂದ ಸೀಲಿಂಗ್ ಸಿಸ್ಟಂ ಅಂದರೆ ಟಿಕೆಟ್ ಮೇಲೆ ಮುದ್ರೆ ಒತ್ತುವಂಥ ಪದ್ಧತಿ ಏನಿತ್ತು ಇದನ್ನು ತಪ್ಪಿಸುವುದಕ್ಕಾಗಿ ಹಳೆಯ ಕಾಂಪೋಸಿಷನ್ ಪದ್ಧತಿ ತರುತ್ತಿದ್ದೇವೆ. ನಾನು ನನ್ನ ಭಾಷಣದಿಲ್ಲಿ ಈಗಾಗಲೇ ತಿಳಿಸಿರುವಂತೆ 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕಂಥಾದ್ದಕ್ಕೆ ಸೀಲಿಂಗ್ ಸಿಸ್ಟಂ ಬರುತ್ತದೆ, 50 ಸಾವಿರಕ್ಕಿಂತ ಕಡಿಮೆ ಇರತಕ್ಕಂಥಾದ್ದಕ್ಕೆ ಕಾಂಪೋಸಿಷನ್ ಸಿಸ್ಟಮ್ ಮುಂದುವರೆಯುತ್ತದೆ. ಅದನ್ನು ನಾನು 50 ಸಾವಿರದಿಂದ 75 ಸಾವಿರದಷ್ಟು ಜನಸಂಖ್ಯೆ ಇರುವುದಕ್ಕೆ ಹೆಚ್ಚು ಮಾಡಲು ಇಚ್ಛಿಪಡುತ್ತೇನೆ. 75 ಸಾವಿರ ಜನಸಂಖ್ಯೆಗಿಂತ ಬಳಗೆ ಇರುವ ಪಟ್ಟಣ ಪ್ರದೇಶಗಳಲ್ಲಿ ಕಾಂಪೋಸಿಷನ್ ಸಿಸ್ಟಮ್ ಇರುತ್ತದೆ. 75 ಸಾವಿರ ಜನಸಂಖ್ಯೆಗಿಂತ ಜಾಸ್ತಿ ಇರುವ ಪಟ್ಟಣ ಪ್ರದೇಶಗಳಲ್ಲಿ ಸೀಲಿಂಗ್ ಸಿಸ್ಟಮ್ ದಿನಾಂಕ: 1.4.97ರಿಂದ ಮುಂದುವರೆಯುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಕೊನೆಯದಾಗಿ, ಎಕ್ಸೈಸ್ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಎಕ್ಸೈಸ್ ಬಗ್ಗೆ ಮಾತನಾಡುತ್ತಾ ಬಹಳ ತೆರಿಗೆ ಸೋರುತ್ತದೆ, ಸೆಕೆಂಡ್ಸ್ ಹೋಗುತ್ತದೆ, ಥರ್ಡ್ಸ್ ಹೋಗುತ್ತದೆ ಎಂಬ ವಿಚಾರಗಳನ್ನು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲ ಎನ್ನುವುದಿಲ್ಲ. ಅಲ್ಲದೆ, ಸೆಕೆಂಡಸ್ ನಿಂತು ಹೋಗಿದೆ ಎಂದು ಹೇಳುವುದಕ್ಕೆ ಸಹ ಹೋಗುವುದಿಲ್ಲ. ಥರ್ಡ್ಸ್ ಎಂದರೆ ಯಾವುದು? ಇದು ರೆಕ್ಟಿಫೈಡ್ ಸ್ಪಿರಿಟ್, ಥರ್ಡ್ಸ್ ಎಂದರೆ ಇದಲ್ಲ, ಇದು ಸೆಕೆಂಡ್ಸ್ ಇದಕ್ಕೆ ತೆರಿಗೆಕೊಡದೆ ಸೆಕೆಂಡ್ಸ್

ಎಂದು ಹೇಳಿ ಉತ್ಪಾದಿಸುವುದು. ಇದರಲ್ಲಿ ಡೂಪ್ಲಿಕೇಟ್ ಇರುವುದು ಇದೆ, ನಿಜ. ಡೂಪ್ಲಿಕೇಟನ್ನು ಅನೇಕ ಕಡೆಗಳಲ್ಲಿ ಮಾಡಿರುವುದು ನಿಜ ಇಲ್ಲವೆಂದು ಹೇಳುವುದಿಲ್ಲ. ಸೆಕೆಂಡ್ಸನ್ನು ನಾವು ತಪ್ಪಿಸಿಬಿಟ್ಟಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಅನೇಕ ವರ್ಷಗಳಿಂದ ಬಂದಿರುವ ರೋಗ. ಈ ರೋಗ ಹೋಗಬೇಕೆಂಬುದು ನನ್ನ ಆಸೆ ಮತ್ತು ನಮ್ಮ ಸರ್ಕಾರದ ಇಚ್ಛೆ ಕೂಡ. ಆದರೆ ಇದು ಅಷ್ಟು ಸುಲಭವಾಗಿ ಹೋಗುವುದಿಲ್ಲ. ಪ್ರಾಮಾಣಿಕ ಪ್ರಯತ್ನ ಮಾಡಿ ಅದನ್ನು ಕಡಿಮೆ ಮಾಡುವ ಪ್ರಯತ್ನ ಮಾಡಬೇಕಾಗಿದೆ. ಇನ್ನೂ ಹೆಚ್ಚು ಪ್ರಯತ್ನ ಆಗಬೇಕು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಹಾಗೆಂದು ಹೇಳಿ ಸುಧಾರಣೆ ಮಾಡಬಾರದೆಂದಲ್ಲ. ಇವೊತ್ತು ಶ್ರೀಮಾನ್ ಯಡಿಯೂರಪ್ಪನವರು ಮಾತನಾಡುತ್ತಾ ಕೆಲವರು ನಕಲಿ ಲೇಬಲ್ ಅಂಟಿಸಿ ಮಾರಾಟ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ ಏನು ಹೇಳಿದ್ದಾರೆ, ಅದರ ಬಗ್ಗೆ ದೂರು ಬಂದಗಿದ್ದು ನಾವು ಸೀಜ್ ಮಾಡಿದ್ದೇವೆ. ಇಲಾಖೆಯವರು ಅದರ ಮೇಲೆ ಕ್ರಮ ಕೈಗೊಂಡಿದ್ದಾರೆ. ಡೂಪ್ಲಿಕೇಟ್ ಲೇಬಲ್ ಸಂಪೂರ್ಣವಾಗಿ ನಿಂತುಹೋಗಿದೆ ಎಂದು ಹೇಳುವುದಿಲ್ಲ. ಈ ಕುರಿತು ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರೂ ಕ್ರಮ ಕೈಗೊಂಡಿದ್ದಾರೆ ಮತ್ತು ಪೊಲೀಸರೂ ಸಹ ಕ್ರಮ ಕೈಗೊಂಡಿದ್ದಾರೆ. ಪಿ.ಎಸ್.ಐ. ನಂದಗುಡಿ ಪೊಲೀಸ್ ಸ್ಟೇಷನ್, ಬೆಂಗಳೂರು ಇವರು 13.4.96ರಲ್ಲಿ ಡೂಪ್ಲಿಕೇಟ್ ಲೇಬಲ್ ಪ್ರಕರಣದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಅದೇ ರೀತಿ ಸುಬ್ರಹ್ಮಣ್ಯಪುರಂನ ಪೊಲೀಸ್ ಸ್ಟೇಷನ್‌ನ ಪೋಲೀಸ್ ಇನ್‌ಸ್ಪೆಕ್ಟರ್‌ರವರೂ ಕೂಡ ದಿನಾಂಕ 28.7.96ರಲ್ಲಿ ಇದೇ ವಿಚಾರದಲ್ಲಿ ಕ್ರಮ ಕೈಗೊಂಡಿದ್ದು ಕೇಸ್ ರಿಜಿಸ್ಟರ್ ಆಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದರಲ್ಲಿ ಯಾರನ್ನಾದರೂ ಆರೆಸ್ಟ್ ಮಾಡಿದ್ದೀರೋ?

ಶ್ರೀ ಸಿದ್ಧರಾಮಯ್ಯ : ಇದೆಲ್ಲಾ ಡಿಟೇಲ್ಸ್ ತರಿಸಿಕೊಡುತ್ತೇವೆ. ಏಕೆಂದರೆ ಪೊಲೀಸ್ ಸ್ಟೇಷನ್‌ನಲ್ಲಿ ಈ ಕುರಿತ ಎಲ್ಲಾ ಡಿಟೈಲ್ಸ್ ಸಿಗುತ್ತವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸರ್ಕಾರದ ಬೊಕ್ಕಸಕ್ಕೆ ಬರುವಂಥ ಆದಾಯದಲ್ಲಿ ಕನಿಷ್ಠ 500 ಕೋಟಿ ರೂಪಾಯಿಗಳಷ್ಟು ಲೂಟಿ ಆಗುತ್ತಿರುವ ಒಂದು ಹಗರಣವಾಗಿದೆ. ಯಾರು ಇದನ್ನು ಲೂಟಿ ಮಾಡುತ್ತಿದ್ದರು? ಎಲ್ಲಿ ಸಿಕ್ಕಿದೆ? ಎಷ್ಟು ಕೋಟಿ ರೂಪಾಯಿಗಳ ಲೇಬಲ್ ಸಿಕ್ಕಿದೆ? ನಾನು ಕೊಟ್ಟಿರುವುದು ಹೌದೋ? ಇಲ್ಲವೋ? ಕ್ರಮ ಎಂದರೇನು? ಪೊಲೀಸ್‌ನವರು ಕೇಸ್ ಹಾಕಿ ನಂತರ ಬಿಟ್ಟು ಕಳುಹಿಸುವುದೇ? ಸೀಜ್ ಮಾಡಿದ್ದಾರೆಯೇ? ಅದರ ಡೀಟೇಲ್ಸ್ ಹೇಳಿ ನನ್ನ ಅಂದಾಜಿನ ಪ್ರಕಾರ ಈ ರೀತಿ ಸುಮಾರು 500 ಕೋಟಿ

ರೂಪಾಯಿಗಳ ಅವ್ಯವಹಾರ ನಡೆಯುತ್ತಿದೆ ಎಂದು ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತು ಹೇಳುತ್ತಿದ್ದೇನೆ. ಐದು ನಿಮಿಷ ಸನ್ಮಾನ್ಯ ಉಪಾಧ್ಯಕ್ಷರು ಸದನವನ್ನು ಮುಂದೂಡಿ. ನಾನು ಫೈನಾನ್ಸ್ ಮಿನಿಸ್ಟರ್‌ರವರನ್ನು ಕರೆದುಕೊಂಡು ಹೋಗಿ ಬೆಂಗಳೂರಿನ ಎಲ್ಲಾ ಅಂಗಡಿಗಳಲ್ಲಿ ಥರ್ಡ್ಸ್‌ಗಳನ್ನು ಉಪಯೋಗ ಮಾಡುತ್ತಿರುವುದನ್ನು ಪ್ರೂವ್ ಮಾಡುತ್ತೇನೆ. ಅವ್ಯವಹಾರ ನಡೆಯತ್ತಿದೆ, ಸರ್ಕಾರವೇ ಇದರಲ್ಲಿ ಶಾಮೀಲಾಗಿದೆ. ಸಾರ್ಕರ್ಕೆ ಎಲ್ಲಾ ಗೊತ್ತಿದ್ದೂ ಮುಚ್ಚಿಡುತ್ತಿರದೆ, ಸರ್ಕಾರವೇ ಇದರಲ್ಲಿ ಶಾಮೀಲಾಗಿದೆ. ಸರ್ಕಾರಕ್ಕೆ ಎಲ್ಲಾ ಗೊತ್ತಿದ್ದೂ ಮುಚ್ಚಿಡುತ್ತಿದೆ. ಎಂದು ಜನರು ಮಾತನಾಡುತ್ತಿದ್ದಾರೆ. ಇದನ್ನು ನಾನು ಹೇಳುತ್ತಿಲ್ಲ. ಇದು ಇಲ್ಲ ಎನ್ನಬೇಕಾದರೆ ನೀವು ಏನು ಮಾಡಿದ್ದೀರಿ? ಹೇಳಿ ಇದರ ಬಗ್ಗೆ ಇವೊತ್ತು ನಾನು ಆರೋಪ ಮಾಡುತ್ತಾ ಇಲ್ಲ. ಮೂರು ತಿಂಗಳ ಹಿಂದೆ ಆರೋಪ ಮಾಡಿದ್ದೇನೆ ಮತ್ತು ಪತ್ರಿಕೆಗೂ ಬಿಡುಗಡೆ ಮಾಡಿದ್ದೇನೆ. ಅಲ್ಲದೆ ಮುಖ್ಯಮಂತ್ರಿಗಳಿಗೂ ಪತ್ರ ಬರೆದಿದ್ದೇನೆ. ಈಗ ಎರಡನೇ ಪ್ರಕರಣವನ್ನು ನಾನು ಕೊಡುತ್ತಿದ್ದೇನೆ. ಅಂದರೆ, ಸರ್ಕಾರಿ ಪಾರದರ್ಶಕವೇ? ಎಲ್ಲಿ? ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿರುವಂಥ ಒಬ್ಬರು ದಾಖಲೆಯನ್ನು ಕೊಟ್ಟಾಗ ನಿಮ್ಮ ಎಕ್ಸೈಜ್ ಕಮಿಷನರ್ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ, ರೈಡ್ ಮಾಡುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ನಾನು ಈ ಎಲ್ಲಾ ಅಂಕಿಅಂಶಗಳನ್ನೂ ಪೂರ್ತಿಯಾಗಿ ಓದುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದನ್ನಾದರೂ ಹೇಳಿ. ಜೈಲಿಗೆ ಎಷ್ಟು ಜನರನ್ನು ಹಾಕಿದ್ದೀರಿ? ಎಷ್ಟು ಡಿಸ್ಟಿಲರಿಗಳನ್ನು ಸೀಜ್ ಮಾಡಿದ್ದೀರಿ? ಡಿಸ್ಟಿಲರಿ ಸೀಜ್ ಆಗಿದೆಯೇ? ಎಲ್ಲಿ ಈ ತರಹ ಮಾಡುತ್ತಿದ್ದಾರೆ?

ಶ್ರೀ ಸಿದ್ಧರಾಮಯ್ಯ : ಮರ್ಡರ್ ಮಾಡಿರುವವರೆಲ್ಲರೂ ಜೈಲಿಗೆ ಹೊರಟು ಹೋಗುತ್ತಾರೆಯೇ? ಡಿಸ್ಟಿಲರಿಯನ್ನು ಸೀಜ್ ಮಾಡುವುದಕ್ಕಾಗುತ್ತದೆಯೇ? ನಾನು ಉತ್ತರ ಕೊಟ್ಟ ನಂತರ ನೀವು ಹೇಳಿ.

ಉಪಾಧ್ಯಕ್ಷರು : ಅವರು ಉತ್ತರ ಕೊಟ್ಟ ಮೇಲೆ ತಾವು ಕ್ಲಾರಿಫಿಕೇಷನ್ ಕೇಳಿ. ಈಗ ಮೊದಲು ಉತ್ತರ ಕೊಡಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದು ಕ್ಲಾರಿಫಿಕೇಷನಲ್ಲ, ಲೂಟಿಯಾಗುತ್ತಿದೆ. ಯಾರು ಲೂಟಿ ಮಾಡುತ್ತಿದ್ದಾರೆ, ಅವರ ಜೊತೆಯಲ್ಲಿ ಕುಳಿತು ನೀವು ಸರ್ಕಾರ ನಡೆಸುತ್ತಿರುವುದು.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಇದು ಸುಮ್ಮನೆ ಆರೋಪ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಲ್ಲವೆಂದು ಡಿನೈ ಮಾಡಿ, ಇಲ್ಲದಿದ್ದರೆ ಇದನ್ನು ಇನ್ನೇನೆಂದು ಕರೆಯಬೇಕು?

ಸಿದ್ಧರಾಮಯ್ಯ : ಸರ್ಕಾರ ಯಾರ ಜೊತೆಯಲ್ಲೂ ಶಾಮೀಲಾಗುವ ಪ್ರಶ್ನೆಯೇ ಇಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರೇ ಇವೊತ್ತು ಸರ್ಕಾರ ನಡೆಸುತ್ತಿರುವುದು, ಅವರ ಜೊತೆ ಕುಳಿತುಕೊಂಡೇ ಸರ್ಕಾರ ನಡೆಸುತ್ತಿರುವುದು... ಲೂಟಿ ನಡೆಯುತ್ತಿದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಸೆಕೆಂಡ್ಸ್ ಸಂಪೂರ್ಣ ನಿಂತುಹೋಗಿದೆ ಎಂದು ಹೇಳುತ್ತಿದ್ದೇನೆಯೇ?

ಶ್ರೀ ಬಿ. ಎಸ್. ಯಡಿಯೂರಪ್ಪ : ಸರ್ಕಾರದ ಬೊಕ್ಕಸಕ್ಕೆ ಸುಮಾರು 500 ಕೋಟಿ ರೂಪಾಯಿಗಳಷ್ಟು ಲೂಟಿ ಆಗುತ್ತಿದ್ದರೂ ನೀವು ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಿ.

ಉಪಾಧ್ಯಕ್ಷರು : ಅವರು ಉತ್ತರ ಕೊಟ್ಟ ನಂತರ ತಾವು ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಉತ್ತರ ಕೊಡಲಿ, ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳುವುದಕ್ಕೆ ನನಗೆ ಅಧಿಕಾರವಿದೆ.

(ಗೊಂದಲ)

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ತಾವು ವಿರೋಧ ಪಕ್ಷ ನಾಯಕರಾಗಿ ಜವಾಬ್ದಾರಿಯುತ ಸ್ಥಾನದಲ್ಲಿದ್ದು ಕೆಲಸ ಮಾಡಿದ್ದೀರಿ. ಆದುದರಿಂದ, ಅವರು ಹೇಳತಕ್ಕಂಥಾದ್ದನ್ನು ಮೊದಲು ಕೇಳಬೇಕು.

ಶ್ರೀ ಬಿ. ಎಸ್.ಯಡಿಯೂರಪ್ಪ : ಎಷ್ಟು ಡಿಸ್ಟಿಲರಿಗಳನ್ನು ಸೀಜ್ ಮಾಡಿದ್ದೀರಿ?

ಶ್ರೀ ಸಿದ್ಧರಾಮಯ್ಯ : ಬೆಂಗಳೂರು ನಗರದಲ್ಲಿ ಸುಮಾರು 425 ಕಡೆ ರೈಡ್‌ಗಳನ್ನು ಮಾಡಿದ್ದು, ಐದು ಪೊಲೀಸ್ ಠಾಣೆಗಳಲ್ಲಿ ಕೇಸ್ ರಿಜಿಸ್ಟರ್ ಆಗಿದೆ, 255 ಕೇಸ್‌ಗಳನ್ನು ಬುಕ್ ಮಾಡಿದ್ದು, ಈ ಸಂಬಂಧವಾಗಿ 50 ಜನರನ್ನು ಬಂಧಿಸಿ 14 ವಾಹನಗಳನ್ನು ಸೀಜ್ ಮಾಡಲಾಗಿದೆ. ಸುಮಾರು 18,645 ಲೀಟರ್‌ಗಳಷ್ಟು ಐ.ಎಂ.ಎಲ್. ಅನ್ನು ಸೀಜ್ ಮಾಡಿ

ವಶಪಡಿಸಿಕೊಂಡಿದ್ದಾರೆ. ಇದನ್ನು ಬೆಂಗಳೂರು ನಗರಕ್ಕೆ ಸೀಮಿತವಾಗಿ ನಾನು ಹೇಳುತ್ತಿದ್ದೇನೆ. ರೆಕ್ಟಿಫೈಡ್ ಸ್ಪಿರಿಟ್, ಟಾಡಿ, ಫೆನ್ನಿ ಮುಂತಾದುವು ಇದರಲ್ಲೇ ಸೇರಿಕೊಳ್ಳುತ್ತದೆ. ಕಾನೂನು ಬಿಟ್ಟು ಸೀಜ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಎಸ್. ಸುರೇಶ್‌ಕುಮಾರ್ : ಇವೆಲ್ಲವೂ ರಾಮನಗರ ಉಪಚುನಾವಣೆಯ ಸಂದರ್ಭದ್ದೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದನ್ನು ಅವರು ಕೊಡಲಿ, ಕೊಟ್ಟರೆ ಮತ್ತೆ ಎನ್‌ಕ್ವೇರಿ ಮಾಡಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ಇದು ಸತ್ಯಕ್ಕೆ ದೂರವಾದ ಆರೋಪ, ಅದನ್ನು ಕೊಡಿ ಎನ್‌ಕ್ವೇರಿ ಮಾಡಿಸೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಒಂದು ಶಬ್ದವನ್ನೂ ಮಾತನಾಡುವುದಿಲ್ಲ, ನನ್ನ ಹತ್ತಿರ ದಾಖಲೆ ಇದೆ, ಇದರ ಬಗ್ಗೆ ಅವರು ಹೈಕೋರ್ಟ್ ಜಡ್ಜ್ ರವರಿಂದ ತನಿಖೆ ಮಾಡಿಸಲಿ, ನಾನು ಪ್ರೂವ್ ಮಾಡಿತ್ತೇನೆ.

ಉಪಾಧ್ಯಕ್ಷರು : ತಮ್ಮ ಬಳಿ ಇರುವ ಆ ದಾಖಲೆಗಳನ್ನು ಅವರಿಗೆ ಒದಗಿಸಿಕೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪ ನವರು ಆರೋಪ ಮಾಡುತ್ತಿದ್ದಾರೆ, ಮಾನ್ಯ ಹಣಕಾಸು ಸಚಿವರು ಅದನ್ನು ಡಿನೈ ಮಾಡುತ್ತಿದ್ದಾರೆ. ಇವರು ಕೇಳುತ್ತಿರುವುದೇನೆಂದರೆ, ಹೈಕೋರ್ಟ್ ಜಡ್ಡ್ ಅವರನ್ನು ನೇಮಕ ಮಾಡಿ ಎನ್‌ಕ್ವೇರಿ ಮಾಡಿದರೆ ಅದನ್ನು ನಾನು ಪ್ರೂವ್ ಮಾಡುತ್ತೇನೆಂದು. ಅದಕ್ಕೋಸ್ಕರ ಕೊನೇ ಪಕ್ಷ ಅವರು ಕೇಳುತ್ತಿರುವಂತೆ ಹೈಕೋಟ್ ಜಡ್ಜ್ ಅನ್ನು ನೇಮಕ ಮಾಡಿ ತನಿಕೆಗಾಗಿ ಅವರಿಗೆ ಇದನ್ನು ವಹಿಸಿ.

(ಗೊಂದಲ)

ಅದಕ್ಕೆ ಕೊನೆಯ ಪಕ್ಷ ನಾನು ತಮಗೆ ಕೇಳುತ್ತಿದ್ದೇನೆ. ಇಲ್ಲ ಅವರು ಕೇಳಿದ ಹಾಗೆ ಹೈ ಕೋರ್ಟಿನ ಜರ್ಜ್‌ಗಾದರೂ ಕೊಡಿ. ಇಲ್ಲ ಎಂದರೆ ಒಂದು ಸದನದ ಸಮಿತಿ ಮಾಡಿ. ಈಗ ನಾವು ಗ್ರಾನೈಟ್ ವಿಚಾರದಲ್ಲಿ ಎನ್‌ಕ್ವೇರಿ ಮಾಡಿದ್ದೇವಲ್ಲಾ. 500 ಕೋಟಿ ರೂಪಾಯಿ ಸೋರಿ ಹೋಗಿದೆ.

ಉಪಾಧ್ಯಕ್ಷರು : ನೀವು ಹೇಳಿದ್ದಕ್ಕೆಲ್ಲಾ ಸದನದ ಸಮಿತಿ ಎಂದರೆ ಹೇಗೆ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಆರೋಪ ಮಾಡಿದ ತಕ್ಷಣ ಜುಡಿಷಿಯಲ್ ಎನ್‌ಕ್ವೇರಿ ಎಂದರೆ ಹೇಗೆ?

SRI. M. MALLIKARJUNA KNARGE : He is taking challange

ಶ್ರೀ ಸಿದ್ಧರಾಮಯ್ಯ : ನಾವು ಎನ್‌ಕ್ವೇರಿ ಮಾಡಿಸುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ಅವರು ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಆರೋಪ ಮಾಡಿದ್ದಕ್ಕೆಲ್ಲಾ ಸದನದ ಸಮಿತಿ ಮಾಡಬೇಕೇ?

ಶ್ರೀ ಬಿ. ಎಸ್. ಯಡಿಯೂರಪ್ಪ : ನೀವು ಆರೋಪ ಸುಳ್ಳು ಎಂದು ಹೇಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಸರ್ಕಾರದ ಗಮನಕ್ಕೆ ಬಂದಿದೆ. ಎಕ್ಸೈಜ್ ಡಿಪಾರ್ಟ್‌ಮಂಟಿನವರು ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನೇರವಾಗಿಸದನದಲ್ಲಿ ಛಾಲೆಂಜ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಮ್ಮ ಬಗ್ಗೆ ವಿಶ್ವಾಸ ಇದ್ದರೆ, ಹಣ ಬರಬೇಕು ಎಂದು ಇದ್ದರೆ ಜ್ಯುಡಿಷಿಯಲ್ ಎನ್‌ಕ್ವೇರಿ ಮಾಡಿಸಿ. ಅಥವಾ ಸದನ ಸಮಿತಿ ಮಾಡಿ. 500 ಕೋಟಿ ರೂಪಾಯಿ ನಿಮಗೆ ತುಂಬಿಸಿ ಕೊಡುತ್ತೇನೆ. ಇದರಲ್ಲಿ ಅಧಿಕಾರಿಗಳು ಶಾಮೀಲಾಗಿ ಈ ಕೆಲಸ ಮಾಡುತ್ತಿದ್ದಾರೆ. ಸಚಿವ ಸಂಪುಟದ ಕೆಲವು ಸಚಿವರು ಶಾಮಿಲಾಗಿ ವ್ಯವಹಾರ ಮಾಡಿಸುತ್ತಿದ್ದಾರೆ ಎಂದು ಜನ ಆರೋಪ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಅವರು ಉತ್ತರ ಮುಗಿಸಲಿ. ತಾವು ನಂತರ ಕ್ಲಾರಿಫಿಕೇಜಶನ್ ಕೇಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆದಿರತಕ್ಕ ಘಟನೆ ಬಗ್ಗೆ, ಆರೋಪದ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಅವರು ಹೇಳತಕ್ಕ ಆರೋಪದ ಬಗ್ಗೆ ಸಹ ಕ್ರಮ ತೆಗೆದುಕೊಂಡಿದ್ದೇ. ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದಾರೆ. ಇನ್ನೂ ಕೂಡ ಅದರ ಬಗ್ಗೆ ಹೆಚ್ಚು ಬಿಗಿಯಾದ ಕ್ರಮವನ್ನು ತೆಗೆದು ಕೊಳ್ಳುತ್ತೇವೆ. ಆದರಿಂದ ಹೀಗೆಯೇ ಮಾಡಬೇಕು, ಎಲ್ಲದಕ್ಕೂ ಜುಡ್ಶಿಷಿಯಲ್ ಎನ್‌ಕ್ವೇರಿ ಮಾಡಬೇಕಾದುದರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ : ಇದರಲ್ಲಿ ಒರಿಜಿನಲ್ ಯಾವುದು, ಡೂಪ್ಲಿಕೇಟ್ ಯಾವುದು, ಎಂಬುದು ಬೇಕು. Whether this is original or duplicate, I want to know.

ಇದು ಓರಿಜಿನಲ್ಲೋ ಅಥವಾ ಡೂಪ್ಲಿಕೇಟೋ ಎಂದು ಸರ್ಕಾರ ಹೇಳಬೇಕು. ಇದು ಓರಿಜಿನಲ್ ಎಂದರೆ ನನ್ನ ಹತ್ತಿರ ಹೇಗೆ ಬಂತು? That's what I want to know.

ಶ್ರೀ ಸಿದ್ಧರಾಮಯ್ಯ : ಎನ್‌ಕ್ವೇರಿ ಮಾಡಿಸುತ್ತೇನೆ. ಒರಿಜಿನಲ್ಲೋ ಡೂಪ್ಲಿಕೇಟೋ ಎಂಬುದನ್ನು ನೋಡಿಸುತ್ತೇನೆ.

ಉಪಾಧ್ಯಕ್ಷರು : ನಿಮ್ಮ ಹತ್ತಿರ ಇರುವ ರೆಕಾರ್ಡ್ ಅವರ ಕಡೆಗೆ ಕೊಡಿ

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮೂರು ದಿವಸ ಆಗಿದೆ ಏಕೆ ನೋಡಿಸಲಿಲ್ಲ ? 500 ಕೋಟಿ ರೂಪಾಯಿ ಸೋರಿ ಹೋಗುತ್ತಿದೆ ಎಂದು ಹೇಳಿದಾಗ ನಿಮಗೆ ಕಳಕಳಿ ಬೇಡವೇ?

ಶ್ರೀ ಸಿದ್ಧರಾಮಯ್ಯ : ಹೌದು ಸ್ವಾಮಿ ತಮಗೆ ಬಹಳ ಕಳಕಳಿ ಇದೆ. ನಿಮಗಿಂತ ನಮಗೆ ಜಾಸ್ತಿ ಕಳಕಳಿ ಇದೆ.

(ಗೊಂದಲ)

ಉಪಾಧ್ಯಕ್ಷರು : ಅವರು ಉತ್ತರೆ ಮುಗಿಸಲಿ ನಿಮ್ಮ ಹತ್ತಿರ ಇವು ರೆಕಾರ್ಡ್ ಕೊಡಿ ಯಡಿಯೂರಪ್ಪನವರೇ

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾನು ಇನ್ನೂ ಉತ್ತರ ಮುಗಿಸಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಅವರು ಹೇಳಿದ ರೀತಿ ನಮಗೆ ಗೊತ್ತಿಲ್ಲ. ಒರಿಜಿನಲ್ಲೋ ಡೂಪ್ಲಿಕೇಟೋ ಎಂಬುದರ ಬಗ್ಗೆ ಎನ್‌ಕ್ವೇರಿ ಮಾಡಿಸುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ವಿರೋಧ ಪಕ್ಷದ ನಾಯಕರಿಗೆ ನನ್ನ ವಿನಂತಿ ಏನೆಂದರೆ ಅವರು ಉತ್ತರ ಮುಗಿಸಿಲ್ಲ. ನಿಮಗೆ ಕೇಳು ಸೌಜನ್ಯ ಇಲ್ಲ. ದಯಮಾಡಿ ಅವರು ಉತ್ತರ ಮುಗಿಸುವ ತನಕ ತಾವು ಕೇಳಬೇಕು. ನಿನ್ನೆ ಮೂರು ತಾಸು ತಾವು ಮಾತನಾಡಿದ್ದೀರಿ. ಅವರು ಕುಳಿತು ಕೊಂಡು ಕೇಳಲಿಲ್ಲವೇ ದಯಮಾಡಿ ಉತ್ತರ ಕೇಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಸರ್ಕಾರದಿಂದ ವಿಚಾರಣೆ ಮಾಡಿಸುತ್ತೇವೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ಏನಾದರೂ ಒಂದು ಅಹಿತಕರ ವಿಚಾರ ನಡೆದರೆ ನಕಲಿ ಇರುವುದನ್ನು ಸೀಜ್ ಮಾಡುತ್ತೀರಿ. ಸೀಜ್ ಮಾಡಿ ಏನು ಮಾಡುತ್ತೀರಿ ಹೇಳಿ? ಎಕ್ಸೈಜ್ ಕೇಸ್ ಹಾಕುತ್ತೀರಿ. ಆದರೆ ನಿಮಗೆ ಬಂದಿರುವುದು ಏನೆಂದರೆ ಮ್ಯಾನುಫ್ಯಾಕ್ಚರ್ ಮಾಡಿರತಕ್ಕವರು ಯಾರು ಸೋರ್ಸ್ ಇದ್ದಾರಲ್ಲಾ? ಅದರನ್ನು ಹಿಡಿಯಬೇಕಾಗಿತ್ತು; ಅವರ ಮೇಲೆ ಕೇಸ್ ಹಾಕಬೇಕಾಗಿತ್ತು. ಈಗ ನಿಮ್ಮದು ಒಂದು ಐಎಂಎಲ್ ಮಾಲೀಕ ಯಾರು ಇರುತ್ತಾರೆ, ಅವರ ಮೇಲೆ ನೀವು ಕೇಸ್ ಹಾಕಬೇಕು. ನನ್ನ ಕ್ಷೇತ್ರದಲ್ಲಿ ಒಂದು ಕೇಸ್ ಆಗಿದೆ.

ಶ್ರೀ ಸಿದ್ಧರಾಮಯ್ಯ : ನಾನೂ ಸ್ವಲ್ಪ ದಿವಸ ಲಾಯರ್ ಕೆಲಸ ಮಾಡಿದ್ದೇನೆ. ಯಾವನೋ ಅಂಗಡಿಯಲ್ಲಿ ಡೂಪ್ಲಿಕೇಟ್ ಲೇಬಲ್ ಮಾಡುತ್ತಿದ್ದರೆ, ಕೇಸ್ ಹಾಕಬೇಕು. ಯಾವನು ಮಾರಟ ಮಾಡುತ್ತಿದ್ದಾನೆ, ಡೂಪ್ಲಿಕೇಟ್ ಎಲ್ಲಿ ಪ್ರಿಂಟ್ ಆಗಿದೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಉಪಾಧ್ಯಕ್ಷರು : ಮಾನ್ಯ ಖರ್ಗೆಯವರೇ ಅವರು ಉತ್ತರ ಮುಗಿಸುವ ತನಕ ಕೇಳುವ ಸೌಜನ್ಯ ಇಲ್ಲ ಎಂದರೆ ಹೇಗೆ? ಸಂಪ್ರದಾಯದ ಪ್ರಕಾರ ತಾವು ಕೇಳಬೇಕು. ಸರ್ಕಾರ ಉತ್ತರ ಕೊಡುವಾಗ ತಾವು ಕೇಳಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ಈ ತರಹದ ಕೆಲವು ನಿದರ್ಶನಗಳು ಬಂದ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಅವರು ದಾಖಲೆಗಳನ್ನು ಕೊಡಲಿ ನಿಮ್ಮ ಮೂಲಕ. ಅದು ಡೂಪ್ಲಿಕೇಟೋ ಜಿನ್ಯೆನೋ, ಅದನ್ನು ಯಾರು ಮಾಡಿದರು? ಅದು ಎಲ್ಲಿಂದ ಬಂತು? ಅದಲ್ಲಿ ಯಾರು ಯಾರು ಶಾಮೀಲಾಗಿದ್ದಾರೆ, ಅವರ ಮೇಲೆಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ. ಅವರು ಕೊಡಲಿ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿದ್ಧರಾಮಯ್ಯನವರು ಹೇಳಿದಂತಹ ಮಾತಿಗೆ ಮಾನ್ಯ ಯಡಿಯೂರಪ್ಪನರರು ಸ್ಪಷ್ಟವಾಗಿ ಹೇಳಿದರು. ಏನೆಂದರೆ ತಾವು ಅಲಿಗೇಷನ್ ಅನ್ನು ಡಿನ್ನೇ ಮಾಡಲಿಲ್ಲ. ಅದು ನಡೆದಿದೆ ಸೆಕೆಂಡ್ಸ್ ಹಿಂದೂ ನಡೆದಿದೆ ಈಗಲೂ ನಡೆಯುತ್ತಿದ್ದೆ ಅದನ್ನು ತಡೆಯತಕ್ಕದ್ದಕ್ಕೆ ನಾವು ಕ್ರಮ ಹಾಕಿಕೊಳ್ಳುತ್ತೇವೆಂದು ಹೇಳಿದಿರಿ. ಆದರೆ ಅವರ ಆಪಾದನೆ ಏನು ಅಂದರೆ ಸೆಕೆಂಡ್ಸೇ ಅಲ್ಲ. ಥರ್ಡ್ಸ್ ಅಂದರೆ ಅದರಲ್ಲೇ ಮತ್ತೆ ಡೂಪ್ಲಿಕೇಟ್ ಮಾಡಿ ಕೇಲವು ಜನ ಕೆಲವು ಡಿಸ್ಟಿಲರೀಸ್ ಇವತ್ತಿನ ದಿವಸ ಮಾರುತ್ತಿದ್ದಾರೆ.

ಯಾವುದೋ ಒಂದು ಕಂಪನಿ ಮೆಕೆಡಾವೆಲ್ ಕಂಪನಿ ಎಂದು ಇದೆ ಉದಾಹರಣೆಗೆ. ಆ ಕಂಪನಿಯದೇ ಒಂದು ಸೆಕೆಂಡ್ಸ್ ಅಂತೂ ಓಡಿಸುತ್ತಾರೆ. ಆ ಒರಿಜಿನಲ್ ಕಂಪನಿಯಿಂದ. ಆದರೆ ತಿರುಗಿ ಇನ್ನೊಂದು ಡಿಸ್ಟಿಲರಿನವರು ಆ ಮೆಕ್‌ಡೋಲ್ ಕಂಪನಿಯನ್ನು ಡೂಪ್ಲಿಕೇಟ್ ಮಾಡಿ ಅಥವಾ ಹೊಸ ಒಂದು ಲೇಬಲ್ ಸೃಷ್ಟಿ ಮಾಡಿ ಅವರು ಅದಕ್ಕೆ ಹಚ್ಚಿ ಅವರು ಎಲ್ಲಾ ಕಡೆ ತಮ್ಮ ಸಪ್ಲೈಯನ್ನು ಕೊಡುತ್ತಿದ್ದಾರೆ. ಅದನ್ನು ಸೆಕೆಂಡ್ಸ್ ಎಂದು ಕನ್ಸಿಡರ್ ಮಾಡುವುದಕ್ಕೆ ಬರುವುದಿಲ್ಲ. ಅದು ಥರ್ಡ್ ಆಗಲೀ, ಇಲ್ಲಿಸಿಟ್ ಆಗಲಿ, ಇಲೀಗಲ್ ಎಂದಾದರೂ ಅನ್ನಿ, ಆ ರೀತಿಯಿಂದ ಓಡಿಸುತ್ತಾರೆ. ಅದನ್ನು ನಾನು ಪ್ರೂವ್ ಮಾಡುತ್ತೇನೆ, ಒಂದು ವೇಳೆ ನಾನು ಪ್ರೂವ್ ಮಾಡದೇ ಹೋದರೆ ಈ ಸ್ಥಾನದಲ್ಲಿ ಇರುವುದಿಲ್ಲ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕೆ ನೀವು ಹೈಕೋರ್ಟ್ ಜಡ್ಜ್‌ಗಾದರೂ ನೇಮಕಾತಿ ಮಾಡಿ. ಅವರ ಮುಂದೆ ನಾನು ಪ್ರೂವ್ ಮಾಡುತ್ತೇನೆ. ಇಲ್ಲ ನಾನು ಸಲಹೆ ಕೊಟ್ಟ ಹಾಗೆ ಸದನದ ಸಮಿತಿ ಮಾಡಿ. ಅದಕ್ಕೆ ಅವರು ಒಪ್ಪುತ್ತಿದ್ದಾರೆ. ಅದಕ್ಕೆ ಎರಡೂ ಮಾಡುವುದಕ್ಕೆ ತಯಾರಿಲ್ಲ ಎಂದರೆ, ಇದು ಯಾವ ನ್ಯಾಯ ಹೇಳಿ? ಯಾವುದಾದರೂ ಒಂದು ಇರಬೇಕಲ್ಲಾ

ಇನ್ನೊಂದು ಗಂಭೀರವಾದ ಆರೋಪ ಮಾಡಿದರು. ಅದು ಬಹುಶಃ ರೆಕಾರ್ಡ್‌ನಲ್ಲಿ ಬಂತೋ ಇಲ್ಲವೋ ನಾನು ನೋಡಿಲ್ಲ. ಸ್ಪಷ್ಟವಾಗಿ ಅವರು ಹೇಳಿದ್ದಾರೆ. ಇದರಲ್ಲಿ ಸರ್ಕಾರ ಜನಾನೇ ಶಾಮೀಲು ಇದ್ದಾರೆ. ಅದಕ್ಕಾಗಿ ಇದನ್ನು ನೀವು ತಡೆ ಹಿಡಿಯುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಸಮಿತಿ ಮುಂದೆನೇ ನಾನು ಪ್ರೂವ್ ಮಾಡುತ್ತೇನೆಂದು ಹೇಳಿದ್ದಾರೆ. ಅದಕ್ಕೇ ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರದ ಜನರೇ ಶಾಮೀಲು ಆಗಿದ್ದಾಗ ನೀವು ಎಷ್ಟು ಪ್ರಯತ್ನ ಮಾಡಿದರೂ ತಡೆ ಹಿಡಿಯುವುದಕ್ಕೆ ಆಗುವುದಿಲ್ಲ ಅದಕ್ಕಾಗಿ ಆ ಒಂದು ಸಮಿತಿ ಆದರೂ ಮಾಡಿ ಇಲ್ಲ ಅಂದರೆ ಜ್ಯುಡಿಷಿಯಲ್ ಪ್ರೋಬ್ ಎಂದರೆ ಹೈಕೋಟ್ ಜಡ್ಜ್‌ನಿಂದ ಕಮಿಟಿ ಆದರೂ ನೇಮಕಾತಿ ಮಾಡಿ ಇಲ್ಲಿ ಪ್ರತಿಷ್ಠೆ ಪ್ರಶ್ನೆ ಏನು? ನಾವು ಹೇಳಿದ್ದೇ ಕೇಳಬೇಕು ನಿಮಗೆ ತೊಂದರೆ ಮಾಡಬೇಕು ಎಂದಲ್ಲ. ನೇರವಾಗಿ ಒಂದು ಅಪಾದನೆ ಇದೆ. ಸರ್ಕಾರ ನಡೆಸತಕ್ಕವರೇ ಇದರಲ್ಲಿ ಶಾಮೀಲು ಇದ್ದಾರೆ. ಅದಕ್ಕಾಗಿ ಹೈಕೋರ್ಟ್ ಜಡ್ಜ್ ಮೂಲಕ ನ್ಯಾಯವನ್ನು ಒದಗಿಸಬೇಕಾದರೆ ಅಥವಾ ಸೋರಿ ಹೋಗತಕ್ಕದ್ದನ್ನು ನಿಲ್ಲಿಸಬೇಕಾದರೆ ತಡೆಗಟ್ಟಬೇಕಾದರೆ ಇದು ಬೇಕು ಎಂದು ಹೇಳುತ್ತಿದ್ದಾರೆ. ನೀವು ಅದಕ್ಕೆ ಒಪ್ಪದೇ ಹೋದರೆ ಸದನ ಸಮಿತಿ ಮಾಡಿ. ಆ ಕಮೀಟಿ ಮುಂದೆ ಬರುತ್ತೇನೆ ಎನ್ನತಕ್ಕದ್ದನ್ನು ಹೇಳುತ್ತಾರೆ. ನೀವು ಕೊಟ್ಟಂಥ ಶಿಕ್ಷೆಯನ್ನು ತೆಗೆದು ಕೊಳ್ಳುವುದಕ್ಕೆ ತಯಾರು ಇದ್ದಾರೆ. ಇಷ್ಟೆಲ್ಲಾ ಇದ್ದಾರೂ ಕೂಡ ನೀವು ಒಪ್ಪುವುದಿಲ್ಲ ಎಂದರೆ ಹೇಗೆ?

ಶ್ರೀ ಎಂ. ಪಿ. ಪ್ರಕಾಶ್ : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರು ಹಿಂದೆ ಸರ್ಕಾರವನ್ನು ನಡೆಸಿರತಕ್ಕವರಾಗಿದ್ದಾರೆ. ಮಾನ್ಯ ರಾಮಕೃಷ್ಣ ಅವರೂ ಸಹ ಸರ್ಕಾರವನ್ನು ನಡೆಸಿರತಕ್ಕವರು ಆಗಿದ್ದಾರೆ. ಈಗ ಗುರುತರವಾದಂತಹ ಆಪಾದನೆಗಳನ್ನು ಅವರು ಮಾಡಿದ್ದಾರೆ. ಅದನ್ನು ನಾವೇನೂ ಅಲ್ಲಗಳೆಯತಕ್ಕಂಥಹ ಪ್ರಯತ್ನವನ್ನು ಸರ್ಕಾರದಿಂದ ಮಾಡಿಲ್ಲ. ಅದರ ಬಗ್ಗೆ ನಾವು ವಿಚಾರಣೆ ನಡೆಸುತ್ತೇವೆಂದು ಹೇಳಿದ್ದಾರೆ. ವಿಚಾರಣೆ ನಡೆಸಬೇಕಾದಂತಹ ಆಪಾದನೆಗೆ ಸಂಬಂಧಪಟ್ಟಿರತಕ್ಕಂಥ ವಿವರ ಏನು ಇದೆ. ಅದನ್ನು ತಾವು ಕೊಡಿ. ಅದನ್ನು ನೋಡಿ ಸರ್ಕಾರ ಖಂಡಿತವಾಗಿ ವಿಚಾರಣೆ ಮಾಡುತ್ತದೆ. ನೀವು ಆಪಾದನೆ ಮಾಡಿದ್ದೀರಿ. ಸರ್ಕಾರ ಶಾಮೀಲಾಗಿದೆ ಎನ್ನತಕ್ಕ ಮಾತುಗಳನ್ನು ಹೇಳಿ ಎಲ್ಲದಕ್ಕೂ ಸದನದ ಸಮಿತಿಗಳನ್ನು ನಡೆಸಬೇಕು ಎನ್ನತಕ್ಕದ್ದಾಗಿದ್ದರೆ ಸರ್ಕಾರ ಪ್ರತಿ ಒಂದು ಹೆಜ್ಜೆ ಹೆಜ್ಜೆಯಲ್ಲೂ ಸದನ ಸಮಿತಿ ಮಾಡಿ ಇಂತಹ ವಿಚಾರಗಳನ್ನು ನಿರ್ವಹಣೆ ಮಾಡಲಿಕ್ಕೆ ಆಗುವುದಿಲ್ಲ. ಜನ ನಮ್ಮನ್ನು ಆಯ್ಕೆ ಮಾಡಿ ಸರ್ಕಾರ ಮಾಡಲು ಕಳುಹಿಸಿದ್ದಾರೆ. ಸರ್ಕಾರ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತದೆ. ಕರ್ತವ್ಯ ನಿರ್ವಹಿಸುವಂತಹದರಲ್ಲಿ ಲೋಪದೋಷಗಳು ಆಗಿದ್ದರೆ ಸಂಪೂರ್ಣವಾಗಿ

ಮಾನ್ಯ ಹಣಕಾಸಿನ ಮಂತ್ರಿಗಳ ಉತ್ತರವನ್ನು ತಾವು ದಯವಿಟ್ಟು ಕೇಳಿ. ಯಾವ್ಯಾವ ಪ್ರಕರಣದಲ್ಲಿ ಏನ್‌ಕ್ವೈರಿ ಮಾಡಿದ್ದೇವೆ? ಯಾವ್ಯಾವ ಪ್ರಕರಣದಲ್ಲಿ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ಹೇಳುತ್ತಿದ್ದಾರೆ ತಮಗೆ ಅದು ಅತೃಪ್ತಿ ಆಗಿದ್ದರೆ ಸ್ಪಷ್ಟೀಕರಣ ಸಮಯದಲ್ಲಿ ಆ ವಿಚಾರವನ್ನು ಕೇಳಿದರೆ ನಾವು ಮತ್ತೆ ಸ್ಪಷ್ಟೀಕರಣ ನೀಡಲು ತಯಾರು ಇದ್ದೇವೆ. ತಾವು ದಯಮಾಡಿ ಸಹಕಾರ ಕೊಟ್ಟು ಆ ವಿಷಯವನ್ನು ಸ್ಪಷ್ಟೀಕರಣ ಸಮಯದಲ್ಲಿ ಕೇಳುಕ್ಕೆ ತಮಗೆ ಹಕ್ಕು ದಯಮಾಡಿ ಸಹಕಾರ ಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ.

2,00 ಪಿ ಎಂ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೊಟ್ಟಿದ್ದೇನೆ ಹೇಳಿದ್ದೇನೆ ಪುನಃ ಇವತ್ತು ಹೇಳುತ್ತಿದ್ದೇನೆ ಎಂದು ಹೇಳುತ್ತಿದ್ದರೂ ಅದಕ್ಕೆ ಇವರು ಒಪ್ಪುವುದಿಲ್ಲ ಎಂದರೆ ಅದು ಸರಿಹೋಗುವುದಿಲ್ಲ. ಸತ್ಯ ಏನಿದೆಯೋ ಅದು ಹೊರಗಡೆ ಬರಲಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಹಣಕಾಸು ಸಚಿವರು ಭಾಷಣ ಮಾಡುವುದನ್ನು ತಡೆ ಹಿಡಿಯಬೇಕೆಂಬ ಉದ್ದೇಶ ನಮಗೆ ಯಾರಿಗೂ ಇಲ್ಲ ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಲ ಹೇಳುತ್ತಾರೆ ನಿಮ್ಮ ಹತ್ತಿರ ಯಾವುದೇ ಸಾಕ್ಷಾಧಾರ ಇದ್ದರೆ ಕೊಡಿ ನಾನು ತನಿಖೆ ಮಾಡಿಸುತ್ತೇನೆ. ಅದನ್ನು ಯಾವ ಮಟ್ಟದಲ್ಲಿಯಾದರೂ ಮಾಡಿಸುತ್ತೇನೆ ಎಂದು ಇಲ್ಲೇ ಹೇಳಿದ್ದಾರೆ. ಸೆಕೆಂಡ್ಸ್ ಅಂದರೆ ಕೆಟ್ಟದು ಎಂದು ಅಲ್ಲ. ಸೆಕೆಂಡ್ಸ್ ಅಂದರೆ ತೆರಿಗೆ ಇಲ್ಲದೆ ಮಾರುವಂಥದ್ದು. ಯಡಿಯೂರಪ್ಪನವರು ಇಲ್ಲಿ ಚೀಟಿ ತಂದಿದ್ದಾರೆ. ಅದು ನಿಜವಾದ ಚೀಟಿಯೇ ಅಲ್ಲವೇ ಎಂಬುದು ಒಂದು ಆದರೆ ಯಡಿಯೂರಪ್ಪನವರು ಹೇಳುವುದು ಆ ಚೀಟಿಯೂ ಖೋಟಾಚೀಟಿ ಅಂದರೆ ಸರ್ಕಾರದ ಮೊಹರನ್ನು ಬೇರೆಯವರು ಮುದ್ರಣ ಮಾಡಿ, ಖೋಟಾನೋಟು ಎಷ್ಟೋ ಇದೂ ಅಷ್ಟೇ ಇದು ಬಹಳ ಗುರುತರವಾದ ಅಪಾದನೆ ಮಾಡುವಾಗ ಯಡಿಯೂರಪ್ಪನವರು ನಾನು ರುಜುವಾತುಪಡಿಸುತ್ತೇನೆ. ಇದರಲ್ಲಿ ವಿಫಲನಾದರೆ ಈ ಸ್ಥಾನದಲ್ಲಿರುವುದಿಲ್ಲವೆಂದು ಹೇಳಿದ್ದಾರೆ. ಅವರು ಕೇಳುತ್ತಿರುವುದು ಇದರ ಬಗ್ಗೆ ಒಂದು ಸದನಸಮಿತಿ ಮಾಡಿ. ಇಲ್ಲ ಹೈಕೋರ್ಟಿನ ನ್ಯಾಯಾಧೀಶರಿಂದ ತನಿಖೆ ಮಾಡಿಸಿ. ಅವೆರಡೂ ಮಾಡುವುದಿಲ್ಲವೆಂದರೆ ಸರ್ಕಾರ ನೇರವಾಗಿ ಈದೆಂದಿಗೆ ಅವಕಾಶ ಕೊಡಬೇಕೆಂಬ ಉದ್ದೇಶವೇ? ಏನೂ ಎಂಬುದು ಗೊತ್ತಾಗಬೇಕಲ್ಲಾ. ಅವರು ತಂದಿರುವು ಚೀಟಿ ನಾನೂ ನೋಡಿದೆ, ಅದು ಖೋಟಾಚೀಟಿ, ಈ ಖೋಟಾಚೀಟಿಯಿಂದ ವರ್ಷಕ್ಕೆ 500 ಕೋಟಿ ರೂ ನಷ್ಟು ಎಂದು ಹೇಳುತ್ತಿದ್ದಾರೆ, ಸೆಕೆಂಡ್ಸ್‌ನಿಂದ ವರ್ಷಕ್ಕೆ ಕನಿಷ್ಟ ಎರಡು

ಸಾವಿರ ಕೋಟಿ ನಷ್ಟವಿದೆ, ದಿನಕ್ಕೆ ಕಣ್ಣಿಗೆ ಕಂಡಹಾಗೆ ಸುಮಾರು 5 ಕೋಟಿ ನಷ್ಟವಾಗುತ್ತಿರದೆ. ಸರ್ಕಾರದ ಬೊಕ್ಕಸಕ್ಕೆ ಹಣ ಬರಬೇಕೆಂದು ತಾವೇನು ಪ್ರಯತ್ನಮಾಡುತ್ತಿದ್ದೀರಿ, ಅದಕ್ಕೆ ಇಂತಹ ಚಟುವಟಿಕೆಗಳಿಂದ ಭಂಗ ಬರುತ್ತದೆ. ಆದ್ದರಿಂದ ಇದಕ್ಕೆ ಒಂದು ಸದನಸಮಿತಿ ಮಾಡಿ ಆದರೆ ತಮ್ಮ ಉತ್ತರವನ್ನು ತಡೆಹಿಡಿಯಬೇಕೆಂಬ ಉದ್ದೇಶ ನಮಗೆ ಯಾರಿಗೂ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಅಧ್ಯಕ್ಷರೇ, ಸದನದಲ್ಲಿ ಯಾವುದಾದರೂ ಗುರುತರ ಅಪಾದನೆಗಳನ್ನು ಮಾಡಬೇಕಾಗಿದ್ದರೆ ನಮ್ಮಲ್ಲಿರುವ ನಿಯಾಮಾವಳಿ ಪ್ರಕಾರ ಮೇಲ್ನೋಟಕ್ಕೆ ಅದು ಸಾಬೀತಾಗುವುದೋ ಇಲ್ಲವೋ ಎಂಬುದಕ್ಕೆ ಸಂಬಂಧಿಸಿರುವ ದೂರುದಾಖಲೆಗಳನ್ನು ತಮ್ಮ ಅವಗಾಹನೆಗೆ ಕೊಡಬೇಕು, ತಾವು ಹಿರಿಯರಿದ್ದೀರಿ, ಸದನದಲ್ಲಿ ಕೆಲಸ ಮಾಡಿದ್ದೀರಿ. ಸದನದಲ್ಲಿ ಯಾವುದೇ ತರಹ ಆಪಾದನೆ ಮಾಡಬೇಕಾದರೆ ನೋಟೀಸನ್ನು ಕೊಡಬೇಕು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್ ಅವರು) ಪೀಠವನ್ನಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಅವರು ಎಕ್ಸೈಜ್ ಬಗ್ಗೆ ಮಾತನಾಡುವಾಗ ಯಡಿಯೂರಪ್ಪನವರು ಮಧ್ಯದಲ್ಲಿ ಇಂಟರ್‌ವೀನ್ ಆಗಿ ಹೇಳಿದರು : ಪಟಿಕ್ಯುಲರ್ಲಿ ಐಎಂಎಫ್‌ಎಲ್‌ನಲ್ಲಿ ಸೆಕೆಂಡ್ಸೂ ಅಲ್ಲ, ಥರ್ಡ್ಸ್ ಅಂದರೆ ಡೂಪ್ಲಿಕೇಟ್‌ನಲ್ಲೇ ಇನ್ನೊಂದು ಸೀಲ್ ತಯಾರು ಮಾಡಿಕೊಂಡು ಎಕ್ಸೈಜ್ ಲೇಬಲ್ಸ್ ಪ್ರಿಂಟ್ ಮಾಡಿಕೊಂಡು ಮಾರಿಬಿಡುವುದು, ಅದಕ್ಕೆ ಎಕ್ಸೈಜ್ ಡ್ಯೂಟಿಯೂ ಇಲ್ಲ, ಭಟ್ಟಿಸಾರಾಯಿ ತುಂಬಿ ಅದಕ್ಕೊಂದು ಲೇಬಲ್ ಹಚ್ಚಿಕೊಂಡು ಮಾರುವುದು ಆ ಕೆಲಸ ನಡೆದಿದೆ. ಅದರ ಬಗ್ಗೆ ನಾನು 3 ತಿಂಗಳ ಹಿಂದೆಯೇ ಪ್ರಸ್ತಾಪ ಮಾಡಿದ್ದೆ. ಮೊನ್ನೆ ಬಜೆಟ್ ಭಾಷಣದಲ್ಲೂ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ನೀವು ಏನೂ ಹೇಳಲಿಲ್ಲವೆಂದು ಕೇಳಿದರು ಅದಕ್ಕೆ ಅವರು ಏನು ಹೇಳಿದರು ಅಂದರೆ 48 ಕೇಸಸ್ ರಿಜಿಸ್ಟರ್ ಮಾಡಿದ್ದೇವೆ. ಆರೆಂಟು ಕಾರುಗಳನ್ನು ಸೀಜ್ ಮಾಡಿದ್ದೇವೆ ಎಂದು ಹೇಳಿದರು. ಅವರು ಹೇಳಿದರು ನಾನು ಕೊಟ್ಟ ಸ್ಪೆಸಿಫಿಕ್ ಚಾರ್ಜ್ ಅಂದರೆ ಇದು ಡೂಪ್ಲಿಕೇಟಿದೆ. ಇದರಿಂದ ಕೋಟ್ಯಂತರ ರೂಪಾಯಿ ಸೋರಿಹೋಗುತ್ತಿದೆ ಅಷ್ಟಕ್ಕೇ ನಿಲ್ಲಿಸದೆ ಮುಂದುವರೆದು ಹೇಳಿದರು, ಇದನ್ನು ನಾನು ಸಾಬೀತು ಮಾಡದೇ ಹೋದರೆ ಈ ಸ್ಥಾನದಲ್ಲಿ ನಾನು ಇರುವುದಿಲ್ಲ ಎಂದು ಮುಂದುವರೆದು ಹೇಳಿದರು ಇದನ್ನು ನಿಮಗೆ ನಿಲ್ಲಿಸಲು ಆಗುವುದಿಲ್ಲ. ಸರ್ಕಾರದಲ್ಲೇ ಕೆಲವು ಜನ ಇದಕ್ಕೆ ಶಾಮೀಲಾಗಿದ್ದಾರೆ ಅದಕ್ಕಾಗಿ ನೀವು ನ್ಯಾಯಾಂಗ ತನಿಖೆ ಮಾಡಿಸಿ ಅಲ್ಲಿ ನಾನು ದಾಖಲಾತಿಗಳನ್ನು ಕೊಡುತ್ತೇನೆ ಎಂದು ಹೇಳಿದರು. ಆ ಮಧ್ಯದಲ್ಲಿ ನಾನು ಸಜೆಸ್ಟ್ ಮಾಡಿದೆ ಯಾವಾಗ ಅವರ ಹತ್ತಿರ

ಎಲ್ಲಾ ದಾಖಲಾತಿಗಳಿದ್ದಾಗ ಮತ್ತು ರುಜುವಾತು ಪಡಿಸುವುದಕ್ಕೆ ಅವರು ಸಿದ್ಧರಿದದ್ದಾಗ ತಾವು ಹೈಕೋರ್ಟಿನ ಜಡ್ಜ್‌ರಿಂದ ತನಿಖೆ ಮಾಡಿಸಿ ಸೋರಿ ಹೋಗುತ್ತಿರುವ ಆದಾಯಕ್ಕೆ ತಡೆಗಟ್ಟಿ ಇದರಿಂದ ನಿಮಗೆ ಆದಾಯ ಹೆಚ್ಚಾಗಿ ಬರುವ ವ್ಯವಸ್ಥೆಯಾಗುತ್ತದ ಅಥವಾ ನಮ್ಮ ಸದನ ಸಮಿತಿಗಾದರೂ ಒಪ್ಪಿಕೊಳ್ಳಿ, ಯಾವರೀತಿ ಗ್ರಾನೈಟ್‌ಗಾಗಿ ನಾವು ಹೋರಾಟ ಮಾಡಿದಾಗ ತಾವೇ ಒಪ್ಪಿದಿರಿ, ಇವತ್ತು ಅದರ ವರದಿಯೂ ಬಂತು ಅದೇ ರೀತಿ ಎಕ್ಸೈಜಿನಲ್ಲಿ ಸೆಕೆಂಡ್ಸ್ ಥರ್ಡ್ಸ್ ಹಾವಳಿ ನಿಲ್ಲಿಸಿ ಆದಾಯ ಹೆಚ್ಚಿಸಿಕೊಳ್ಳಬೇಕೆಂದರೆ ನೀವು ಹೌಸ್‌ಕಮಿಟಿಗೆ ಒಪ್ಪಿಸಿ ಅಥವಾ ನ್ಯಾಯಾಂಗ ತನಿಖೆಗಾದರೂ ಒಪ್ಪಿಸಿ ಎಂಬ ಮಟ್ಟಕ್ಕೆ ಚರ್ಚೆ ಬಂತು. ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಸೆಕೆಂಡ್ಸ್ ನಡೆಯುತ್ತಿದೆ. ಅದನ್ನು ತಡೆಗಟ್ಟಲು ನಾವು ಪ್ರಯತ್ನಮಾಡುತ್ತಿದ್ದೇವೆಂದು ಅವರೇ ಹೇಳಿದ್ದಾರೆ..

ಶ್ರೀ ಸಿದ್ಧರಾಮಯ್ಯ : ನಿಮ್ಮ ಕಾಲದಲ್ಲಿ ಎಲ್ಲಾ ನಿಂತುಹೋಗಿತ್ತಾ ಹೇಳಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಿಂದೆ ಅದು ಇದ್ದರೆ ಯಾರಾದರೂ ತರಬೇಕಾಗಿತ್ತು ನಿಮ್ಮ ಸರ್ಕಾರದ ಜನರೇ ಶಾಮಿಲಾಗಿ ಇಂತಹ ಲೇಬಲ್ ಹಚ್ಚಿ ಹಂಚುತ್ತಿದ್ದಾರೆಂಬ ಮಾತು ಇವತ್ತು ಬಂದಿರುವುದು ಅದಕ್ಕೆ ಕಮಿಟಿ ಮಾಡಿ, ಹೆದರುವುದು ಯಾಕೆ? ನಮ್ಮ ಕಾಲದಲ್ಲಿ ಎಷ್ಟು ತಡೆಯಲು ಪ್ರಯತ್ನಿಸಬೇಕಾಗಿತ್ತೂ ಅಷ್ಟು ಮಾಡಲಾಗಿತ್ತು. ಆದರೆ ಸರ್ಕಾರದವರೇ ಶಾಮಿಲಾಗಿ ಲೇಬಲ್ ಪ್ರಿಂಟ್‌ಮಾಡಿ ಹಂಚುತ್ತಿದ್ದಾರೆ. ಅದನ್ನು ರುಜುವಾತುಪಡಿಸಲು ಕಾಗದಪತ್ರಗಳನ್ನು ತಂದಿದ್ದಾರೆ.

ಶ್ರೀ ಸಿದ್ಧರಾಮಯ್ಯ : ನಿಯಮಾವಳಿಗಳಿವೆ, ಅದರ ಪ್ರಕಾರ ತರಬೇಕಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅಪ್ಪಣೆ ಮೇರೆಗೆ ಹೇಳುತ್ತೇನೆ. ಈಗ ಚರ್ಚೆ ಒಂದು ಹಂತಕ್ಕೆ ಬರತಕ್ಕಂಥ ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ಹಿರಿಯರಾದಂಥ ಮಾನ್ಯ ಯಡಿಯೂರಪ್ಪನವರು ಕೆಲವು ವಿಷಯಗಳನ್ನು ಹೇಳಿ ಅಪಾದನೆ ಮಾಡಿದರು. ಹಣಕಾಸಿನ ಸಚಿವರು ಅದನ್ನು ಅಲ್ಲಗೆಳೆಯಲಿಲ್ಲ. ಮತ್ತು ನಾವು ಖಂಡಿತವಾಗಿ ಇದರ ಬಗ್ಗೆ ವಿಚಾರಣೆ ನಡೆಸುತ್ತೇವೆ ಎಂದು ಹೇಳಿದರು. ಆದರೆ ಅವರು ಹೇಳಿದರು ಹೈಕೋರ್ಟಿನ ನ್ಯಾಯಾಧೀಶರ ಮೂಲಕವಾಗಲೀ ಅಥವಾ ಸದನ ಸಮಿತಿಗಳ ಮೂಲಕವಾಗಲೀ ವಿಚಾರಣೆ ನಡೆಸುವುದಕ್ಕೆ ಹೇಳಿದರು. ವಿಚಾರಣೆ ನಡೆಸಬೇಕೇ ಅಥವ ಬೇಡವೇ ಅದರ ಅಲೀಗೇಷನ್ ಏನು ಎನ್ನುವುದಕ್ಕೆ ತಮ್ಮ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಅವರ ಹತ್ತಿರ ಇರತಕ್ಕಂತಹ ಎಲ್ಲಾ ದಾಖಲೆಗಳನ್ನು ತಮ್ಮ ಅವಗಾಹನೆಗಾಗಿ ಕಳುಹಿಸಿ ಕೊಡಬೇಕಾಗುತ್ತದೆ. ತಾವು ಅದರ ಮೇಲ್ನೋಟಕ್ಕೆ ಅದು

ವಿಚಾರಣೆಗೆ ಅರ್ಹವಾಗಿರತಕ್ಕಂತಹ ಆಪಾದನೆಗಳು ಎಂದು ಕಂಡು ಬಂದಲ್ಲಿ ತಾವು ಸರ್ಕಾರಕ್ಕೆ ಮಾರ್ಗದರ್ಶನ ಮಾಡಬಹುದು. ಆಗ ಸರ್ಕಾರ ನೇರವಾಗಿ ಈ ವಿಚಾರದಲ್ಲಿ ಸದನಸಮಿತಿಯನ್ನು ಆದರೂ ನೇಮಿಸಬಹುದು. ಅಥವಾ ನ್ಯಾಯಾದೀಶರನ್ನು ನೇಮಿಸಬಹುದು ಅಥವಾ ನಮ್ಮ ಅಧಿಕಾರಿಗಳ ಮುಖಾಂತರ ತನಿಖೆ ನಡೆಸಬಹುದು. ಅಥವ ನಮ್ಮ ಸಬ್ಜೆಕ್ಟ್ ಕಮಿಟಿಗಳ ಮುಖೇನ ತನಿಖೆ ನಡೆಸಬಹುದು. ಮಾನ್ಯ ಅಧ್ಯಕ್ಷರೇ ನೇರವಾಗಿ ಇದಕ್ಕೆ ಸಂಬಂಧ ಇಲ್ಲದಿದ್ದರೂ ಕೂಡ, `Where the allegations are made in the House against a particular polticial party, the leader of the party or group in the House may be permitted to make a statement in regard thereto. He has however to submit to the Speaker the text of the statement to be made by him and he can make a statement only if the Speaker accords the permission..

Without making any of these things, he simply demands it and is this the way that one has to run the Government ? You have also run the Government for several years. Therefore, Sir..

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಯಾವ ಸಂಧರ್ಬದಲ್ಲಿ ಬಂತು ಎಂದರೆ.

ಅಧ್ಯಕ್ಷರು : ನಾನು ನಿಮಗೆ ಅವಕಾಶ ಕೊಡುತ್ತೇನೆ. ಇವರಿಬ್ಬರೂ ಪರಸ್ಪರ ಮಾನ್ಯ ಉಪಮುಖ್ಯಮಂತ್ರಿಗಳು ಮಾನ್ಯ ವಿರೋಧ ಪಕ್ಷದ ನಾಯಕರು ನಿಮ್ಮ ಸರ್ಕಾರ ನಿಮ್ಮ ಸರ್ಕಾರ ಎಂದು ಹೇಳುತ್ತಿದ್ದಾರೆ. ನೀವೀಬ್ಬರೂ ಭ್ರಮೆಯಲ್ಲಿದ್ದೀರಿ. ನಿಮ್ಮ ಸರ್ಕಾರಗಳು ಬರುವುದೇ ಇಲ್ಲ. ಸರ್ಕಾರ ಖಾಯಂ ಆಗಿ ನಡೆಸುವವರೇ ಬೇರೆ ನೀವು ಜಾಗ ಬದಲಾಯಿಸುತ್ತೀರಿ ಅಷ್ಟೇ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೇಇದನ್ನೆಲ್ಲಾ ನಡೆಸುವವರೇ ಬೇರೆ ಇದ್ದಾರೆ. ಸರ್ಕಾರ ಅವರಿಗೆ ಸೇರಿದ್ದುದು. ನೀವು ಆಗಿಂದಾಗ್ಗೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಜಾಗ ಬದಲಾಯಿಸುತ್ತೀರಿ ಅಷ್ಟೆ. There is a ruling class you are only ruling political parties ther is a ruling class. It is who they run; it is they who decide.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ.

SRI M. P. PRAKASH : Whatever the observations made by the Hon'ble Speaker, we certainly own it. This is the system. One cannot merely say that this particular Government. None of us are exception to this. All of us must admit.

MR. SPEAKER : All of us must admit. This is a fact.

ಶ್ರೀ ಬಿ. ಎಸ್. ಯಡಿಯಾರಪ್ಪ : ಅಧ್ಯಕ್ಷರೆ, ಈಗ ಸಂದರ್ಭ ಏನು ಎಂದರೆ ಯಾವುದೂ ಒಂದು ವಿಷಯ ಮಾತನಾಡಿ ಕ್ಲಾರಿಫಿಕೇಷನ್ ಕೇಳಿ ಆರೋಪ ಮಾಡುತ್ತಿರುವಂಥ ಕಾಲದಲ್ಲಿ ಮುಖ್ಯಮಂತ್ರಿಗಳು ಇದ್ದಾಗ ಉಪಮುಖ್ಯಮಂತ್ರಿಗಳು ಇದ್ದರು. ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಆಗ ಗುರುತರವಾದ ಯಾವುದೇ ಆರೋಪ ಇದ್ದರೆ ಹೇಳಿ ಯಡಿಯೂರಪ್ಪನವರೇ ಎಂದು ಹೇಳಿದರು. ನಾನು ಎದ್ದು ನಿಂತುಕೊಂಡು ಇವತ್ತು ಹೇಳುತ್ತಿಲ್ಲ. ನಾನು ಮೊನ್ನೆ ಭಾಷಣ ಮಾಡಿದಂಥ ಕಾಲದಲ್ಲಿ ಇವತ್ತು ಈ ಡೂಪ್ಲಿಕೇಟ್ ಲೇಬಲ್‌ಗಳನ್ನು ಫೇಕ್ ಲೇಬಲ್‌ಗಳನ್ನು ಹಂಚುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂತು. ಸುಮಾರು ಮೂರು ತಿಂಗಳ ಹಿಂದೆ ಒಂದು ಪತ್ರಿಕಾ ಹೇಳಿಕೆ ಕೊಟ್ಟು ಮಂತ್ರಿಗಳಿಗೆ ಪತ್ರ ಬರೆದು ಎಲ್ಲಾ ಆಯಿತು. ಸ್ವಾಮಿ ಅದೊಂದು ಸ್ಟೇಜ್. ಮೊನ್ನೆ ಮಾತನಾಡಬೇಕಾದರೆ ನಾನು ಆರೋಪ ಮಾಡುವ ಸಮಯದಲ್ಲಿ ಇನ್ನಷ್ಟು ದಾಖಲೆಗಳನ್ನು ಸೇರಿಸಿ ಹಣಕಾಸಿನ ಮಂತ್ರಿಗಳ ಹತ್ತಿರ ಕಳುಹಿಸಿ ಕೊಟ್ಟೆ. ಇವತ್ತು ನಾನು ಏನು ಹೇಳುತ್ತಿದ್ದೇನೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಪ್ರಾಣದ ಹಂಗನ್ನು ತೊರೆದು ನಾನು ಈ ರಿಸ್ಕ್ ತೆಗೆದು ಕೊಂಡು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ನನ್ನ ಸದುದ್ದೇಶ ಏನೆಂದರೆ ಸರ್ಕಾರಕ್ಕೆ ಗೊತ್ತಿಲ್ಲದಿದ್ದರೆ ಇದನ್ನು ಗಮನಕ್ಕೆ ತಂದು 500-600 ಕೋಟಿ ರೂಪಾಯಿಗಳು ಲೂಟಿ ಆಗುವುದನ್ನು ಸರ್ಕಾರದ ಬೊಕ್ಕಸಕ್ಕೆ ಬರಬೇಕು ಎನ್ನತಕ್ಕಂಥದ್ದೇ ನನ್ನ ಸದುದ್ದೇಶ. ಜನರು ಈ ಸರ್ಕಾರವನ್ನು ಎಕ್ಸೈಸ್ ಜೊತೆ ಶಾಮೀಲಾಗಿ ಲೂಟಿ ನಡೆಸುತ್ತಿದ್ದಾರೆ ಎನ್ನುವ ಒಂದು ವಾತಾವರಣ ಏನು ಬಂದಿದೆ ತಾವು ಹೇಳುವಂಥದ್ದು ಸತ್ಯ ಸಂಗತಿ. ಯಾರು ಹೊರಗಡೆ ಕುಳಿತುಕೊಂಡು ಈ ತರಹ ಕೋಟ್ಯಾಧಿಪತಿಗಳು, ಎಕ್ಸೈಸ್ ಮಾಲೀಕರು ಈಗ ನಮ್ಮನ್ನು ನಡೆಸುವಂಥ ದುಸ್ಥಿತಿ ಏನು ಬಂದಿದೆ ಅದು ತಪ್ಪಬೇಕು. ಒಂದು ಧೃಡವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಎನ್ನುವುದಕ್ಕೆ ನಿಮಗೆ ದಾಖಲೆ ಬೇಕು. ಸ್ವಾಮಿ ನಾನು ಹೇಳುತ್ತಿದ್ದೇನೆ. ಇದು ಸರ್ಕಾರದ ಕೆಲಸ ಆಯಿತು. ಕಾನೂನು ಬಾಹಿರವಾಗಿ ನಡೆಯುತ್ತಿರತಕ್ಕಂತಹ ಈ ಚಟುವಟಿಕೆ ಬಗ್ಗೆ ಅಬಕಾರಿ ಇಲಾಖೆಯಲ್ಲಿ ನಾರ್ಕೋಟಿಕ್ಸ್ ಎಂದು ಹೇಳಿಬಿಟ್ಟು ಏನು ನಿಮ್ಮ ವ್ಯವಸ್ಥೆ ಇದೆ. ಒಂದು ಇನ್‌ಸ್ಪೆಕ್ಷನ್ ವಿಭಾಗ ಇದೆ ನೀವು ಯಾರು ಇದನ್ನು ಗಮನಿಸಲಿಲ್ಲ. ನಿಮಗೆ

ಯಾರಿಗೂ ಇದು ಗೊತ್ತಾಗಲಿಲ್ಲಾವಾ? ನಾನು ಈಗ ಕೊಟ್ಟಂಥ ಹೇಳಿಕೆ ಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ಬಂದಾಗ ನಿಮ್ಮ ಎಕ್ಸೈಸ್ ಕಮಿಷನರ್ ನನ್ನನ್ನು ಕರೆದು ಚರ್ಚೆ ಮಾಡಿ ನನ್ನ ದಾಖಲೆಗಳನ್ನು ನೋಡಬಹುದಿತ್ತು. ಹಾಗೆ ಅವರು ಗಮನ ಕೊಡಲಿಲ್ಲ. ಮೂರು ದಿವಸಗಳ ಮುಂಚೆ ನಾನು ಪ್ರಸ್ತಾಪ ಮಾಡಿದ್ದೇನೆ. ನಾನು ದಾಖಲೆಗಳನ್ನು ಕೊಟ್ಟಿದ್ದೇನೆ. ನನ್ನ ಆರೋಪ ಏನು ಎಂಬುದು ತಮಗೆ ಗೊತ್ತಿರಬಹುದು. ಹಿಂದೆ ಕೋದಂಡರಾಮಯ್ಯನವರು ಪೋಲಿಸ್ ಕಮಿಷನರ್ ಆಗಿದ್ದಾಗ ಪ್ರಿಂಟಿಂಗ್ ಮೆಷಿನ್ ಸಹಿತ ಸೀಜ್ ಮಾಡಿದ್ದರು. ಅದೇ ಕಾರಣಕ್ಕೆ ಅವರು ವರ್ಗಾವಣೆ ಆಗತಕ್ಕ ಸಂದರ್ಭ ಬಂತು. ರಾಜೀನಾಮೆ ನೀಡುವಂಥ ಸಂದರ್ಭ ಬಂತು. ಪತ್ರಿಕೆಗಳಲ್ಲಿ ಬಂತು. ದೊಡ್ಡ ಹಗರಣ ಆಯಿತು ನನಗೆ ಜ್ಞಾಪಕ ಇದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ಏನು ಹೇಳುತ್ತೇನೆ ಇವತ್ತು ಸರ್ಕಾರಕ್ಕೆ ಜನರಲ್ಲಿ ನನ್ನಲ್ಲಿಯೂ ಸಹ ಇವೆಲ್ಲಾ ನೋಡಿದ ಮೇಲೆ ಸರ್ಕಾರದ ಬಗ್ಗೆ ನಮಗೆ ಅನುಮಾನ ಬಂದಿದೆ. ಎಲ್ಲೋ ಒಂದು ಕಡೆ ಅಧಿಕಾರಿಗಳು ಯಾರೋ ಶಾಮೀಲಾಗಿ ಇದನ್ನು ನಡೆಸುತ್ತಿದ್ದಾರೆ ಎನ್ನುವ ಭಾವನೆ ಮೂಡುತ್ತದೆ. ಇದನ್ನು ತಪ್ಪಿಸಬೇಕು ಎಂದರೆ ನನ್ನ ಹತ್ತಿರ ಇರುವ ಎಲ್ಲಾ ದಾಖಲೆಗಳನ್ನು ನಾನು ಕೊಡುತ್ತೇನೆ. ಒಂದು ಅಂದಾಜಿನ ಪ್ರಕಾರ ರಾಜಾರೋಷವಾಗಿ ಕರ್ನಾಟಕ ರಾಜ್ಯದ ಯಾವುದೊಂದು ವಿಸ್ಕಿ, ಬ್ರಾಂದಿಗಳನ್ನು ಮಾರುವಂಥ ಜಾಗಕ್ಕೆ ನಾವು ಹೋದರೆ ಈ ರೀತಿ ಡೂಪ್ಲಿಕೇಟ್ ದಾಖಲೆಗಳು ಓರಿಜಿನಲ್ ಲೇಬಲ್‌ಗಳ ಹೆಸರಿನಲ್ಲಿ ಹಂಚಿ ನೂರಾರು ಕೋಟಿ ಲೂಟಿಯಾಗುತ್ತಿದೆ. 5 ನಿಮಿಷ ನೀವು ಸದನವನ್ನು ಮುಂದೂಡಿದರೆ ಬೆಂಗಳೂರು ನಗರದಲ್ಲಿ ಒಂದು 25 ಕಡೆ ತೋರಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಎಲ್ಲಿಬೇಕಾದರೂ ಇದನ್ನು ತೋರಿಸುತ್ತೇನೆ. ಸೆಕೆಂಡ್ಸ್‌ಗೂ ಇದಕ್ಕೂ ವ್ಯತ್ಯಾಸ ಇದೆ. ಮಾನ್ಯ ಖರ್ಗೆಯವರೇ, ಸೆಕೆಂಡ್ಸ್ ಎಂದರೆ ಅದೇ ಒಳ್ಳೆಯ ಷರಾಬು, ಟ್ಯಾಕ್ಸ್ ಲೇಬಲ್ ಇಲ್ಲದೇ ಹಿಂಬಾಗಿಲಿನಲ್ಲಿ ಹೋಗಬಹುದು ಎಂದು ನಾವು ಏನು ತಿಳಿದುಕೊಂಡಿದ್ದೆ ಈಗ ಮುಂಬಾಗಿಲಿನಿಂದಲೇ ಥರ್ಡ್ಸ್ ಎಂದು ಹೇಳಿದರೆ ಈ ಲೇಬಲ್‌ಗಳನ್ನು ಸರ್ಕಾರದ ಲೇಬಲ್ ಎಂದು ತಿಳಿದುಕೊಂಡು ಡೂಪ್ಲಿಕೇಟ್ ಬಿಟ್ಟು ವಂಚನೆ ಮಾಡುವಂಥ ಹಗರಣ ನನ್ನ ಗಮನಕ್ಕೆ ಬಂದಿದೆ. ದಾಖಲೆಗಳು ಇದ್ದಾವೆ. ಇನ್ನೂ ದಾಖಲೆಗಳನ್ನು ನಾನು ಕೊಡುತ್ತಿಲ್ಲ. ಏಕೆಂದರೆ ನನಗೆ ಏನು ನಿಮ್ಮ ಸರ್ಕಾರದಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದೇನೆ. ಇದನ್ನು ಕೊಟ್ಟರೆ ಅವರ ಮೇಲೆ ಕ್ರಮ ಕೈಗೊಳ್ಳುವುದರ ಬದಲು, ನಾವು ಕ್ರಮ ಕೈಗೊಂಡಿದ್ದೇವೆ ಎಂದು ಹೇಳಿ ಯಾರೋ ಒಬ್ಬ ನಿರಪರಾಧಿಯನ್ನು ಜೈಲಿಗೆ ಕಳುಹಿಸಿ ಮುಚ್ಚಿ ಹಾಕಿಬಿಡುತ್ತಾರೆ. ಎನ್ನುವ ಭಯ ಜನರಲ್ಲಿ ಮೂಡಿದೆ. ನನಗೂ ಸಂಶಯ ಬಂದಿದೆ. ಆದಕ್ಕಾಗಿ ಹೇಳುತ್ತಿದ್ದೇನೆ. ಸಿಟ್ಟಿಂಗ್ ಹೈಕೋರ್ಟ್ ಜಡ್ಜ್ ಕಡೆಯಿಂದ ತನಿಖೆ

ಮಾಡಿಸಿ. ನಾನು ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ. ಜವಾಬ್ದಾರಿ ಸ್ಥಾನದಲ್ಲಿ ಇದ್ದರು ಸರ್ಕಾರದ ಬೊಕ್ಕಸಕ್ಕೆ ಹಣ ಬರಬೇಕು ಎನ್ನುವ ಆರೋಪ ನಾನು ನೇರವಾಗಿ ಮಾಡುತ್ತಿದ್ದೇನೆ. ಅದು ಆಗಲಿಲ್ಲ ಅಂದರೆ ನಿಮಗೆ ಏನಾದರೂ ಮುಜುಗರ ಆದರೆ ಸದನ ಸಮಿತಿ ಮಾಡಿ ಎಂದು ಖರ್ಗೆಯವರು ಸಲಹೆ ಕೊಟ್ಟರು. ಅದಕ್ಕೂ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿ ಇದ್ದೇನೆ. ಇದು ಎರಡು ತಪ್ಪಿದರೆ ಮಾನ್ಯ ಅಧ್ಯಕ್ಷರೆ, ನಿಮ್ಮ ಕೊಠಡಿಗೆ ನಾನು ಬರುತ್ತೇನೆ.ಇನ್ನೂ ಐವತ್ತು ಕೊಡುತ್ತೇನೆ. ಅವರಿಗೆ ತೋರಿಸಿ. Whether it is original or duplicate,. ಎಂಬುದು ಗೊತ್ತಾಗುತ್ತದೆ. ನಂಬರ್ ರಿಪೀಟ್ ಆಗಿದೆ. ಇದೂ ಆರೋಪ ಅಲ್ಲ ಎಂದರೆ ನಾವು ಪ್ರತಿಪಕ್ಷದ ಅಗತ್ಯವೂ ಇಲ್ಲ. ಯಾವುದೋ ಒಂದೇ ಒಂದು ರೂಲಿಂಗ್ ಪಾರ್ಟಿ ಎಂದು ಹೇಳಿ ನೀವು ಖುಷಿ ಬಂದ ಹಾಗೆ ಸರ್ಕಾರ ನಡೆಸಬಹುದು. ಇಲ್ಲಿ ನಮ್ಮ ಕೆಲಸ ಏನೂ ಉಳಿಯುವುದಿಲ್ಲ.

ಅಧ್ಯಕ್ಷರು : ಸರ್ಕಾರ ಅವರು ನಡೆಸಬಹುದು, ಸದನ ನಾವು ತಾನೇ ನಡೆಸುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಲ್ಲ, ನೀವು ಹೇಳಿ ನೀವು ಗೈಡ್ ಮಾಡಿ ನೀವು ಹೇಳಿದ ಹಾಗೆ ಜವಾಬ್ದಾರಿ ಸ್ಥಾನದಲ್ಲಿ ಇದ್ದೇನೆ. ಏನು ಮಾಡಬೇಕೆಂದು ಗೊತ್ತಿದೆ. ಹಣಕಾಸಿನ ಮಂತ್ರಿಗಳು ಉತ್ತರ ಕೊಡಬಾರದು ಎಂದು ಅಲ್ಲ. ಇದುವರೆವಿಗೂ ಏನು ನಡೆದುಕೊಂಡು ಬಂತು, ಕ್ಲಾರಿಫಿಕೇಷನ್ ಕೇಳುವಂಥ ಕಾಲದಲ್ಲಿ ಏನೋ ಒಂದು ಹೇಳುತ್ತಾರೆ. ನಾವು ವಾಕ್-ಔಟ್ ಮಾಡಿಕೊಂಡು ಹೊರಟು ಹೋಗುತ್ತೇವೆ. ಇವತ್ತು ನಾವು ಏಕೆ ಮಧ್ಯಮದಲ್ಲಿ ಪ್ರಸಾತಪ ಮಾಡಿದೆ ಪ್ರಾರಂಭದಲ್ಲಿ ಮಾಡಲಿಲ್ಲ, ಕೊನೆಯ ಹಂತಕ್ಕೆ ಬಂದಾಗ ನಾನು ಹೇಳಿದ್ದನ್ನೇ ಅವರು ಹೇಳಿದರು. ಇದನ್ನು ಒಪ್ಪಿಕೊಂಡರು. ಹೌದು ಯಡಿಯೂರಪ್ಪನವರೇ, ಇದು ಆಗುತ್ತಿರುವುದು ನಿಜ. ನಾನು ಅಡ್ಮಿಟ್ ಮಾಡಿಕೊಳ್ಳುತ್ತೇನೆಂದು ಹೇಳಿದರು. ಅಂದರೆ ಅಡ್ಮಿಟ್ ಮಾಡಿಕೊಂಡ ಮೇಲೆ ಯಡಿಯಾರಪ್ಪನವರೇ, ನಾವು ಇದನ್ನು ಸೀಜ್ ಮಾಡುತ್ತೇವೆ ಎಂದು ಹೇಳ ಬೇಕಾಗಿತ್ತು. ತಮ್ಮ ಸರ್ಕಾರದ ಮೆಷನರಿ ಇದೆ. ತನಿಖಾ ವಿಭಾಗ ಇದೆ. ನಾರ್ಕೋಟಿಕ್ಸ್ ವಿಭಾಗ ಇದೆ. ಅವರು ಏನು ಮಾಡುತ್ತಿದ್ದಾರೆ? ಅವರು ಅವರ ಜೊತೆ ಶಾಮೀಲಾಗಿದ್ದಾರಾ? ಎಷ್ಟು ಎಕ್ಸೈಸ್ ಡಿಸ್ಟಿಲರಿಗಳನ್ನು ಬೀಗ ಹಾಕಿಸಿದ್ದೀರಿ? ಈ ಹಿನ್ನೆಲೆಯಲ್ಲಿ ಅದು ಮಾಡಲಿಲ್ಲ ಅಂದರೆ ರಾಜರೋಷವಾಗಿ ಈ ವ್ಯವಹಾರಕ್ಕೆ ನೀವು ಅವಕಾಶ ಕೊಟ್ಟಿದ್ದೀರಿ ಎಂದಾಗುತ್ತದೆ. ಆದುಕದರಿಂದ ಕನಿಷ್ಠ 500 ಕೋಟಿ ಲೂಟಿ ಆಗುತ್ತಿದೆ. ಇದಕ್ಕಾಗಿ ನಾನು ಸಿಟ್ಟಿಂಗ್ ಹೈಕೋರ್ಟ್ ಜಡ್ಜರವರಿಂದ ತನಿಖೆ ಆಗಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. It has already been made very clear that certain procedures have to be observed when we are making an allegation. Ther are number of instances where the matters were referred to the Speaker Here also, as already stated unless advance notice is given to the Speaker and the Minister concerned, a Member is not permitted to make allegations in the House. Where the allegations are made without fulfilling any requirement, an objection to the effect can be taken up by any Member in the House and the Chair in such cases, uphold the objection and forbid the Member from proceeding further in the matter'.

Here you might not have made any allegations against an individual Minister but against a group-that means, the Government. He made the allegation abruptly without any priour notice. Therefore, I seek your ruling inthe matter that he makes a prima facie case and present it to the Speaker, after you permit him to do so..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರು ಎರಡು ಸಲಹೆಗಳನ್ನು ಕೊಟ್ಟರು. ಒಂದು ಹೈಕೋರ್ಟ್ ತನಿಖೆ ಮಾಡಿಸಿ ಎಂದು. ಮತ್ತು ಸದನದ ಸಮಿತಿ ಮೂಡಿ ಎಂದು ಅಂದರೆ ನಿಮ್ಮ ಮೇಲೆ ಬಿಟ್ಟರು. ತಾವು ಏನು ಸಲಹೆ ಕೊಡುತ್ತೀರಿ ತಮ್ಮ ಅಭಿಪ್ರಾಯದ ಪ್ರಕಾರ..

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆ ನಿಯಮಕ್ಕೂ ಇವತ್ತಿನ ಪರಿಸ್ಥಿತಿಗೂ ಸಂಬಂಧ ಇಲ್ಲ. ಇದು ಬೇರೆ ಅದೇ ಬೇರೆ. ನೇರವಾಗಿ ಸರ್ಕಾರದ ಮೇಲೆ ಅಪಾದನೆ ಮಾಡಿದ್ದಾರೆ. ತಮ್ಮ ರುಜುವಾತನ್ನು ಇಲ್ಲಿ ಬಹಿರಂಗಪಡಿಸಿದ್ದಾರೆ. ಈ ಸ್ಥಿತಿಗೆ ಆ ನಿಯಮ ಸರಿಯೇ ?

ಅಧ್ಯಕ್ಷರು : ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ವಿಚಾರವನ್ನು ಗಮನಿಸಿದ್ದೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದಂಥ ವಿಚರವನ್ನು ಗಮನಿಸಿದ್ದೇನೆ.

ಈಗ ಸಭೆಯು ಯಾವ ಹಂತದಲ್ಲಿದೆ? ಆಯವ್ಯಯದ ಮುಂಗಡ ಪತ್ರದ ಮೇಲೆ ಸರ್ಕಾರದ ಪರವಾಗಿ ಹಣಕಾಸಿನ ಇಲಾಖೆಯನ್ನು ನಿರ್ವಹಣೆ ಮಾಡತಕ್ಕಂಥ ಉಪಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಹಂತದಲ್ಲಿ ನಾವು ಇದ್ದೇವೆ. The House reserves its right in favour of the Hon'ble Finance Minister vis-a-vis the Diputy Chief Minister to have his full say in the matter. ನಾವು ಮೊದಲು ಅವರು ಪೂರ್ಣ ಉತ್ತರ ಕೊಡಲು ಅವಕಾಶ ಮಾಡಿ ಕೊಡಬೇಕು. ನಂತರ ಸ್ಪಷ್ಟೀಕರಣ ಕೇಳತಕ್ಕಂಥ ಅವಕಾಶ ತಮಗೆ ಇರುತ್ತದೆ. ಇದರ ಮಧ್ಯೆ ತಾವು ಇಂಟರ್‌ವೀನ್ ಆಗಿದ್ದೀರಿ. ಅವರು ಯೀಲ್ಡ್ ಆಗಿದ್ದಾರೆ. ಅವರು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ, ನಿಯಮಾವಳಿ ಮುಖ್ಯ. ಆದುದರಿಂದ, ಇದರ ಗಂಭೀರತೆಯನ್ನು ನಾನು ಗಮನಿಸುವುದಿಲ್ಲವೆಂಬ ಮಾತನ್ನು ಹೇಳುವುದಿಲ್ಲ. ನಾನು ತಮಗೆ ಏನು ಹೇಳುತ್ತೇನೆಂದರೆ, ಎಷ್ಟೇ ತೀವ್ರ ಸ್ವರೂಪದ ಆಪಾದನೆಯಿದ್ದರೂ, ಲೋಪ-ದೋಷವಿದ್ದರೂ ಸಹ ನಮ್ಮ ನಿಯಮಾವಳಿಯ ಚೌಕಟ್ಟಿನೊಳಗೇ ನಾವು ಕೆಲಸ ಮಾಡಬೇಕು, ಸಾಕಷ್ಟು ಅವಕಾಶವೂ ಇರುತ್ತದೆ. ನಿಯಮಾವಳಿ ಪ್ರಕಾರ ತಾವು ನನಗೆ ಮೊದಲೇ ನೋಟೀಸ್ ಕೊಡ ಬೇಕಾಗಿತ್ತು. ನೋಟೀಸ್ ಕೊಟ್ಟು ಇಂತಹ ಅಪಾದನೆ ಮಾಡುತ್ತೇನೆಂದು ಆ ಕುರಿತ ಪೂರ್ಣ ಮಾಹಿತಿ ಏನಿದೆ..

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ವಿರೋಧ ಪಕ್ಷದಲ್ಲಿರುವುದು ಅದಕ್ಕೇ ಅಲ್ಲಿ ಸೋರಿ ಹೋಗುವುದನ್ನು ತಪ್ಪಿಸುವುದಕ್ಕೋಸ್ಕರ ಸಲಹೆ ಕೊಟ್ಟಿದ್ದೇನೆ. ಇಲ್ಲದಿದ್ದರೆ ಈ ಸದನದ ಅಗತ್ಯವೇ ಇಲ್ಲ. ಸರಿಯಾಗಿ ನೋಡಿದರೆ ಅವರು ನನ್ನನ್ನು ಕಂಗ್ರ್ಯಾಜ್ಯುಲೇಟ್ ಮಾಡಬೇಕಾಗಿತ್ತು.

ಅಧ್ಯಕ್ಷರು : ದಯಮಾಡಿ ಕೇಳಿ. ಇದರಲ್ಲಿ ಎರಡು ಮಾರ್ಗಗಳಿವೆ. ಶ್ರೀ ವೈ.ರಾಮಕೃಷ್ಣರವರು ಇದ್ದಾರೆ. One is a suggestion and the other is an allegation. ತಾವು ಆರೋಪ ಮಾಡಿದಾಗ ಅದು ಸಲಹೆಯಾಗುವುದಿಲ್ಲ. ಆರೋಪ ಏನೆಂದರೆ, ತಾವು ಮಾಡಿದ ಆರೋಪಕ್ಕೆ ಅವರು ನಿರಾಕರಣೆಯಾದರೂ ಮಾಡಬೇಕು ಅಥವಾ ಆ ಕುರಿತು ವಿಚಾರಣೆಯನ್ನು ಏರ್ಪಾಡು ಮಾಡಿಸಬೇಕು. ತಾವು ಒಂದು ಆರೋಪ ಮಾಡಬೇಕಾಗಿದ್ದರೆ ಅದಕ್ಕೆ ನಿಯಮಾವಳಿ ಇದೆ. If it is just a suggestion..

ಶ್ರೀ ಬಿ. ಎಸ್. ಯಡಿಯೂರಪ್ಪ : ಇದು ಸಲಹೆಯಲ್ಲ, ಆರೋಪ.

MR. SPEAKER : That is why...

ಶ್ರೀ ಬಿ. ಎಸ್. ಯಡಿಯೂರಪ್ಪ : ಇಡೀ ಸರ್ಕಾರದ ಬಗ್ಗೆ ಆರೋಪ ಮಾಡುತ್ತಿದ್ದೇನೆ, ಇಂಡಿವಿಜ್ಯುಯಲ್ ಬಗ್ಗೆ ಅಲ್ಲ.

ಅಧ್ಯಕ್ಷರು : ಅದಕ್ಕೋಸ್ಕರವೇ ನಾನು ಕ್ಲಾರಿಫೈ ಮಾಡಿದ್ದು. Since it is not a suggestion, since it is an allegation. ಮಾನ್ಯ ರಾಮಕೃಷ್ಣರವರೇ, ತಮಗೆ ಗೊತ್ತಿದೆ, ನಮ್ಮ ನಿಯಮಾವಳಿ ಪ್ರಕಾರ it has to come in the prescribed form and an advance information will have to be given.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮ ಮಾತಿಗೆ ನಾನು ಅಡ್ಡ ಬಂದೆನೆಂದು ಭಾವಿಸಬಾರದು ಚರ್ಚೆ ಮಾಡುತ್ತಿರುವ ಸಂದರ್ಭದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಕೆಲವು ಅವ್ಯವಹಾರಗಳು ನಡೆದಿರುವುದರ ಬಗ್ಗೆ ಸದನದ ಮುಂದೆ ಮಂಡಿಸಿದ್ದಾರೆ. ಅವ್ಯವಹಾರವನ್ನು ಕಂಡು ಹಿಡಿಯತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಬಿಟ್ಟಿದ್ದುದು. ಸರ್ಕಾರ ಉತ್ತರ ಕೊಡತಕ್ಕಂಥ ಸಮಯದಲ್ಲಿ ಅವರು ಪಸ್ತಾಪಿಸಿರತಕ್ಕಂಥ ಈ ಅವ್ಯವಹಾರಗಳ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗದಂಥ ಸಂದರ್ಭ ಸರ್ಕಾರಕ್ಕಿದೆ. ಈಗ ಅವರು ಅಲಿಗೇಷನ್ ಎಂದು ಹೇಳಿದರೆ, ಇದರಲ್ಲಿ ಫೈನಾನ್ಸ್ ಮಿನಿಸ್ಟರ್ ಇದ್ದಾರೆಂದು ಅಥವಾ ಸರ್ಕಾರ ಇದೆಯೆಂದು ಹೇಳಿಲ್ಲ. ಇವೊತ್ತು ಈ ರೀತಿ ಫೇಕ್ ಲೇಬಲ್..

ಅಧ್ಯಕ್ಷರು : ತಾವು ಜನರಲೈಸ್ ಮಾಡುತ್ತಿದ್ದೀರಿ. ನನಗೆ ಯಾವುದೇ ಕಾರಣಕ್ಕೂ ಕೂಡ ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪಿಸಿರುವ ವಿಚಾರದ ಗಾಂಭೀರ್ಯತೆಯನ್ನು ಅಲ್ಲಗೆಳೆಯುವ ಉದ್ದೇಶವಿಲ್ಲ. ವೈ. ರಾಮಕೃಷ್ಣರವರೇ, ತಾವು ದಯಮಾಡಿ ಕೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ತಾವು ನೋಟೀಸ್ ಕೊಡಬೇಕೆಂದು ಹೇಳಿದಿರಲ್ಲ.

ಅಧ್ಯಕ್ಷರು : ಪ್ರಾರಂಭದಿಂದಲೂ ನನ್ನ ಮಾತನ್ನು ಗಮನಿಸಿಕೊಳ್ಳಬೇಕೆಂದು ಅದಕ್ಕೋಸ್ಕರವೇ ನಾನು ಹೇಳಿದ್ದುದು. ಹಣಕಾಸು ಇಲಾಖೆಯನ್ನು ನಿರ್ವಹಿಸುತ್ತಿರುವ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಈಗ ಉತ್ತರ ಕೊಡುತ್ತಿರುವ ಆ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರೇ, ತಾವು ಇರಲಿಲ್ಲ..

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಮಗೆ ಧೈರ್ಯವಿದ್ದರೆ ಹೇಳಿ ಎಂದು ಅವರಿಬ್ಬರೂ ಹೇಳಿದಕ್ಕೆ ನಾನು ಎದ್ದು ನಿಂತು ಹೇಳಿದ್ದೇನೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಸಹಕರಿಸಿ. I shall try to resolve it.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಸಹ 1983ರಿಂದಲೂ ಇಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಿದ್ದೇನೆ. ಇಂತಹ ಸಂರ್ಭಗಳು ಬಂದಾಗ ಅನೇಕ ಬಾರಿ ನಾವು ಇಲ್ಲಿ ಆರೋಪಗಳನ್ನು ಮಾಡಿದಾಗ ಪ್ರಕರಣವನ್ನು ಸಿ.ಬಿ.ಐ.ಗೆ, ಸಿ.ಓ.ಡಿ.ಗ ಹೈಕೋರ್ಟ್ ಜಡ್ಜ್‌ಗೆ ವಹಿಸಿದ್ದೂ ಉಂಟು, ಸದನದ ಸಮಿತಿ ನೇಮಿಸಿದ್ದೂ ಉಂಟು. ನಾನು ಹೇಳಿರುವುದು ಗುರುತರವಾದ ಆರೋಪವೆಂದರೆ ತಾವು ತೀರ್ಮಾನ ತೆಗೆದುಕೊಳ್ಳಿ. ನೀವು ಏನು ಸಲಹೆ ಕೊಡುತ್ತೀರೋ, ಅದರಂತೆ ನಡೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ.ಲೈಫ್ ರಿಸ್ಕ್ ತೆಗೆದುಕೊಂಡು ನನ್ನ ಡ್ಯೂಟಿ ಮಾಡಿದ್ದೇನೆ. ಇದರ ಮಹತ್ವವನ್ನು ತಾವು ಅರ್ಥ ಮಾಡಿಕೊಂಡಿರುವುದು ನನಗೆ ಗೊತ್ತಿದೆ.

MR. SPEAKER : As a member of the House,

ತಾವು ರಾಜ್ಯದ ಜನತೆಯ ಹಿತದೃಷ್ಟಿಯಿಂದ ರಾಜ್ಯದ ಬೊಕ್ಕಸಕ್ಕೆ ಬರಬೇಕಾಗಿರತಕ್ಕಂಥ ಆದಾಯದ ಹಿತದೃಷ್ಟಿಯಿಂದ ತಾವು ಜೀವನ ಹಂಗು ತೊರೆದು ಏನು ಹೇಳಿದ್ದೀರಿ, ಅದಕ್ಕೋಸ್ಕರ ನಾನು ಅಭಿನಂದಿಸುತ್ತಿದ್ದೇನೆ. ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ನಾನು ಏನು ಹೇಳುತ್ತೇನೆಂದರೆ, You have made a specific allegation. The rule demands, ನನಗೆ ಆ ಮಾಹಿತಿಯನ್ನ ಕಳುಹಿಸಿಕೊಟ್ಟರೆ ನಾನು I must get convinced. ಪ್ರೈಮಾಫೇಸಿ ಅದರಲ್ಲಿ ಸ್ವಲ್ಪ ಸತ್ಯ ಇದೆಯೆಂದು..

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಇಲ್ಲಿ ಬಂದಿದ್ದೇ ದೊಡ್ಡ ಅಪರಾಧವಾದ ಹಾಗಿದೆ. ಇದರಲ್ಲಿ ಇಡೀ ಸರ್ಕಾರ ಇದೆ, ಇದನ್ನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಇಡೀ ಸರ್ಕಾರ ಇದರಲ್ಲಿ ಶಾಮೀಲಾಗಿದೆಯೆಂದು ಜನರು ಮಾತನಾಡುತ್ತಿದ್ದಾರೆ. ಅದರ ಬಗ್ಗೆ ನನಗೆ ದಾಖಲೆ ಸಿಕ್ಕಿದೆ, ಇದಕ್ಕೋಸ್ಕರ ಹೈಕೋರ್ಟ್ ಜಡ್ಜ್ ಅವರಿಂದ ತನಿಖೆಯಾಗಬೇಕು. ಇದು ನನ್ನ ನೇರವಾದ ಆರೋಪ. ಸರ್ಕಾರ ಎಕ್ಸೈಸ್ ಮಾಲೀಕರ ಜೊತೆ ಶಾಮೀಲಾಗಿದೆ, ಈ ಸರ್ಕಾರ ಹೆಂಡದ ದೊರೆಗಳ ಜೊತೆ ಶಾಮೀಲಾಗಿದೆ.

(ಗೊಂದಲ)

ಅಧ್ಯಕ್ಷರು: ತಾವೆಲ್ಲರೂ ಕುಳಿತುಕೊಳ್ಳಬೇಕು. ಯಡಿಯೂರಪ್ಪನವರೇ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಜನರು ಮಾತನಾಡತಕ್ಕಂಥಾದ್ದು ಬೇರೆ. ನಾವು ಈ ಸದನದಲ್ಲಿ ಚುನಾಯಿತ ಪ್ರತಿನಿಧಿಗಳಾದ್ದು ಕೆಲಸ ಮಾಡುವುದಕ್ಕೆ ನಮ್ಮ ಮೇಲೆ ನಾವೇ ಕೆಲವು ನಿಬಂಧನೆಗಳನ್ನು ಹೇರಿಕೊಂಡಿದ್ದೇವೆ. ನಾನು ಒಂದು ಕ್ಷಣಕ್ಕೆ ಸರ್ಕಾರವನ್ನು ರಕ್ಷಿಸಬೇಕು ಅಥವಾ ಈ ಅಪಾದನೆಯನ್ನು ಅಲ್ಲಗಳೆಯಬೇಕೆನ್ನುವ ಅಭಿಪ್ರಾಯ ನನ್ನ ಮನಸ್ಸಿನಲ್ಲಿಲ್ಲ.

ನಾನು ತಮ್ಮಲ್ಲಿ ಇಷ್ಟೇ ವಿನಂತಿಸಿಕೊಳ್ಳುವುದು. ತಾವು ಒಂದು ಸ್ಪಷ್ಟವಾದ ಆರೋಪ ಮಾಡಬೇಕಿದ್ದ ಪಕ್ಷದಲ್ಲಿ ಆ ಕುರಿತ ಮಾಹಿತಿಯನ್ನು ನನಗೆ ಕಳುಹಿಸಿಕೊಟ್ಟರೆ ನಾನು ಆ ಸ್ಲಿಪ್ ಮಾತ್ರ ನೋಡಿದೆ ಅಷ್ಟೆ, ಅದರ ಬಗ್ಗೆ ನನಗೆ ಮೇಲ್ನೋಟಕ್ಕೆ ಮನವರಿಕೆಯಾದರೆ ನಾನು ತಕ್ಷಣ ಅವರಿಗೆ ಹೇಳುತ್ತೇನೆ. ನಾವು ನಿಯಮಗಳನ್ನು ಏಕೆ ಇಟ್ಟುಕೊಂಡಿದ್ದೇವೆಂದರೆ ಸನ್ಮಾನ್ಯ ಸದಸ್ಯರು ಅಡ್ವಾನ್ಸ್ ಆಗಿ ನೋಟೀಸ್ ಕೊಟ್ಟರೆ ಸರ್ಕಾರದ ಪರವಾಗಿ ಅದಕ್ಕೆ ಬೇಕಾಗಿರತಕ್ಕ ಎಲ್ಲಾ ಮಾಹಿತಿಯನ್ನು ತರಿಸಿಕೊಂಡು ಅದನ್ನು ಒಪ್ಪಿಕೊಳ್ಳುವುದು ಅಥವಾ ನಿರಾಕರಿಸುವುದಕ್ಕೆ ಅವರಿಗೆ ಅವಕಾಶವಿರುತ್ತದೆ. ಈಗ ಸದನದ ಕಲಾಪ ಯಾವ ಹಂತದಲ್ಲಿದೆಯೆಂದರೆ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ, ಆ ಸನ್ನಿವೇಶದಲ್ಲಿ ಈ ಆರೋಪ ಬಂತು, ಅವರು ಇದನ್ನು ನಿರೀಕ್ಷಿಸಿರುವುದಿಲ್ಲ, ಅಲ್ಲದೆ, ತಕ್ಷಣಕ್ಕೆ ಅವರ ಬಳಿ ಉತ್ತರವೂ ಇರುವುದಿಲ್ಲ. ಆದುದರಿಂದಲೇ ಸದನದ ಕಲಾಪ ಸುಗಮವಾಗಿ ನಡೆಯಬೇಕೆನ್ನುವ ದೃಷ್ಟಿಯಿಂದ ನಾವು ಈ ನಿಯಮಾವಳಿಯನ್ನು ರೂಪಿಸಿಕೊಂಡಿದ್ದೇವೆ. ನಾನು ತಮಗೆ ಏನು ಹೇಳುವುದೆಂದರೆ, ಈಗಲೂ ಕೂಡ ಕಾಲ ಮಿಂಚಿಲ್ಲ, ತಾವು 10-15 ನಿಮಿಷಗಳಷ್ಟು ಸಮಯ ತೆಗೆದುಕೊಂಡು, ಸದನ ನಡೆಯುತ್ತಿರುವುದು ಇವೊತ್ತು ಕಡೆಯ ದಿವಸವಾಗಿದ್ದು..

ಶ್ರೀ ಬಿ. ಎಸ್.ಯಡಿಯೂರಪ್ಪ : ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ತಾವು ಉಪಾಧ್ಯಕ್ಷರನ್ನು ಅಲ್ಲಿ ಕೂರಿಸಿ ತಾವು ಕೊಠಡಿಗೆ ಹೋಗಿ, ನಾನು ನಿಮ್ಮನ್ನು ಕನ್‌ವಿನ್ಸ್ ಮಾಡುತ್ತೇನೆ. ಅನಂತರ ತಾವು ಕೇಳಿ, ನಾನು ಇನ್ನೇನೂ ಹೇಳುವುದಿಲ್ಲ. ಇಲ್ಲದಿದ್ದರೆ ನಾವು ಹೋಗುತ್ತೇವೆ, ನೀವೇ ನಡೆಸಿಕೊಳ್ಳಿ, ನಾವೇಕೆ ಇಲ್ಲಿ ಕುಳಿತುಕೊಳ್ಳಬೇಕು?

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಆ ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡುತ್ತಿರುವಾಗ ಆಡಳಿತ ಪಕ್ಷದ ಸದಸ್ಯರುಗಳು 'ಷೇಮ್, ಷೇಮ್' ಎಂದು ಕೂಗುತ್ತಿದ್ದರು.)

ಮಾನ್ಯ ಸದಸ್ಯರು : ಅಧ್ಯಕ್ಷರೆ, ಇದು ಪಲಾಯನ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದು ಇವರ ನಡವಳಿಕೆಯೇ? ನಾನೇನು ಹೇಳಿದೆ. ಸದನದ ಕಾರ್ಯಕಲಾಪ ಮುಖ್ಯವಾದರೆ ನಡೆಸಿಕೊಂಡು ಹೋಗಿ ಎಂದೆ, ಲೂಟಿ ನಡೆಯಲಿ ಎಂದೆ

ಅಧ್ಯಕ್ಷರು : ಮೂಮೂಲಾಗಿ ಅವರು ಬೇಸರಕ್ಕೆ ಸಭಾತ್ಯಾಗ ಮಾಡಿ ಹೋಗುವುದು ಬೇರೆ. ಇಂತಹ ಒಂದು ಆರೋಪ ಮಾಡಿ ನಾನು ಆ ವಿಚಾರವನ್ನು ಇಲ್ಲಿ ಪ್ರಸ್ತಾಪ

ಮಾಡುವುದಕ್ಕಾಗುತ್ತಿಲ್ಲವೆಂಬ ಬೇಸರದಲ್ಲಿ ಹೋದರೆ ಅದಕ್ಕೆ ನೀವು ಆ ರೀತಿ ಮಾಡುವುದು ಸರಿಯಲ್ಲ. ಅದು ನಮ್ಮ ಸದನದ ಕಲಾಪಗಳಿಗೆ ಗೌರವ ತರುವುದಿಲ್ಲ, ದಯಮಾಡಿ ಸ್ವಲ್ಪ ನಿಗ್ರಹದಿಂದಿರಿ. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದಯಮಾಡಿ ತಾವು ಸದನ ಬಿಟ್ಟು ಹೋಗಬೇಡಿ ಈ ವಿಚಾರಕ್ಕೆ ಸಭಾತ್ಯಾಗ ಮಾಡುವುದು ಬೇಡ. ತಾವು ಬಹಳ ಗುರುತರವಾದ ಆಪಾದನೆ ಮಾಡಿದ್ದೀರಿ. ನಿಮ್ಮ ಆಪಾದನೆಯಲ್ಲಿ ಅಡಗಿರುವ ಗಾಂಭೀರ್ಯದ ಮಹತ್ವವನ್ನು ಅಲ್ಲಗೆಳೆಯಲು ನಾನು ತಯಾರಿಲ್ಲ. ವೈ ರಾಮಕೃಷ್ಣರವರು ಹಿರಿಯ ಸದಸ್ಯರಾಗಿದ್ದು ಅವರು ತಾವು ಕುಳಿತು ಕೊಂಡು ಚರ್ಚಿಸಿ ಆಪಾದನೆ ಕುರಿತು ಮಾಹಿತಿಗಳನ್ನು ನನಗೆ ಕಳುಹಿಸಿಕೊಡಿ. ನನ್ನ ಕರ್ತವ್ಯವೇನೆಂದರೆ, ನಾನು ಅದನ್ನು ಸರ್ಕಾರಕ್ಕೆ ರವಾನಿಸಬೇಕು, ಉತ್ತರಿಸುವುದಕ್ಕೆ ಅವರೂ ತಯಾರಾಗಬೇಕು. ಮೊದಲು ನನಗೆ ಕನ್‌ವಿನ್ಸ್ ಆದರೆ... ಪ್ರೊಸೀಜರ್ ಏನು ಹೇಳುತ್ತದೆ, ನನಗೆ ಪ್ರೈಮಾಫೇಸಿಯಾಗಿ ಕನ್‌ವಿನ್ಸ್ ಆಗಿ..

ಶ್ರೀ ಬಿ. ಎಸ್. ಯಡಿಯೂರಪ್ಪ : ನನಗೆ ತಮ್ಮ ಬಗ್ಗೆ ಗೌರವವಿದೆ. ತಾವು ಏನು ಹೇಳುತ್ತೀರೋ ಅದರ ಪ್ರಕಾರ ನಾನು ನಡೆದುಕೊಳ್ಳುತ್ತೇನೆ, ಅದರಲ್ಲಿ ಎರಡು ಮಾತಿಲ್ಲ. ನನ್ನ ಅನುಭವಕ್ಕೆ ಬಂದಿರುವ ರೀತ್ಯ ಗುರುತರವಾದ ಆರೋಪ ಮಾಡಿದಾಗ ಜವಾಬ್ದಾರಿಯಿರುವ ಸರ್ಕಾರ 'ಆಯಿತು, ತನಿಖೆಯಾಗಲಿ, ನಮ್ಮ ಸರ್ಕಾರದ ಬೊಕ್ಕಸಕ್ಕೆ ಹಣ ಬರಲಿ, ನಾವೇಕೆ ಇದನ್ನು ಅಡ್ಡಿಪಡಿಸೋಣ'ವೆಂದು ಮುಂದೆ ಬರಬೇಕಾಗಿತ್ತು. ಆದರೆ, ಹಾಗೆ ಮುಂದೆ ಬರುವುದಕ್ಕೆ ಇವರು ಅನುಮಾನ ಪಡುತ್ತಿದ್ದಾರೆ, ಹಿಂದು-ಮುಂದು ನೋಡುತ್ತಿದ್ದಾರೆಂದರೆ ಎಲ್ಲಿ ಸಿಕ್ಕಿ ಬೀಳುತ್ತೇವೋ ಎನ್ನುವ ಯಾವುದೋ ಭಯ ಅವರಲ್ಲಿ ಕಾಡುತ್ತಿದೆಯೆಂದು ತಿಳಿದುಕೊಳ್ಳ ಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ನಾನು ಮೇಲ್ಮನೆಗೆ ಬೇರೆ ಹೋಗಬೇಕು, ಆದುದರಿಂದ ಇವೊತ್ತೇ ಕಳುಹಿಸಿಕೊಂಡಬೇಕು.

Mr.Speaker: Please trust me. I will see that there is no problem. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಿಮ್ಮ ಆಪಾದನೆ ಗುರುತರವಾದುದು, ನಿಜ. ಅವರು ಉತ್ತರ ಕೊಡುವುದಕ್ಕೆ ಬಂದಿದ್ದರು. ಆದರೆ, ಈ ಆಪಾದನೆಗಳನ್ನು ಅವರು ನಿರೀಕ್ಷಿಸಿರಲಿಲ್ಲ. ಒಂದು ಅಪಾದನೆಗೆ ಸರ್ಕಾರದ ಪರವಾಗಿ ಉತ್ತರ ಕೊಡಬೇಕೆಂದರೆ ಅವರಿಗೆ ಮೊದಲೇ ನೀವು ನೋಟೀಸ್ ಕೊಟ್ಟಿರಬೇಕು. ನೋಟೀಸ್ ಕೊಟ್ಟರೆ ಆ ವಿಚಾರದಲ್ಲಿ ಅವರು ಮಾಹಿತಿ ತರಿಸಿಕೊಂಡು ತಯಾರಾಗಿ ಬರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಷ್ಟು ಮುಖ್ಯವೆಂದರೆ ಅವರ ತನಿಖಾ ಇಲಾಖೆ ಹಿಡಿಯುವುದಿಲ್ಲ. ಇದನ್ನು ಸರಿಪಡಿಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ಹಣ ತುಂಬಬೇಕೆಂಬ ಕಳಕಳಿ ಅವರಿಗೆ ಇಲ್ಲ.

ಅಧ್ಯಕ್ಷರು : ಅದು ನಂತರದ ಪ್ರಶ್ನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದು ಕಾನೂನು, ಕೊಡುವವರು ತೆಗೆದು ಕೊಂಡಿರುವವರ ಬಗ್ಗೆ ಸಾಕ್ಷಿ ಸಿಗುತ್ತದೆಯೇ? ನಾನು ಈಗ ಸಾಕ್ಷಿ ತಂದಿದ್ದೇನೆ. ಇದನ್ನು ಅವರು ಧಾರಾಳವಾಗಿ ಒಪ್ಪಿಕೊಳ್ಳುವುದಿಲ್ಲವೆಂದರೆ ತಾವು ಏನು ಹೇಳುತ್ತೀರೋ ಅದರಂತೆ ನಾವು ನಡೆದುಕೊಳ್ಳುತ್ತೇವೆ. ಏನು ಮಾಡಬೇಕೆಂದು ನೀವೇ ಹೇಳಿ?

ಅಧ್ಯಕ್ಷರು : ಇದರಲ್ಲಿ ನನ್ನನ್ನು ಸಿಕ್ಕಿ ಹಾಕಿಸುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾನೂನಿನ ಹೆಸರಿನಲ್ಲಿ, ರೂಲ್ಸ್ ಹೆಸರಿನಲ್ಲಿ ಲೂಟಿ ನಡೆಯಬೇಕೆನ್ನುವುದಾದರೆ ಇದು ಪ್ರಜಾತಂತ್ರ ವ್ಯವಸ್ಥೆಗೆ ಕಳಂಕ. ಇದರಲ್ಲಿ ಏನಾದರೂ ಬದಲಾವಣೆ ತರಬೇಕಲ್ಲಾ, ಈ ಕಾನೂನು ತಿದ್ದುಪಡಿ ಆಗಬೇಕಲ್ಲಾ

ಅಧ್ಯಕ್ಷರು : ಯಡಿಯೂರಪ್ಪನವರೇ, ಸರ್ಕಾರ ಕೆಲಸ ಮಾಡುವುದಕ್ಕೆ ರೂಪಿಸಿಕೊಳ್ಳತಕ್ಕಂಥ ನಿಯಮಾವಳಿಯೇ ಬೇರೆ, ಸದನ ನಡೆಸಲು ನಾವು ರೂಪಿಸಿಕೊಳ್ಳತಕ್ಕಂಥ ನಿಯಮವಳಿಯೇ ಬೇರೆ. ಸದನದಲ್ಲಿ ನಾವು-ನೀವು ರೂಪಿಸಿರುವ ನಿಯಮಾವಳಿಗೆ ನಾವೆಲ್ಲರೂ ಬದ್ಧರು, ಅದನ್ನು ನಾವೆಲ್ಲರೂ ಗೌರವಿಸಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ಇದುವರೆವಿಗೂ ಒಂದು ಕೇಸ್ ಇಲ್ಲ, ನೋಟೀಸ್ ಕೊಟ್ಟಿರುವ ಉದಾಹರಣೆಯೇ ಇಲ್ಲ. ಈ ತರಹದ ಗುರುತರವಾದ ಆರೋಪ ಮಾಡಿದಾಗ ಸದನ ಸಮಿತಿ ರಚಿಸಲಾಗಿದೆ, ತನಿಖೆಗಾಗಿ ಸಿ.ಓ.ಡಿ.ಗೆ, ಸಿ.ಬಿ.ಐ.ಗೆ ವಹಿಸಿದ್ದಾರೆ. ಈ ಹಿಂದೆ ಬಾಟ್ಲಿಂಗ್ ಕುರಿತ ಆರೋಪ ಇಲ್ಲ ನಡೆಯಿತು, ಆಗ ಯಾವ ದಾಖಲೆ, ಸಾಕ್ಷಿ ಇತ್ತು?

ಎನ್‌ಕ್ವೇರಿ ಕಮಿಷನ್ ಅನ್ನು ನೇಮಿಸಲಿಲ್ಲವೇ? ಪ್ರೂವ್ ಆಯಿತೇ? ಸಾಕ್ಷಿ ಕೊಟ್ಟರೇ? ಇಲ್ಲ. ಕೇವಲ ಇಲ್ಲಿ ಚರ್ಚೆ ನಡೆದಂಥ ಆಧಾರದ ಮೇಲೆ ರೆಫರ್ ಮಾಡಲಾಯಿತು.

MR. SPEAKER : Right now that information is not with me.

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಆರೋಪಣೆ ಮಾಡುವುದಕ್ಕಿಂತ ಮುಂಚಿತವಾಗಿ ಈ ಸದನದ ನಿಯಾಮಾವಳಿ ಪ್ರಕಾರ ನನ್ನ ಗಮನಕ್ಕೆ ಮೊದಲು ತಾವು ತಂದು ಎಲ್ಲಾ ದಾಖಲೆಗಳನ್ನು ಕೊಟ್ಟು ನನಗೆ ಆ ದಾಖಲೆಗಳ ಬಗ್ಗೆ ನಂಬಿಕೆಯಾದ ನಂತರ ಯಾವ ವ್ಯಕ್ತಿ ಎಂದು ಹೇಳಿದ್ದೀರಿ, ಅದನ್ನು ಮಾಡತಕ್ಕಂಥಾದ್ದು ಪ್ರತಿನಿತ್ಯ ನಡೆಯುವ ನಿಯಮಾವಳಿ ರೀತ್ಯ ತಾವು ಹೇಳಿದ್ದೀರಿ. ಶ್ರೀಮಾನ್ ಯಡಿಯೂರಪ್ಪನವರು ನೇರವಾಗಿ ಮಾಡಿರುವ ಆರೋಪಣೆ ಯಾವುದೆಂದರೆ ಖೋಟಾ ಚೀಟಿ.

2.30 ಪಿ.ಎಂ

ಖೋಟಾ ಚೀಟಿ ಮುದ್ರಣ ಆಗುತ್ತಿದೆ,ಇದರಿಂದ 500ಕೋಟಿ ರೂಪಾಯಿ ಸೋರಿಕೆಯಾಗುತ್ತಿದೆ. ಅವರು ಒಬ್ಬ ವ್ಯಕ್ತಿ ಮೇಲೆ ಅಲ್ಲ, ನೇರವಾಗಿ ಇಡೀ ಸರ್ಕಾರ ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಹೇಳಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಇದರಲ್ಲಿ ವಿಫಲ ಆದರೆ ನಾನು ಈ ಸ್ಥಾನದಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಸನ್ಮಾನ್ಯ ವಾಟಾಳರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಎಂದರೆ ಒಂದು ಅಗೋಚರ ಪದಾರ್ಥ ಅಲ್ಲ, ಸರ್ಕಾರ ನಡೆಸುವುದು ಎಂದರೆ ಅದೃಷ್ಯ ಅಲ್ಲ. ಸರ್ಕಾರದ ಮೇಲೆ ಆರೋಪ ಎಂದರೆ, ಅವರ ಮೇಲೆ ಆರೋಪ, ಅವರ ಮಂತ್ರಿಮಂಡಲದ ಮೇಲೆ ಆರೋಪ ಅದಕ್ಕೆ ಅವರು ಉತ್ತರ ಕೊಡುವುದು ಬೇಡವೇ? ಅವರ ಮೇಲೆ ಬರುತ್ತದೆ ಎಂದು ಅವರಿಗೆ ಪೂರ್ವಭಾವಿಯಾಗಿ ತಿಳುವಳಿಕೆಬೇಡವೇ? ತಾವು ಹೇಳಿ? ನೀವು ಎಲ್ಲಾ ಮಂತ್ರಿಗಳಾಗಿ ಕೆಲಸ ಮಾಡಿದವರು.

ಶ್ರೀ ಕಾಗೋಡು ತಿಮ್ಮಪ್ಪ : ಮೊದಲು ಶ್ರೀಮಾನ್ ಯಡಿಯೂರಪ್ಪನವರು ಏನು ಪ್ರಸ್ತಾಪ ಮಾಡಿದ್ದರಲ್ಲಾ ಅವಾಗ, ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ನೇರವಾಗಿ ಸರ್ಕಾರದ ಮೇಲೆ ಮಾಡಿರಲಿಲ್ಲ, ಅವರು ಹೇಳಿದ್ದು ಇಷ್ಟನೇ ಈ ರೀತಿ ಖೋಟಾ ಚೀಟಿಗಳನ್ನು ಪ್ರಿಂಟ್ ಮಾಡಿ ಎಷ್ಟೆಷ್ಟು ವಿಸ್ಕಿ, ಬ್ರಾಂದಿ ಮಾರಾಟ ಮಾಡುತ್ತಿದ್ದಾರೆ, ಇದನ್ನು ತನಿಖೆ ಮಾಡಿ ಪತ್ತೆ ಹಚ್ಚಿ ಎಂದು.

ಅಧ್ಯಕ್ಷರು: ನಾನು ಹೇಳುತ್ತೇನೆ ಕೇಳಿ. ತಾವು ದೂರದಲ್ಲಿ ಹೋಗುತ್ತಿರುತ್ತೀರಿ, ಅಲ್ಲಿ ದಾರಿಯಲ್ಲಿ ಒಂದು ಕೊಲೆ ನಡೆಯುತ್ತದೆ, ನೀವೇ ಹೋಗಿ ಪೋಲೀಸ್ ಸ್ಟೇಷನ್‌ಗೆ ತಿಳಿಸಿದರೆ ಅದು ಎಫ್.ಐ.ಆರ್. ಆಗುತ್ತದೆ, ಆಗ ಕಂಪ್ಲೇಟ್ ರಿಜಿಸ್ಟರ್ ಮಾಡುತ್ತಾರೆ. ಆದರೆ ದೂರದಲ್ಲಿ ಕೊಲೆಯಾಗಿದೆ ಎಂದು ನಿಮ್ಮ ಪಾಡಿಗೆನೀವು ಒಂದು ರಿಕ್ಷಾದಲ್ಲಿ ಹೊರಟು

ಹೋದರೆ it is only an information. ಅರ್ಥ ಆಯಿತೇ? ಅವರು ಮೊದಲು ಎಲ್ಲಾ ಪ್ರಸ್ತಾಪ ಮಾಡಿದ್ದಾರೆ. it become information to the Government.

ಈಗ it is the course of the reply by the Hon'ble Deputy Chief Minister, who is incharge of the Finance portfolio on the Budget. During the course of the reply.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಏನು ಮಾಡಬೇಕೆಂದು ಹೇಳಿ? ತಾವು ಈಗ ಏನು ಸಲಹೆ ಕೊಡುತ್ತೀರಿ? ನಾನು ಇದುವರೆಗೆ ನನ್ನ ಅನುಭವದಲ್ಲಿ ಹೇಳಿದ್ದೇನೆ. ಇಂತಹ ಆರೋಪಗಳು ಬಂದಾಗ ಸರ್ಕಾರ ನೇರವಾಗಿ ಒಪ್ಪಿಕೊಳ್ಳುತ್ತಿತ್ತು. ಅವರು ಒಪ್ಪಿಕೊಳ್ಳದೇ ಇದ್ದಾಗ ನೀವೂ ಏನೂ ಮಾಡುವುದಕ್ಕೆ ಆಗುವುದಿಲ್ಲ ನೀವು ಏನಾದರೂ ತೀರ್ಮಾನ ತೆಗೆದುಕೊಳ್ಳಿ, ಈಗ ನಾವು ಏನು ಮಾಡಬೇಕು ಹೇಳಿ?

(ಗೊಂದಲ)

ಅಧ್ಯಕ್ಷರು: ಈಗ ರಾಮಕೃಷ್ಣರವರು ಏನೋ ಹೇಳುತ್ತಿದ್ದಾರೆ.

ಶ್ರೀ ವೈ. ರಾಮಕೃಷ್ಣ : ಅದಕ್ಕೆ ರೂಲ್ ಎಲ್ಲಿ ಬರುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ರೂಲ್ 328 ಏನು ಇದೆ, ಅವರು ಅದಕ್ಕೆ ಸಂಬಂಧಪಟ್ಟ ರೂಲಿಂಗ್ ಓದಿದರು. ಆದರೆ ಅದಕ್ಕೂ ಇದಕ್ಕೂ ಅಪ್ಲೆ ಆಗುವುದಿಲ್ಲ. ಅದರಲ್ಲಿ ಏನು ಇದೆ ಎಂದರೆ ``No allegation of a defamatory or incriminatory in nature shall be made by a member against any person unless the member has given previous intimation to the Speaker and also to the Minister concerned so that the minister may be able to make an investigation into the matter for the purpose of reply" ಎಂದಿದೆ.

ಇದು ಇಂಡಿವಿಜ್ಯುವಲ್ಸೆಗೆ ಬರುತ್ತದೆ, ಹೊರತಾಗಿ ಇದು ಸರ್ಕಾರದಲ್ಲಿ ಈ ರೀತಿಯಾಗಿ ಇದೆ. ನಮ್ಮಲ್ಲಿ ದಾಖಲೆಗಳುಇವೆ. Based on these documents ಕಮಿಟಿಗೆ ಒಪ್ಪಿಸಿ ಆ ಕಮಿಟಿ ಇದನ್ನು ಇನ್‌ವೆಸ್ಟಿಗೇಷನ್ ಮಾಡಲಿ, ದೇನ್ ಪನಿಷಮೆಂಟ್ ಇದು ಪರ್ಸನಲ್ ಅಲಿಗೇಷನ್ ಅಲ್ಲವಲ್ಲಾ. It is a Government as a whare.

ಅಧ್ಯಕ್ಷರು : ಬುದ್ಧಿವಂತಿಕೆಯನ್ನು ನಾನು ಮೆಚ್ಚುತ್ತೇನೆ. ಅನುಭವಗಳ ಆಧಾರದ ಮೇಲೆ ನಮ್ಮ ಸದನ ನಡೆಸುವುದಕ್ಕೆ ನಾವು ಇಟ್ಟಿರತಕ್ಕಂಥ ಈ ರೂಲ್ ಇದು. ಆದರೆ ಕೌಲ್ ಆ್ಯಂಡ್ ಶಖ್ ದರದಲ್ಲಿ ಇರುವುದನ್ನು ಏನು ರೆಫರ್ ಮಾಡಿದರು ಅದನ್ನು ಲೋಕಸಭೆ ಪ್ರೋಸೀಡಿಂಗ್ಸ್‌ನಲ್ಲಿ ಲಿಸ್ಟ್‌ನಲ್ಲಿ ನಡೆಸಿಕೊಂಡು ಹೋಗತಕ್ಕಂಥದ್ದು. Defamatory or incriminatory, is this allegation a complimentary in nature? please tell me. do you treat it as complimentary to the Govenment?

ಶ್ರೀ ವೈ ರಾಮಕೃಷ್ಣ : ಇದು ಗಂಭೀರವಾದಂಥ ಸಮಸ್ಯೆ ದೇಶದ ಆದಾಯ ಯಾವ ರೀತಿ ಸೋರಿಹೋಗುತ್ತಿದೆ ಎನ್ನುವುದಕ್ಕೆ ಇದು ಒಂದು ತಾಜಾ ಎಕ್ಸಾಫಲ್, ಒಂದು ಬೆಸ್ಟ್ ಎಕ್ಸಾಫಲ್, ಇದನ್ನು ಪತ್ತೆ ಹಚ್ಚುವುದಕ್ಕೆ ಏನು ಮಾಡಬೇಕು.

Mr. Speaker : That should be our endeavour ಅಥವಾ ಇವರು ಇಂಡಿವಿಜ್ಯುವಲ್ ಮೇಲೆ ಯಾವುದೇ ರೀತಿಯ ಆರೋಪ ಮಾಡಲಿಲ್ಲ. The Government has failed

ಅಧ್ಯಕ್ಷರು : ಅದಕ್ಕೆ ನಾನು ನಿಮಗೆ ಏನು ಸಜೇಷನ್ ಕೊಡುತ್ತಿದ್ದೇನೆಂದರೆ, ಈಗಲೂ ಕೂಡ ಏನು ಹೇಳುತ್ತಿದ್ದೇನೆಂದರೆ ಶ್ರೀಮಾನ್ ಯಡಿಯೂರಪ್ಪನವರು ಎದ್ದುನಿಂತು ಹೇಳಿದರು.

ಶ್ರೀ ವೈ. ರಾಮಕೃಷ್ಣ : ಅದನ್ನು ಪತ್ತೆ ಹಚ್ಚುವುದಕ್ಕೆ ಏನು ಮಾಡಬೇಕು? ಒಂದು ವೇಳೆ ಪತ್ತೆ ಹಚ್ಚುವುದಕ್ಕೆ ಆಗದೇ ಇದ್ದ ಪಕ್ಷದಲ್ಲಿ ಸರ್ಕಾರ ಅವರ ಮೇಲೆ ಎಷ್ಟು ಕ್ರಮ ಬೇಕೋ ಅಷ್ಟು ಕ್ರಮ ಹಾಕಿಕೊಂಡು ಇದೆ ಎಂಬುದನ್ನು ಪತ್ತೆ ಹಚ್ಚಬೇಕಲ್ಲಾ.

ಅಧ್ಯಕ್ಷರು : ಮಾನ್ಯ ರಾಮಕೃಷ್ಣರವರೇ ಇದು ಬರೀ ಸರ್ಕಾರ ಮತ್ತು ವಿರೋಧ ಪಕ್ಷ ಅಲ್ಲ, ಸದನದಲ್ಲಿ ಇಂತಹ ಒಂದು ವಿಚಾರ ಪ್ರಸ್ತಾಪ ಆಗಿ, ಇದಕ್ಕೆ ಒಂದು ಕೊನೆಯನ್ನು ಕಂಡು ಹಿಡಿಯದೇಹೋದರೆ. Just it will not be a lapse on the part of the Government all of us would be failing in ourduties.

ನಾನು ನಿಮಗೆ ಏನು ಹೇಳುತ್ತೇನೆಂದರೆ I want to take upon the burden on myself.

ಶ್ರೀ ವೈ. ರಾಮಕೃಷ್ಣ : ನಾನು ಅದಕ್ಕೆ ಹೇಳುತ್ತಿದ್ದೇನೆ ಈ ವಿಚಾರದಲ್ಲಿ ತಮ್ಮ ಜವಾಬ್ದಾರಿ ಜಾಸ್ತಿ ಇದೆ. ಏಕೆಂದರೆ the magnitude of the problem is so much. Whether the Government has responsibility or not. ಪ್ರಶ್ನೆ ಇರತಕ್ಕಂಥ. ಈ ವಿಚಾರದಲ್ಲಿ

ನಾವು ಬೇಡ, ಅವರೂ ಬೇಡ, ಸದನದ ಸಮಿತಿ ಮಾಡಿ, ಅವರು ತೀರ್ಮಾನ ತೆಗೆದುಕೊಳ್ಳಲಿ, ನಾವು ತಲೆ ಬಾಗಿಸುತ್ತೇವೆ. ಇಲ್ಲ ಆಗುವುದಿಲ್ಲ ಎಂದರೆ ಜುಡಿಷಿಯಲ್ ಕಮಿಟಿ ಮಾಡಿ. ಅವರ ತೀರ್ಮಾನಕ್ಕೆ ನಾವು ತಲೆ ಬಾಗಿಸುತ್ತೇವೆ. ಏಕೆಂದರೆ ಅವರು ಆರೋಪ ಮಾಡಿರತಕ್ಕಂಥದ್ದು 500 ಕೋಟಿ ರೂಪಾಯಿ ಸೋರಿಕೆ.

ಅಧ್ಯಕ್ಷರು : ತಾವು ಹೇಳಿದ್ದನ್ನು ನಾನು ಕೇಳಿದ್ದೇನೆ, ದಯಮಾಡಿ ನನ್ನ ಮಾತನ್ನು ಕೂಡ ಕೇಳಿ. ಈಗ ತಾವು ಒಂದು ಕೆಲಸ ಮಾಡಿ. ಏನು ಮಾಹಿತಿ ನಮ್ಮ ಕಡೆ ಲಭ್ಯ ಇದೆ, ಈಗಲೂ ಕೂಡ ಕಾಲ ಮಿಂಚಿ ಹೋಗಿಲ್ಲ, ತಾವು ರೂಲ್ ಪ್ರಕಾರ ಒಂದು ಪತ್ರ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರಿಗೆ ಮುಂಚೆನೇ ಕೊಟ್ಟಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಅವರು ಮುಂಚೆ ಕೊಟ್ಟಿದ್ದಾರೆ, ಭಾಷಣದಲ್ಲಿ ಕೂಡ

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರಿಗೆ ಮೂರು ದಿವಸದ ಮುಂಚೆಯೇ ಕೊಟ್ಟಿದ್ದೇನೆ. ತಮಗೆ ಇವೊತ್ತು ಕೊಟ್ಟಿದ್ದೇನೆ.

ಅಧ್ಯಕ್ಷರು : ಒಂದು ನಿಮಿಷ ತಾವು ತಾಳ್ಮೆ ಇಟ್ಟುಕೊಂಡರೆ ನಿಮ್ಮ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ನಾನು ಏನು ಹೇಳುತ್ತೇನೆಂದರೆ ಈಗ ಒಂದು ಕ್ಷಣ ತಮ್ಮ ಹತ್ತಿರ ಏನು ಮಾಹಿತಿ ಇದೆ ಅದನ್ನು ನನಗೆ ಕಳುಹಿಸಿಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಜೆರಾಕ್ಸ್ ಕಾಪಿಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ನಾನು ಏನು ಹೇಳುತ್ತಿದ್ದೇನೆಂದರೆ ತಾವು ಜೆರಾಕ್ಸ್ ಇರತಕ್ಕಂಥ ಒಂದು ಸ್ಲಿಪನ್ನು ಕಳುಹಿಸಿಕೊಟ್ಟಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಒರಿಜಿನಲ್ ಕೊಟ್ಟುಬಿಟ್ಟರೆ, ಅದು ಹೋಗಿ ಬಿಟ್ಟರೆ ನನ್ನ ತಲೆ ಹೋಗಿಬಿಡುತ್ತದೆ.

ಅಧ್ಯಕ್ಷರು : ತಾವು ನನಗೆ ಒರಿಜಿನಲ್ ಕೊಡಬೇಡಿ. ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತಿದ್ದೇನೆಂದರೆ you just send that bald xerox copy of the signatures

ರಾಮಕೃಷ್ಣರವರೇ, ತಾವು ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಿ, ಈಗಲೂ ಸಹಿತ ಕಾಲ ಮಿಂಚಿಲ್ಲ, ತಾವು ನಿಯಮಾನುಸಾರವಾಗಿ ಒಂದು ಅರ್ಜಿ ಬರೆದು ತಮ್ಮ ಹತ್ತಿರ ಏನು ಡಾಕ್ಯುಮೆಂಟ್ ಇದೆ ಅದನ್ನು ನನಗೆ ಕಳುಹಿಸಿಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಏನು ಸಲಹೆ ಕೊಟ್ಟಿದ್ದೇನೆಂದರೆ, ತಾವು ಮಾನ್ಯ ಉಪಾಧ್ಯಕ್ಷರನ್ನು ಅಲ್ಲಿ ಕೂರಿಸಿ ತಮ್ಮ ಕೊಠಡಿಗೆ ಹೋಗೋಣ. ನಾನು ತಮಗೆ ಕನ್ವಿನ್ಸ್ ಮಾಡುತ್ತೇನೆ. ಅನಂತರ ಸದನಕ್ಕೂ ಕನ್ವಿನ್ಸ್ ಮಾಡುತ್ತೇನೆ.

MR. SPEAKER : I am solving it.

(Interruptions)

ಶ್ರೀ ವೈ. ರಾಮಕೃಷ್ಣ : ಅಲ್ಲಿಗೂ ನಾವು ಸಿದ್ಧವಿರುವಾಗ

MR. SPEAKER : Please allow me to have my say. ತಾವು ಅದನ್ನು ಕೊಟ್ಟಿಬಿಟ್ಟರೆ ನಮಗೆ, What happens..

ಶ್ರೀ ವಾಟಾಳ್ ನಾಗರಾಜ್ : ತಾವು ಉಪಾಧ್ಯಕ್ಷರು ಕೊಡಿಸಿ, ತಮ್ಮ ಕೊಠಡಿಗೆ ಹೋಗೋಣ, ಸಭೆ ಮುಂದುವರಿಯಲಿ, ಏನೇನು ದಾಖಲೆಗಳು ಬೇಕು ಅದೆಲ್ಲಾ ಕೊಡೋಣ, ಆ ನಂತರ ನಿರ್ಣಯ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಅವರು ರೂಲ್ ಓದಿದರು, ನಾನೂ ಕೂಡ ಅದಕ್ಕೆ ಹೇಳಬೇಕಲ್ಲಾ.

ಅಧ್ಯಕ್ಷರು : ನಾನೇನು ಸಲಹೆ ಕೊಡುತ್ತಿದ್ದೇನೆಂದರೆ, ತಾವು ನಿಯಮಾನುಸಾರ ಒಂದು ಕಂಪ್ಲೆಟ್ ಬರೆದು ಅದಕ್ಕೆ ನಿಮ್ಮ ಹತ್ತಿರ ಇರುವ ಕಾಪಿ ಇನ್‌ಕ್ಲೋಸ್ ಮಾಡಿ ಎರಡು ನಿಮಿಷದಲ್ಲಿ ನನಗೆ ಕೊಡಿ. ನಾನೇನು ಮಾಡುತ್ತೇನೆಂದರೆ, ಉಪಾಧ್ಯಕ್ಷರನ್ನು ಇಲ್ಲಿ ಕೂರಿಸುತ್ತೇನೆ. I will first examine the matter.

ಮಾನ್ಯ ಉಪಮುಖ್ಯಮಂತ್ರಿಗಳು ಅವರ ಉತ್ತರ ಮುಂದುವರೆಸಲಿ, ಸಭೆ ನಡೆಯಲ್ಲಿ, ಸರ್ಕಾರದ ಕೆಲಸ ಆಗುತ್ತಿರಲಿ I will call the concerned representatives from the Government,

ಯಾರಾದರೊಬ್ಬರನ್ನು ಕರೆಸಿಕೊಳ್ಳುತ್ತೇನೆ. ನಾನು ಡಿಸಿಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ಬರುತ್ತೇವೆ, ಆದರೆ ಒಂದು ವಿಷಯ, ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಏನು ಹೇಳಿದರು ಎಂದರೆ ಏನಾದರೂ ಆರೋಪ ಇದ್ದರೆ, ಹೇಳಬಹುದು ಎಂದು ಹೇಳಿದರು.

ಅಧ್ಯಕ್ಷರು : ಸಮಯ ಏತಕ್ಕೆ ಕಳೆದುಕೊಳ್ಳಬೇಕು?

ಶ್ರೀ ವೈ. ರಾಮಕೃಷ್ಣ : ಅವರು ಬಹಳ ಸಾರಿ ಎದ್ದು ಹೇಳುವುದಕ್ಕೆ ಪ್ರಯತ್ನ ಪಟ್ಟರು. ಆದರೆ ಎಕ್ಸೈಸ್ ಮಿನಿಸ್ಟರ್ ಅಪ್ರೋಪ್ರಿಯೇಟ್ ಟೈಮ್‌ನಲ್ಲಿ ಹೇಳಿ ಎಂದು ಹೇಳಿದರು.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ. We fill find a s olution. please pass on that to me,

ನಿಮ್ಮ ರೆಫರನ್ಸ್ ಏನು ಇದೆ by way of allegation ಅದನ್ನು ಇಲ್ಲೇ ಕೊಟ್ಟು ಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಕೊಟ್ಟಿದ್ದೇವೆ, ನನ್ನ ಹತ್ತಿರ ಓರಿಜನಲ್ ಇದೆ, ಬೇಕಾದರೆ ಇದನ್ನು ಕಳುಹಿಸಿಕೊಡುತ್ತೇನೆ. ಇದನ್ನೂ ಸಹ ಇಟ್ಟುಕೊಳ್ಳಿ.

ಅಧ್ಯಕ್ಷರು : ಜೆರಾಕ್ಸ್ ಕಳುಹಿಸಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನೇನು ಹೇಳುತ್ತಿದ್ದೇನೆಂದರೆ ಒಂದು ಐದು ನಿಮಿಷ ತಮ್ಮ ಕೊಠಡಿಗೆ ಹೋಗೋಣ, ನಾವು ತಮಗೆ ಕನ್ವಿನ್ಸ್ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ : ಅದಕ್ಕಿಂತ ಇನ್ನೇನು ಎವಿಡೆನ್ಸ್ ಬೇಕು ತಮಗೆ?

(ಗೊಂದಲ)

Mr. Speaker : I will allow you to have your say. ನಾನು ತಮಗೆ ಏನು ಹೇಳುತ್ತೇನೆಂದರೆ ಆ ಬಾಲ್ಡ್ ಚೀಟಿ ಅಷ್ಟೇ ಬಂದಿದೆ it should be accompanied by a petition ಅಲ್ಲಾವಾ?

ವೈ ರಾಮಕೃಷ್ಣರವರೇ

ಶ್ರೀ ಬಿ. ಎಸ್. ಯುಡಿಯೂರಪ್ಪ : ಇದೇ ಸದನದಲ್ಲಿ ಶ್ರೀಮಾನ್ ಹೆಗಡೆಯವರು ಮುಖ್ಯಮಂತ್ರಿಗಳು ಆಗಿದ್ದಾಗ ಅಬಕಾರಿ ಬಾಬಿನಲ್ಲಿ ಅನೇಕ ಆರೋಪಗಳಾಯಿತು. ದಿನಕ್ಕೆ ಒಂದು ಕೋಟಿ ರೂ. ಲಾಸ್ ಆಗುತ್ತಿದೆ ಎಂದು ಹೇಳಿದ್ದಾರೆ ರೆಕಾರ್ಡ್ ಆಗಿದೆ ಆಗ ಎನ್‌ಕ್ವೊರಿ ಮಾಡಲಿಲ್ಲವೇ?

ಶ್ರೀ ವೈ. ರಾಮಕೃಷ್ಣ : ಅವಾಗ ಯಾವ ರೂಲ್ ಇತ್ತು ಸ್ವಾಮಿ?

(ಗೊಂದಲ)

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ ಶಿವಪ್ಪನವರೇ Spontaneous ಆಗಿ, on their own, if they get up and ask for it,

ನನಗೆ ಏನೂ ಸಮಸ್ಯೆ ಇಲ್ಲ. if they say "We are looking at it," ಎಂದರೆ I have no problem.

(Interruptions)

ಅಧ್ಯಕ್ಷರು : ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಮಾನ್ಯ ಯಡಿಯೂರಪ್ಪನವರು ಸ್ವಲ್ಪ ಆವೇಶದಲ್ಲಿದ್ದಾರೆ, ತಾವು ಅರ್ಥ ಮಾಡಿಕೊಳ್ಳಿ, ಆ ಇನ್‌ಫಾರ್ಮ್‌ಷನ್ ಏನು ಕೊಟ್ಟಿದ್ದಾರೆ it should be accompanied by a petition.

ಶ್ರೀ ಬಿ. ಎಸ್.ಯಡಿಯೂರಪ್ಪ : ಆವೇಶ ಆಗುವುದರಿಂದ ಏನೂ ಪ್ರಯೋಜನವಿಲ್ಲವೆಂದು ಅದು ಬಿಟ್ಟಾಗಿದೆ. ಇನ್ನು ಸ್ವಲ್ಪ ದಿವಸ ಬದುಕಿ ಇರೋಣ ಎಂದು ಇದ್ದೇನೆ.

ಶ್ರೀ ವೈ. ರಾಮಕೃಷ್ಣ : ನಮ್ಮ ಮೋಟಿವ್ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಿ. ಅವರ ಮೇಲೆ ಅಲಿಗೇಷನ್ ಹೊರಿಸಿಬೇಕು ಎಂದು ಇಲ್ಲ ಸೋರಿ ಹೋಗತಕ್ಕಂಥ ಹಣ ಸರ್ಕಾರಕ್ಕೆ ಬರಲಿ ಎಂಬುದು ನಮ್ಮ ಆಸೆ.

ಅಧ್ಯಕ್ಷರು : ನಾನು ಏನು ಹೇಳುತ್ತೇನೆಂದರೆ ಮಾನ್ಯ ಯಡಿಯೂರಪ್ಪನವರು ನನ್ನ ಗಮನಕ್ಕೆ ತಂದಿರತಕ್ಕಂಥದ್ದನ್ನು ಲಿಖಿತ ಮೂಲಕ ನನಗೆ ಅಡ್ರೆಸ್ ಮಾಡಿ ಮೂರು ಅಕ್ಷರಗಳ ಪತ್ರ ನನಗೆ ಕಳುಹಿಸಿಕೊಡಿ, immediately I will go to my chamber.

ಶ್ರೀ ಬಿ. ಎಸ್. ಯಡಿಯೂರಪ್ಪ : ಬೇಡ ಬನ್ನಿ ಕುಳಿತುಕೊಳ್ಳಿ ಬನ್ನಿ, ನಡೆಯಲಿ ಸಾರ್ ಲೂಟಿ ನಡೆಯಲಿ.

ಮಾನ್ಯ ಸದಸ್ಯರು : ಸಭಾಧ್ಯಾಕ್ಷರೆ, ನೀವು ಗಿಳಿ ಮರಿಗೆ ಪಾಠ ಹೇಳಿದ ಹಾಗೆ ಹೇಳುತ್ತಾ ಇದ್ದೀರಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಸ್ವಾಮಿ ಸದನವನ್ನು ನಡೆಸಿ, ನಾವು ಏನೂ ಬರೆದುಕೊಡುವುದಿಲ್ಲ. ಮಾನ್ಯ ನಾಣಯ್ಯನವರು ಹೇಳಿದ್ದು ಸಮಾಧಾನವಾಗಿದೆ, ದೇವರು ನೋಡಿಕೊಳ್ಳಲಿ ನಾಡಿನ ಜನ ನೋಡಿಕೊಳ್ಳಲಿ.

ಅಧ್ಯಕ್ಷರು : ಯಡಿಯೂರಪ್ಪನವರೇ, ಬೇಸರ ಮಾಡಿಕೊಳ್ಳಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಆಯಿತು ಸ್ವಾಮಿ, ಒಪ್ಪಿಕೊಂಡೆವಲ್ಲಾ, ಹೊರಟು ಹೋದರಲ್ಲಾ, ಸದನವನ್ನು ನಡೆಸಿ ರಿಪ್ಲೆ ಮಾಡಲಿ

ಅಧ್ಯಕ್ಷರು : ಈಗ ಮೂಲಭೂತವಾಗಿ ಇಲ್ಲಿ ಸ್ವಲ್ಪ ಕೇಳಿ ದಯಮಾಡಿ

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವೇ ಹುಚ್ಚರು ಸ್ವಾಮಿ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲೆಲ್ಲೋ ಹುಡುಕಿ ತಂದು ಕೊಟ್ಟು, ಏನೋ ಉದ್ಧಾರ ಆಗಬಹುದು ಸರಿ ಹೋಗಬಹುದು ಎಂದು ನಾವು ತಿಳಿದುಕೊಂಡಿದ್ದೆವು. ಪ್ರಜಾತಂತ್ರ ವ್ಯವಸ್ಥೆ ಸರಿ ಅಲ್ಲ, ಇಲ್ಲಿ ಅಡೆಜೆಸ್ಟ್‌ಮೆಂಟ್ ಮಾಡಿಕೊಳ್ಳ ಬೇಕು, ಹೊಂದುಕೊಂಡು ಹೋಗಬೇಕು ಅಲ್ಲವೇ?

ಅಧ್ಯಕ್ಷರು : ಸರಿ ಮಾಡೋಣ ದಯಮಾಡಿ ಹೇಳಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಒಂದೊಂದು ಕಟಿ ಒಂದೊಂದು ಕ್ಷೇತ್ರಕ್ಕೆ ಕರ್ಚು ಮಾಡುತ್ತಾರೆ, ನಾವೇನು ಮಾಡಬೇಕು ಹೇಳಿ?

ಶ್ರೀ ಎಚ್. ಶಿವಪ್ಪ : ಅಧ್ಯಕ್ಷರೆ, ಇದು ಸಹಿಸಲು ಅಸಾಧ್ಯವಾದ ನಡವಳಿಕೆ ಹಾಗಾದರೆ ರೂಲ್ಸ್ ಅಂಡ್ ರೆಗ್ಯುಲೇಷನ್ ಗಾಳಿಗೆ ತೂರಬೇಕೆ?

(ಗೊಂದಲ)

ಶ್ರೀ ಅಶೋಕ್ ಎಸ್. ಕಾಟವೆ : ಅಧ್ಯಕ್ಷರೆ, ಸರ್ಕಾರ ಬಹಳ ಅನ್ಯಾಯ ಮಾಡುತ್ತಾ ಇದೆ.

(ಗೊಂದಲ)

ಅಧ್ಯಕ್ಷರು : ತಾವುಗಳೆಲ್ಲರೂ ದಯಮಾಡಿ ಕುಳಿತುಕೊಳ್ಳಿ ನಾನು ಮಾನ್ಯ ಯಡಿ ಯೂರಪ್ಪನವರಿಗೆ, ಮತ್ತು ಅವರ ಉಪ ನಾಯಕರಾದಂತಹ ರಾಮಕೃಷ್ಣ ಅವರಿಗೆ

ಸಾಕಷ್ಟು ವಿವರಣೆಯನ್ನು ಕೊಟ್ಟು ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗಲೂ ಈ ಅವಕಾಶ ಮುಕ್ತವಾಗಿ ಅವರಿಗೆ ತೆರೆದು ಇಟ್ಟಿದ್ದೇವೆ. ಅವರು ಬರವಣಿಗೆ ಮುಂಖಾಂತರ, ನಿಯಮಾವಳಿಗೆ ಅನುಸಾರವಾಗಿ ನನಗೆ ತಿಳುವಳಿಕೆ ಕೊಟ್ಟರೆ, ನಾನು ಅದನ್ನು ಸರ್ಕಾರಕ್ಕೆ ಕಳುಹಿಸುವುದೋ, ಅಥವಾ ನನ್ನಲ್ಲೇ ಇಟ್ಟುಕೊಳ್ಳುವುದೋ, ಅದು ವಿಚಾರಣೆಗೆ ಅರ್ಹವೋ ಇಲ್ಲವೋ ಎನ್ನತಕ್ಕಂತಹ ತೀರ್ಮಾನವನ್ನು ನನ್ನ ವಿವೇಚನೆಗೆ ಅನುಗುಣವಾಗಿ ತೆಗೆದು ಕೊಳ್ಳುವುದಕ್ಕೆ ನಾನು ತೆರೆದ ಮನಸ್ಸಿನಿಂದ ಸಿದ್ಧನಾಗಿ, ಬದ್ಧವಾಗಿ ಕುಳಿತಿದ್ದೇನೆ. ಅದರ ಮೇಲೆ ಅವರಿಗಿ ಕೊಡುವುದಕ್ಕೆ ಇಷ್ಟ ಇಲ್ಲದಿದ್ದರೆ ನಾನು ಬಲವಂತವಾಗಿ ಅರ್ಜಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಮಧ್ಯೆ ತೀರ್ಮಾನ ತೆಗೆದು ಕಳ್ಳುವುದು ಅವರಿಗೆ ಬಿಡುತ್ತೇವೆ. ಈ ಮಧ್ಯ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಉತ್ತರವನ್ನು ಮುಂದುವರಿಸಿ.

ಶ್ರೀ ಸಿದ್ಧರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, ನೀವು ಕೊಟ್ಟಿರತಕ್ಕಂಥ ಸಲಹೆಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಮುಂಗಡ ಪತ್ರದ ಮೇಲೆ ನಡೆಯುತ್ತಾ ಇರುವಂತಹ ಚರ್ಚೆಯಾಗಿದೆ. ನಾನು ಉತ್ತರ ಕೊಡತಕ್ಕಂಥದ್ದು. ಈ ಉತ್ತರ ಕೊಡುವಾಗ ಒಂದು ಆರೋಪ ಮಾಡಿ, ಆರೋಪಕ್ಕೆ ನೀವು ಹೀಗೇ ಛಾಡಬೇಕು ಎನ್ನತಕ್ಕಂಥದ್ದು ಯಾವುದೇ ಒಂದು ಆರೋಪವನ್ನು ಸರ್ಕಾರದ ಮೇಲೆ ಮಾಡಬೇಕಾದರೆ, ಅಥವಾ ಒಬ್ಬ ವ್ಯಕ್ತಿಯ ಮೇಲೆ ಆರೋಪ ಮಾಡಬೇಕಾದರೆ ನಿಯಮಾವಳಿಗಳಿವೆ, ಈ ಸಧನದ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದರೆ ಈ ನಿಯಮಾವಳಿಗಳನ್ನೆಲ್ಲಾ ಗಾಳಿಗೆ ತೂರಿ ಸದನ ನಡೆಸುವುದಕ್ಕಾಗುವುದಿಲ್ಲ.

(ಗೊಂದಲ)

ಸರ್ಕಾರ ನಡೆಸತಕ್ಕಂತವರೂ ಕೂಡ ಒಂದು ಆರೋಪ ಮಾಡಿದ ತಕ್ಷಣ, ನ್ಯಾಯಾಧೀಶರಿಂದ ತನಿಖೆ ಆಗಬೇಕು, ಸದನ ಸಮಿತಿ ಆಗಬೇಕು ಎನ್ನತಕ್ಕಂಥದ್ದನ್ನು ಮಾಡುವುದಕ್ಕೆ ಆಗುವುದಿಲ್ಲ. ಅವರು ದಾಖಲಾತಿಗಳನ್ನು ಕೊಡಲಿ. ದಾಖಲೆಗಳನ್ನು ಮತ್ತು ಅವರಿಗೆ ಕೊಟ್ಟಿರತಕ್ಕಂಥದ್ದನ್ನು ನಮಗೆ ಎಲ್ಲಾ ಕೊಡಲಿ, ನಮಗೆ ಕಳುಹಿಸಿ ಕೊಡಿ, ಪ್ರೈಮಾಫೇಸಿಯಾಗಿದ್ದರೆ ನಾವು ಯಾವ ಮಟ್ಟದಲ್ಲಿ ಎನ್‌ಕ್ವೊಯರಿ ಮಾಡಬೇಕು ಎಂಬುದನ್ನು ಯೋಚಿಸಿ ನಾವು ಮಾಡುತ್ತೇರೆ. ನಾವು ಯಾರದೇ ಜೊತೆ ಕೂಡ ಶಾಮೀಲು ಆಗತಕ್ಕಂತಹ ಅವಶ್ಯಕತೆ ಇಲ್ಲ. ಶಾಮೀಲು ಆಗತಕ್ಕಂತಹ ಕೆಲಸವನ್ನೂ ಕೂಡ ನಾವು ಮಾಡುವುದಿಲ್ಲ. ಎಷ್ಟು ದೊಡ್ಡ ವ್ಯಕ್ತಿಯೇ ಇರಲಿ, ಯಾರೇ ಅಧಿಕಾರಿ ಶಾಮೀಲು ಆಗಿರಲಿ ಅವರ ಮೇಲೆ

ಕಠಿಣವಾದಂತಹ ಕ್ರಮ ತೆಗೆದುಕೊಳ್ಳುತ್ತೇವೆ. If there is prime facie case, definitely we are going to hold an enquiry.

ಹೌದು ನಾವೂ ಕೂಡ ಸಾರ್ವಜನಿಕ ಜೀವನದಲ್ಲಿ ಇಷ್ಟು ವರ್ಷಗಳ ಕಾಲ ಪ್ರಾಮಾಣಿಕವಾಗಿ ನಡೆದುಕೊಂಡಿದ್ದೇವೆ. ಯಾರ ಮೂಲಾಜಿನಲ್ಲೂ ಇಲ್ಲ. ನಮಗೂ ಕೂಡ ಪ್ರಜಾತಂತ್ರ ಪ್ರಾಮಾಣಿಕತೆ, ಈ ರಾಜ್ಯವನ್ನು ಕಾಪಾಡಬೇಕು ಎಂದು ಇದೆ. ನಾವೂ ಕೂಡ ಹೋರಾಟದ ಮೂಲಕ ಬಂದಿರತಕ್ಕಂತವರು. ನಾವು ತತ್ವಗಳನ್ನು, ಸಿದ್ಧಾಂತಗಳನ್ನು ಕೆಲವು ವಿಚಾರಗಳನ್ನು ಇಟ್ಟುಕೊಂಡಿದ್ದೇವೆ. ಈ ರಾಜ್ಯದ ಆದಾಯ ಹೆಚ್ಚು ಮಾಡಬೇಕೆಂಬ ಕಳಕಳಿ ನಮಗೂ ಕೂಡ ಇದೆ. ಈಗ ಐನೂರು, ಆರುನೂರು ಕೋಟಿ ಸೋರಿ ಹೋಗುತ್ತಿದೆ. ಎಂದು ವೇಗ್ ಆಗಿ ಅಲಿಗೇಷನ್ ಮಾಡಿದ್ದೀರಿ. ನಾನು ಏನು ಹೇಳಿದೆ, ಪ್ರಾಮಾಣಿಕವಾಗಿ ನಾನು ಸೆಕೆಂಡ್ಸ್ ಎಲ್ಲಾ ನಿಲ್ಲಿಸಿ ಬಿಟ್ಟಿದ್ದೇವೆಂದು ಹೇಳುವುದಿಲ್ಲ. ಇನ್ನೂ ಹೋಗುತ್ತಾ ಇದೆ, ನಡೆಸುತ್ತಾ ಇದೆ, ಪ್ರಯತ್ನ ಮಾಡುತ್ತಾ ಇದ್ದೇವೆ. ಇದು ಎಲ್ಲಾ ಕಾಲದಲ್ಲೂ ಕೂಡ ನಡೆದುಕೊಂಡು ಬಂದಿದೆ. ಇನ್ನೂ ಹೆಚ್ಚು ಪ್ರಯತ್ನ ಮಾಡಬೇಕೆಂದು ಹೇಳಿದರೆ ಮಾಡುತ್ತೇವೆ ಇನ್ನು ಎಷ್ಟು ಪ್ರಯತ್ನ ಮಾಡಬೇಕೋ ಅಷ್ಟು ಮಾಡುತ್ತೇವೆ. ಇನ್ನು ಎಷ್ಟು ಬಿಗಿ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಅಷ್ಟು ಬಿಗಿ ಮಾಡುವುದಕ್ಕೆ ಬದ್ಧರು ಆಗಿದ್ದೇವೆ. ಇದರಲ್ಲಿ ಬೇರೆ ವಿಚಾರ ಇಲ್ಲವೇ ಇಲ್ಲ. ಯಾರ ಜೊತೆ ಶಾಮೀಲು ಆಗಬೇಕಿಲ್ಲ, ಯಾರಿಗೂ ರಕ್ಷಣೆ ಕೊಡಬೇಕಾಗಿಲ್ಲ ಆ ಪ್ರಶ್ನೆಯೇ ಇಲ್ಲವೆಂದು ಸ್ಪಷ್ಟ ಪಡಿಸಿದ್ದೇನೆ. ಆದುದರಿಂದ ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹಿರಿಯ ಸದಸ್ಯರು ಅವರು ಎಲ್ಲಾ ದಾಖಲೆಗಳನ್ನು ಕೊಡಲಿ. The Government will look into the matter and if there is a prima facie case for holding an enquiry, we are going to hold the enquiry. ಯಾರಿಂದ, ಯಾವ ವ್ಯಕ್ತಿಯಿಂದ ಯಾವ ಪ್ರಮಾಣ ತನಿಖೆ ಮಾಡಿಸಬೇಕು ಅದನ್ನು ನಾವು ಮಾಡಿಸುತ್ತೇವೆ. ಇಷ್ಟು ವಿಚಾರಗಳನ್ನು ಹೇಳಿ, ಈಗ ಎಕ್ಸೈಸ್ ಬಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದೆ. ಈಗ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ, ನಮ್ಮ ಪ್ರಣಾಲಿಕೆಯಲ್ಲಿ ನಾವು ಏನು ಹೇಳಿದ್ದುದು ಅಂದರೆ, ಈ ಆ್ಯಕ್ಷನ್ ಸಿಸ್ಟಮ್ ತೆಗೆದು ಹಾಕುತ್ತೇವೆ, ಬಾಟ್ಲಿಂಗ್ ಮೂಲಕ ಸ್ಯಾಚೆಟ್ ತೆಗೆದು ಹಾಕಿ ಲೈಸೆನ್ಸ್ ಸಿಸ್ಟಮ್ ಮಾಡುತ್ತೇವೆ ಎಂದು ಪ್ರಸ್ತಾಪ ಮಾಡಿದ್ದು, ಸಾರಾಯಿಯನ್ನು ಹಂತ, ಹಂತವಾಗಿ ತೆಗೆದು 1996-97ನೇ ಸಾಲಿನ ರಾಜ್ಯಪಾಲರ ಭಾಷಣದಲ್ಲಿ "The Government will seriously consider to bring prohibition of arrack in a phased manner."

ಎನ್ನತಕ್ಕಂಥದ್ದನ್ನು ನಾವು ಹೇಳಿದ್ದೇವೆ. ಅದಕ್ಕೆ ನಾವು ಇವತ್ತು ಕೂಡ ಆ ಮಾತಿನಿಂದ ವಿಚಲಿತವಾಗುತ್ತಾ ಇಲ್ಲ. ಅಥವಾ ನಾವು ಹೇಳಿಲ್ಲ ಎಂದು ಹೇಳುವುದಿಲ್ಲ. ಸಾರಾಯಿಯನ್ನು ನಿಲ್ಲಿಸುತ್ತೇವೆಂದು ಹಿಂದೆ ಇದ್ದಂತಹ ನಮ್ಮ ಮುಖ್ಯ ಮಂತ್ರಿಗಳು ಹೇಳಿದರು, ಈಗಿನ ಮುಖ್ಯಮಂತ್ರಿಗಳೂ ಹೇಳಿದ್ದರು ನಿಜ. ಆದರೆ ಸಬ್ ಕಮಿಟಿ ಮಾಡಿದೆವು. ಸರ್ಕಾರ ಸಬ್ ಕಮಿಟಿ ಮಾಡಿ ಅದರ ಆಗು ಹೋಗುಗಳ ಬಗ್ಗೆ ನೋಡಿ ವರದಿ ಕೊಡಿ ಎಂದು ಸಬ್ ಕಮಿಟಿ ಮಾಡಿದ್ದೆವು. ನಾನೇ ಅದರ ಚೇರ್‌ಮನ್ ಕೂಡ ಆಗಿದ್ದೆ. ನಾನು ಅದಕ್ಕಿಂತ ಮುಂಚಿತವಾಗಿ ಹಳ್ಳಿಗಾಡಿನಲ್ಲಿ ಸಾರಾಯಿಯಿಂದ ಮಹಿಳೆಯರಿಗೆ ತೊಂದರೆ ಆಗುತ್ತದೆ. ಬಡವರಿಗೆ ತೊಂದರೆ ಆಗುತ್ತದೆ ಎಂದು ನಾನೂ ಕೂಡ ಬಲವಾದ ಪ್ರತಿಪಾದನೆ ಮಾಡಿದ್ದೆನು. ಅವರಿಗೆ ಅನುಕೂಲ ಆಗುತ್ತದೆ ಎಂಬ ಸದುದ್ದೇಶದಿಂದ ಮಾಡಿದ್ದು. ಹಳ್ಳಿಯಲ್ಲಿ ಇರತಕ್ಕಂತಹ ಕೂಲಿ ಕಾರ್ಮಿಕರಿಗೆ ಅನುಕೂಲವಾಗುತ್ತದೆ, ಮಹಿಳೆಯರಿಗೆ ಇದರಿಂದ ಸ್ವಲ್ಪ ಕಿರುಕುಳ ತಪ್ಪುತ್ತದೆ ಎಂಬ ಸದುದ್ದೇಶದ ಕಾರಣದಿಂದ ಮಾಡಿದ್ದುದ್ದು. ಆದರೆ ಈ ದೇಶದಲ್ಲಿ ಎಲ್ಲೆಲ್ಲಿ ಪ್ರೊಹಿಬಿಷನ್ ಇದೆ ಅಂಥ ಕೆಲವು ರಾಜ್ಯಗಳಿಗೆ ಭೇಟಿ ನೀಡಿದ್ದೆವು. ನಮ್ಮ ಕಮಿಟಿ ಗುಜರಾತ್‌ಗೆ ಹೋಗಿತ್ತು, ಮಹಾರಾಷ್ಟ್ರಕ್ಕೆ ಹೋಗಿತ್ತು, ಆಂಧ್ರಪ್ರದೇಶಕ್ಕೆ ಹೋಗಿತ್ತು. ಗುಜರಾತ್‌ನಲ್ಲಿ ಟೋಟಲ್ ಪ್ರೊಹಿಬಿಷನ್ ಇದೆ, ಆಂಧ್ರದಲ್ಲಿ ಟೋಟಲ್ ಪ್ರೊಹಿಬಿಷನ್ ಇದೆ, ತಮಿಳು ನಾಡಿನಲ್ಲಿ ಭಾಗಶಃ ಪ್ರೊಹಿಬಿಷನ್ ಇದೆ. ತಮಿಳು ನಾಡಿನಲ್ಲಿ ಭಾಗಶಃ ಪ್ರೊಹಿಬಿಷನ್ ಇದೆ. ಪ್ರೊಹಿಬಿಷನ್ ಆರ್ರ್ಯಾಕ್ ಮೇಲೆ ಮಾತ್ರ ಇದೆ. ಕೇರಳದಲ್ಲಿ 1.4.96ರಿಂದ ಆರ್ರ್ಯಾಕ್ ಮೇಲೆ ಪ್ರೊಹಿಬಿಷನ್ ಇದೆ. ಹೀಗೆ ಎಲ್ಲಾ ಸರ್ಕಾರದ ಮುಖ್ಯಮಂತ್ರಿಗಳ ಜೊತೆ ನಮ್ಮ ಕಮಿಟಿ ಚರ್ಚೆ ಮಾಡಿದೆ. ಅವರೆಲ್ಲಾರೂ ಕೂಡ ನಮಗೆ ಅವರ ಅಭಿಪ್ರಾಯ ಮತ್ತು ಅನುಭವಗಳನ್ನು ಹೇಳಿದರು. ಏನೆಂದರೆ ಈ ಟೋಟಲ್ ಪ್ರೊಹಿಬಿಷನ್ ಎಲ್ಲಿಯೂ ಕೂಡ ಯಶಸ್ವಿ ಆಗಿಲ್ಲ, ಅಷ್ಟೇ ಅಲ್ಲದೆ ಪಾರ್ಷಿಯಲ್ ಪ್ರಾಹಿಬಿಷನ್ ಕೂಡ ಯಶಸ್ವಿ ಆಗಿಲ್ಲ. ನಾನು ಇದನ್ನು ಏಕೆ ಹೇಳುತ್ತೇನೆ ಎಂದರೆ, ಪಕ್ಕದ ರಾಜ್ಯಗಳಲೆಲ್ಲಾ ಸಾರಾಯಿ ಮಾರಾಟ ಮಾಡತಕ್ಕಂಥದ್ದು, ವಿಸ್ಕಿ, ಬ್ರಾಂದಿಗಳನ್ನು ಮಾರಾಟ ಮಾಡತಕ್ಕಂಥದ್ದು, ಹೆಂಡ ಮಾರಾಟ ಮಾಡತಕ್ಕಂಥದ್ದು ಇರುವುದರಿಂದ ಇದು ಇನ್ನೂ ಹೆಚ್ಚು ಅಕ್ರಮಗಳಾಗುತ್ತಿವೆ, ಕಾನೂನು ಬಾಹಿರ ಚಟುವಟಿಕೆಗಳಾಗುತ್ತಿವೆ, ಮಾಫಿಯಾ ಗ್ಯಾಂಗ್‌ಗಳೆಲ್ಲಾ ಸೃಷ್ಟಿಯಾಗುತ್ತಿದೆ ಎಂದು ಹೇಳಿ ಅವರು ನಮಗೆ ವರದಿ ಕೊಟ್ಟರು. ಹಾಗಿದ್ದರೂ ಕೂಡ ನಮ್ಮ ಮಾತಿಗೆ ನಾವು ಕಟ್ಟುಬಿದ್ದು ಈ ಬಗ್ಗೆ ಸಿಸ್ಟಮ್ ಬದಲಾವಣೆ ಮಾಡಿ ಬೇರೆ ರೀತಿ ಯೋಜನೆ ಮಾಡಬೇಕು ಮತ್ತು ಕ್ರಮೇಣವಾಗಿ ಈ ಸಾರಾಯಿ ಕುಡಿಯತಕ್ಕದ್ದನ್ನು ತಪ್ಪಿಸಬೇಕು ಎಂಬ ಉದ್ದೇಶದಿಂದ ಒಂದು ಹೊಸ ವಿಚಾರವನ್ನು

1997-98ಕ್ಕೆ ನಾವು ಮಾಡಿದ್ದೇವೆ. ತಮಿಳುನಾಡಿನಲ್ಲಿ, ಕೇರಳದಲ್ಲಿ ಹಾಗೂ ಬೇರೆ ರಾಜ್ಯಗಳಲ್ಲಿ ಈ ವಿಷಯದಲ್ಲಿ ಆಗಿರತಕ್ಕಂತಹ ಅನುಬವಗಳ ಹಿನ್ನೆಲೆಯಲ್ಲಿ ನಮ್ಮ ಸಮಿತಿಯವರು ಒಂದು ವರದಿಯನ್ನು ಕೊಟ್ಟೆವು. ಅದರಲ್ಲಿ ನಾವು ಏನು ಹೇಳಿದವು ಎಂದರೆ, ಈ ಆಕ್ಷನ್ ಸಿಸ್ಟಮ್ ಇದ್ದರೆ, ಒಂದೊಂದು ತಾಲ್ಲೂಕುಗಳಲ್ಲಿ ಆಕ್ಷನ್ ಮಾಡಿ ಎಲ್ಲಾ ಕಡೆ ಸರಾಯಿ ಸುಲಭವಾಗಿ, ಅವರ ಇಷ್ಟ ಬಂದ ಕಡೆ ಅವರು ಆಕ್ಷನ್ ಮಾಡಿದ ಮೇಲೆ, ಕಂಟ್ರಾಕ್ಟರ್ ಸಾರಾಯಿಯನ್ನು ಎಲ್ಲಾ ಕಡೆ ಮಾರಾಟ ಮಾಡುತ್ತಾನೆ. ಸುಲಭವಾಗಿ ಅವರು ಎಲ್ಲಾ ಹಳ್ಳಿಗಳಲ್ಲೂ ಮಾರಾಟ ಮಾಡುತ್ತಾರೆ. ಅವರು ನಾವು ಹತ್ತು ಸಾವಿರ ಮಾತ್ರ ಸಾರಾಯಿ ಅಂಗಡಿಗಳನ್ನು ಇರಬಹುದು. ಅಷ್ಟು ಹತ್ತಿರದಲ್ಲಿ ಸಿಕ್ಕುವಾಗ ಜನ ಅದಕ್ಕೆ ಹೆಚ್ಚು ಚಟಕ್ಕೆ ಬಲಿಯಾಗುತ್ತಾರೆ, ಹೆಚ್ಚು ಕುಡಿಯುತ್ತಾರೆ ಆದ್ದರಿಂದ ಇದನ್ನು ಮೊದಲು ಈ ಹಂತದಲ್ಲಿ ನಾವು ಅದು ಹತ್ತಿರದಲ್ಲಿ ಸಿಗದಂತೆ ಮಾಡುವ ಬಗ್ಗೆ ಯೋಜನೆ ಮಾಡೋಣ ಎನ್ನತಕ್ಕಂಥ ಒಂದು ವಿಚಾರವನ್ನು ಮಾಡಿದೆವು. ಆದುದರಿಂದ ಆಕ್ಷನ್ ತಪ್ಪಿಸಿ, ಲೈಸೆನ್ಸ್ ಮೂಲಕ ಮತ್ತು ನಂಬರ್ ಆಫ್ ಔಟ್‌ಲೆಟ್ಸ್ ಮಾರಾಟ ಮಾಡುತ್ತಿದ್ದುದು, ಸುಮಾರು 20 ಸಾವಿರ ಇದ್ದುದ್ದನ್ನು 5-6 ಸಾವಿರಕ್ಕೆ ನಾವು ಇಳಿಸಬೇಕು ಎಲ್ಲಿ ಯಾವುದಾದರೂ ಒಂದು ಊರಿನಲ್ಲಿ ಒಂದು ವೇಳೆ ಅಲ್ಲಿ ನಮಗೆ ಮಾರಾಟ ಬೇಡ ಎಂದರೆ ಅಲ್ಲಿ ನಾವು ಅರ್ಜಿಯನ್ನೂ ಕರೆಯುವುದು ಬೇಡ, ಅಲ್ಲಿ ಮಾರಾಟವನ್ನೂ ಮಾಡುವುದೂ ಕೂಡ ಬೇಡ ಎನ್ನುತಕ್ಕಂಥಾದ್ದೂ ಕೂಡ ನಮ್ಮ ಗಮನದಲ್ಲಿದೆ. ಎಲ್ಲಿ ಬಡವರಿದ್ದಾರೆ ಎಲ್ಲಿ ಸ್ಲಮ್‌ಗಳಿವೆ, ಅಂತಹ ಕಡೆ ನಾವು ಅರ್ಜಿಗಳನ್ನು ಕರೆಯುವುದಿಲ್ಲ, ಅವರಿಗೆ ಕೊಡುವುದೂ ಇಲ್ಲ. ಮತ್ತೆ ಇವರು ಬಾಟ್ಲಿಂಗ್, ಬಾಟ್ಲಿಂಗ್, ಏನೋ ಒಂದು ದೊಡ್ಡ ಭೂತವಾಗಿ ಬಿಟ್ಟಿದೆ ಎನ್ನುತ್ತಿದ್ದಾರೆ. ನಾವು ಬಾಟ್ಲಿಂಗ್ ಖಾಸಗಿಯವರಿಗೆ ಕೊಡಲಿಕ್ಕೆ ಹೋಗಿಲ್ಲ. ಆಕ್ಷನ್ ಮಾಡುವುದರಿಂದಲೇ ಇದು ಹೆಚ್ಚು ಹಾವಳಿ ಆಗುತ್ತಿರುವುದು. ಇದರ ಹಾವಳಿ ಆಕ್ಷನ್‌ನಿಂದ ಬಹಳ ಆಗುತ್ತಿದೆ. ಈ ಹಾವಳಿಯನ್ನು ಕಡಿಮೆ ಮಾಡಬೇಕು, ಅರ್ಜಿಗಳನ್ನು ಕರೆದು, ಅಲ್ಲಿ ಅದನ್ನು ಲೈಸೆನ್ಸ್ ಮೂಲಕ ಕೊಡಬೇಕು ಎನ್ನತಕ್ಕಂಥದ್ದು ಸರ್ಕಾರದ ಉದ್ದೇಶ. ಇದೇನೂ ಹೊಸದಲ್ಲ, ಈಗ ಮಹಾರಾಷ್ಟ್ರದಲ್ಲಿ ಈ ರೀತಿ ನಡೆಯುತ್ತಿದೆ. ಈ ಸಿಸ್ಟಮ್ ಅಲ್ಲಿ ಚೆನ್ನಾಗಿಯೇ ನಡೆಯುತ್ತಿದೆ. ಇದನ್ನು ನಾವು ಜಾರಿಗೆ ತಂದು ನೋಡೋಣ. ಇದು ನಮ್ಮ ಮೊದಲನೇ ಹಂತ. ನಾವಿಲ್ಲಿ ಕ್ರಮೇಣವಾಗಿ ಸಾರಾಯಿ ತಪ್ಪಿಸತಕ್ಕಂಥ ವಿಚಾರಕ್ಕೆ ಹೋಗೋಣ. ನಾವು ಇದಕ್ಕೆ ಬದ್ಧರಾಗಿದ್ದೇವೆ. ಆದರೆ ಇವರು ಏನು ಮಾತನಾಡುತ್ತಾರೆ ಎಂದರೆ, ಇದರಿಂದ ನಿಮಗೆ 450 ಕೋಟಿ ರೂ.ಗಳ ಆದಾಯ ಹೋಗುತ್ತದೆ, ಅದಕ್ಕೋಸ್ಕರ ಇದನ್ನು ವಾಪಸ್ ತೆಗೆದುಕೊಂಡಿರಿ ಎನ್ನುತ್ತಾರೆ. ಆದಾಯ ಹೋಗತಕ್ಕಂಥ ಪ್ರಶ್ನೆ ಎರಡನೆಯದು. ನಮಗೂ

ಬಡವರ ಬಗ್ಗೆ ಜನಗಳ ಬದುಕಿನ ಬಗ್ಗೆ ಕಾಳಜಿ ಇದೆ. ನಿಮಗಿಂತ ಹೆಚ್ಚಿನ ಕಾಳಜಿ ಇಲ್ಲದಿದ್ದರೂ ನಿಮ್ಮಷ್ಟೇ ಕಾಳಜಿ ನಮಗೂ ಇದೆ. ನಾವೂ ಕೂಡ ಹಳ್ಳಿಗಾಡಿನಿಂದ ಬಂದಂತಹವರು. ಹಳ್ಳಿಗಾಡಿನ ಬದುಕನ್ನು ನೋಡಿರತಕ್ಕಂಥವರು, ಹಳ್ಳಿಗಳಲ್ಲಿ ಜನರು ಯಾವ ರೀತಿ ಕಷ್ಟ ಪಡುತ್ತಾರೆ ಎಂಬುದು ನಮಗೂ ಗೊತ್ತಿದೆ. ಕೂಲಿ ಕಾರ್ಮಿಕರು ಏನು ಮಾಡುತ್ತಾರೆ, 4-5 ಎಕರೆ ಇರುವಂತಹ ಸಾಮಾನ್ಯ ಜನ ಏನು ಮಾಡುತ್ತಾರೆ ಎಂಬುದ ನಮಗೂ ಕೂಡ ಗೊತ್ತಿದೆ. ನಮ್ಮ ಊರಿನಲ್ಲಿ ಹೇಗೆ ಸಾರಾಯಿ ಕುಡಿಯುವುದು ನಮಗೆ ಗೊತ್ತಿಲ್ಲವೇ? ನಿಮ್ಮ ಊರಿನಲ್ಲಿ ಸಾರಾಯಿ ಕುಡಿಯುವುದು ನಿಮಗೆ ಹೇಗೆ ಗೊತ್ತಿರುತ್ತದೆಯೋ ಹಾಗೆಯೇ ನಮಗೂ ಗೊತ್ತಿರುತ್ತದೆ. ಇವೆಲ್ಲಾ ನಮಗೆ ಗೊತ್ತಿರತಕ್ಕಂಥ ವಿಚಾರಗಳೇ. ಆದರೆ ಪ್ರಾಕ್ಟಿಕಲ್ಲಾಗಿ ಈ ಜನಗಳಿಗೆ ಅನುಕೂಲ ಮಾಡಬೇಕಾದರೆ ಏನು ಮಾಡಬೇಕು ಎಂಬುದನ್ನು ನೋಡಬೇಕಾಗುತ್ತದೆ. ಇವತ್ತು ನಾವು ಸಾರಾಯಿ ತೆಗೆದು ಹಾಕಿದ ತಕ್ಷಣವೇ ಸಾರಾಯಿ ಸಂಪೂರ್ಣರಾಗಿ ತಪ್ಪಿ ಹೋಗಿ ಬಿಡುತ್ತದೆಯೇ? ಮಾಫಿಯಾ ಗಾಯಂಗ್ ಸೃಷ್ಟಿಯಾಗಿ ಬಿಡುತ್ತವೆ, ಆಂಧ್ರದಲ್ಲಿ ನನಗೆ ಹೇಳಿದರು, ಈಗ ಎಲ್ಲಾ ತಾಲ್ಲೂಕುಗಳಲ್ಲಿ ಮಾಫಿಯಾದವರೇ ಎಲ್ಲಾ ಕ್ಲಡೆ ಮಾಡುತ್ತಿದ್ದಾರೆ, ಆಂಧ್ರದಲ್ಲಿ ಎಂಟೈರ್ ಆಗಿ ಪ್ಯಾರಲಲ್ ಎಕನಾಮಿ ನಡೆದುಕೊಂಡು ಹೋಗುತ್ತಿದೆ. ಇವತ್ತು ಆಗಲೇ ಆಂಧ್ರದವರು ಪಾನ ನಿಷೇಧವನ್ನು ವಾಪಸ್ ತೆಗೆದುಕೊಳ್ಳುತ್ತಿದ್ದಾರೆ, ಎರಡು ವರ್ಷವೂ ಅಲ್ಲಿ ಅದು ಇರಲಿಲ್ಲ. ಇವತ್ತು ಮತ್ತೆ ಅಲ್ಲಿ ಇಂಟ್ರಡ್ಯೂಸ್ ಮಾಡುತ್ತಿದ್ದಾರೆ. ಕೇರಳದಲ್ಲಿನ ಕಮ್ಯೂನಿಸ್ಟ್ ಹಣಕಾಸು ಮಂತ್ರಿಗಳು ನಮಗೆ ಹೇಳಿದರು, ಅಲ್ಲಿ ಆರು ಸಲ ಬದಲಾವಣೆ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಏಳು ಸಾರಿ ಬದಲಾವಣೆ ಮಾಡಿದ್ದಾರೆ. ಪಾನ ನಿಷೇಧ ಜಾರಿಗೆ ತರುವುದು, ನಂತರ ಅದನ್ನು ಹಿಂತೆಗೆದುಕೊಳ್ಳುವುದು ಇದೇ ರೀತಿ ಅಲ್ಲಿ ನಡೆಯುತ್ತಿದೆ. ಗುಜರಾತಿನ ಮುಖ್ಯಮಂತ್ರಿಗಳಾದ ವಾಪೇಲರವರು ನಮಗೆ ಹೇಳಿದರು, ಇದು ಗಾಂಧಿ ಹುಟ್ಟಿದ ಜಾಗ, ಗಾಂಧೀಜಿಯವರು ಪಾನ ನಿರೋಧ ಆಗಬೇಕೆಂದು ಹೇಳಿ ಪ್ರತಿಪಾದನೆ ಮಾಡಿದರು 1949ನೇ ಇಸವಿಯಿಂದ ಇಲ್ಲಿ ಪ್ರೊಹಿಬಿಷನ್ ಇದ್ದರೂ ಎಲ್ಲಿ ಹೋದರೂ ಅವು ಸಿಗುತ್ತವೆ ಎಂದು ಹೇಳಿದರು. ಬಾರ್ಡರ್ ಏರಿಯಾದಲ್ಲಿ ಪ್ರತಿ ವರ್ಷ, ಇದರ ಸಂಬಂಧವಾಗಿ ಎಷ್ಟು ಕ್ರಿಮಿನಲ್ ಕೇಸುಗಳನ್ನು ಹಾಕಿದ್ದೀರಿ ಎಂದು ಅವರಿಗೆ ಕೇಳಿದೆ

1996-97 ರಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಒಂದು ಲಕ್ಷ ಬರೀ ಇಲ್ಲಿಸಿಟ್ ಡಿಸ್ಟಿಲೇಷನ್ ಮೇಲೆ ಕೇಸ್ ಹಾಕಿದ್ದಾರೆ. ಆದ್ದರಿಂದ ಇವತ್ತು ಯಾರಿಗೆ ಅನುಕೂಲ ಮಾಡಬೇಕು ಎಂದು ಹೇಳಿ ಇನ್ನೂ ಹೆಚ್ಚು ದಂಧೆ ಮಾಡತಕ್ಕಂಥ ಕೆಲಸ ಮಾಡುವುದಕ್ಕೆ ಹೋದರೆ, ಇನ್ನು ನಾವು ಬಡವರಿಗೆ ಅನುಕೂಲ ಮಾಡುವುದರ ಬದಲು ಅವರಿಗೆ

ಇನ್ನೂ ಕೆಟ್ಟದ್ದು ಮಾಡಿದಂತಾಗುತ್ತದೆ. ಆ ಕಾರಣದಿಂದ ಯಾವ ರೀತಿಯಿಂದ ಹೆಚ್ಚು ಸಹಾಯ ಮಾಡಲಿಕ್ಕೆ ಆಗುತ್ತದೆ ಎಂದು ಯೋಚನೆ ಮಾಡಿಯೇ ಈ ತರಹದ ಪದ್ಧತಿಯನ್ನು ನಾವು ಮೊದಲನೇ ಹಂತವಾಗಿ ತಂದಿದ್ದೇವೆ. ಮತ್ತೆ ಬಾಟ್ಲ್‌ಗಳೂ ಕೂಡ, ಸರ್ಕಾರಿ ಸಾಮ್ಯದಲ್ಲಿ ಮತ್ತು ಕೋ-ಆಪರೇಟಿವ್ ಶುಗರ್ ಫ್ಯಾಕ್ಟರಿಗಳು, ಇವರ ಮೂಲಕ ಬಾಟ್ಲಿಗಳನ್ನು ಮಾಡಿಸುತ್ತೇವೆಯೇ ಹೊರತು, ಖಾಸಗಿಯವರಿಗೆ ಬಾಟ್ಲಿ ಮಾಡುವುದಕ್ಕೆ ಕೊಡುವುದಿಲ್ಲ. ಆ ರೀತಿಯ ಏನೊಂದು ಸಂಶಯವನ್ನು ನೀವು ಇವತ್ತು ಇಟ್ಟುಕೊಂಡು ಬಾಟ್ಲಿಂಗ್ ಹೋಗುತ್ತೀರಿ, ಬಾಟ್ಲಿಂಗ್‌ಗೆ ಹೋಗುತ್ತೀರ ಎಂದು ನೀವು ಹೇಳತಕ್ಕಂಥದ್ದು ಏನಿದೆ, ನಾವು ಆ ಕೆಲಸಕ್ಕೆ ಹೋಗುವುದಿಲ್ಲ. ಸಾರಾಯಿ ಹತ್ತಿರದಲ್ಲಿ ಸಿಕ್ಕಬಾರದು, ಸ್ಯಾಚೆಟ್‌ಗಳನ್ನೇನು ಆ ಜೇಬಿನಲ್ಲಿ, ಈ ಜೇಬಿನಲ್ಲಿ ಹಾಕಿ ಕೊಂಡು ತಿರುಗಾಡುತ್ತಿದ್ದಾರಲ್ಲಾ ಇದು ಹೋಗಬೇಕು. ಒಮ್ಮೆ ಇಲ್ಲಿ ಪ್ರೊಹಿಬಿಷನ್ ಬಗ್ಗೆ ಒಂದು ರೆಸಲ್ಯೂಷನ್ ಚರ್ಚೆಗೆ ಬಂದಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಇಡೀ ಜಗತ್ತಿನಲ್ಲಿ ಇದರ ಬಗ್ಗೆ ಏನಾಗಿದೆ ಎಂದು ಹೇಳಿದರು. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ, ಈ ದೇಶದಲ್ಲಿ ಇದರ ಬಗ್ಗೆ ಒಂದು ದೊಡ್ಡ ಚರ್ಚೆಯಾಗಲಿ, ಇಡೀ ದೇಶದಲ್ಲಿ ಟೋಟಲ್ ಪ್ರೊಹಿಬಿಷನ್ ಅನ್ನು ಜಾರಿಗೆ ತರಲಿ. ಆಗ ನಾವೂ ಅದನ್ನು ಜಾರಿಗೆ ತರೋಣ. ಆ ಬಗ್ಗೆ ರಾಷ್ಟ್ರವ್ಯಾಪಿ ಚರ್ಚೆಯಾಗಲಿ. ಪಕ್ಕದ ರಾಜ್ಯಗಳಲ್ಲಿ ಎಲ್ಲೂ ಅದು ಸಿಗದಿರುವಂತಹ ಪರಿಸ್ಥಿತಿ ನಿರ್ಮಾಣವಾಗಲಿ. ಆದಾಯ ಬೇರೆ ಮೂಲಗಳಿಂದ ಬರುತ್ತದೆ. ಇವತ್ತು ಅವರು ಹೆಲ್ತ್‌ಗೆ ಖರ್ಚು ಮಾಡತಕ್ಕಂಥ ಹಣ, ಅವರ ಹೊಟ್ಟೆಪಾಡಿಗೆ ನಾವು ಅಕ್ಕಿಕೊಡತಕ್ಕಂಥ ಕಾರ್ಯಕ್ರಮಗಳು, ಅದರ ಮೂಲಕ ನಾವು ಇದನ್ನು ನಿಲ್ಲಿಸಬೇಕು. ನಂತರ ಅದು ರೂಢಿಯಾಗುತ್ತದೆ. ಆದ್ದರಿಂದ ಇಲ್ಲಿ ಹಣ ಮುಖ್ಯವಲ್ಲ. ಅದನ್ನು ನಾವು ಮಾಡತಕ್ಕಂಥ ಕಾರ್ಯಕ್ರಮದ ಮೂಲಕ, ಅದು ಉಪಯೋಗವಾಗುತ್ತದೆಯೋ ಇಲ್ಲವೋ, ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದೋ ಅಲ್ಲವೋ ಎನ್ನತಕ್ಕಂಥದ್ದನ್ನು ನೋಡಬೇಕಾದಂತಹ ಒಂದು ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಆ ಜವಾಬ್ದಾರಿ ದೃಷ್ಟಿಯಿಂದ ನಾವು ಈ ಸಿಸ್ಟಮ್‌ಗೆ ಹೋಗಿದ್ದೇವೆಯೇ ಹೊರತು ಬೇರೆ ಯಾವನೋ ಹೆಂಡದವರಿಗೋಸ್ಕರ ಬಲಿಯಾಗಿದ್ದೀರಿ, ಇನ್ನಾರೋ ಸಾರಾಯಿ ಮಾರಾಟ ಮಾಡತಕ್ಕಂಥವರಿಗೆ ಬಲಿಯಾಗಿ ಬಿಟ್ಟಿದ್ದೀರಿ ಎನ್ನುವ ಪ್ರಶ್ನೆಯೇ ಇಲ್ಲಿಲ್ಲ. ಬಾಟ್ಲಿಂಗ್‌ಗಳನ್ನು ನಾವೇ ಮಾಡುತ್ತೇವೆ. ಅದನ್ನು ಕೊಡತಕ್ಕಂಥ ಕೆಲಸ ಮಾಡುತ್ತೇವೆ. ಇದರಿಂದ ಸುಮಾರು 150 ಕೋಟಿ ರೂ. ನಷ್ಟವೂ ಕೂಡ ಆಗುತ್ತದೆ. ಇನ್ನೂ ಹೆಚ್ಚಿನ ನಷ್ಟವಾಗಬಹುದು. ನಾವು ಇದನ್ನು ಪ್ರಯೋಗ ಮಾಡಲಿಕ್ಕೆ ಹೊರಟಿದ್ದೇವೆ. ಪ್ರಾಮಾಣಿಕವಾಗಿ ಅದರಲ್ಲಿ ಪ್ರಯತ್ನ ಮಾಡುತ್ತೇವೆ. ಹಳ್ಳಿಗಾಡಿನಲ್ಲಿ ಹೀಗೆ ಮಾಡಿ ಬಿಟ್ಟ ತಕ್ಷಣವೇ ಇನ್ನೆಲ್ಲೂ ಸಿಗುವುದಿಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ನಮ್ಮ ಸಿಸ್ಟಮ್ ಅಷ್ಟೊಂದು ಫಲ್ಯೂಟ್ ಆಗಿದೆ. ನಾವು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ, ವಸ್ತು ಸ್ಥಿತಿಯಿಂದ ದೂರ ನಿಂತುಕೊಂಡು ನೋಡತಕ್ಕಂಥದ್ದು ಅಲ್ಲ. ವಾಸ್ತವಿಕ ಸಂಗತಿಗಳನ್ನು ಮರೆತು ಮಾತನಾಡತಕ್ಕಂಥದ್ದು, ಮಾತನಾಡಲಿಕ್ಕೋಸ್ಕರ ಮಾತನಾಡತಕ್ಕಂಥದ್ದು ಅಲ್ಲ. ರಾಜಕಾರಣಕ್ಕೋಸ್ಕರ ಮಾತನಾಡ ತಕ್ಕಂಥದ್ದು ಅಲ್ಲ. ಇದರಿಂದ ಒಳಿತಾಗಬೇಕು, ರಾಜ್ಯದ ಹಿತವೂ ಇದರಲ್ಲಿ ಅಡಗಿರಬೇಕು. ಸಾರಾಯಿ ನಿಲ್ಲಿಸಿ ಬಿಟ್ಟರೆ ಒಂದು ವರ್ಷಕ್ಕೆ 650 ಕೋಟಿ. ರೂ.ಗಳು ಕಡಿಮೆಯಾಗುತ್ತವೆ. ಅದು ಮುಖ್ಯ ಅಲ್ಲ ಎಂದು ನಾನು ಆಗಲೇ ಹೇಳಿದ್ದೇನೆ. ಆದರೆ ಇದನ್ನು ಯಾವ ಸಮುದ್ದೇಶದಿಂದ ಮಾಡಿದ್ದೇವೆಯೋ ಅದು ಹೋಗಿ ಜನರಿಗೆ ಅನುಕೂಲವಾಗಬೇಕು. ಆ ಕಾರಣದಿಂದ ನಾವು ಈ ಸಿಸ್ಟಮ್ ಅನ್ನು ತಂದಿದ್ದೇವೆ. ಇದರ ಅನುಭವದ ಮೇಲೆ ಮುಂದೆ ಏನು ಮಾಡಬೇಕು ಎನ್ನುವಂತಾದ್ದನ್ನು ನಾವು ವಿಚಾರ ಮಾಡುತ್ತೇವೆ. ನಾವು ಇಷ್ಟು ವಿಚಾರಗಳನ್ನು ಆಯವ್ಯಯದ ಮೇಲೆ ಪ್ರಸ್ತಾಪ ಮಾಡಿ ನಮ್ಮ ಸರ್ಕಾರ ಇವತ್ತು ಏನು ಆರ್ಥಿಕ ಬೆಳವಣಿಗೆ ಇದೆ, ಅದನ್ನು ಗಮನದಲ್ಲಿಟ್ಟುಕೊಂಡು, ಮೂಲಭೂತ ಸೌಕರ್ಯಗಳನ್ನು ಸೃಷ್ಟಿ ಮಾಡಬೇಕು ಎನ್ನತಕ್ಕಂಥ ಕಾರಣದಿಂದ, ಬಡವರ ಸಾಮಾನ್ಯ ಜನರ ಹೊರೆಯನ್ನು ಕಡಿಮೆ ಮಾಡಬೇಕು, ಹಳ್ಳಿಗಾಡಿನ ಅಭಿವೃದ್ಧಿ ಮಾಡಬೇಕು, ಏನು ನೀರಾವರಿಗೆ ಎರಡು ಸಾವಿರ ಇಸವಿಯೊಳಗೆ ಮುಗಿಸಬೇಕೆಂದು ನಾವು ನಮ್ಮ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದ್ದೇವೆ, ಕಳೆದ ಎರಡು ವರ್ಷಗಳಲ್ಲಿ ಅಪ್ಪರ್ ಕೃಷ್ಣಾ ಯೋಜನೆಗೆ 1200 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಇದೊಂದು ನಮ್ಮ ಸರ್ಕಾರದ ದೊಡ್ಡ ಸಾಧನೆಯಲ್ಲವೇ? ಇಷ್ಟು ವರ್ಷಗಳ ಕಾಲ ಮಾಡದೇ ಇದ್ದುದ್ದನ್ನು ನಾವು ಈಗ ಮಾಡಿದ್ದೇವೆ. ಎಲ್ಲರಿಗೂ ಜವಾಬ್ದಾರಿಗಳಿವೆ. ನಾವೂ ಸಹ ಹಿಂದೆ ಎಡವಿರಬಹುದು. ನಿಮ್ಮ ಸರ್ಕಾರ ಮಾಡಿದಂತಹ ಕಾಲದಲ್ಲಿ ನೀವೂ ಕೂಡ ಎಡವಿರಬಹುದು. ಇವತ್ತು ನಮ್ಮ ರಾಜ್ಯದ ಹಿತವನ್ನು ಕಾಪಾಡಬೇಕು, ನೀರಿನ ಮೀಲಿರುವ ನಮ್ಮ ಹಕ್ಕನ್ನು ಉಳಿಸಿಕೊಳ್ಳಬೇಕು ಎನ್ನುವ ಕಾರಣಕ್ಕೋಸ್ಕರ ಇವತ್ತು ಸಾಲ ತೆಗೆದುಕೊಂಡು ಬಂದಿದ್ದೇವೆ. ಕೃಷ್ಣ ಜಲ ಭಾಗ್ಯ ನಿಗಮದಿಂದ ಬಾಂಡ್‌ಗಳ ಮೂಲಕ ಹಣ ಸಂಗ್ರಹಿಸಿದ್ದೇವೆ. ಅದಕ್ಕೆ ನಾವು ಶೇಕಡ 20 ರಷ್ಟು ಬಡ್ಡಿ ಕೊಡುತ್ತಿದ್ದೇವೆ. ಇದನ್ನೆಲ್ಲಾ ಏಕೆಮಾಡುತ್ತಿದ್ದೇವೆ? ರಾಜ್ಯದ ಮೇಲೆ ಸಾಲದ ಹೊರೆ ಹೊರಿಸಬೇಕೆಂದೇನೂ ಅಲ್ಲ. ಇಷ್ಟೆಲ್ಲಾ ಅದರೂ ಕರ್ನಾಟಕ ಡೆಟ್ ಸರ್ವೀಸ್‌ನಲ್ಲಿ ರಾಷ್ಟ್ರದ ಡೆಟ್ ಸರ್ವೀಸ್‌ಗಿಂತ ನಾವು ಕೆಳಗಡೆ ಇದ್ದೇವೆ. ನ್ಯಾಷನಲ್ ಆವರೇಜ್ ಶೇಕಡ 18 ರಷ್ಟು ಇದೆ. ನಮ್ಮದು ಶೇಕಡ 50 ರಷ್ಟು ಇದೆ. ಇವತ್ತು ಕಳೆದ ಎರಡು ವರ್ಷದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಿ, ಉತ್ತಮ ನಿರ್ವಹಣೆ ಮಾಡಿ, ರಾಜ್ಯದ ಬೆಳವಣಿಗೆ ದಿಕ್ಕಿಗೆ ನಾವು

ತೆಗೆದುಕೊಂಡು ಹೋಗುತ್ತಿದ್ದೇವೆ, ಎಂದು ಹೇಳುತ್ತಾ, ಇವತ್ತೇನು ನಾನು 1997-98ರ ಆಯವ್ಯಯವನ್ನು ಸದನದಲ್ಲಿ ಮಂಡಿಸಿದ್ದೇನೆ, ಮಾನ್ಯ ಸದಸ್ಯರು ಅದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎಂದು ಹೇಳಿ ತಮ್ಮಲ್ಲಿ ಮನವಿ ಮಾಡಿ, ತಮಗೆ ನಮಸ್ಕಾರ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಹಳ ದೀರ್ಘವಾಗಿ ಸುಮಾರು ಮೂರು ಮೂರೂವರೆಗಂಟೆಗಳ ಕಾಲ ಮಾನ್ಯ ಅರ್ಥ ಸಚಿವರು ಉತ್ತರ ಕೊಟ್ಟಿದ್ದಾರೆ. ಕೆಲವು ವಿಷಯಗಳನ್ನು ಅವರು ಅಲ್ಲಗಳೆದಿದ್ದಾರೆ. ಆದರೆ ಈ ಸಂದರ್ಭದಲ್ಲಿ ಅವರು ಯಾವ ರೀತಿಯಾಗಿ ಈ 4,500 ಕೋಟಿ ರೂ.ಗಳ ಪ್ಲಾನ್ ಔಟ್ಲೇ ಅನ್ನು ಸಂಪೂರ್ಣವಾಗಿ ಆಚರಣೆಯಲ್ಲಿ ತರುತ್ತಾರೆ ಎನ್ನತಕ್ಕಂಥದ್ದರ ಬಗ್ಗೆ ಸ್ಪಷ್ಟವಾಗಿ ಅವರು ಹೇಳಲಿಲ್ಲ.

ನಾವು ಪ್ರಯತ್ನ ಮಾಡುತ್ತೇವೆ, ಏಕೆಂದರೆ ನಮಗೆ ಈಗಾಗಲೇ ಏನು ಸಂಶಯ ಬಂದಿದೆ ಎಂದರೆ, ಈಗಾಗಲೇ ಸಾಕಷ್ಟು ವಾದ ವಿವಾದ ಇದ್ದರೆ ಮತ್ತೆ ಪುನಃ ನಾನು ಅದನ್ನೇ ಹೇಳುವುದಿಲ್ಲ. ಎಕ್ಸೈಸ್ ಬಗ್ಗೆ ನೀವಾಗಿಯೇ ಕಡಿತ ಎಕ್ಸ್‌ಪೆಕ್ಟ್ ಮಾಡುವುದು ಎಂದರೆ, 960 ಕೋಟಿ ರೂಪಾಯಿಗಳಲ್ಲಿ 150 ಕೋಟಿ ರೂಪಾಯಿ ಬಾಟ್ಲಿಂಗ್ ಯೋಜನೆಯಿಂದ ಕಡಿತ ಆಗಬಹುದು ಎನ್ನತಕ್ಕಂತಹ ಮಾತನ್ನು ಹೇಳಿದಿರಿ. ಅಂದರೆ ಹೋದ ವರ್ಷಕ್ಕೆ ನಾವು ಹೋಲಿಸಿದಾಗ ಹೋದ ವರ್ಷ 860 ಕೋಟಿ ರೂಪಾಯಿ ಆದಾಯ ಇತ್ತು. ಈ ವರ್ಷವೂ 860 ಕೋಟಿ ರೂಪಾಯಿ ನಾವು ಲೆಕ್ಕ ತೆಗೆದುಕೊಂಡರೂ ಕೂಡ ತಮ್ಮ 960 ಕೋಟಿ ರೂಪಾಯಿ ಅಂದರೆ 100 ಕೋಟಿ ರೂಪಾಯಿ ಹೆಚ್ಚು ಆಗುವುದು. ಒರಿಜಿನಲ್ 869 ಕೋಟಿ ರೂಪಾಯಿಯಲ್ಲಿ 150 ಕೋಟಿ ರೂಪಾಯಿ ಕಡಿಮೆಯಾಗುತ್ತದೆ. ಅಂದಾಗ ಅಲ್ಲಿ ನಮ್ಮ 50 ಕೋಟಿ ರೂಪಾಯಿ ಮತ್ತೆ ಕಡಿಮೆ. ಆ ಮೇಲೆ ಪುನಃ ನಾವು ಈ ಎಕ್ಸೈಸ್‌ನಲ್ಲಿ ಸೆಕೆಂಡ್ಸ್ ಕಂಟ್ರೋಲ್ ಮಾಡತಕ್ಕಂಥದ್ದರ ಬಗ್ಗೆ ಕೂಡ ಹೊಸ ಚಿಂತನೆ ತಾವು ಏನು ಮಾಡುತ್ತೀರಿ ಎಂದು ಸ್ಪಷ್ಟಪಡಿಸಿಲ್ಲ. ಅಂದರೆ ಯಾವ ರೀತಿಯಾಗಿ ಇದನ್ನು ನಿಲ್ಲಿಸುತ್ತೀರಿ ಎಂದು ಸ್ಪಷ್ಟಪಡಿಸಿಲ್ಲ. ಏನು ಪ್ರಯತ್ನ ಏಕೆಂದರೆ ಈಗಾಗಲೇ ನಾವು ಅನೇಕ ಸಾರಿ ಹೇಳಿದ್ದರೂ ಕೂಡ ಪುನಃ ಇದನ್ನೇ ಹೇಳುವುದಕ್ಕೆ ನಾನು ಇಚ್ಛೆ ಪಡುವುದಿಲ್ಲ. ಎಮ್‌ಎಸ್‌ಐಎಲ್‌ಗೆ ಸೋಲ್ ಏಜೆಂಟ್ ಮಾಡಿದರೆ ಹೆಚ್ಚಿನ ಆದಾಯ ಬರುತ್ತದೆ ಎಂದು ನಾವು ಹೇಳಿದರೂ ಕೂಡ ತಾವು ಆ ರೂಲ್ಸ್‌ಗೆ ಅಲ್ಲಗಳೆಯುತ್ತಿದ್ದೀರಿ. ಪ್ರೈವೇಟ್‌ನವರಿಗೆ ಕೊಟ್ಟರೆ ಇದನ್ನು ಅವರು ದುರುಪಯೋಗ ಪಡಿಸಿಕೊಂಡು ಪುನಃ ಹೆಚ್ಚಿನ ರೀತಿಯಲ್ಲಿ ಸೆಕೆಂಡ್ಸ್ ಮಾರತಕ್ಕಂಥ ಸಾಧ್ಯತೆ ಕೂಡ ಇದೆ. ಮೂರನೆಯದು, ಥರ್ಡ್

ಎಂದು ಏನು ಬರುತ್ತಿದೆ, ಅದು ಅನೇಕ ಸ್ಮಾಲ್ ಡಿಸ್ಟಿಲರೀಸ್ ಏನು ಉತ್ಪತ್ತಿ ಆಗಿವೆ ಆ ಜನ ದೊಡ್ಡ ದೊಡ್ಡ ಕಂಪನಿಗಳ ಫೇಕ್ ಲೇಬಲ್ಸ್ ಮಾಡಿಕೊಂಡು ಅವರು ಇದನ್ನು ಮಾಡುತ್ತಿದ್ದಾರೆ. ಅದರ ಹಿಂದೆ ಏನೆಂದರೆ, ಒಂದು ದೊಡ್ಡ ಕಂಪನಿಗಳಿಂದ ಬರತಕ್ಕಂತಹ ಎಕ್ಸೈಸ್ ಮತ್ತು ಸೇಲ್ಸ್ ಟ್ಯಾಕ್ಸ್ ಬರುವುದಿಲ್ಲ. ಎರಡನೆಯದಾಗಿ ಆ ಕಡೆ ಅವರು ನ್ಯಾಯವಾಗಿ ಏನು ಕೊಡಬೇಕು ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಎಲ್ಲವನ್ನೂ ಕೂಡ ಫೇಕ್ ಲೇಬಲ್ ಹಚ್ಚಿಕೊಂಡು ಅವರು ಮಾರತಕ್ಕಂಥದ್ದು, ಅದನ್ನು ಕೂಡ ನಿಲ್ಲಿಸುವುದರ ಬಗ್ಗೆ ಸ್ಪಷ್ಟವಾದ ಮಾತು ಹೇಳಲಿಲ್ಲ. ಯಾವ ರೀತಿ ನಿಲ್ಲಿಸುತ್ತೀರಿ ಅದನ್ನೂ ಕೂಡ ಹೇಳಲಿಲ್ಲ. ಮೂರನೆಯದು ಏನೆಂದರೆ, ಹಾಸ್ಟೆಲ್ ಇವು ಎಲ್ಲಾ ಆನ್ ಗೋಯಿಂಗ್. ಏಕೆಂದರೆ ಆಲ್ ವೆಲ್‌ಫೇರ್ ಸ್ಕೀಮ್ಸ್ ಇವತ್ತು ಏನೂ ಹುಟ್ಟಿಲ್ಲ, ಹಾಸ್ಟೆಲ್ಸ್, ಬ್ಯಾಕ್‌ವರ್ಡ್ ಕ್ಲ್ಯಾಸ್ ಸ್ಕೀಮ್ ಮನೆ ಕಟ್ಟುವುದು, ಇವೆಲ್ಲಾ ನಡೆದುಕೊಂಡು ಬಂದಿದೆ. ಐದು ಹೆಚ್ಚಿಗೆ ಆಗಿರಬಹುದು ಐದು ಕಡಿಮೆ ಆಗಿರಬಹುದು. ಹೊಸ ಯೋಜನೆಗಳು ಏನೂ ಅಲ್ಲ. ಅದಕ್ಕೆ ಇದರ ಬಗ್ಗೆ ತಾವು ಹೇಳತಕ್ಕಂಥದ್ದು ಅಷ್ಟೇನೂ ದೊಡ್ಡಸ್ತಿಕೆ ಅಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ. ಆದರೆ ಒಂದು ತಾವು ಸ್ಪಷ್ಟಪಡಿಸಬೇಕು. ಈ ಸಿಮೆಂಟ್‌ಗೆ ಸುಮಾರು ಒಂದು ರೂಪಾಯಿ 20 ಪೈಸೆ ಹೆಚ್ಚಿಗೆ ಮಾಡಿ, ಇದರಿಂದ 1.2 ಪರ್ಸೆಂಟ್ ಎಂದರೆ, ಬೇರೆ ರಾಜ್ಯಕ್ಕೆ ಹೋಲಿಸಿದಾಗ ಮೊದಲು 13 ರೂಪಾಯಿ 80 ಪೈಸೆ ಸೆರ್‌ಛಾರ್ಜ್ ಸೇರಿ ಆಗುತ್ತಿತ್ತು. ಈಗ 15 ರೂಪಾಯಿ. ಒಂದು ರೂಪಾಯಿ 20 ಪೈಸೆ ಜಾಸ್ತಿ. ಸೇರಿ ಇದ್ದುದೇ 13.80 ಪೈಸೆ, ಈಗ ಸರ್‌ಛಾರ್ಜ್ ಕಳೆದ ಮೇಲೆ ಏನು ಮಾಡಿದಿರಿ ಏನೂ ಕಡಿಮೆ ಮಾಡಿಲ್ಲ. ಎಷ್ಟು ಬೇಕೋ ಅಷ್ಟು ಇಡಲಿಲ್ಲ, ಪುನಃ 1.20 ಪೈಸೆ ಅದಕ್ಕಿಂತ ಜಾಸ್ತಿ, ಬರತಕ್ಕಂತಹ ರೀತಿಯಲ್ಲಿ ಮಾಡಿದಿರಿ. ಆದ್ದರಿಂದ ಏನಾಗುತ್ತದೆ ಹೆಚ್ಚು ಹೆಚ್ಚು ಸಿಮೆಂಟ್ ಕಾರ್ಖಾನೆಗಳು ಇರುವುದೇ ಗುಲ್ಬರ್ಗ ಜಿಲ್ಲೆಯಲ್ಲಿ ಇದನ್ನು ಅವರು ಏನು ಮಾಡುತ್ತಾರೆ, ಸೋಲ್ಲಾಪುರದಲ್ಲಿ ಶೋಲ್ಲಾಪುರದಲ್ಲಿ ಸ್ಟಾಕ್ ಪಾಯಿಂಟ್‌ಗಳನ್ನು ತೋರಿಸಿಕೊಂಡು ಮಹಾರಾಷ್ಟ್ರದಲ್ಲಿ 14 ರೂಪಾಯಿ, ನಮ್ಮಲ್ಲಿ 15 ರೂಪಾಯಿ. ಅಲ್ಲಿಗೆ ಕಳುಹಿಸುವುದಿಲ್ಲ. ಎಲ್ಲಿ ಚೀಪ್ ಇರುತ್ತದೆ ಅಲ್ಲಿಗೆ ಕಳುಹಿಸುತ್ತಾರೆ. ನಮ್ಮ ಸಿಮೆಂಟ್ ಅಲ್ಲಿಗೆ ಹೋಗಬಹುದು, ಅವರದ್ದು ಬರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅವರದು 16 ರೂಪಾಯಿ, ನಮ್ಮದು 15 ರೂಪಾಯಿ. ಅದಕ್ಕಾಗಿ ನೀವು ಇದನ್ನು ನೋಡಿ, ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ನೀವು ಒಂದು ಕಡೆ ರೋಡ್ ಸೆಸ್ ಎಂದು ವಸೂಲು ಮಾಡುತ್ತಿದ್ದೀರಿ. ಹಣ ಆ ಟ್ಯಾಕ್ಸ್, ಆ ಸೆಸ್ ಪ್ಲಸ್ ಈ ಸೇಲ್ಸ್ ಟ್ಯಾಕ್ಸ್ ಇವೆರಡೂ ಸೇರಿದರೆ ಮತ್ತೆ ಆಂಧ್ರಕ್ಕಿಂತ ಹೆಚ್ಚಿಗೆ ಆಗತಕ್ಕಂತಹ ಸಾಧ್ಯತೆ ಇದೆ. ಮಹಾರಾಷ್ಟ್ರಕ್ಕಿಂತ ಹೆಚ್ಚಿಗೆ ಆಗತಕ್ಕಂತಹ ಸಾದ್ಯತೆ ಕೂಡ

ಇದೆ. ಮೂರನೆಯದು ನಾನು ಹೇಳುತ್ತೇನೆ, ಸೋಟನ್ ಮೇಲೆ ಹೊರಗಡೆಯಿಂದ ಬರತಕ್ಕಂಥದ್ದಕ್ಕೆ ಸಿಸ್ ಹಾಕಿದರೆ ಪರವಾಗಿಲ್ಲ. ಆದರೆ ಅಲ್ಲಿನ ಶಹಬಾದ್ ಸ್ಟೋನ್ ಏನು ಲೋಕಲ್ ಯೂಸ್ ಮಾಡುತ್ತಾರೆ ರೂಫ್‌ಗೆ ಯೂಸ್ ಮಾಡುತ್ತಾರೆ, ಮತ್ತು ಪ್ರತಿಯೊಬ್ಬರೂ ಕೂಡ ಅಲ್ಲಿ ಈ ಜನ ಅವರ ಮನೆ ಕಟ್ಟಿಸ ತಕ್ಕಂತಹ ಮೆಟೀರಿಯಲ್ ಎಂದರೆ ಶಹಬಾದ್ ಸ್ಟೋನ್. ಅದು ಗೋಡೆ ಕಟ್ಟಡ ಇರಬಹುದು, ರೂಫ್‌ಗೆ ಹಾಕುವುದು ಆಗಬಹುದು, ಅದಕ್ಕಾಗಿ ಇದರ ಬಗ್ಗೆ ಕೂಡ ತೊಂದರೆಯಾಗುತ್ತದೆ. ತಾವು ಕೆಸ್‌ನ್ನು ಕೈಬಿಡಿ. ಗ್ರಾನೆಟ್‌ಗೆ ಹಾಕಿ ಪರವಾಗಿಲ್ಲ. ಏಕೆಂದರೆ, ಗ್ರಾನೈಟ್ ದೊಡ್ಡ ದೊಡ್ಡವರು ಎಕ್ಸ್‌ಪೋರ್ಟ್ ಮಾಡುತ್ತಾರೆ. ದೊಡ್ಡ ದೊಡ್ಡವರು ಉಪಯೋಗ ಮಾಡುತ್ತಾರೆ. ಆದರೆ ಶಹಬಾದ್ ಸ್ಟೋನ್‌ಗೆ ತೊಂದರೆ ಯಾಗುತ್ತದೆ ಎನ್ನತಕ್ಕಂತಹ ಮಾತನ್ನು ಪುನಃ ಹೇಳುತ್ತೇನೆ. ಇಲ್ಲದೇ ಇದ್ದರೆ ಅವರೆಲ್ಲಾ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಯವರಿಗೆ ತಾಪತ್ರಯ ಕೊಡತಕ್ಕಂಥದ್ದು ಅವರು ಎಕ್ಸ್‌ಪ್ಲಾಂಯಿಟ್ ಮಾಡತಕ್ಕಂಥದ್ದು ಮಾಡುತ್ತಾರೆ. ಎಲ್ಲಾ ದೊಡ್ಡ ಮನಾಪಲಿಸ್ಟ್ ಬಂದು ದೊಡ್ಡ ಇಂಡಸ್ಟ್ರೀ ಹಾಕಿಕೊಂಡು ಅವರೇ ವ್ಯವಹಾರ ನಡೆಸುತ್ತಾರೆ. ಸಣ್ಣ ಪುಟ್ಟ ಇಂಡಸ್ಟ್ರೀಯವರು ಕ್ಲೋಸ್ ಮಾಡತಕ್ಕಂತಹ ಒಂದು ಪ್ರಮೇಯ ಬರುತ್ತದೆ. ನಾಲ್ಕನೆಯದು ಸೀಲಿಂಗ್ ಏನು ತರುತ್ತಿದ್ದೀರಿ, ಇವತ್ತು ನಾನು ಹೇಳಿದೆ, ಅವರ ಹೇಳಿಕೆ ಏನೆಂದರೆ 12 ರೂಪಾಯಿ ಟಿಕೇಟ್ ಇರುವಂಥದ್ದು 25 ರೂಪಾಯಿ ಆಗುತ್ತದೆ. ಅದಕ್ಕೆ ಯಾರೂ ಕೂಡ ಥಿಯೇಟರ್‌ನಲ್ಲಿ ಹೋಗಿ ನೋಡತಕ್ಕಂತಹ ಸಾಧ್ಯತೆ ಆಗುವುದಿಲ್ಲ. ಅವರ ಮನೆಯಲ್ಲಿ ವೀಡಿಯೋ ಹೌಸಸ್ ಏನು ಆಗಿದೆ, ಅಂತಹ ಕಡೆ ಜನ ಡೈವರ್ಟ್ ಮಾಡತಕ್ಕಂತಹ ಸಾಧ್ಯತೆ ಇದೆ. ಅದಕ್ಕೆ ಎಲ್ಲರೂ ಥಿಯೇಟರ್ ಕ್ಲೋಸ್ ಮಾಡತಕ್ಕಂಥದ್ದು ಆಗುತ್ತದೆ ಎನ್ನತಕ್ಕಂತಹ ವಾದ ನಮ್ಮ ಮುಂದೆ ಇದೆ. ಅದಕ್ಕೆ ದಯವಿಟ್ಟು ತಾವು ಕನ್‌ಸಿಡರ್ ಮಾಡಿ ಹಿಂದೆ ಹೇಗೆ ಇತ್ತೋ, ಅದನ್ನೆ ಕಂಟಿನ್ಯೂ ಮಾಡಿ ಇಲ್ಲದಿದ್ದರೆ ಸರ್‌ಛಾರ್ಜ್ ಹಾಕಿ ಇಷ್ಟು ಹಣ ಎಂದು ಫಿಕ್ಸ್ ಮಾಡಿ ಏನಾದರೂ ಮಾಡಿ. ಸೀಲಿಂಗ್‌ನಲ್ಲಿ ಏನಾಗುತ್ತದೆ ಎಂದರೆ, ಅನೇಕ ಸಾರಿ ಅವರಿಗೆ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್‌ನಿಂದ ತೊಂದರೆ. ಇಲ್ಲದಿದ್ದರೆ ಇವರಿಬ್ಬರೂ ಒಂದು ಆದರೆ ಸಾಕಷ್ಟು ಡೂಪ್ಲಿಕೇಟ್ಸ್ ಸೀಲ್ ಹಾಕಿ ಮಾರುತ್ತಾರೆ, ಯಾವ ರೀತಿಯಾಗಿ ಸೆಕೆಂಡ್ಸ್‌ನಲ್ಲಿ ಇದೆ, ಹಾಗೆ ಟಿಕೇಟನ್ನು ಥಿಯೇಟರ್‌ನಲ್ಲಿ ಕೊಡತಕ್ಕಂತಹ ಸಾಧ್ಯತೆ ಆಗುತ್ತದೆ. ಡೂಪ್ಲಿಕೇಟ್ ಟಿಕೇಟ್ಸ್ ತೆಗೆದುಕೊಂಡು ಎಸಿ, ಸಿಟಿಒ, ಕಮರ್ಷಿಯಲ್ ಇನ್‌ಸ್ಪೆಕ್ಟರ್ ಇಬ್ಬರೂ ಸೇರಿದರು ಎಂದರೆ ಥಿಯೇಟರ್ ಉದ್ಧಾರ ಮಾಡಿಕೊಳ್ಳಬಹುದು ಅದಕ್ಕೆ ದಯವಿಟ್ಟು ಇದರ ಬಗ್ಗೆ ತಾವು 160 ಕೋಟಿ ರೂಪಾಯಿ ಎಸ್‌ಸಿಪಿಯಲ್ಲಿ ಸಂಗ್ರಹಿಸಿ ಪ್ರಾರಂಭ ಮಾಡುತ್ತೇವೆಂದು ಹೇಳಿದಿರಿ, ಅದು ಎಷ್ಟರ ಮಟ್ಟಿಗೆ ಸಾಧ್ಯತೆ

ಇದೆ ಅದನ್ನು ಏಪ್ರಿಲ್ ತಿಂಗಳಿನಿಂದ ನಾವು ನೋಡಬೇಕಾಗುತ್ತದೆ. ಏಕೆಂದರೆ ಇಲ್ಲಿಯವರೆಗೆ ನಾವು ನೋಡಿದ್ದು ನೀವು ಸಾಕಷ್ಟು ಎಸ್‌ಸಿಪಿ ಅಮೌಂಟ್ ಸಂಗ್ರಹಿಸಿ ಖರ್ಚು ಮಾಡತಕ್ಕಂಥದ್ದು ಸಾಧ್ಯವಾಗಲಿಲ್ಲ. ಅದಕ್ಕೆ ಈಗ ಏನು ಪ್ರಾರಂಭ ಮಾಡುತ್ತೇವೆಂದು ಹೇಳಿದಿರಿ, ಅದು ಎಷ್ಟರ ವಟ್ಟಿಗೆ ಯಶಸ್ವಿಯಾಗುತ್ತದೆ, ಅದಕ್ಕೆ ಕಮಿಟಿ ಬೇಕಾದರೆ ಮಾಡಿ. ಏಕೆಂದರೆ, ಹೋದ ಸಲ ಇದು ರಿವ್ಯೂ ಮಾಡುವುದಕ್ಕೆ ಒಂದು ಕಮಿಟಿ ಇತ್ತು. ಚೀಫ್ ಮಿನಿಸ್ಟರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇತ್ತು. ಇವರನ್ನೂ ಸಹ ಕರೆಸಿ ರಿವ್ಯೂ ಮಾಡುತ್ತಿದ್ದರು. ಆದರೆ ಇದನ್ನು ರಿವ್ಯೂ ಎಲ್ಲೆಲ್ಲಿ ಯಾವ ಯಾವ ಇಲಾಖೆಯವರು ಖರ್ಚು ಮಾಡಿಲ್ಲ ಎಂದು ಡೈರೆಕ್ಷನ್ ಕೊಡತಕ್ಕಂಥದ್ದು, ಅದಕ್ಕೆ ದಯವಿಟ್ಟು ಈ ಸಮಸ್ಯೆಯನ್ನು ಪುನಃ ತಾವು ಏನಾದರೂ ಸಮಿತಿಯನ್ನು ರೀ ಕನ್‌ಸ್ಟಿಟ್ಯೂಟ್ ಮಾಡಿ ಹೇಗೆ ಮಾಡುತ್ತೀರಿ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ನಿನ್ನೆ ದಿವಸ ಮುಖ್ಯ ಮಂತ್ರಿಗಳ ಕೊಠಡಿಯಲ್ಲಿ ಹಣಕಾಸಿನ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ನಾವು, ಸನ್ಮಾನ್ಯ ಖರ್ಗೆಯವರು ಎಲ್ಲಾ ವಿರೋಧ ಪಕ್ಷದ ನಾಯಕರೂ ಪ್ರಮುಖರೂ ಸೇರಿ, ಜೂನ್‌ನಿಂದ ಸಾರಾಯಿ ರದ್ದು ಮಾಡುವುದರ ಬಗ್ಗೆ ಅನೇಕ ಸುತ್ತಿನ ಮಾತುಕತೆ ಆಗಿ ಕೊನೆಗೆ ಮುಖ್ಯ ಮಂತ್ರಿಗಳ ಕೊಠಡಿಯಲ್ಲಿ ಮಾತುಕತೆ ಆಯಿತು. ಆ ಸಮಯದಲ್ಲಿ ಒಂದು ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ. ಮುಖ್ಯ ಮಂತ್ರಿಗಳ ಸಲಹೆಯಂತೆ ಇದರ ಬಗ್ಗೆ ಒಂದು ವಿಶೇಷವಾದ ಅಧಿವೇಶನ ಕರೆಯಬೇಕು. ಆಗ ಇದರ ಬಗ್ಗೆ ಚರ್ಚೆ ಮಾಡಬೇಕು. ಅದಕ್ಕೆ ಬೆಂಬಲ ಸಿಕ್ಕಿದರೆ ಅರ್‍ಯಾಕ್ ಜೂನ್‌ನಿಂದ ರದ್ದು ಮಾಡುವುದಕ್ಕೆ ನನ್ನದು ಏನೂ ಅಭ್ಯಂತರವಿಲ್ಲ ಎನ್ನುವಂತಹ ಮಾತನ್ನು ಮಾನ್ಯ ಮುಖ್ಯ-ಮಂತ್ರಿಗಳು ಹೇಳಿದ್ದಾರೆ. ಒಂದು ವೇಳೆ ಯಾವ ಯಾವ ಶಾಸಕರು ಬಂದು ಅದು ಬೇಡ ಎಂದು ಹೇಳುತ್ತಾರೆ, ಆ ವಿಧಾನ ಸಭಾ ಕ್ಷೇತ್ರಗಳಲ್ಲಿ ರದ್ದು ಮಾಡೋಣ ಎಂದರೆ, ಕಾನೂನು ತೊಡಕು ಬರುತ್ತದೆ ಎಂದು ಮುಖ್ಯ ಮಂತ್ರಿಗಳು ಹೇಳಿ ಅದು ಸರಿ ಹೋಗುವುದಿಲ್ಲ ಎಂದರು ಆಮೇಲೆ ನಿಮ್ಮೆಲ್ಲರ ಅಭಿಪ್ರಾಯ ಒಂದೇ ಆಗಿದ್ದರೆ ನಾನು ಏಕೆ ಅದಕ್ಕೆ ಅಡ್ಡಿ ಮಾಡಲಿ, ನಿಶ್ಚಿತವಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದೆವು, ಹೌದು, ಜನರ ಮುಂದೆ ಕಮಿಟ್ ಮಾಡಿದ್ದು ಹೌದು, ಈಗಾಗಲೇ ಅದಕ್ಕೆ ಬದ್ಧರಾಗಿದ್ದೇವೆ. ಆದರೆ ಅದಕ್ಕೆ ಸದನದ ಬೆಂಬಲ ನನಗೆ ಬೇಕು ಎನ್ನುವ ಮಾತನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದರು. ಅದಕ್ಕಾಗಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಇದು ನಾಡಿನ ಜನರಿಗೆ ಗೊತ್ತಾಗಬೇಕಾಗುತ್ತದೆ, ಹಳ್ಳಿಗಾಡಿನಲ್ಲಿ ಕುಡಿತದ ಅಮಲಿನಲ್ಲಿ

ಸಿಕ್ಕಿರುವ ಕುಟುಂಬ ಸರ್ವನಾಸವಾಗುತ್ತಿದೆ, 600, 700 ಕೋಟಿ ರೂಪಾಯಿ ಲಾಸ್ ಆದರೆ, ಬಹಿರಂಗವಾಗಿ ನಮ್ಮ ಎಲ್ಲಾ ಪ್ರತಿ ಪಕ್ಷದ ಮುಖಂಡರ ಜೊತೆ ಮುಖ್ಯ-ಮಂತ್ರಿಗಳು ಭರವಸೆ ಕೊಟ್ಟರು. ಇಲ್ಲಿ ರಾಜಕಾರಣ ಬೇಡ, ರಾಜಕೀಯದಿಂದ ಲಾಭ ಮಾಡಿಕೊಳ್ಳುವಂತಹ ರಾಜಕೀಯ ಶಡ್ಯಂತ್ರಕ್ಕೆ ನಾವು ಯಾರೂ ಸಿದ್ಧರಿಲ್ಲ. 500 ಕೋಟಿ ರೂಪಾಯಿ ನಿಮ್ಮ ಸರ್ಕಾರಕ್ಕೆ ತೆರಿಗೆ ಬರುವುದು ಕಡಿಮೆಯಾದರೆ, ನಾವು ಒಟ್ಟಿಗೆ ಕುಳಿತು ಯಾವ ಬಾಬಿನಲ್ಲಿ ಈ ತೆರಿಗೆಯನ್ನು ಜಾಸ್ತಿ ಮಾಡಿದರೆ ಸರ್ಕಾರವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಬಹುದು, ಮತ್ತು ಅಭಿವೃದ್ಧಿ ಕಾರ್ಯಗಳು ನಡೆಯಬೇಕೆಂಬ ಬಗ್ಗೆಯೂ ನಾವು ಸಲಹೆ ಕೊಡುವುದಕ್ಕೆ ಸಿದ್ಧರಿದ್ದೇವೆ. ರಾಜ್ಯದ ಜನತೆಯ ಮುಂದೆ ಮತ್ತೊಮ್ಮೆ ಕೈ ಜೋಡಿಸಿ ಈ ಅನಿವಾರ್ಯ ಕಾರಣಕ್ಕಾಗಿ ತೆರಿಗೆ ಭಾರವನ್ನು ಹಾಕಿದ್ದೇವೆ, ನೀವು ಸಹಿಸಿಕೊಳ್ಳಬೇಕು. ಈ ದುಶ್ಚಟ ನಿಲ್ಲಿಸುವುದಕ್ಕೋಸ್ಕರ ಆ ಒಂದು, ಹೊಸ ಧೈರ್ಯವನ್ನು ನೀವು ಮಾಡಬೇಕೆಂದು ವಿನಂತಿ ಮಾಡಿಕೊಂಡೆವು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆ ಬಗ್ಗೆ ಯಾವಾಗ ಅಧಿವೇಶನ ಕರೆಯುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು, ನಿನ್ನೆ ಗಡಿನಾಡು ಮತ್ತು ಹೊರನಾಡುಗಳ ಬಗ್ಗೆ ಮತ್ತು ಮಹಿಳೆಯರ ಚಿಂತನೆ ಬಗ್ಗೆ ಇಲ್ಲ ಒಂದು ಭಾಷಣ ಮಾಡಿದೆ. ಅದು ಪತ್ರಿಕೆಗಳಲ್ಲಿ ಒಂದು ಲೈನ್ ಕೂಡ ಬರಲಿಲ್ಲ.

(ಗೊಂದಲ)

ಶ್ರೀ ಜಿ. ಬಿ. ಶಿವಕುಮಾರ : ಮಾನ್ಯ ವಾಟಾಳ್ ನಾಗರಾಜ್‌ರು ಹಿರಿಯ ಸದಸ್ಯರು. ಅವರು ಏತಕ್ಕೆ ಈ ರೀತಿಯಾಗಿ "ಬೀದಿಯಲ್ಲಿ ಹೋಗುವ ಮಾರಿ, ಮನೆಗೆ ಕರೆದುಕೊಂಡರು" ಎಂಬ ಸನ್ನಿವೇಶ ಮಾಡಿಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ತಾವು ನನಗೆ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು : ಶಿವಕುಮಾರ ಅವರೇ, ದಯಮಾಡಿ ಕುಳಿತುಕೊಳ್ಳಿ

ಶ್ರೀ ಎಸ್. ಕೃಷ್ಣಪ್ಪ : ಪತ್ರಿಕೆಯಲ್ಲಿ ಬರಲಿಲ್ಲ ಎಂದು ಇವರು ಏಕೆ ಹೇಳಬೇಕು? ಅವರು ಹಾಕಲಿಲ್ಲ, ಅದನ್ನು ಇವರು ಏಕೆ ಹೇಳಬೇಕು?

ಶ್ರೀ ವಾಟಾಳ್ ನಾಗರಾಜ್ : ಲಂಗು ಲಂಗಾಮ ಇಲ್ಲದೆ ಇವರು ಎದ್ದು ಹೇಳಬಹುದು ಇಂಥವರು ನಮಗೆ ಹೇಳುತ್ತಾರೆ.

ಮಾನ್ಯ ಸದಸ್ಯರು : ವಾಟಾಳ್ ನಾಗರಾಜ್ ಅವರು ಹಿರಿಯ ಸದಸ್ಯರು. ಅವರು ಏನು ಹೇಳಿದರೂ ತಮ್ಮ ಮುಖಾಂತರ ಹೇಳಬೇಕೇ ಹೊರತು ಈ ರೀತಿ ನೇರವಾಗಿ ನಮಗೆ ಹೇಳುವುದು ಬೇಡ. ಆದರಿಂದ ದಯಮಾಡಿ ಅವರು ಈ ರೀತಿ ಮಾತನಾಡಬಾರದು ಎಂದು ತಮ್ಮ ಮುಖಾಂತರ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಇದು ಪತ್ರಿಕೆಗಳಲ್ಲಿಯೂ ಬರಲಿಲ್ಲ ಮತ್ತು ನಾನು ಏನು ಹೇಳುತ್ತೇನೆಂದರೆ ಮಾನ್ಯ ಮುಖ್ಯಮಂತ್ರಿಗಳ ಭಾಷಣವೂ ಬರಲಿಲ್ಲ, ಒಂದು ಕಡೆ ಒಂದೇ ಒಂದು ಪತ್ರಿಕೆಯಲ್ಲಿ ಬಂದಿದೆ. ಕೊನೆಗೆ ಬಹುಶಃ ಇತಿಹಾಸದಲ್ಲಿ ನೋಡುವುದಕ್ಕಾದರೂ ಕಡತದಲ್ಲಿ ಉಳಿದುಕೊಳ್ಳಲಿ, ನಾವು ಯಾರು ಇಲ್ಲದೆ ಇದ್ದರೂ ಮುಂದೆ ಯಾವುದಾದರೂ ಜನ್ಮದಲ್ಲಿ ಬೇರೆ ಶಾಸಕರು ನಾವು ಹೋದಮೇಲೆ ನೋಡಿಕೊಳ್ಳಲಿ ಈ ತಕ್ಷಣಕ್ಕೆ ಜನರಿಗೆ ಅರ್ಥವಾಗದೇ ಇದ್ದರೂ ಚಿಂತೆಯಿಲ್ಲವೆಂದು ನಮಗೂ ಅವರಿಗೂ ಒಂದು ವಾದ ನಡೆಯಿತು. ಆ ಒಂದು ಲೈನ್ ಏನು ಬಂದಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಯವರು ವಾಟಾಳ್ ನಾಗರಾಜ್ ಪ್ರಸ್ತಾಪ ಮಾಡಿದ ಸ್ತ್ರೀ ಶೋಷಣೆ ಬಗ್ಗೆ ತಮ್ಮದೇ ಆದ ಶೈಲಿಯಲ್ಲಿ ವ್ಯಾಖ್ಯಾನಿಸಿದರು. ವಾಟಾಳ್ ಏನು ಮಾತನಾಡಿದರು, ನಾನು ಏನಾದರೂ ಮಾತನಾಡಿದ್ದು ಬೇಕಲ್ಲಾ. ನಾನು ಮಾತನಾಡಿದ್ದು ಜನಕ್ಕೆ ಗೊತ್ತಾಗಬೇಕು, ನೀವು ಮಾತನಾಡಿರುವುದು ಅರ್ಥಂಬರ್ಥ ಬಂದಿದೆ. ಅದು ಏಕೆ ಹಾಗೆ ಬಂತು ಏಕೆ ಬಿಟ್ಟಿತು? ಎಂದು ಅದರ ಬಗ್ಗೆ ತಲೆ ಕೆಡೆಸಿಕೊಳ್ಳಲು ನಾನು ಹೋಗುವುದಿಲ್ಲ. ಆದ್ದರಿಂದ ನಾನು ಏನು ಹೇಳುತ್ತೇನೆಂದರೆ, ನಾನು ಹೇಳಿರತಕ್ಕಂಥದ್ದು ತಮಗಾದರೂ ಗೊತ್ತಿದ್ದರೆ ಅಥವಾ ಗಮನದಲ್ಲಿ ಇಟ್ಟುಕೊಂಡಿದ್ದರೆ, ಅದರ ಬಗ್ಗೆ ಸರ್ಕಾರ ಯಾವ ರೀತಿ ಕ್ರಮವನ್ನು ಕೈಗೊಂಡಿದ್ದೀರಿ ಎನ್ನತಕ್ಕಂಥದ್ದು ಒಂದು ಗಡಿನಾಡು ಮತ್ತು ಹೊರನಾಡಿನ ಬಗ್ಗೆ ನಾನು ಸುಧೀರ್ಘವಾಗಿ ಪ್ರಸ್ತಾಪಮಾಡಿದೆ. ಹೊರನಾಡಿನಲ್ಲಿ ಕನ್ನಡಿಗರ ಸ್ಥಿತಿ ಕಣ್ಣೀರಿನ ಕಥೆ ಇದೆ. ಹೊರನಾಡಿನ ಕನ್ನಡಿಗರ ಬಗ್ಗೆ ಕೇಳುವವರು ಇಲ್ಲ. ಕನ್ನಡ ಶಾಲೆಗಳಿಲ್ಲ, ಕನ್ನಡದ ಅಭಿವೃದ್ಧಿ ಇಲ್ಲ ಎನ್ನುವ ಬಗ್ಗೆ ಸುಧೀರ್ಘವಾಗಿ ಹೇಳಿ ಇದರ ಬಗ್ಗೆ ಒಂದು ಸಮೀಕ್ಷೆ ಆಗಬೇಕು ಎನ್ನುವುದನ್ನು ಹೇಳಿದೆ. ಈ ಮಧ್ಯೆ ಇವತ್ತು ಸಿಡಿಲು ಬಡಿದಂಥ ಒಂದು ವರದಿಯನ್ನು ನಾನು ನೋಡಿದ್ದೇನೆ. ನೀವು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತುಕತೆಗೆ ಹೋಗುತ್ತೀರಿ ಎನ್ನತಕ್ಕಂಥ ಸುದ್ದಿ ಇವತ್ತು ಬಂದಿದೆ. ಇದರ ಬಗ್ಗೆ ನನಗೆ ನಿಜವಾಗಿಯೂ ಅತ್ಯಂತ ನೋವಾಗಿದೆ. ತಾವು ಹೋಗಕೂಡದು. ತಾವು ಸರ್ಕಾರದ ಪರವಾಗಿ ಹೋಗಬಾರದು ಏಕೆಂದರೆ ಇದು ಮುಗಿದ ಅಧ್ಯಾಯ. ಮಹಾಜನ್ ವರದಿ ಬಗ್ಗೆ ಮತ್ತೆ ತಾವು ಮಾತುಕತೆಗೆ ಹೋದರೆ, ಅಲ್ಲಿ ಬೇರೆ ರೂಪತಾಳುತ್ತದೆ. ಅಲ್ಲಿ ವಿಧಾನ

ಪರಿಷತ್ತಿನಲ್ಲಿ ಅವರು ಪ್ರಚಾರ ಮಾಡಿದ್ದಾರೆ. ನಿನ್ನೆ ವಿಧಾನಪರಿಷತ್ತಿನಲ್ಲಿ ತಮ್ಮ ಕಾರ್ಯದರ್ಶಿಯವರು ಫೋನ್ ಮಾಡಿ ಮಾತನಾಡಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿಗಳು, ಮಹಾರಾಷ್ಟ್ರದ ಜೊತೆಯಲ್ಲಿ ಗಡಿ ಸಂಬಂಧ ಮಾತುಕತೆಗೆ ಬರುತ್ತೇವೆ ಎಂಬುದನ್ನು ಹೇಳಿದ್ದಾರೆ. ಈ ಸದನಕ್ಕೂ ತಾವು ತಿಳಿಸಲಿಲ್ಲ ವಿರೋಧ ಪಕ್ಷದವರಿಗೂ ತಿಳಿಸಲಿಲ್ಲ, ಏಕಾಏಕಿ ನೀವು ಗೋಪ್ಯವಾಗಿ ಏಕೆ ಹೋಗುತ್ತಿದ್ದೀರಿ. ದಯವಿಟ್ಟು ಹೋಗಬೇಡಿ. ಇದರಿಂದ ನಮ್ಮ ರಾಜ್ಯಕ್ಕೆ ಅಪಾಯವಿದೆ. ನಮ್ಮ ರಾಜ್ಯಕ್ಕೆ ಅತ್ಯಂತ ಘೋರ ಅಪರಾಧವಾಗುತ್ತದೆ. ನಾನು ಹಿಂದೆಯೂ ಕೂಡ ತಮಗೆ ಹೇಳಿದ್ದೇನೆ. ಒಂದು ಹಂತದಲ್ಲಿ ತಾವು ಡೆಲ್ಲಿಯಲ್ಲಿ ಹೇಳುವಾಗ ನಾನು ಮಾತುಕತೆಗೆ ಬರುವುದಿಲ್ಲ, ಗಡಿ ವಿಷಯವಾಗಿ ಮಾತುಕತೆಗೆ ಬರುವುದಿಲ್ಲ ಎಂದು ಹೇಳಿದ್ದೀರಿ. ಈಗ ಮಾತುಕತೆಗೆ ಹೋಗುತ್ತೀರಿ ಎನ್ನತಕ್ಕಂಥ ಪ್ರಸ್ತಾಪ ಆಗಿಬಿಟ್ಟಿದೆ. ಇದು ಒಳ್ಳೆಯದಲ್ಲ. ದಯಮಾಡಿ ಹೋಗಕೂಡದು. ಅತ್ಯಂತ ಗಂಭೀರವಾದ ಪ್ರಶ್ನೆಯನ್ನು ತಮ್ಮ ಮೂಲಕ ನಾನು ಹೇಳುತ್ತಿದ್ದೇನೆ. ಸರ್ಕಾರದ ಸ್ಪಷ್ಟ ನಿಲುವೇನು ಎಂಬುದನ್ನು ತಾವು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ತೆರಿಗೆ ಹಂಚಿಕೆಯಲ್ಲಿ ಕೇಂದ್ರ ರಾಜ್ಯಗಳ ಮಧ್ಯೆ ಭಾರಿ ವ್ಯತ್ಯಾಸ ಇದೆ. ಇವತ್ತು ಯೋಜನಾ ಆಯೋಗದವರು 29 ಪರ್ಸೆಂಟ್ ಎಂದು ಹೇಳುತ್ತಿದ್ದಾರೆ. ನಾವು ಕನಿಷ್ಠ 50 ಪರ್ಸೆಂಟ್ ಆದರೂ ಕೇಂದ್ರಕ್ಕೆ ಹೋಗತಕ್ಕಂಥ ತೆರಿಗೆಯಲ್ಲಿ, ರಾಜ್ಯಕ್ಕೆ ಬರಬೇಕು, ಅದಕ್ಕೆ ಹಣಕಾಸಿನ ಮಂತ್ರಿಗಳು ಸಭೆಯನ್ನು ಕರೆದು ಈಗ ಕೇಂದ್ರದಲ್ಲಿ ರಾಜಕೀಯ ಬದಲಾವಣೆ ಆಗಿರತಕ್ಕ ಹಿನ್ನೆಲೆಯಲ್ಲಿ ಮತ್ತು ಸರ್ಕಾರವು ಆಯೋಗವನ್ನು ಜಾರಿಗೊಳಿಸಲಿಕ್ಕೆ ಒಂದು ಸಮಿತಿ ನೇಮಕ ಮಾಡಿದ್ದರ ಹಿನ್ನೆಲೆಯಲ್ಲಿ ಎಲ್ಲಾ ಹಣಕಾಸಿನ ಮಂತ್ರಿಗಳು ಸಭೆ ಕರೆದು ಕೇಂದ್ರಕ್ಕೆ ಒಂದು ಮೆಮೋರ್ಯಾಂಡಂ ಕೊಟ್ಟು ಕೇಂದ್ರದ ಮೇಲೆ ಒತ್ತಾಯ ತರಬೇಕೆಂದು ನಾನು ಸೂಚನೆ ಕೊಟ್ಟಿದ್ದೆ, ಅದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಏನೂ ಹೇಳಲಿಲ್ಲ. ಇನ್ನೊಂದು ಮುಖ್ಯವಾದ ವಿಷಯ, ನಮ್ಮ ಬಯಲು ಸೀಮೆ ಅಭಿವೃದ್ಧಿಗಾಗಿ, ಬಯಲು ಸೀಮೆ ಅಭಿವೃದ್ಧಿ ನಿಗಮದ ಸದಸ್ಯರು ಎಲ್ಲರೂ ಒಟ್ಟಿಗೆ ಸೇರಿ ನಾವು ಮುಖ್ಯಮಂತ್ರಿಗಳಲ್ಲಿ ಮನವಿಮಾಡಿದ್ದೆವು. ಕನಿಷ್ಟ ಒಂದೊಂದು ಕ್ಷೇತ್ರಕ್ಕೆ 50 ಲಕ್ಷ ರೂಪಾಯಿ ಆದರೂ ಬಯಲು ಸೀಮೆ ಅಭಿವೃದ್ಧಿಗೆ ಕೊಡಬೇಕೆಂದು ಹೇಳಿದ್ದೆವು. ಆದರೆ ಬಜೆಟ್‌ನಲ್ಲಿ ನೋಡಿದರೆ ಹೋದ ವರ್ಷ ಕೊಟ್ಟಿದ್ದ 4 ಕೋಟಿಯಷ್ಟು ಕೂಡ ನಮಗೆ ಈ ವರ್ಷ ಕೊಟ್ಟಿಲ್ಲ. ಅವು ಬಹಳ ಹಿಂದುಳಿದಿರತಕ್ಕ ತಾಲ್ಲೂಕುಗಳು ಈ ಬಯಲು ಸೀಮೆ ಅಭಿವೃದ್ಧಿಗೆ ನಾವು ಏನು ಮುಖ್ಯಮಂತ್ರಿಗಳ ಹತ್ತಿರ ವಿನಂತಿ ಮಾಡಿಕೊಂಡಿದ್ದೆವು.

ಆ ಹಣವನ್ನು ಬಜೆಟ್ಟನಲ್ಲಿ ತೋರಿಸಬೇಕು ಮತ್ತು ಬಯಲು ಸೀಮೆ ಅಭಿವೃದ್ಧಿಗೆ ಹೆಚ್ಚು ಹಣವನ್ನು ಕೊಡಬೇಕು ಎಂದು ಹಲವಾರು ಸಲ ಹಿಂದಿನ ಮುಖ್ಯಮಂತ್ರಿಗಳಿಗೂ ಹೇಳಿದ್ದೆವು. ಮತ್ತು ಈಗಿನ ಮುಖ್ಯಮಂತ್ರಿಗಳಿಗೂ ಹೇಳಿದ್ದೇವೆ. ಆದರ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳು ಈಗ ಘೋಷಣೆ ಮಾಡಬೇಕು. ಬಯಲು ಸೀಮೆ ಅಭಿವೃದ್ಧಿಗೆ ಹೆಚ್ಚು ಹಣ ಕೊಡಬೇಕು ಅದನ್ನು ಬಡ್ಜೆಟ್ಟಿನಲ್ಲಿ ನಿಗದಿಪಡಿಸಬೇಕು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಅಧ್ಯಕ್ಷರೇ, ಈ ಬಜೆಟ್‌ನಲ್ಲಿ ಕೃಷಿ ಪದಾರ್ಥದ ಯಾವುದೇ ಬೆಳೆಗಳು ಮಾರ್ಕೆಟನಲ್ಲಿ ಬಿದ್ದಾಗ, ಸರ್ಕಾರ ಹಣವನ್ನು ರಿಸರ್ವ್ ಮಾಡಿಕೊಂಡು ಕನಿಷ್ಟ ಬೆಂಬಲ ಕೊಡುವುದರ ಮೂಲಕ ಕಾಂಪಿಟೇಷನ್ ಸೃಷ್ಟಿಮಾಡಿ ದಳ್ಳಾಳಿಗಳ ಹಿಡಿತದಿಂದ ತಪ್ಪಿಸಲು ಹೆಚ್ಚು ಹಣವನ್ನು ಬಜೆಟ್ಟನಲ್ಲಿ ಪ್ರಾವಿಷನ್ ಮಾಡಬೇಕು. ಈಗಾಗಲೇ 7-8 ವರ್ಷ ಆಗಿದೆ ರೈತನ ಜಮೀನನ್ನು ಅಕ್ವಿಸಿಷನ್ ಮಾಡಿಕೊಂಡು ಚಾನಲ್ ತೋಡುವುದಕ್ಕೋಸ್ಕರ 1-4, 1-6 ನೋಟಿಫಿಕೇಷನ್ ಆಗಿಲ್ಲ. ಸುಮಾರು 7-8 ವರ್ಷಗಳ ಕಾಲವಾಗಿದ್ದರೂ ಪ್ರವಿಷನ್ ಮಾಡಿಕೊಂಡು ಅವರಿಗೆ ಹಣ ಕೊಟ್ಟಿಲ್ಲ. ಆ ಹಣವನ್ನು ಹೆಚ್ಚು ಬಜೆಟ್‌ನಲ್ಲಿ ಅವರಿಗೆ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಈಗಾಗಲೇ ಆಲಮಟ್ಟಿಯಲ್ಲಿ 35 ದಿನಗಳ ಕಾಲ ಸರದಿ ಮೇಲೆ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ. ಸರ್ಕಾರ ಆಲಮಟ್ಟಿಯಲ್ಲಿ ಪುನರ್ ವಸತಿಗಾಗಿ ಏನು ಮಾಡಿದೆ? ಸುಮಾರು 95 ಗ್ರಾಮಗಳು, ಸುಮಾರು 35 ಸಾವಿರ ಕುಟುಂಬಗಳಿಗೆ ಪುನರ್‌ವಸತಿಗೆ ಹಣವನ್ನು ಒದಗಿಸಬೇಕು. ಅವರು ಸುಮಾರು 35-40 ದಿವಸಗಳಿಂದ ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರಿಗೆ ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಡಬೇಕು. ಕೊನೆಯದಾಗಿ, ಆಶ್ರಯ ಯೋಜನೆಯಲ್ಲಿ ಮನೆಗಳಿಗೆ ನಿವೇಶನ ಕೊಡತಕ್ಕಂಥ ವಿಚಾರದಲ್ಲಿ ಸರ್ಕಾರ 11 ಲಕ್ಷ ನಿವೇಶನ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಜಮೀನು ಮಾತ್ರ ಖರೀದಿ ಮಾಡಿಲ್ಲ. ಕಾರಣ ಎ.ಬಿ.ಸಿ.ಡಿ. ಎಂದು ಕ್ಲಾಸಿಫಿಕೇಷನ್ ಮಾಡಿ, ಹಣವನ್ನು ಹೆಚ್ಚು ಮಂಜೂರು ಮಾಡುವುದರ ಮೂಲಕ ಜಮೀನು ವ್ಯಾಲುವೇಷನ್ ಜಾಸ್ತಿ ಆಗಿರುವುದರಿಂದ, ಬದಲಾವಣೆ ಮಾಡಿಕೊಂಡು ಬಜೆಟ್ಟನಲ್ಲಿ ಹೆಚ್ಚು ಪ್ರಾವಿಷನ್ ಮಾಡಿಕೊಂಡು ನಿವೇಶನವನ್ನು ಬಡತನರೇಖೆಯಿಂದ ಕೆಳಗಿರುವಂಥವರಿಗೆ ಕೊಡಬೇಕು. ಇನ್ನೊಂದು ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಬೆಳೆ ನಷ್ಟವನ್ನು ಅನುಭವಿಸಿದ್ದಾರೆ. ಒಂದು ಎಕರೆ ಭತ್ತ ನಷ್ಟ ಆದರೆ 200 ರೂ. ಕೊಡತಕ್ಕ ವ್ಯವಸ್ಥೆ ಇದೆ. ಆದ್ದರಿಂದ ಪ್ರಕೃತಿ ವಿಕೋಪಕ್ಕೆ ಸಿಕ್ಕಿ ನಷ್ಟವನ್ನು ಅನುಭವಿಸಿದಂತಹ ರೈತರಿಗೆ ಕೃಷಿ ಇಲಾಖೆ ಜೊತೆ ಚರ್ಚೆಮಾಡಿ ಎಷ್ಟು ಹಣವನ್ನು ಒದಗಿಸಿಕೊಡಬೇಕು ಎನ್ನವುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು.

ಮತ್ತು ಇನ್ನೊಂದು ಬಹಳ ಮುಖ್ಯವಾದ್ದು ಗಿನ್ನೀಸ್ ಬುಕ್ಸ್‌ನಲ್ಲಿ ದಾಖಲೆ ಆಗತಕ್ಕಂಥದ್ದು ಈಗಾಗಲೇ ಬಹಳ ಸಾರಿ ಈ ಸದನದಲ್ಲಿ ಚರ್ಚೆಮಾಡಿದ್ದೇವೆ. ರೈತರಿಗೆ ಕೊಡಬೇಕಾದ ಕಬ್ಬಿನ ಬಾಕಿ ಬಗ್ಗೆ ಯಾವುದೇ ಚರ್ಚೆಮಾಡಿಲ್ಲ, ಬಾಕಿ ಕೊಡಿಸುವುದರ ಬಗ್ಗೆ ಸರ್ಕಾರ ಮಧ್ಯಸ್ಥಿಕೆ ವಹಿಸಬೇಕು. ಇಲ್ಲದಿದ್ದರೆ ಸರ್ಕಾರವೇ ಅವರಿಗೆ ಕೊಡತಕ್ಕ ವ್ಯವಸ್ಥೆ ಮಾಡಿ, ಈ ಕಾರ್ಖಾನೆಗಳ ಮೇಲೆ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಸನ್ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : (ಬೀದರ್) : ಸನ್ಮಾನ್ಯ ಸಭಾಧ್ಯಕ್ಷರೇ, ಇಡೀ ಬಜೆಟ್ಟಿನಲ್ಲಿ ಮೈನಾರಿಟೀಸ್ ಮತ್ತು ವಕ್ಫ್ ಸಲುವಾಗಿ ಒಂದು ನಯಾಪೈಸೆಯನ್ನು ಸರ್ಕಾರ ಕೊಡುತ್ತಾ ಇಲ್ಲ. ತಮ್ಮ ಮೂಲಕ ಸರ್ಕಾರದಿಂದ ಒಂದು ವಿನಂತಿ ಇದೆ, ತಮ್ಮ ಉತ್ತರದಲ್ಲಿ ಕರ್ನಾಟಕ ಸರ್ಕಾರದಿಂದ ಮೈನಾರಿಟೀಸ್ ಸಲುವಾಗಿ ಎಷ್ಟು ಕೊಡುತ್ತಾ ಇದ್ದೀರಿ? 10 ಲಕ್ಷ ರೂ. ಕೊಡುತ್ತಾ ಇರುವುದು ಕೇಂದ್ರ ಸರ್ಕಾರದ ಹಣ. ಎರಡನೆಯದು ಏನೆಂದರೆ? ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅವರು ವರ್ಷಕ್ಕೆ ಒಂದು ಮೈನಾರಿಟಿ ಸಲುವಾಗಿ ವಸತಿ ಶಾಲೆ ಕೊಡುತ್ತೇವೆ ಎಂದು ಹೇಳಿದ್ದರು. ವರ್ಷಕ್ಕೆ 5 ಶಾಲೆ ಎಂದು ಕೊಟ್ಟಿದ್ದರು.

ಈ ಬಜೆಟ್‌ನಲ್ಲಿ ಅದಕ್ಕೆ ಮಹತ್ವವಿಲ್ಲ. ಈ ವರ್ಷದ ಬಜೆಟ್‌ನಲ್ಲಿ ರೆಸಿಡೆನ್ಷಿಯಲ್ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರ ಅವಕಾಶ ಮಾಡಿಕೊಡುತ್ತೀರೋ ಅಥವ ಇಲ್ಲವೋ ಎಂಬ ಬಗ್ಗೆ ಸರ್ಕಾರದಿಂದ ಉತ್ತರ ಬೇಕು. ಹಣಕಾಸು ಸಚಿವರಾದ ಮಾನ್ಯ ಸಿದ್ಧರಾಮಯ್ಯನವರು ಮೊನ್ನೆ ಬಜೆಟ್‌ನ್ನು ಮಂಡನೆ ಮಾಡಿದಾಗ ಪತ್ರಕರ್ತರು ಏತಕ್ಕಾಗಿ ಮೈನಾರಿಟಿಯ ಅಭಿವೃದ್ಧಿಯ ಸಲುವಾಗಿ ರಾಜ್ಯಸರ್ಕಾರ ಹಣವನ್ನು ಇಡುತ್ತಿಲ್ಲವೆಂದು ಅವರನ್ನು ಕೇಳಿದರು. ಅದಕ್ಕೆ ಮಾನ್ಯ ಹಣಕಾಸು ಸಚಿವರು ಈಗ ಕೊಟ್ಟಿರುವುದೇ ಜಾಸ್ತಿಯಾಗಿದೆಯೆಂದು ಹೇಳಿದರು. ಅದರ ಬಗ್ಗೆ ನನಗೆ ಕ್ಲಾಂಫಿಕೇಷನ್ ಕೊಡಬೇಕು. ತಾವೇನು ಹಾಗೆ ಹೇಳಿದ್ದೀರಿ. ಅದರಿಂದ ನಮಗೆ ಬಹಳ ನೋವಾಗುತ್ತಿದೆ. ತಮ್ಮ ನೇತ್ರತ್ವದ ಬಜೆಟ್‌ನಲ್ಲಿ ಅಲ್ಪಸಂಖ್ಯಾಂತರ ಬಗ್ಗೆ ಈ ರೀತಿ ಧೋರಣೆ ಇರುವುದರಿಂದ ಅದರ ಬಗ್ಗೆ ನಮಗೆ ಕ್ಲಾರಿಫಿಕೇಷನ್ ಕೊಡಬೇಕು. ಈ ವರ್ಷ ವಕ್ಫ್‌ಗೆ ಎಷ್ಟು ಅನುದಾನವನ್ನು ಕೊಡುತ್ತೀರಿ ಅದರ ಬಗ್ಗೆ ಹೇಳಬೇಕು. ಮತ್ತು ಮೈನಾರಿಟಿಯವರಿಗೆ ಸರ್ಕಾರದ ಯಾವುದೇ ಇಲಾಖೆಯಲ್ಲಿ ಕೊಡಬೇಕಾಗಿರುವ ನಾಲ್ಕು ಪರ್‌ಸೆಂಟ್ ಮೀಸಲಾತಿಯನ್ನು ಕೊಡುತ್ತಿಲ್ಲ. ಅದು ತಮಗೆ ಗೊತ್ತಿದೆ. ಆದ್ದರಿಂದ ಈ ಕೂಡಲೇ ಅಲ್ಪಸಂಖ್ಯಾತರಿಗೆ ಇರುವ ನಾಲ್ಕು ಪರ್‌ಸೆಂಟ್ ಮೀಸಲಾತಿಯನ್ನು ಎಲ್ಲಾ ಇಲಾಖೆಗಳಲ್ಲೂ ಕೊಡಲು ಕ್ರಮ

ತೆಗೆದುಕೊಳ್ಳಬೇಕು. ಸಮಾಜ ಕಲ್ಯಾಣ ಕಾರ್ಯಕ್ರಮಗಳೇನಿದೆ ಅದರಲ್ಲಿ ವಿಶೇಷವಾಗಿ ಅಲ್ಪಸಂಖ್ಯಾತರಿಗೆ ಏನಾದರೂ ಮಾಡಿ ಹಣವನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ಇಂದಿನ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ಗಡಿ ವಿಚಾರದ ಬಗ್ಗೆ ಪತ್ರಿಕೆಯಲ್ಲಿ ನೋಡಿದ ಮೇಲೆ ನಾವೂ ಸಹ ವಿಷಾದದಿಂದ ಹೇಳಬೇಕಾಗುತ್ತದೆ. ಮಹಾಜನ್ ಆಯೋಗದ ತೀರ್ಪೇ ಅಂತಿಮವಾದ ತೀರ್ಪು.

ಅಧ್ಯಕ್ಷರು : ಮಾನ್ಯ ಬೆಲ್ಲದ್‌ರವರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಅದರ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ತಾವು ಅದರ ಬಗ್ಗೆ ಯಾವುದಾದರೂ ಅನುಮಾನಗಳಿದ್ದರೆ, ಅಥವಾ ಉತ್ತರಕ್ಕೆ ಸ್ಪಷ್ಟೀಕರಣವನ್ನು ಕೇಳುವುದಾದರೆ ಕೇಳಿ. ಇಲ್ಲದಿದ್ದರೆ ಬಜೆಟ್‌ಗೆ ಸಂಬಂಧಪಟ್ಟಂತೆ ಕೇಳಿ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ (ಧಾರವಾಡ) : ನಾಡಿನ ದೃಷ್ಟಿಯಿಂದ ಮಹಾಜನ್ ವರದಿಯು ಕೊನೆಯ ಮತ್ತು ಅಂತಿಮ ತೀರ್ಪಾಗಿರುತ್ತದೆ. ಆದ್ದರಿಂದ ಅದರ ಬಗ್ಗೆ ಮತ್ತೆ ಅಲ್ಲಿ ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ. ಧಾರವಾಡದಲ್ಲಿ ಶಿಕ್ಷಕರಿಗೆ ತರಬೇತಿಕೊಡುವಂಥ ನೂರು ವರ್ಷಗಳ ಹಳೆಯದಾದ ಒಂದು ಸಂಸ್ಥೆ ಇದೆ. ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಶಿಕ್ಷಕಿಯರನ್ನು ತಯಾರು ಮಾಡುವಂಥ ನೂರು ವರ್ಷಗಳ ಹಳೆಯದಾದ ಸಂಸ್ಥೆ ಅದಾಗಿದೆ. ಆ ಸಂಸ್ಥೆಗೆ ಒಳ್ಳೆಯ ಕಟ್ಟಡಗಳ ಅವಶ್ಯಕತೆ ಇದೆ. ಆ ಸಂಸ್ಥೆಯ ಶತಮಾನೋತ್ಸವವನ್ನು ಆಚರಣೆ ಮಾಡುವಂಥ ಈ ಸಂದರ್ಭದಲ್ಲಿ ಅದಕ್ಕೆ ಹೊಸದಾಗಿ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಎರಡು ವರ್ಷಗಳಿಂದಲೂ ಹೇಳಿಕೊಂಡು ಬರುತ್ತಿದ್ದೇನೆ. ಇದರ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವರಲ್ಲಿಯೂ ವಿನಂತಿ ಮಾಡಿಕೊಂಡಿದ್ದೇನೆ. ಅದಕ್ಕೆ ಹಣವನ್ನು ಕೊಡುವುದಾಗಿ ಹೋದ ಸಲ ಉತ್ತರವನ್ನು ಕೊಟ್ಟಿದ್ದಾರೆ ಆದರೆ ಈ ಸಲ ಅದಕ್ಕೆ ಹಣವನ್ನು ಒದಗಿಸಿಲ್ಲದಿರುವುದು ಕಂಡುಬರುತ್ತಿದೆ. ಆದ್ದರಿಂದ ತಾವು ಇದಕ್ಕೆ ಹಣವನ್ನು ಒದಗಿಸಿಕೊಡುತ್ತೀರೋ ಅಥವ ಇಲ್ಲವೊ ಎಂಬ ಬಗ್ಗೆ ಉತ್ತರ ಕೊಡಬೇಕು. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಡುವಂಥ ಸರ್ಕಾರ ಇದಕ್ಕೆ ತೀವ್ರವಾಗಿ ಹಣವನ್ನು ಒದಗಿಸಿಕೊಡಬೇಕು. ಜೊತೆಗೆ ಸರ್ಕಾರ ಸ್ವಾವಲಂಭಿ ಸಮಾಜವನ್ನು ನಿರ್ಮಾಣ ಮಾಡಬೇಕಾಗಿದೆ. ಬಹುತೇಕ ಎಲ್ಲಾ ಕಥೆಗಳಲ್ಲೂ ಎರಡೆರಡು ಐ.ಟಿ.ಐಗಳು ಇದೆ. ಆದರೆ ಧಾರವಾಡದಲ್ಲಿ ಎರಡು ವಿಶ್ವವಿದ್ಯಾನಿಲಯವಿದ್ದರೂ ಅಲ್ಲಿ

ಒಂದು ಐ.ಟಿ.ಐ. ಇಲ್ಲ. ಅಲ್ಲಿ ಐ.ಟಿ.ಐ. ಮಾಡಬೇಕೆಂದು ಬಹಳ ಹಿಂದಿನಿಂದಲೂ ಕೇಳುತ್ತಿದ್ದೇನೆ. ಮಾನ್ಯ ಗುರುನಾಥ್‌ರವರು ಸಚಿವರಾಗಿದ್ದಾಗ ಅಲ್ಲಿ ಐ.ಟಿ.ಐ.ಯನ್ನು ಮಾಡಿಕೊಡಬೇಕೆಂದು ಒಂದು ಕಟ್ಟಡವನ್ನು ಸಹ ಪರಿಶೀಲನೆ ಮಾಡಿದ್ದರು, ಆದ್ದರಿಂದ ಧಾರವಾಡದಲ್ಲಿ ಒಂದು ಐ.ಟಿ.ಐ ಯನ್ನು ಮಾಡಿ ಕೊಡುವ ಅವಶ್ಯಕತೆ ಬಹಳವಾಗಿದೆ. ಅದನ್ನು ಮಾಡಿಕೊಡಬೇಕು. ಪ್ರಾಥಮಿಕ ಶಿಕ್ಷಣ ಸಚಿವರು ಪ್ರತಿಯೊಂದು ಜಿಲ್ಲೆಗೆ ಒಂದೊಂದು ಪ್ರಾಢಶಾಲೆಯನ್ನು ಕೊಡುವುದಾಗಿ ಹೇಳಿದ್ದರು. ಧಾರವಾಡದಲ್ಲಿ ಸರ್ಕಾರಿ ಪ್ರೌಢಶಾಲೆ ಇಲ್ಲ. ಅದು ಶೈಕ್ಷಣಿಕ ಕೇಂದ್ರವಾಗಿದೆ. ಬಡವರು ವ್ಯಾಸಂಗ ಮಾಡಲು ಖಾಸಗಿ ಪ್ರೌಢ ಶಾಲೆಗಳಿಗೆ ಹೋಗಬೇಕಾಗಿದೆ. ಆದ್ದರಿಂದ ಧಾರರಾಡದಲ್ಲಿ ಎರಡು ಸರ್ಕಾರಿ ಪ್ರೌಢ ಶಾಲೆಗಳನ್ನು ಸ್ಥಾಪನೆ ಮಾಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಬಿಳಗಿಯವರು ಸಾರಿಗೆ ಸಚಿವರಾಗಿದ್ದಾಗ ಧಾರವಾಡದ ಬಸ್ ನಿಲ್ದಾಣಕ್ಕೆ ಅಡಿಗಲ್ಲನ್ನು ಹಾಕಿ ಈಗಾಗಲೇ ಎರಡೂವರೆ ವರ್ಷಗಳಾಗಿದೆ. ಆ ರೀತಿ ಅಡಿಗಲ್ಲನ್ನು ಹಾಕಿರುವ ಬಸ್‌ಸ್ಟ್ಯಾಂಡಿನ ಕೆಲಸವನ್ನು ಈ ವರ್ಷದಿಂದೇನಾದರೂ ಪ್ರಾರಂಭ ಮಾಡುತ್ತಾರೆಯೇ ಎಂದು ಕೇಳಬಯಸುತ್ತೇನೆ. ಇವೆಲ್ಲಕ್ಕೂ ಆರ್ಥಿಕ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಡಾ|| ಎಂ. ಪಿ. ಕರ್ಕಿ : (ಕುಮಟಾ) : ಮಾನ್ಯ ಅಧ್ಯಕ್ಷರೇ, ಪ್ರವಾಸೋದ್ಯಮ ವಿಚಾರದಲ್ಲಿ ಈ ಸಲ ಹೆಚ್ಚು ಹಣವನ್ನು ಕೊಡುತ್ತಾರೆಂದುಕೊಂಡಿದ್ದೆ. ಹತ್ತು ಕೋಟಿಯ ಬದಲಾಗಿ ಹನ್ನೆರಡು ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ಎರಡನೆಯದಾಗಿ ಪ್ರವಾಸೋದ್ಯಮ ನೀತಿಯನ್ನು ರೂಪಿಸಲಾಗಿದ್ದು ಅದನ್ನು ಅನುಷ್ಠಾನಕ್ಕೆ ತಂದಿರುವುದಾಗಿ ಹೇಳಿದ್ದಾರೆ. ಆದರೆ ಆ ಪ್ರವಾಸೋದ್ಯಮ ನೀತಿಯನ್ನು ನೋಡಿದಾಗ ಸುಮಾರು 19 ಕೋಟಿ ರೂಪಾಯಿಗಳಷ್ಟು ದೊಡ್ಡ ದೊಡ್ಡ ಹೋಟೆಲ್‌ಗಳಿಗೆ ಸಹಾಯಧನವನ್ನು ಕೊಟ್ಟಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಹಾಕುವಂತಹ ಉದ್ಯಮಿಗಳಿಗೆ ಆ ರೀತಿ ಸಹಾಯಧನವನ್ನು ಕೊಡುವುದು ಎಷ್ಟರಮಟ್ಟಿಗೆ ಸರಿ ಎನ್ನುವಂಥದ್ದು ಮೊದಲನೆಯದು. ಎರಡನೆಯದಾಗಿ, ಅಲ್ಲಿ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಇಲ್ಲ, ಹೋಗತಕ್ಕಂಥ ಹಾದಿಗಳು ಇಲ್ಲ. ಅಲ್ಲಿ ನೈರ್ಮಲ್ಯವನ್ನು ಕಾಪಾಡತಕ್ಕ ಪರಿಸ್ಥಿತಿಯಿಲ್ಲ. ಅದಕ್ಕೆ ಖರ್ಚು ಮಾಡುವ ಬದಲಾಗಿ ಸಹಾಯಧನವನ್ನು ಕೊಡತಕ್ಕದ್ದು ಸರಿಯಲ್ಲ, ಅದನ್ನು ನಿಲ್ಲಿಸಬೇಕು. ಇನ್‌ಫ್ರಾಸ್ಟಕ್ಚರ್‌ಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಯು. ಆರ್. ಸಭಾಪತಿ(ಉಡುಪಿ) : ಮಾನ್ಯ ಅಧ್ಯಕ್ಷರೆ, ಕಳೆದ ಸಲದ ಮುಂಗಡ ಪತ್ರದಮೇಲಿನ ಚರ್ಚೆಯ ಸಂದರ್ಭದಲ್ಲಿ ಅರ್ಥ ಸಚಿವರಲ್ಲಿ ಒಂದು ಪ್ರಶ್ನೆಯನ್ನು

ಕೇಳಿದ್ದೆ. ಸಾರಾಯಿ ನಿಷೇದ ಮಾಡುತ್ತಿದ್ದೀರಿ, ಆದರಿಂದ ಸುಮಾರು ಐವತ್ತು ಸಾವಿರದಿಂದ ಒಂದು ಲಕ್ಷದವರೆಗೆ ಸಾರಾಯಿ ವೆಂಡರ್ಸ್‌ಗಳು, ಸುಮಾರು ಮೂರು ಲಕ್ಷದವರೆಗೆ ಅನಧಿಕೃತ ಮಾರಾಟಗಾರರು ಸುಮಾರು ಮೂವತ್ತು ವರ್ಷಗಳಿಂದ ಈ ಸಾರಾಯಿ ಮಾರಾಟವನ್ನೇ ಜೀವನದ ಆಧಾರವಾಗಿಟ್ಟುಕೊಂಡು ಬಂದಿರುವವರು. ಆದರೆ ತಾವು ಸಾರಾಯಿ ನಿಷೇಧ ಮಾಡುತ್ತಿರುವುದರಿಂದ ಸಾರಾಯಿ ಮಾರಾಟ ಮಾಡುವವರಿಗೆ ಯಾವ ರೀತಿಯಲ್ಲಿ ಪುನರ್ವ್ಯವಸ್ಥೆ ಮಾಡಿಕೊಡುತ್ತಿದ್ದೀರಿ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಂಡಿದ್ದೆ. ತಾವು ಅದಕ್ಕೆ ಉತ್ತರ ಕೊಟ್ಟಿಲ್ಲ. ಹಿಂದೆ ಸುಮಾರು ಐದುನೂರು ಜನ ಸಾರಾಯಿ ಮಾರಾಟಗಾರರು ಮುಖ್ಯಮಂತ್ರಿಗಳ ನಿವಾಸಕ್ಕೆ ಹೋಗಿ ಮನವಿಯನ್ನು ಸಲ್ಲಿಸಿದ್ದರು. ಆಗ ಮುಖ್ಯಮಂತ್ರಿಯವರು ಪುನರ್‌ವ್ಯವಸ್ಥೆ ಮಾಡುವುದರ ಸಲುವಾಗಿ ಏನಾದರೂ ವ್ಯವಸ್ಥೆ ಮಾಡುವುದಾಗಿ ಭರವಸೆಯನ್ನು ಕೊಟ್ಟಿದ್ದರು. ಆದರೆ ಇದುವರೆಗೆ ಅದರ ಬಗ್ಗೆ ಯಾವುದೇ ಮಾಹಿತಿಯನ್ನು ಅರ್ಥ ಸಚಿವರು ಕೊಟ್ಟಿಲ್ಲ. ಎರಡನೆಯದಾಗಿ ಆಕ್ಟ್ರಾಯ್ ಬಗ್ಗೆ ಅರ್ಥ ಸಚಿವರಲ್ಲಿ ಕೇಳಿದ್ದೆ. ಅವರು ಸೆರ್‌ಚಾರ್ಜ್‌ನ್ನು 150 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಇದನ್ನು ನೋಡಿದರೆ ಮುಂದಿನ ದಿವಸಗಳಲ್ಲಿ ಆಕ್ಟ್ರಾಯ್ ವಿಧಿಸುತ್ತಾರೋ ಇಲ್ಲವೋ ಎಂಬ ಬಗ್ಗೆ ವಿವರಣೆಯನ್ನು ಕೊಡಲಿಲ್ಲ. ಆದಾಯವಿಲ್ಲದಂಥ ನಗರಸಭೆಗಳಿಗೆ, ಪುರಸಭೆಗಳಿಗೆ ಹೆಚ್ಚು ಅನುಧಾನವನ್ನು ಕೊಡದಿದ್ದ ಪಕ್ಷದಲ್ಲಿ ಆಕ್ಟ್ರಾಯ್‌ನ್ನು ಜಾರಿಗೆ ತರುವುದಾಗಿ ಹಿಂದೆ ಅರ್ಥ ಸಚಿವರು ಹೇಳಿದ್ದರು. ಆದ್ದರಿಂದ ಆಕ್ಟ್ರಾಯ್‌ನ್ನು ಜಾರಿಗೆ ತರುತ್ತೀರೋ ಇಲ್ಲವೋ ಎಂಬ ಬಗ್ಗೆ ನಿಖರವಾಗಿ ಹೇಳಬೇಕು. ಸದನವು ಮುಗಿದ ಮೇಲೆ ದಿಢೀರಾಗಿ ಆಕ್ಟ್ರಾಯ್ ಜಾರಿಗೆ ತರುವುದು ಸರಿಯಲ್ಲ. ಅದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದರೆ ಒಳ್ಳೆಯದು. ಅದಕ್ಕೆ ಬೇಕಾದ ಸಲಹೆಗಳನ್ನು ನಾವುಗಳು ಕೊಡಬಹುದು. ಮಾನ್ಯ ಕರ್ಕಿಯವರು ಮಾತನಾಡುತ್ತಾ ಸಿಂಗಾಪುರದಲ್ಲಿ ಸಮುದ್ರದ ಮೇಲೆ ಹೋಟೆಲ್‌ನ್ನು ಕಟ್ಟಿದ್ದಾರೆ, ಆದರೆ ನಾವು ಸಮುದ್ರದ ಸಂಪತ್ತನ್ನು ಇನ್ನೂ ಪ್ರವಾಸೋದ್ಯಮಕ್ಕೆ ಸರಿಯಾಗಿ ಬಳಸಿಕೊಳ್ಳಲಿಲ್ಲವೆಂದು ಹೇಳಿದರು. ಅದನ್ನು ನೋಡಿದಾಗ ತಾವು ಈ ಸಲದ ಬಜೆಟ್‌ನಲ್ಲಿ ಪ್ರವಾಸೋದ್ಯಮಕ್ಕೆ ಐವತ್ತು ಕೋಟಿ ಹಣ ಕೊಡುತ್ತೀರಿ ಆ ಮೂಲಕ ನಮಗೆ ಆದಾಯವನ್ನು ತರುತ್ತೀರೆಂದು ಭಾವಿಸಿದ್ದೆ. ಆದರೆ ತಾವು ಬಜೆಟ್‌ನಲ್ಲಿ ಹತ್ತು ಕೋಟಿ ಬದಲಾಗಿ ಪ್ರವಾಸೋದ್ಯಮಕ್ಕೆ ಹನ್ನೆರಡು ಕೋಟಿ ರೂಗಳನ್ನು ಮಾತ್ರ ಒದಗಿಸಿದ್ದೀರಿ. ಇಲಾಖೆಯವರು ಐವತ್ತು ಕೋಟಿ ರೂ.ಗಳಿಗೂ ಹೆಚ್ಚು ಪ್ರಪೋಸಲ್ ಕೊಟ್ಟಿದ್ದರೂ ತಾವು ಕೇವಲ ಎರಡು ಕೋಟಿ ಹೋದ ವರ್ಷಕಿಂತ ಹೆಚ್ಚಾಗಿ ಕೊಟ್ಟಿರುವುದು ಯಾವ ರೀತಿಯಲ್ಲಿ ಸರಿಯಾಗುತ್ತದೆ? ಆದ್ದರಿಂದ ಪ್ರವಾಸೋಧ್ಯಮಕ್ಕೆ ಇನ್ನಷ್ಟು ಹೆಚ್ಚು ಹಣವನ್ನು ಒದಗಿಸಬೇಕು. ಮೀನುಗಾರಿಕಾ ಇಲಾಖೆಗೂ

ಸಹ ಕೇವಲ 23 ಕೋಟಿ ರೂ ಕೊಟ್ಟಿದ್ದೀರಿ. ಈ ಹಿಂದೆಯೇ ಮೀನುಗಾರಿಕಾ ಇಲಾಖೆಗೆ ನೂರು ಕೋಟಿ ರೂಪಾಯಿಗಳ ಯೋಜನೆಯ ಬಗ್ಗೆ ಸಮಿತಿಯು ವರದಿಯನ್ನು ಸಲ್ಲಿಸಿತ್ತು. ಆದರೂ ಆ ಇಲಾಖೆಗೆ ಹೆಚ್ಚು ಹಣವನ್ನು ಕೊಟ್ಟಿಲ್ಲ. ಇದರ ಬಗ್ಗೆ ಸ್ಪಷ್ಟಣೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಇಲ್ಲಿ ಅಪ್ರೂವ್ ಆಗಿ, ಟ್ಯಾಕ್ಸೇಷನ್ ಬಿಲ್ ಓಟ್ ಆದಮೇಲೆ ಮೇಲ್ಮನೆಗೆ ಹೋಗಿ ಬರಬೇಕಾಗುತ್ತದೆ. ಆದ್ದರಿಂದ ಬಜೆಟ್ ಬಗ್ಗೆ ಮಾತನಾಡುವವರು ಒಂದೊಂದು ನಿಮಿಷದಲ್ಲಿ ಮಾತನಾಡಿ ಮುಗಿಸುವುದಾದರೆ ನಾಲ್ಕೈದು ಜನರಿಗೆ ಅವಕಾಶ ಸಿಗುತ್ತದೆ. ನಮ್ಮ ಚರ್ಚೆ 3-35 ರಲ್ಲಿ ಮುಗಿಯಬೇಕಾಗಿದೆ. ಆದ್ದರಿಂದ ತಾವುಗಳು ಹೆಚ್ಚು ಹೆಚ್ಚು ಭಾಷಣ ಮಾಡುವುದಾದರೆ ಯಾರಿಗೂ ಅವಕಾಶ ಸಿಗುವುದಿಲ್ಲ. ಅದಕ್ಕೆ ನನ್ನನ್ನು ಯಾರೂ ಆಕ್ಷೇಪಣೆ ಮಾಡಬೇಡಿ. ಎಲ್ಲರಿಗೂ ಸೂಚನೆ ಕಟ್ಟಿದ್ದೇನೆ. ಎಲ್ಲರಿಗೂ ಅವಕಾಶ ಕೊಡುತ್ತೇನೆ. ದಯಮಾಡಿ ಒಂದೊಂದು ನಿಮಿಷದಲ್ಲಿ ಮುಗಿಸಿ.

+ ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಜಿಲ್ಲೆಯಲ್ಲಿನ ತುಂಗಭದ್ರಾ ಜಲಾಶಯದಲ್ಲಿ ಸಿಲ್ಟ್‌ನ ಪ್ರಮಾಣ ಹೆಚ್ಚಾಗಿ ನೀರಿನ ಸಂಗ್ರಹಣಾ ಸಾಮರ್ಥ್ಯ ಬಹಳ ಕಡಿಮೆಯಾಗಿದೆ. ಇದರಿಂದ ರೈತರಿಗೆ ತೊಂದರೆಯಾಗಿರುತ್ತದೆ. ಬ್ಯಾಲೆನ್ಸಿಂಗ್ ರಿಸರ್ವಾಯರ್ ಬಗ್ಗೆ ಅವೆಂಟ್ ಪ್ರಾವಿಷನ್ ಮಾಡಬೇಕು. ಸುಮಾರು 20 ಟಿ.ಎಂ.ಸಿ. ನೀರು ವ್ಯರ್ಥವಾಗಿ ಆಂಧ್ರಕ್ಕೆ ಹರಿದುಹೋಗುತ್ತಿದೆ. ಇದರ ಬಗ್ಗೆ ಯಾರೂ ಹೆಚ್ಚು ಗಮನ ಕೊಟ್ಟಿಲ್ಲ. ಸಿಲ್ಟ್‌ನ್ನು ತೆಗೆಸಲು ಬಜೆಟ್‌ನಲ್ಲಿ ಹಣವನ್ನು ಪ್ರಾವಿಷನ್ ಮಾಡಬೇಕು.

ಈಗಾಗಲೇ ನನ್ನ ಕ್ಷೇತ್ರದಿಂದ ಸುಮಾರು 10-15 ಸಾವಿರ ಎಕರೆಗೆ ಆಗುವಂಥ ಏತ ನೀರಾವರಿ ಯೋಜನೆಗಳನ್ನು ಕೊಡಲಾಗಿದೆ. ಅದನ್ನು ಕೂಡ ಮಂಜೂರು ಮಾಡಬೇಕು. ಮಾನ್ಯ ಮಂತ್ರಿಗಳು ಬಳ್ಳಾರಿಗೆ ಬಂದಾಗ ಆಶ್ವಾಸನೆ ಕೊಟ್ಟಿದ್ದಾರೆ. ಇದಕ್ಕೆ ನೀವು ಪ್ರಾವಿಷನ್ ಮಾಡಬೇಕು. ಏಕೆಂದರೆ ಅಲ್ಲಿನ ರೈತರು ಬಹಳ ಸಂಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಪ್ರತಿ ಸಲ ಈ ಸದನದಲ್ಲಿ ಕೃಷ್ಣಾ, ಕಾವೇರಿ ಬಗ್ಗೆ ಚರ್ಚೆಯಾಗುತ್ತದೆಯೇ ಹೊರತು ತುಂಗಭದ್ರಾ ಬಗ್ಗೆ ಯಾರೂ ಮಾತನಾಡುವುದಿಲ್ಲ. ಬಹಳಷ್ಟು ರೈತರು ಸಂಕಟ ಪಡುತ್ತಿದ್ದಾರೆ. ಇದು ಬಹಳ ಸೀರಿಯಸ್ ಇದೆ. ಇದಕ್ಕಾಗಿ ಸರ್ಕಾರ ಸಹಾಯ ಮಾಡಬೇಕೆಂದು ನಾನು ಎಲ್ಲರ ಪರವಾಗಿ ಕೇಳಿಕೊಳ್ಳುತ್ತೇನೆ.

SRI NARAYANA RAO TARALE (BELGAUM) : Hon'ble Speaker, Sir, today the Hon'ble member Mr. Vatal Nagaraj has misled the house.

(Interruptions)

ಶ್ರೀ ವಾಟಾಳ್ ನಾಗರಾಜ್ : ನಾನೇಕೆ ಈ ಸದನವನ್ನು ತಪ್ಪು ದಾರಿಗೆ ಎಳೆಯಲ್ಲಿ? ಅವರೇ ಈ ಸದನವನ್ನು ತಪ್ಪು ದಾರಿಗೆ ಎಳೆಯುವುದು. ಯಾವಾಗಲೂ ಅವರದ್ದು ಇದೊಂದು ಜಾಡ್ಯವಾಗಿಬಿಟ್ಟಿದೆ. ಇದು ಇದ್ದದ್ದೇ.

(Interruptions)

SRI NARAYANA RAO TARALE : Sir, there are Kannada Schools in Bombay, there are Kannada Schools in Poona. I want to explain particularly this point.

MR. SPEAKER : No, No. Now the Hon'ble Deputy Finance Minister who is in-charge of Finance portfolio has given his reply to all the points raised by the Hon'ble members of this House. If you want to seek any clarification regarding that, you can do that. If you want to speak on this item, next time again whenwe meet in the month of may, I will find some time and you can discuss it. There is no problem. you want to seek any clarification on the reply.

SRI NARAYANA RAO TARALE : Sir, we are not getting any benefit perticularly for the linguistic minorities. For the whole State, we are considered as minorities but on our side we are in majority. But we are not getting any educational facilities or financial facilities. I demand, it will be better to get it solved by the parliament. Karnataka-Maharastra issue is pending before the Central Government. Kindly cooperate with the Central Government. one and for all see that it is solved by Parliament. The Parliament is the only authority to solve this problem.

MR. SPEAKER : All right, you have had your say.

ಶ್ರೀ ಜಗದೀಶ್ ಶೆಟ್ಟರು (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ ಹುಬ್ಬಳ್ಳಿ ಧಾರವಾಡದಲ್ಲಿ ಮೋರ್‌ದೆನ್ 50 ಪರ್ಸೆಂಟ್ ಯುಜಿಡಿ ಸಿಸ್ಟಂ ಬಂದಿಲ್ಲ. ಇದಕ್ಕಾಗಿ ವಿಶ್ವಬ್ಯಾಂಕ್‌ನಿಂದ ನೆರವು ಕೇಳುತ್ತೇವೆಂದು ಒಂದು ವರ್ಷದ ಹಿಂದೆ ಆಶ್ವಾಸನೆಯನ್ನು ಕೊಟ್ಟಿದ್ದರು. ಇಲ್ಲಿಯವರೆವಿಗೂ ಆ ಪ್ರಪೋಸಲ್ ಹೋಗಿಲ್ಲ. ಇದಲ್ಲದೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದ ಹೆಚ್ಚಿನ ಹಣ ಬಿಡುಗಡೆ ಆಗುತ್ತಿಲ್ಲ. ಕೇವಲ ಒಂದೊಂದು ಕ್ಷೇತ್ರಕ್ಕೆ ಮೂರು ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಕನಿಷ್ಠ ಪಕ್ಷ 25 ಲಕ್ಷ ರೂ.ಗಳನ್ನಾದರೂ ಒಂದು ಕ್ಷೇತ್ರಕ್ಕೆ ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ. ನಾವು ನೈರುತ್ಯ ರೈಲ್ವೆ ವಲಯ ಆಗುವುದನ್ನು ಈಗಾಗಲೇ ಕಳೆದುಕೊಂಡಿದ್ದೇವೆ. ಆದ ಕಾರಣ ಕಡೇ ಪಕ್ಷ ಹೈಕೋರ್ಟ್ ಪೀಠವಾದರೂ ಬೇಗ ಆಗಲು ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ಆದಷ್ಟು ಬೇಗ ತೆಗೆದುಕೊಳ್ಳಬೇಕೆಂದು ಆ ದಿಸೆಯಲ್ಲಿ ಪ್ರಯತ್ನ ಮಾಡಿ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು, ತಮ್ಮ ಆಯವ್ಯಯ ಪತ್ರದಲ್ಲಿ ರಸ್ತೆ ನೀತಿ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಅವರ ಚಿಂತನೆಗೆ ಪೂರಕವಾಗಿ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಗ್ರಾನೈಟ್ ಸಾಗಣೆ ಮಾಡತಕ್ಕಂಥ ಲಾಬಿಗಳ ಹೊಡೆತಕ್ಕೆ ಮಾನ್ಯ ಸಿಂಧ್ಯಾರವರು, ನಾನು ಮತ್ತು ಬಾಲಕೃಷ್ಣರವರು ನೇರವಾಗಿ ಧಾಳಿಗೆ ತುತ್ತಾಗಿರತಕ್ಕಂಥವರು. ಕನಕಪುರದಿಂದ ಶುರುವಾಗಿ ಮಾಗಡಿ ತಾಲ್ಲೂಕಿನ ವರೆಗಿನ ರಸ್ತೆ ತುಂಬಾ ಹಾಳಾಗಿ ಹೋಗಿದೆ. ತಾವೇನೋ ಹೇಳಿದಿರಿ ರಾಯಲ್ಟಿ ಮೇಲೆ ಸೆಸ್ ಹಾಕುತ್ತೇವೆಂದು. ಇದಕ್ಕೆ ನನ್ನ ಸಲಹೆ ಏನೆಂದರೆ, ಇದಕ್ಕೆ ಬದಲಾಗಿ ಏನು ಮೈನ್ಸ್ ಅಂಡ್ ಜಿಯಾಲಜಿಯವರು ಚೆಕ್‌ಪೋಸ್ಟ್‌ಗಳನ್ನು ಇಟ್ಟುಕೊಂಡಿದ್ದಾರೆ ಅಲ್ಲಿಯೇ ಸ್ಥಳದಲ್ಲಿಯೇ ವಸೂಲು ಮಾಡತಕ್ಕಂಥ ಪದ್ಧತಿ ಪ್ರಾರಂಭವಾದರೆ ಬಹುಶಃ ನಿಮಗೆ ಹೆಚ್ಚು ಆದಾಯ ಬರುತ್ತದೆ ಮತ್ತು ಇದರಿಂದ ಯಾರೂ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆಂಬ ಒಂದು ಸಲಹೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಶ್ರೀ ಎಸ್. ಎ. ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೊಸ ಜಿಲ್ಲೆಗಳನ್ನು ಮಾಡುತ್ತೇವೆಂದು ಹೇಳುತ್ತಲೇ ಬರುತ್ತಿದ್ದಾರೆ. ಇದರ ಬಗ್ಗೆ ಬಡ್ಜೆಟ್‌ನಲ್ಲಿ ಪ್ರಸ್ತಾಪ ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ ಇದರ ಬಗ್ಗೆ ಹೇಳಿಲ್ಲ. ಈಗ ದಾವಣಗೆರೆಯನ್ನು ಜಿಲ್ಲೆಯನ್ನಾಗಿ ಮಾಡುವುದರ ಬಗ್ಗೆ ಇಲ್ಲಿ ಅನೌನ್ಸ್ ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ

ಭದ್ರಾ ಬಲದಂಡೆ ಕಾಲುವೆ ಒಟ್ಟು 165 ಕಿ.ಮೀ. ಏನಿದೆ ಇದರ ರಿಪೇರಿಯನ್ನು ಕಳೆದ 30 ವರ್ಷಗಳಿಂದಲೂ ಮಾಡಿಲ್ಲ. ಇದರ ರಿಪೇರಿಗಾಗಿ ಆಯವ್ಯಯದಲ್ಲಿ ಅನುದಾನವನ್ನು ಇಟ್ಟಿಲ್ಲ. ಆದುದರಿಂದ ದಯಮಾಡಿ ಇದರ ಬಗ್ಗೆ ಹಣಕಾಸನ್ನು ಒದಗಿಸಿ ಸರಿಯಾದ ರೀತಿಯಲ್ಲಿ ಕೆಲಸ ಮಾಡಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೇ, ಜುಗಾರಿ ತೆರಿಗೆಯನ್ನು ಇಳಿಸಿರುವುದರ ಬಗ್ಗೆ ಏನು ಕಾರಣವೆಂದು ವಿವರಣೆಯನ್ನು ಕೊಟ್ಟಿಲ್ಲ. ಇನ್ನು ಎರಡನೆಯದಾಗಿ ವಿಧವಾ ವೇತನ ಮತ್ತು ವೃಧ್ಧಾಪ್ಯ ವೇತನಗಳು ಸರಿಯಾದ ಸಮಯಕ್ಕೆ ಬಿಡುಗಡೆ ಆಗಬೇಕು. ಮೂರನೆಯದಾಗಿ ಮಲೆನಾಡು ಅಭಿವೃದ್ಧಿ ಮಂಡಳಿಗೆ 60 ಕೋಟಿ ರೂ.ಗಳ ಬೇಡಿಕೆ ಇತ್ತು. ಆ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ನಾಲ್ಕನೆಯದಾಗಿ ಕೊಜೆಂಟ್ರಿಕ್ಸ್ ಬಗ್ಗೆ ಇಡೀ ನಮ್ಮ ಜಿಲ್ಲೆ ಮತ್ತು ಬೃಹತ್ ಉದ್ದಿಮೆಗಳ ಬಗ್ಗೆ ಆತಂಕ, ಭಯ ಭೀತಿಯ ವಾತಾವರಣ ನಿರ್ಮಾಣವಾಗಿದೆ. ಆದುದರಿಂದ ಮಾನ್ಯ ಸಚಿವರಲ್ಲಿ ನಾನು ಕೇಳುವುದೇನೆಂದರೆ ಇದರ ಬಗ್ಗೆ ಮತ್ತು ಧಾರಣ ಶಕ್ತಿಯನ್ನು ಅಧ್ಯಯನ ಮಾಡುವುದರ ಬಗ್ಗೆ ವರದಿಯನ್ನು ಯಾವ ಸಂಸ್ಥೆಗೆ ಮತ್ತು ಯಾವ ಕಾಲಮಿತಿಯಲ್ಲಿ ಇದನ್ನು ಮಾಡುವ ಬಗ್ಗೆ ತಾವು ವ್ಯವಸ್ಥೆಯನ್ನು ಮಾಡಿಕೊಂಡಿದ್ದೀರಿ ಮತ್ತು ಇದರ ಜೊತೆಯಲ್ಲಿ ಇಲ್ಲಿಯವರೆಗೆ ಆಗಿರುವ ಎಲ್ಲಾ ಅಧ್ಯಯನ ವರದಿಗಳನ್ನು ಸದನದಲ್ಲಿ ಮಂಡಿಸಿ ಜನರ ಸಂಶಯವನ್ನು ನಿವಾರಣೆ ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಇನ್ನು ಕೊನೆಯದಾಗಿ, ಮಧ್ಯಪಾನ ನಿಷೇಧವನ್ನು ಮಾಡುವ ಸಲುವಾಗಿ ಸಂಯಮ ಮೂಡಿಸುವ ಬಗ್ಗಿ ಶಿಕ್ಷಣ ಕೊಡುವುದಕ್ಕಾಗಿ 2 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಮಂಡನೆ ಮಾಡಿದ್ದಾರೆ. ಇದು ಸರಿಯಿಲ್ಲ. ಈ 2 ಕೋಟಿಯಲ್ಲಿ ಒಂದು ನಯಾಪೈಸೆಯನ್ನು ಖರ್ಚು ಮಾಡದೆ 100 ಕೋಟಿ ರೂ.ಗಳಷ್ಟು ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯತೆಯಿದೆ. ಅದು ಹೇಗೆಂದರೆ ನಮ್ಮ ಸನ್ಮಾನ್ಯ ಮಾನ್ಯ ಮುಖ್ಯಮಂತ್ರಿಗಳು ಒಂದು ದೃಢ ಸಂಕಲ್ಪವನ್ನು ಮಾಡಿ ಇವೊತ್ತಿನಿಂದಲೇ ಮಧ್ಯಪಾನವನ್ನು ಬಿಡುತ್ತೇನೆಂದು ಹೇಳಬೇಕು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ವಿದೇಶಿ ವಿನಿಮಯವನ್ನು ತರತಕ್ಕಂಥ ಪ್ರಮುಖ ಬೆಳೆ ವೆನಿಲಾ. ಈ ವೆನಿಲಾ ಅಭಿವೃದ್ದಿಯ ಬಗ್ಗೆ 33 ಲಕ್ಷ ರೂ.ಗಳನ್ನು ಕೇವಲ ದಕ್ಷಿಣ ಕನ್ನಡ ಜಿಲ್ಲೆಗೆ ಇಟ್ಟಿದ್ದಾರೆ. ಇದನ್ನು ಶಿವಮೊಗ್ಗ ಮತ್ತು ಉತ್ತರ ಕನ್ನಡಕ್ಕೆ ವಿಸ್ತರಿಸಬೇಕು. ಈಗಾಗಲೇ ಅಲ್ಲಿ ಈ ಬೆಳೆಯನ್ನು ಬೆಳೆಯುತ್ತಿದ್ದಾರೆ. ಹಣವನ್ನೂ ಕೂಡ ಸ್ವಲ್ಪ ಜಾಸ್ತಿ ಮಾಡಬೇಕು. ಎರಡನೆಯದಾಗಿ ತಾಳೆ ಬೆಳೆ ಬಗ್ಗೆ ಹೇಳಬೇಕೆಂದರೆ ಇದೊಂದು

ಪ್ರಮುಖ ಬೆಳೆಯಾಗಿದ್ದು ವಿದೇಶದಿಂದ ಆಯಿಲ್‌ನ್ನು ತರಿಸಿಕೊಂಡು ಆಮದು ಮಾಡತಕ್ಕಂಥ ನಮ್ಮ ಹಣ ಉಳಿತಾಯವಾಗುತ್ತದೆ. ಇದಕ್ಕೆ ಹೆಚ್ಚು ಪ್ರೋತ್ಸಾಹ ಬೇಕಾಗಿದೆ. ಈಗಾಗಲೇ ಈ ಬೆಳೆಯನ್ನು ನೆಟ್ಟವರು ಕಿತ್ತು ಹಾಕಿದರೆ. ಮಾನ್ಯ ಮುಖ್ಯಮಂತ್ರಿಗಳೇ ಸ್ವತಃ ಬೆಳೆದಿರುವುದನ್ನು ಕಿತ್ತುಹಾಕಿದ್ದಾರೆ. ಇದಲ್ಲದೇ ನಮ್ಮ ರಾಜ್ಯದ ಕೃಷಿ ಪ್ರಶಸ್ತಿ ವಿಜೇತರೂ ಕೂಡ ಶಿವಮೊಗ್ಗ ಜಿಲ್ಲೆಯಲ್ಲಿ ಆ ಬೆಳೆಯನ್ನು ಕಿತ್ತುಹಾಕಿದ್ದಾರೆ. ಏಕೆಂದರೆ ಈ ಬೆಳೆ ವರ್ಕ್‌ಔಟ್ ಆಗುವುದಿಲ್ಲವೆಂದು ಹೇಳಿ ಕಿತ್ತುಹಾಕಿದ್ದಾರೆ. ಇದರ ಫ್ಯಾಕ್ಟರಿಗೆ ಶೇಕಡ 51 ರಷ್ಟು ಶೇರು ಹಣವನ್ನು ಸರ್ಕಾರದ ಕಡೆಯಿಂದ ಕೊಡಲಾಗಿದೆ. ಆ ಫ್ಯಾಕ್ಟರಿಯ ಯಜಮಾನರು ಬೆಂಗಳೂರಿನಲ್ಲಿ ಆಫೀಸ್ ಮಾಡಿಕೊಂಡು ಶಿವಮೊಗ್ಗಕ್ಕೂ ಮತ್ತು ವಿದೇಶಕ್ಕೂ ಓಡಾಡುತ್ತಿದ್ದಾರೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಮತ್ತು ಈ ಬೆಳೆ ಲಾಭದಾಯಕವಾಗಲು ಬೇಕಾದ ಸಹಾಯಕ್ಕೆ ಹೆಚ್ಚು ಹಣವನ್ನು ಕೊಡುವ ದೃಷ್ಟಿಯಿಂದ ಮಾರ್ಕೆಟ್ ಸಬ್ಸಿಡಿಯನ್ನು ಕೊಡುವುದಕ್ಕೆ ಪ್ರಸ್ತಾಪ ಮಾಡಬೇಕು ಮತ್ತು ಆ ಬೆಳೆಯನ್ನು ಉಳಿಸಬೇಕೆಂದು ಸರ್ಕಾರದವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದಲ್ಲದೇ ಕಳೆದ ಬಾರಿ ನೀವು ಹೇಳಿದ್ದಿರಿ ರಿಕ್ಷಾ ಚಾಲಕರು ಮಡಿದರೆ ಅವರಿಗೆ ಪರಿಹಾರಧನವನ್ನು ಕೊಡುತ್ತೇವೆಂದಿದ್ದಿರಿ. ಆದರೆ ಒಂದು ಪೈಸೆ ಕೂಡ ಇದುವರೆಗೂ ಕೊಡಲಿಲ್ಲ. ಆದುದರಿಂದ ಮುಂದೆಯಾದರೂ ಇದನ್ನು ಯಾವ ರೀತಿ ಕೊಡುತ್ತೀರೆಂಬುದನ್ನು ಹೇಳಬೇಕು. ಇನ್ನು "ನಮ್ಮ ಮಗಳು ನಮ್ಮ ಶಕ್ತಿ" ಎನ್ನುವ ಯೋಜನೆಯಲ್ಲೂ ಕೂಡ ಇದುವರೆಗೂ ಹೆಣ್ಣು ಮಕ್ಕಳಿಗೋಸ್ಕರ ಒಂದು ಪೈಸೆಯನ್ನು ಖರ್ಚು ಮಾಡಲಿಲ್ಲ. ಈ ಸಾರಿಯಾದರೂ ಅದನ್ನು ಯಾವರೀತಿಯಲ್ಲಿ ಖರ್ಚು ಮಾಡುತ್ತೀರೆಂಬುದನ್ನು ಹೇಳಬೇಕು. ಏಕೆಂದರೆ ಕೇವಲ ಹೆಸರಿಗೋಸ್ಕರ ಹಣ ಇಡಬಾರದು. ಇದು ಹೆಣ್ಣು ಮಕ್ಕಳಿಗೆ ದೊರೆಯಬೇಕಾದ್ದರಿಂದ ಈ ಕೆಲಸವನ್ನು ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, 34 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಂಡು 2 ಲಕ್ಷ 34 ಸಾವಿರ ಎಕರೆಗೆ ನೀರಾವರಿ ಆಗುವ ತುಂಗಾ ಮೇಲ್ದಂಡೆ ಯೋಜನೆ 2000 ಇಸವಿಯೊಳಗಾಗಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಆಗಲೇಬೇಕಾಗಿದೆ. ಇದಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು 669 ಕೋಟಿ ರೂ.ಗಳು ಆದರೆ ಇದುವರೆಗೆ 13 ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಇನ್ನು ಮೂರು ವರ್ಷದೊಳಗೆ ಇದನ್ನು ಮುಗಿಸಬೇಕಾದರೆ ವರ್ಷಕ್ಕೆ ಸುಮಾರು 250 ಕೋಟಿ ರೂ.ಗಳ ಅವಶ್ಯಕತೆ ಇದೆ. ಅದಕ್ಕಾಗಿ ಈ ವರ್ಷ 250 ಕೋಟಿ ರೂ.ಗಳನ್ನು ಇಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ನಮ್ಮ ಹಾವೇರಿಯನ್ನು ಜಿಲ್ಲೆಯನ್ನಾಗಿ

ಮಾಡಬೇಕೆಂದು 23 ವರ್ಷಗಳಿಂದ ನಮ್ಮ ಜನರು ಒತ್ತಾಯ ಮಾಡುತ್ತಿದ್ದಾರೆ. ನಾನು ಈ ಒಂದು ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಏಕೆಂದರೆ ಈ ಚಿಂತನೆಗೆ ಅವರು ಚಾಲನೆಯನ್ನು ಕೊಟ್ಟಿದ್ದಾರೆ. ಸರ್ವ ಪಕ್ಷಗಳ ನಿಯೋಗ ಬಂದಾಗ 9 ಜಿಲ್ಲೆಗಳನ್ನು ಮಾಡುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ. ಇದಲ್ಲದೇ ಹಾವೇರಿ ಜಿಲ್ಲೆಗೆ ಬರುವಂಥ ಎಲ್ಲಾ ಶಾಸಕರು, ಮಾಜಿ ಶಾಸಕರು, ಎಲ್ಲಾ ಪಕ್ಷದ ಮುಖಂಡರು ಎಲ್ಲರ ಅಭಿಪ್ರಾಯ ಹಾವೇರಿಯನ್ನು ಜಿಲ್ಲೆ ಮಾಡಬೇಕೆಂಬುದೇ ಆಗಿದೆ.

ಒಂಭತ್ತು ಜಿಲ್ಲೆಗಳಲ್ಲಿ ಏನಾದರೂ ಒಂದು ತಕರಾರು ಇರಬಹುದು. ಆದರೆ ಹಾವೇರಿ ಜಿಲ್ಲೆ ರಚನೆ ಮಾಡುವುದಕ್ಕೆ ಮಾತ್ರ ಯಾವುದೇ ಒಂದು ತಕರಾರು ಇಲ್ಲದಂತಹ ಜಿಲ್ಲೆ. ಆದುದರಿಂದ ಅದಕ್ಕೆ ಆದ್ಯತೆ ಕೊಟ್ಟು ಈ ಕೂಡಲೇ ಏಪ್ರಿಲ್ ಒಂದನೇ ತಾರೀಖಿಗೆ ಜಾರಿಗೆ ಬರುವ ಹಾಗೆ ಹೊಸ ಜಿಲ್ಲೆಗಳನ್ನು ರಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ (ಬೀಳಗಿ) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಜಿಲ್ಲೆ ಎಂದು ಡಿಕ್ಲೇರ್ ಮಾಡಿ ಹೆಚ್ಚಿನ ಹಣಕಾಸು ಒದಗಿಸಿ ಇಡೀ ದೇಶದಲ್ಲಿ ಒಂದು ಮಾದರಿ ತೋಟಗಾರಿಕೆ ಜಿಲ್ಲೆ ಆಗುವುದಕ್ಕೆ ಸಾಧ್ಯವಿದೆಯೆನ್ನುವ ಮಾತನ್ನು ಹೇಳುತ್ತಾ, ಇದಕ್ಕೆ ಹೆಚ್ಚಿನ ಹಣಕಾಸು ಒದಗಿಸಿ ಬಿಜಾಪುರ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆ ಎಂದು ಡಿಕ್ಲೇರ್ ಮಾಡಬೇಕು. ಎರಡನೆಯದಾಗಿ ಬಿಜಾಪುರ ಜಿಲ್ಲೆ ಐತಿಹಾಸಿಕ ಸ್ಥಳವನ್ನು ಹೊಂದಿದಂತಹ ಜಿಲ್ಲೆ. ಗೋಳಗುಂಬಜ್, ಪಟ್ಟದ ಕಲ್ಲು, ಐಹೊಳೆ ಅಲ್ಲಿ ಇರುವಂತಹ ಪ್ರವಾಸೋದ್ಯಮದ ಸಲುವಾಗಿ ಹೆಚ್ಚಿನ ಹಣಕಾಸಿನ ನೆರವನ್ನು ಕೊಟ್ಟರೆ ಸಾಕಷ್ಟು ಸರ್ಕಾರಕ್ಕೂ ಆದಾಯ ಬರುತ್ತದೆ. ಪ್ರವಾಸಿಗರಿಗೂ ಸೌಕರ್ಯ ಸಿಗುತ್ತದೆ ಎಂದು ಹೇಳುತ್ತೇನೆ. 14ನೇ ಶತಮಾನದಲ್ಲಿ ಅದಿಲ್‌ಷಾ ಅವರು ಬಿಜಾಪುರ ತಾಲ್ಲೂಕಿನ ಮುಂಗಾಪುರ ಗ್ರಾಮದಲ್ಲಿ ಒಂದು ಕೆರೆ ಕಟ್ಟಿಸಿದರು. ಆ ಕಾಲದಲ್ಲಿ 3,000 ಎಕರೆಯಲ್ಲಿ 12 ತಿಂಗಳು ಭತ್ತ ಬೆಳೆಯುತ್ತಿದ್ದರು. ಇಲ್ಲಿಯ ಭತ್ತ ಡೆಲ್ಲಿಯವರೆಗೂ ಹೋಗುತ್ತಿತ್ತು. ಇವತ್ತು ಅದು ಪೂರ್ತಿಯಾಗಿ ನೀರು ನಿಲ್ಲದೆ ಇರುವಂತಹ ಪರಿಸ್ಥಿತಿಯಾಗಿದೆ. ಒಮ್ಮೆ ಕೆರೆ ತುಂಬಿದರೆ ಸುತ್ತಮುತ್ತಲೂ 15 ಕಿಲೋಮೀಟರ್ ರೇಡಿಯಸ್‌ನಲ್ಲಿ 20 ಸಾವಿರ ಎಕರೆ ನೀರಾವರಿಯಾಗುತ್ತದೆ. ಅದಕ್ಕೆ 2-3 ಕೋಟಿ ರೂಪಾಯಿ ಅಂದಾಜು ವೆಚ್ಚ ಖರ್ಚು ಮಾಡಿದರೆ 3,000 ಎಕರೆ ನೀರಾವರಿಯಾಗುವುದಲ್ಲದೆ 20 ಸಾವಿರ ಎಕರೆಯವರೆಗೂ ಭನಿಫಿಟ್ ಆಗುತ್ತದೆ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ (ಸೋಮವಾರ ಪೇಟೆ) : ಮಾನ್ಯ ಅಧ್ಯಕ್ಷರೆ, ನಾನು ಬಜೆಟ್ ಭಾಷಣದಲ್ಲಿ ಕೊಡಗಿನ ಅಭಿವೃದ್ಧಿ ಕಾರ್ಯ ಕುಂಠಿತಗೊಂಡಿದೆ, ಅದಕ್ಕೆ ಕೊಡಗು ಪ್ರತ್ಯೇಕ ಜಿಲ್ಲೆ ಬೇಕೆಂದು ಕೂಗು ಕೇಳುತ್ತಿದೆ, ಅದಕ್ಕೋಸ್ಕರ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ಹಾಕಿದೆ. ಆದರೆ ಇವತ್ತು ಏನೋ ಕೊಡಗಿನಲ್ಲಿರುವಂತಹ ಕಾಫಿ, ಏಲಕ್ಕಿ, ಇರಬಹುದು, ಇದಕ್ಕೆ ಮಾತ್ರ ತೆರಿಗೆ ಇದೆ. ಆ ತೆರಿಗೆಯನ್ನಾದರೂ ಬಿಟ್ಟು ಕೊಡಿ ಎಂದು ಕಳಿದೆ. ಅದೂ ಕೂಡ ಕೊಡಲಿಲ್ಲ. ಅದು ಬಿಟ್ಟುಕೊಟ್ಟರೆ 45 ಕೋಟಿ ರೂಪಾಯಿ ಬರುತ್ತದೆ. ಆ ನಿಟ್ಟಿನಲ್ಲಿ 10 ಕೋಟಿ ರೂಪಾಯಿಯಾದರೂ ಕೊಡಗು ಅಭಿವೃದ್ಧಿಗೆ ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಚುನಾವಣೆ ಘೋಷಣಾ ಪತ್ರದಲ್ಲಿ ವೃತ್ತಿ ತೆರಿಗೆಯನ್ನು ನಾವು ತೆಗೆದು ಹಾಕುತ್ತೇವೆಂದು ಹೇಳಿದ್ದಾರೆ. ಕೊನೆಪಕ್ಷ ಆ ವೃತ್ತಿ ತೆರಿಗೆಯನ್ನು ವಿನಾಯಿತಿಯನ್ನು 6,000 ರೂಪಾಯಿಗಳಿಗೆ ಏರಿಸಬೇಕೆಂದು ಕೇಳಿಕೊಂಡು, ಬೆಂಗಳೂರು ನಗರಕ್ಕೆ ಇಲ್ಲಿ ಮಾನ್ಯ ಅನಂತನಾಗ್‌ರವರು ಇದ್ದಾರೆ. ನಾವು ಏನೂ ಕೇಳಿದರೂ ಕೂಡ ಹಣವಿಲ್ಲ ಎಂದು ಹೇಳುತ್ತಾರೆ. 75 ಕೋಟಿ ರೂಪಾಯಿ ರೋಡ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿರುವ ಕಡೆ ಒಂದು ಪರ್ಸೆಂಟ್ ಕೊಟ್ಟರೂ ಅದು 75 ಲಕ್ಷ ರೂಪಾಯಿ ಆಗುತ್ತದೆ. ಇವತ್ತು ನೂರು ವಾರ್ಡ್‌ಗಳಾಗಿವೆ ಅದಕ್ಕೋಸ್ಕರ ಬೆಂಗಳೂರು ನಗರಕ್ಕೆ ರೋಡ್ ಅಭಿವೃದ್ಧಿಗಾಗಿ ಇನ್ನೂ ಹೆಚ್ಚಿನ ಹಣವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಹೆಚ್. ಬಸವರಾಜ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೇ, ಬಯಲು ಸೀಮೆಯ ಕಾಮದೇನುವಾದ ತುಂಗಾ ತಿರುವಿನ ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲ. ಆ ಒಂದು ತುಂಗಾ ತಿರುವನ್ನು ಬಜೆಟ್‌ನಲ್ಲಿ ಸೇರಿಸಿದರೆ ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ, ತರೀಕೆರೆ ಮೊಳಕಾಲ್ಮೂರು ಇವುಗಳಿಗೆ ಬಹಳಷ್ಟು ಅನುಕೂಲವಾಗುತ್ತದೆ. ಆ ಬಗ್ಗೆ ಕೂಡ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ (ಕೊಪ್ಪಳ) : ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಡ್ಯಾಂನ ಅಂಗವಾಗಿ ಈಗಾಗಲೇ ಅಲ್ಲಂ ವೀರಭದ್ರಪ್ಪನವರೂ ಕೂಡ 20 ಟಿಎಂಸಿ ನೀರು ಶೇಖರಣ ಆಗುವಂತಹ ಕಡೆಯಲ್ಲಿ ಸಿಲ್ಟ್‌ನಿಂದ ಕಡಿಮೆ ಆಗುತ್ತಿರುವುದನ್ನು ಏನು ಹೇಳಿದರು, ಅದಕ್ಕೆ ಬೆಂಬಲಿಸುತ್ತಾ, ಕೆಳಗಡೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡುವುದು ಬಹಳ ಸೂಕ್ತ ಎಂದು ನನ್ನ ಅಭಿಪ್ರಾಯವನ್ನು ತಿಳಿಸುತ್ತೇನೆ. ಇವತ್ತು ತುಂಗಭದ್ರಾ ಡ್ಯಾಂನಿಂದ ನೀರನ್ನು

ಫ್ಯಾಕ್ಟರಿಗಳಿಗೆ ನಾವು ಕೊಡುತ್ತಿದ್ದೇವೆ. ಜಿಂದಾಲ್, ಕಲ್ಯಾಣಿ, ಕಿರ್ಲೋಸ್ಕರ್ ಈ ಮೂರು ಫ್ಯಾಕ್ಟರಿಗಳಿಗೆ ಮತ್ತು ಅನೇಕ ಫ್ಯಾಕ್ಟರಿಗಳಿಗೆ ನೀರು ಕೊಟ್ಟರೆ ಅಲ್ಲಿ ಲೋಕಲ್‌ನಲ್ಲಿ ಇರತಕ್ಕಂಥ ಜಮೀನಿಗೆ ನೀರಿನ ಕೊರತೆಯಾಗುತ್ತದೆ ಎನ್ನುವ ಕಾರಣದಿಂದ ಕೆಳಗಡೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡುವುದಕ್ಕೆ ಫ್ಯಾಕ್ಟರಿಯವರಿಗೆ ಸರ್ಕಾರ ಆದೇಶ ಕೊಡಬೇಕು ಎಂದು ಕೇಳುತ್ತೇನೆ. ಅದರ ಜೊತೆಗೆ ಇವತ್ತು ಹೊಸ ಜಿಲ್ಲೆಗಳನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳಿಗೆ ವಿಧಾನಪರಿಷತ್ತಿನಲ್ಲಿ ಅವರ ಪ್ರಶ್ನೆ ಇದೆ. He has to go. ಅವರು ಉತ್ತರ ಹೇಳಿ ಹೋಗುತ್ತಾರೆ. ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಎರಡು ಸದನ ಇರುವುದರಿಂದ ಒಟ್ಟಿಗೆ ಕಲಾಪ ನಡೆಯುತ್ತಿರುತ್ತದೆ. ತಾವು ಸಹಕರಿಸಬೇಕು.

ಕರ್ನಾಟಕ ಮಹಾರಾಷ್ಟ್ರ ಗಡಿಗಳಲ್ಲಿರುವ ಹಳ್ಳಿಗಳ ಸಮಸ್ಯೆ ಕುರಿತು.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಉಳಿದೆಲ್ಲಾ ವಿಷಯಗಳ ಬಗ್ಗೆ ಈಗಾಗಲೇ ಹಣಕಾಸಿನ ಮಂತ್ರಿಗಳು ಯೋಜನೆ, ಸರಾಯಿ ಹಾಗೂ ಜಿಲ್ಲೆಗಳ ಪುನರ್ ಮಂಡಣೆ ಬಗ್ಗೆ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದಾರೆ. ಅದರ ಬಗ್ಗೆ ಭಾಷಣ ಮಾಡಿದ್ದಾರೆ. ಅದರ ಬಗ್ಗೆ ನಾನು ಉತ್ತರ ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಮಾನ್ಯ ವಾಟಾಳ್‌ರವರು ಮತ್ತು ಅವರ ಸ್ನೇಹಿತರು ಪ್ರಶ್ನೆಗಡಿ ಸಮಸ್ಯೆ ಬಗ್ಗೆ ಮಾತನಾಡಿದ್ದು, ಅದರ ಬಗ್ಗೆ ಸಂಕ್ಷಿಪ್ತವರದಿ ಕೊಡುತ್ತೇನೆ. ನನಗೆ ಕೇಂದ್ರದ ಗೃಹಮಂತ್ರಿಗಳಾದ ಇಂದ್ರಜಿತ್ ಗುಪ್ತ ಅವರು ಒಂದು ಕಾಗದ ಬರೆದಿದ್ದರು. ಏಕೆಂದರೆ ಬೆಳಗಾಂನಿಂದ ಮೇಯರ್ ಮತ್ತು ಅವರ ಜೊತೆ ನಾಲ್ಕಾರು ಜನ ಮಹಿಳೆಯರು ಹೋಗಿ ದೆಹಲಿಯಲ್ಲಿ ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ಅವರ ಬೇಡಿಕೆ ಏನಿದೆ ಎಂದರೆ ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಸಮಸ್ಯೆಗಳು ಬಗೆಹರಿದಿಲ್ಲ, ಕೇಂದ್ರಸರ್ಕಾರ ಇಲ್ಲಿಯವರೆಗೂ ಯಾವುದೇ ನಿರ್ಣಾಯಕ ಆರ್ಡರ್ ಮಾಡಿಲ್ಲ. ಈಗ ನೀವು ಮಾಡದೇ ಇದ್ದರೆ ನಮಗೆ ಬೆಳಗಾಂನಲ್ಲಿ ಆ ಗಡಿಯಲ್ಲಿ ಇರತಕ್ಕಂಥ ಭಾಷಾ ಅಲ್ಪಸಂಖ್ಯಾತರಿಗೆ, ಅವರು ಕನ್ನಡಿಗರು ಇರಲಿ, ಮರಾಠಿಗರು ಇರಲಿ, ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ, ಆ ಕಡೆ ಮಹಾರಾಷ್ಟ್ರ ಸರ್ಕಾರದವರು ನೋಡಿಕೊಳ್ಳುತ್ತಿಲ್ಲ, ಕರ್ನಾಟಕ ಸರ್ಕಾರ ಸಹ ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಇದನ್ನು ಬೇಗ ಬಗೆಹರಿಸಬೇಕು ಎಂದು ಬೆಳಗಾಂನಿಂದ ಮಹಿಳೆಯರ ತಂಡ ಮೇಯರ್ ಜೊತೆ ಹೋಗಿ ಸತ್ಯಾಗ್ರಹ ಮಾಡಿದಾಗ ಇಂದ್ರಜಿತ್ ಗುಪ್ತಾ ಅವರು ನನಗೆ ಪತ್ರ ಬರೆದು, ಈ

ರೀತಿಯ ಒಂದು ಸಮಸ್ಯೆ ಇದೆ ಎಂದು ತಿಳಿಸಿದರು. ಹಿಂದೆ ಇದೇ ತರಹದ ಸಮಸ್ಯೆ ಚವ್ಹಾಣರವರು ಗೃಹಮಂತ್ರಿಯಾಗಿದ್ದಾಗ, ಪತ್ರಬರೆದಾಗ, ಆಗ ಮುಖ್ಯಮಂತ್ರಿಯಾಗಿದ್ದಂತಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಆಗಿನ ಮಹಾರಾಷ್ಟ್ರದ ಮುಖ್ಯಮಂತ್ರಿ ಅವರೊಡನೆ ಮಾತುಕತೆ ನಡೆಸಿ ಮಹಾಜನ್ ಕಮಿಷನ್ ವರದಿಯನ್ನು ಯಾರೂ ಡಿಸ್ಪ್ಯೂಟ್ ಮಾಡದೆ ಇದ್ದರೂ ಕೂಡ ಮಹಾಜನ್ ಕಮಿಷನ್ ವರದಿಯ ಚೌಕಟ್ಟಿನೊಳಗೆ ಈ ಬಾರ್ಡರ್ ಏರಿಯಾದಲ್ಲಿ ಏನು ಕಾರ್ಯಕ್ರಮಗಳನ್ನು ಎರಡೂ ಸರ್ಕಾರಗಳು ಮಾಡಬೇಕು ಎನ್ನುವುದನ್ನು ನಾವು ಮಾತನಾಡದೇ ಇದ್ದರೆ ಇದು ಬಗೆಹರಿಯುವುದೇ ಇಲ್ಲ. ಕರ್ನಾಟಕದ ಹಳ್ಳಿಗಳಲ್ಲಿ ಮಾರಾಠಿ ಸ್ಕೂಲ್‌ಗಳು ನಡೆಯುತ್ತಿವೆ. ಕನ್ನಡ ಸ್ಕೂಲ್‌ಗಳು ಇಲ್ಲ. ಹೀಗೆ ಅನೇಕ ಅಸಂಗತಗಳು. ಪೊಲೀಸ್ ಸ್ಟೇಷನ್ ಸರಿಯಿಲ್ಲ. ರೋಡ್ ಸರಿಯಿಲ್ಲ, ಶಾಲೆಗಳು ಸರಿಯಿಲ್ಲ, ಎಂದು. ಇದನ್ನು ಮಾನ್ಯ ಪಾಟೀಲ್ ಪುಟ್ಟಪ್ಪನವರು ನನ್ನ ಹತ್ತಿರ ಮಾತನಾಡಿದಾಗ ಅವರು ಏನು ಹೇಳಿದರು, ಈಗ ಕರ್ನಾಟಕದ ಬಗ್ಗೆ ಮಹಾಜನ್ ಕಮಿಷನ್ ವರದಿ ಅಂತಿಮ ಎನ್ನುವುದು ನಮ್ಮ ತೀರ್ಮಾನವಾದರೂ ಬಾರ್ಡರ್ ವಿಲೇಜಸ್‌ನಲ್ಲಿ ಏನು ಮಾಡಬೇಕು ಅದನ್ನು ಮಾಡದೇ ಸರ್ಕಾರ ಮಾಡಿಲ್ಲ ಎಂದು ನಾವೂ ಸುಮ್ಮನೆ ಕುಳಿತುಕೊಳ್ಳುವುದು. ಅವರೂ ಸೆಗ್ರೆಟ್ ಮಾಡುವುದು, ಈ ರೀತಿಯಾಗಬಾರದು ಎಂದು ಆದುದರಿಂದ ಲೆಂಗ್ವಿಸ್ಟಿಕ್ ಮೈನಾರಿಟೀಸ್ ಇರತಕ್ಕಂಥ ಬಾರ್ಡರ್ ವಿಲೇಜ್‌ನಲ್ಲಿ ಏನು ಮಾಡಬೇಕು ಎನ್ನುವುದನ್ನು ಕೊನೇಪಕ್ಷ ಕುಳಿತು ಮಾತನಾಡಬೇಕು. ಗಡಿ ಬಗ್ಗೆ ಏನೂ ಇಲ್ಲ. ಅದನ್ನು ತೆಗೆದುಬಿಡಿ. ಇನೊಂದು ಮಾತನ್ನು ಪಾಟೀಲ್ ಪುಟ್ಟಪ್ಪನವರು ಹೇಳಿದರು, 248 ಹಳ್ಳಿ ನಮಗೆ ಬರುತ್ತದೆ. 240 ಹಳ್ಳಿ ಅವರಿಗೆ ಹೋಗುತ್ತದೆ. ಆದರೆ ಅವರಿಗೆ ಹೋಗತಕ್ಕಂಥ ಹಳ್ಳಿಗಳು ತೆಗೆದುಕೊಳ್ಳುವುದಕ್ಕೆ ಅವರು ತಯಾರಿದ್ದಾರೆ. ಆದರೆ ನಮಗೆ ಬರಬೇಕಾಗದಂತಹ ಹಳ್ಳಿಗಳನ್ನು ಕೊಡುವುದಕ್ಕೆ ಅವರು ತಯಾರಾಗಿಲ್ಲ ಅದರ ಬಗ್ಗೆ ನೀವು ಹುಷಾರಾಗಿ ನೋಡಿಕೊಳ್ಳಬೇಕು ಎಂದು ಅದಕ್ಕೆ ನಾನು ಹೇಳಿದೆ, ಇದು ನಿಜ ಬಹಳ ಒಳ್ಳೆಯ ಮಾತು ಎಂದು. ಕರ್ನಾಟಕಕ್ಕೆ ಬರಬೇಕು ಎಂದು ಇರತಕ್ಕಂಥ ಮಹಾಜನ್ ವರದಿಯ ಪ್ರಕಾರ ಇರುವ ಹಳ್ಳಿಗಳು ಕರ್ನಾಟಕಕ್ಕೆ ಬರುವುದಕ್ಕೆ ತಯಾರು ಇಲ್ಲದೆ ಇರುವ ಹಾಗೆ ಅವರು ಮಾಡಿದ್ದಾರೆ. ನಮ್ಮಿಂದ ಅಲ್ಲಿಗೆ ಹೋಗತಕ್ಕಂಥವರು ಬಿಟ್ಟರೆ ಸಾಕು ನಾವು ಹೋಗುತ್ತೇವೆ ಎನ್ನುವ ತರಹ ಇದೆ ಅದಕ್ಕಾಗಿ ನಾನು ಯಾವುದೇ ಸರ್ಕಾರದ ಮೇಲೆ ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಇಂದ್ರಜಿತ್ ಗುಪ್ತಾ ಅವರ ಕಾಗದ ಬಂದ ತಕ್ಷಣ ನಾನೇ ಅವರಿಗೆ ಒಂದು ಪತ್ರ ಬರೆದೆ. ಅವರು ನನಗೂ ಒಂದು ಪತ್ರ ಬರೆದು, ಮನೋಹರ್ ಜೋಶಿ ಅವರಿಗೂ ಒಂದು ಪತ್ರ ಬರೆದರು. ಅದರ ಆಧಾರದ ಮೇಲೆ ಮನೋಹರ್

ಜೋಶಿ ಅವರು ನನಗೆ ಒಂದು ಪತ್ರ ಬರೆದರು. ಈಗ ಕೇಂದ್ರದ ಗೃಹಮಂತ್ರಿಗಳು ಈ ರೀತಿ ಒಂದು ಪತ್ರ ಬರೆದಿದ್ದಾರೆ. ಮನೋಹರ್ ಜೋಶಿ ಅರವ ಪತ್ರ ಬಹಳ ದೊಡ್ಡದಿದೆ. ಅವರು ಏನು ಹೇಳುತ್ತಾರೆಂದರೆ

"I would therefore again request you for a suitable time and date for a meeting. ಅದಕ್ಕೆ ಏನು ಹೇಳಿದ್ದಾರೆಂದರೆ ಹಿಂದಿನ ಗೃಹಮಂತ್ರಿಗಳ ಶ್ರೀಮಾನ್ ರಾಮಕೃಷ್ಣ ಹೆಗಡೆ ಅವರು, ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಪತ್ರ ವ್ಯವಹಾರ ಮಾಡಿರುವುದನ್ನು ಉಲ್ಲೇಖ ಮಾಡಿ ನಿಮಗೆ ಅನುಕೂಲವಾದಂತಹ ಒಂದು ದಿನವನ್ನು ತಿಳಿಸಿ. ಬಾರ್ಡರ್ ವಿಲೇಜ್‌ನಲ್ಲಿ ಲಿಂಗ್ವಿಸ್ಟಿಕ್ ಮೈನಾರಿಟೀಸ್ ಬಗ್ಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ಕೇಳಿದರು. ಅದಕ್ಕೆ ನಾನು ಒಂದು ಚಿಕ್ಕದಾದ ಉತ್ತರ ಬರೆದೆ.

Dear Sri Joshiji,

I received your letter on November regarding Border dispute between our two States. It is unfortunate that the mayor of Belgaum and a few women have resorted to fast to get this issue settled. In this connection, Sri Inderjit Guptaji, Union Minister for Home Affairs had written to me. I enclose a copy of my letter to him. We agree that this long pending issue should be settled without any further delay. In my view, the only way it can be settled is the full implementation of the Mahajan Commission Report. ಅಂತ ಹೇಳಿ This is all what I have written to him.

Afterwards, yesterday and today also Mr. Joshi has made a statement on the floor of the House in Mumbai that I have agreed to meet. This is the basis on which he has said it. We agree that this is long pending issue should be settled without any further delay. ಎಂದು ಹೇಳಿದೆನಲ್ಲಾ ಇದನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಇಡೀ ಸದನಕ್ಕೆ ಗೊತ್ತಿರುವ ಹಾಗೆ ಇದು ಬಹಳ ವರ್ಷದ ಹಳೇ ಸಮಸ್ಯೆ. ಅಲ್ಲಿ ನಾನು ಹೊಸದಾಗಿ ಮಾತನಾಡುವುದು ಏನೂ ಇಲ್ಲ. ಆದರೆ ಒಂದು ಮಾತ್ರ ನಿಜ. ಪಾಟೀಲ್ ಪುಟ್ಟಪ್ಪನವರು

ಹೇಳಿದರು, ಈ ಸಮಸ್ಯೆ ಬಗ್ಗೆ ಅರಿವಿರತಕ್ಕವರು ಹೇಳಿದರು. ಆ ಬಾರ್ಡರ್ ವಿಲೇಜಸ್ ಬಗ್ಗೆ ನೀವು ಏನೂ ಮಾಡದೆ ಅವರೂ ಏನು ಮಾಡದೆ ಕುಳಿತರೆ ಬಹಳ ಅನ್ಯಾಯವಾಗುತ್ತದೆ. ಎಂದು ಹೇಳಿದ್ದರಿಂದ ಅದಕ್ಕೆ ಒಂದು ಯೋಚನೆ ಮಾಡಿದೆ. ವಾಟಾಳ್ ರವರೇ ನೀವೆಲ್ಲರೂ ಒಪ್ಪಿದರೆ. ಈ ಬಾರ್ಡರ್ ವಿಲೇಜಸ್ ಬಗ್ಗೆ ನಾವು ಆಡ್ಮಿನಿಸ್ಟ್ರೇಟಿವ್, ಎಜ್ಯುಕೇಷನಲ್, ಇನ್‌ಫ್ರಾಸ್ಟ್ರಕ್ಚರ್, ಟ್ರಾನ್ಸ್‌ಪೋರ್ಟ್ ಕಮ್ಯುನಿಕೇಷನ್ ಅಥವಾ ಪೋಲೀಸ್ ಪ್ರೊಟೆಕ್ಷನ್ ಇವುಗಳನ್ನು ಹೇಗೆ, ಈಗ ಏನಾಗಿದೆ ಕೆಲವು ಗ್ರಾಮಗಳು ನಮಗೆ ಬರಬೇಕಾದವು ಬಂದಿಲ್ಲ ನಮಗೆ ಬಂದಿಲ್ಲ, ಅವರ ಕೈಯಲ್ಲಿ ಕೆಲವು ಗ್ರಾಮಗಳು ಅವರಿಗೆ ಹೋಗಬೇಕು ಎಂದು ಮಹಾಜನ ಕಮಿಷನ್‌ನಲ್ಲಿ ಹೇಳಿರುವಂತವು ನಮ್ಮ ಕಡೆ ಹಾಗಾಗಿ ಇವು ಸವತಿ ಮಕ್ಕಳಾಗಿ ಅವರು ಅಲ್ಲಿಯೂ ನೋಡುವಂತಿಲ್ಲ, ನಾವು ಇಲ್ಲಿಯೂ ನೋಡುವಂತಿಲ್ಲ. ಅದಕ್ಕೆ ಖರ್ಗೆಯವರೇ ಇದನ್ನು ಹೀಗೆ ಬಿಟ್ಟರೆ ಆಗುವುದಿಲ್ಲ, ಬಿಡಕೂಡದು. ಅಲ್ಲಿರುವವರು ಕನ್ನಡಿಗರೇ, ಈಗ ನಾವು ಏನು ಎಂದು ಕೇಳುವುದಕ್ಕೂ ಅವಕಾಶ ಇಲ್ಲ ಎಂದರೆ, ಏನೋ ಆಕಸ್ಮಾತ್ ನನ್ನ ಮಗು ನಿಮ್ಮ ಮನೆಗೆ ಸೇರಿತು ಎಂದರೆ ನಮ್ಮದಪ್ಪ ಇದು ಮಗು, ನಮ್ಮ ಮನೆಗೆ ವಾಪಸ್ಸು ಕಳುಹಿಸಿಕೊಡು ಎಂದು ಹೇಳುವುದಕ್ಕೂ ನಾನು ನಿಮ್ಮ ಹತ್ತಿರ ಬರುವುದಿಲ್ಲ, ಬೇಕಾದರೆ ನೀನು ಕಳುಹಿಸಿಕೊಡು ಬೇಡ ಎಂದರೆಬಿಡು, ನಿನ್ನದು ಒಂದು ನನ್ನ ಹತ್ತಿರ ಇದೆ. ನಾನು ಬೇಕಾದರೆ ಕಳುಹಿಸುತ್ತೇನೆ ಇಲ್ಲ ಎಂದರೆ ಬಿಡುತ್ತೇನೆ, ಎಂದರೆ ಹೇಗೆ? Please apply your mind. ಅಂದರೆ ಆ ಗ್ರಾಮಗಳಿಗೆ ಏನು ಮಾಡಬೇಕು ಎನ್ನುವ ಬಗ್ಗೆಯಾದರೂ ನಾವು ಮಾತನಾಡಬೇಕಲ್ಲಾ. ಮಾತನಾಡದಿದ್ದರೆ ಆಗುತ್ತದೆಯೇ? ಕೇಂದ್ರದ ಗೃಹಮಂತ್ರಿಗಳು ಇದಕ್ಕೆ ಫೋನ್ ಮಾಡಿ ಹೇಳಿದರು. ನೀವು ಕೊನೆಪಕ್ಷ ಆ ಗ್ರಾಮಗಳಿಗೆ ಏನು ವ್ಯವಸ್ಥೆ ಮಾಡಬೇಕು ಎನ್ನುವುದರ ಬಗ್ಗೆಯಾದರೂ ಚರ್ಚೆ ಮಾಡಿ ಎಂದು ಅದಕ್ಕೆ ನಾನು ಮನೋಹರ ಜೋಷಿಯವರಿಗೆ ಮತ್ತು ಇಂದ್ರಜಿತ್ ಗುಪ್ತಾರವರಿಗೆ ಬರೆದಂಥ ಪತ್ರ ಬಿಟ್ಟರೆ, ಬೇರೆ ಯಾವುದೂ ಇಲ್ಲ ಅವರು ನಿನ್ನೆ ಅವರ ಸದನದಲ್ಲಿ ಏಕೆ ಹೇಳಿದ್ದಾರೆ ಎಂದರೆ ಈ ನನ್ನ ಪತ್ರದ ಆಧಾರದ ಮೇಲೆಯೇ ಹೇಳಿದ್ದಾರೆ. ಅವರು ಏನೋ ಆಧಾರರಹಿತವಾಗಿ ಹೇಳಿಬಿಟ್ಟಿದ್ದಾರೆ ಎಂದು ಅಲ್ಲ. We agree that we should find some solution to this problem as quickly as possible. ಎನ್ನುವುದನ್ನು ಹೇಳಿದ್ದೇನೆ ಅದಕ್ಕೆ ನನಗೆ ಈ ಸದನದ ಕಾನ್‌ಫಿಡೆನ್ಸ್ ಬಿಟ್ಟು ನನಗೆ ಇನ್ನೇನು ಆಗಬೇಕಾಗಿದೆ? ಆದರೆ ಈ ಗ್ರಾಮಗಳ ಬಗ್ಗೆ, ಅಲ್ಲಿರತಕ್ಕ ಸ್ಥಿತಿಗತಿ, ಲಾ ಅಂಡ್ ಆರ್ಡರ್, Even, education, roads, drinking water ಇವುಗಳ ಬಗ್ಗೆ ನಾನು ಚರ್ಚೆ ಮಾಡಿ ಬಗೆಹರಿಸದೆ ಹೋದರೆ ನಮ್ಮವರನ್ನೇ ನಾವು, ಪಾಟೀಲ್‌ಪುಟ್ಟಪ್ಪನವರು ಹೇಳಿದ ಹಾಗೆ

ನಿಜವಾಗುತ್ತದೆ. ನಮ್ಮವರು ನಮ್ಮ ಕಡೆ ಬರುವುದಿಲ್ಲ, ಇಲ್ಲಿರುವವರು ನಮ್ಮ ಹತ್ತಿರ ಉಳಿಯುವುದಿಲ್ಲ. ಇದು ಇರುವಂಥ ಪರಿಸ್ಥಿತಿ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ನಮ್ಮ ಭಾಗಕ್ಕೆ ಇದ್ದಂಥ ಜನರ ವಿಶ್ವಾಸವನ್ನು ಸಂಪಾದನೆ ಮಾಡಿಕೊಳ್ಳಬೇಕು. ಅದು ಬಹಳ ಮುಖ್ಯವಾದಂಥ ಕೆಲಸ. ಯಾವುದೇ ಕಾರಣದಿಂದ ಆ ಭಾಗದ ಅಭಿವೃದ್ಧಿ ಕುಂಠಿತವಾಗಬಾರದು. ಅದಕ್ಕೆ ಸಲಹೆ ಏನೆಂದರೆ, ಈಗ ಮಾನ್ಯ ಮುಖ್ಯ ಮಂತ್ರಿಗಳು ತೆರೆದ ಮನಸ್ಸಿನಿಂದ ಇದ್ದಾರೆ. ಜನರ ವಿಶ್ವಾಸವನ್ನು ಸಂಪಾದನೆ ಮಾಡುವುದಕ್ಕೋಸ್ಕರ

ಆ ಗ್ರಾಮಗಳಿಗೆ ಅಂದರೆ ಆ ಗಡಿ ಅಂಚಿನಲ್ಲಿರತಕ್ಕಂಥ ನಮ್ಮ ಭಾಗದಲ್ಲಿರತಕ್ಕಂಥ ಗ್ರಾಮಗಳಿಗೆ ಏನೇನು ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೋ ಅದಕ್ಕೆ ಒಂದು ಸಮಿತಿಯನ್ನು

ಶ್ರೀ ಜೆ. ಎಚ್. ಪಟೇಲ್ : ಮಾನ್ಯ ಹಣಕಾಸಿನ ಮಂತ್ರಿಗಳು ಇನ್ನೂ ಉತ್ತರ ಕೊಡುವುದಿದೆ, ನಿಮಗೆ ಸಮಜಾಯಿಷಿ ಕೊಡುವುದಿದೆ. ಈಗ ನನಗೆ ವಿಧಾನಪರಿಷತ್ತಿನಲ್ಲಿ ಪ್ರಶ್ನೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಎಕ್ಸೈಜ್ ಬಗ್ಗೆ ವಿಶೇಷ ಅಧಿವೇಶನ ಕರೆಯುವುದರ ಬಗ್ಗೆ

ಶ್ರೀ ಜೆ. ಎಚ್. ಪಟೇಲ್ : ಕರೆಯುತ್ತೇವೆ, ಒಪ್ಪಿಕೊಂಡಿದ್ದೇನೆ. ವಾಟಾಳ್‌ರವರೇ ಈಗ ಉತ್ತರ ಮುಂದುವರಿಯಲಿ

ಶ್ರೀ ವಾಟಾಳ್ ನಾಗರಾಜ್ : ನಾನು ನೇರವಾಗಿ ಹೇಳಿಬಿಡುತ್ತೇನೆ, ಈಗ ಅವರು ವಿಧಾನ ಪರಿಷತ್ತಿನಲ್ಲಿ ಇವೊತ್ತು ಮಹಾರಾಷ್ಟ್ರ ಕರ್ನಾಟಕ ನಡುವಣ ಗಡಿ ಸಂಬಂಧ ಮಾತುಕತೆಗೆ ಕರೆದಿದ್ದಾರೆ ಎಂದು ಹೇಳಿ ತಮ್ಮ ಕಾರ್ಯದರ್ಶಿಯವರು ನಾನು ಬರುತ್ತೇನೆ ಎಂದು ಹೇಳಿ ಅವರೇ ದೂರವಾಣಿ ಮೂಲಕ ಮಾತನಾಡಿದ್ದಾರೆ ಎಂದು ಹೇಳಿ ನಾನು ತಮಗೆ ಹೇಳುತ್ತಿದ್ದೇನೆ, ಜೋಷಿಯವರು ಮಹಾರಾಷ್ಟ್ರ ಮುಖ್ಯಮಂತ್ರಿಗಳು ನಾವು ಮಹಾಜನ್ ವರದಿಯನ್ನು ತತ್ವ ಒಪ್ಪಿಕೊಂಡಿದ್ದೇರೆ ಎಂದು ಹೇಳಿದರೆ ನೀವು ಮಾತುಕತೆಗೆ ಹೋಗಿ. ಅವರು ಇಲ್ಲ ಎಂದರೆ ಖಂಡಿತ ನೀವು ಹೋಗಕೂಡದು. ಹೋಗುವುದರಿಂದ ತೀವ್ರ ಅಪಾಯ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಮ್ಮ ಲೆಟರ್ ಕ್ಲಿಯರ್ ಇದೆ, ಮಹಾಜನ್ ಆಯೋಗದ ವರದಿಯೇ ಅಂತಿಮ ಎಂಬುದು ಸ್ಪಷ್ಟ ಇದೆ. ಆದ್ದರಿಂದ ನೀವು ಮಾತುಕತೆಗೆ ಹೋಗಬೇಕಾದ ಅಗತ್ಯವೇ ಬರುವುದಿಲ್ಲ. ಅದನ್ನು ಇಂಪ್ಲಿಮೆಂಟ್ ಮಾಡಿದರೆ ಆಯಿತು.

ಶ್ರೀ ಜೆ. ಹೆಚ್. ಪಟೇಲ್ : ಮಾತುಕತೆ ಯಾವುದಕ್ಕೆ The problems of the border villages where the people are suffering.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ತಮಗೆ ಹೇಳುತ್ತೇನೆ, ತಾವು ಇನ್ನೂ ಚಿಂತನೆ ಮಾಡಿ, ಆತುರ ಬೀಳಬೇಡಿ. ಖಂಡಿತ ಮಾತುಕತೆಗೆ ಹೋಗುವುದರಿಂದ ಅಪಾಯ ಇದೆ. ಮಹಾಜನ್‌ವರದಿಯನ್ನು ಅವರು ಒಪ್ಪಿದ್ದಾರೆಯೇ? ಮಹಾಜನ್ ವರದಿಯನ್ನು ಒಪ್ಪಲಿಲ್ಲ ಎಂದರೆ ಮತ್ತೆ ನೀವು ಅದನ್ನು..

ಶ್ರೀ ಜೆ. ಎಚ್. ಪಟೇಲ್ : ಈಗ ಕಾಂಕ್ರೀಟಾಗಿ ಯಾವುದೋ ಒಂದು ಹಳ್ಳಿ ದಯವಿಟ್ಟು ಕೇಳಿ, 240 ಹಳ್ಳಿಗಳು ಮಹಾಜನ ವರದಿ ಪ್ರಕಾರ ಕರ್ನಾಟಕಕ್ಕೆ ಬರಬೇಕಾದಂತವು ಇನ್ನೂ ಮಹಾರಾಷ್ಟ್ರದೊಳಗಿವೆ, ಅವರು ಅವನ್ನು ನೆಗ್ಲೆಕ್ಟ್ ಮಾಡಿದ್ದಾರೆ. ಹೊರನಾಡ ಕನ್ನಡಿಗರ ಬಗ್ಗೆ ಆಗಲೇ ಹೇಳಿದಿರಿ, ಕಾಸಕರಗೂಡಿನವರಿಗೆ ಏನು ಮಾಡೋಣ ನಾವು? ಸೈನ್ಯ ಕಳುಹಿಸೋಣವೇ?

ಶ್ರೀ ವಾಟಾಳ್ ನಾಗರಾಜ್ : ಅದು ಬೇರೆ. ಅದಕ್ಕೆ ತಮಗೆ ಹೇಳುತ್ತಿದ್ದೇನೆ. ಮಹಾಜನ್ ವರದಿಯನ್ನು ಒಪ್ಪಿಕೊಳ್ಳುತ್ತೇವೆ ಎಂದು ಅವರು ನಿಮಗೆ ಹೇಳಲಿ. ಮಹಾಜನ್ ವರದಿಯನ್ನು ಚಾಚೂತಪ್ಪದೆ ಒಪ್ಪಿ ಕಾಸರಗೂಡು ಕೇರಳಕ್ಕೆ ಸೇರಿದ ರೀತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಇದರ ಬಗ್ಗೆ ನಮ್ಮ ತಕರಾರು ಇಲ್ಲ ಎಂದು ಹೇಳಿ ಮಹಾರಾಷ್ಟ್ರ ಮುಖ್ಯಮಂತ್ರಿಗಳು ಹೇಳಿದಾಗ ಯಾವ ಹಳ್ಳಿಗಳಿಗೆ ಸೌಲಭ್ಯವನ್ನು ಕೊಡಬೇಕು ಎನ್ನುವುದು. ಆಗ ನಾವು ಮಾತುಕತೆಗೆ ಹೋಗೋಣ. ಈಗ ತಾವು ಮಾತುಕತೆಗೆ ಹೋದರೆ ಆದರಿಂದ ಅಪಾಯ ಇದೆ. ತಾವು ದಾರಿ ತಪ್ಪುತ್ತೀರಿ ಎಂದು ಹೇಳುವುದಕ್ಕೋಗುವುದಿಲ್ಲ. ಏಕೆಂದರೆ ಇದು ಅತ್ಯಂತ ಗಂಭೀರವಾದ ಪರಿಸ್ಥಿತಿ ಇರುವುದರಿಂದ ತಮಗೆ ಹೇಳುತ್ತಿದ್ದೇನೆ. ದಯಮಾಡಿ ತಾವು ಹೋಗಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, ಸುಮ್ಮನೆ ಅನಾವಶ್ಯಕವಾಗಿ ಕೆದಕುವುದಕ್ಕೆ ಹೋಗಿ ಕನ್ನಡ ಜನ, ಭಾಗದಲ್ಲಿ ಅಷ್ಟು ಹಳ್ಳಿ ಇದ್ದಾವೆ, ಎಂದು ನೀವು ಹೇಳುವುದಕ್ಕೆ ಹೋಗುವುದು. ಕಡೆಗೆ ಇಲ್ಲ ಅದು ನಮಗೆ ಸೇರಬೇಕಾದ ಹಳ್ಳಿ ಈ ಭಾಗಕ್ಕೆ ಇದ್ದಾವೆ ಎಂದು ಅವರು ಹೇಳುವುದು ಹೀಗೆ ಮತ್ತೊಂದು ಹೊಸ ಸಮಸ್ಯೆಯನ್ನು ಕೆದಕುವುದಕ್ಕೆ ಹೋಗ ಬೇಡಿ. ಸುಮ್ಮನೆ ಕೆಲಸಕ್ಕೆ ಬಾರದ ಮಾತು. ಈಗ 30-40 ವರ್ಷ ಆಯಿತು ಇನ್ನೂ ಅದನ್ನೇ ಹೇಳಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಅದಕ್ಕೆ ನಾನು ಹೇಳುವುದು ಸದನ

ಸಮಿತಿಯನ್ನು ಮಾಡಿ ಆ ಗಡಿ ಪ್ರದೇಶದಲ್ಲಿರತಕ್ಕಂಥ ಹಳ್ಳಿಯ ಅಭಿವೃದ್ಧಿ ಬಗ್ಗೆ ಏನೇನು ಕಾಂಕ್ರೀಟಾಗಿ ಮಾಡಬೇಕೋ ಅದನ್ನು ಮಾಡುವ ಸಲುವಾಗಿ ಮಾಡಿ.

ಅಧ್ಯಕ್ಷರು : ತಿಮ್ಮಪ್ಪನವರೇ, ಈಗ ಅವರು ಬೋಂಬಾಯಿಗಾದರೂ ಹೋಗಬೇಕೋ ಬೇಡವೋ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಮಾತುಕತೆಗೆ ಹೋಗುವುದರಿಂದ ಅಪಾಯ ಇದೆ. ತಾವು ಯೋಜನೆ ಮಾಡಿ. ಅದರಲ್ಲೇನು ಅನುಮಾನ ಪಡುವುದಕ್ಕೆ ಹೋಗಬೇಡಿ. ತಾವು ಎಲ್ಲವೂ ಸುಲಭ ಎಂದು ದಯಮಾಡಿ ತಿಳಿದುಕೊಳ್ಳಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಇಲ್ಲ. ಎಲ್ಲರ ಚಿಂತೆ ಏನೆಂದರೆ, ನೀವು ಮಾತುಕತೆ ಪ್ರಾರಂಭ ಮಾಡಿ, ಈ ಅಲಮಟ್ಟಿಯದಕ್ಕೆ ಹೋಗಿ ಹಗ್ಗ ಕೊಟ್ಟು ಕೈಕಟ್ಟಿಸಿ ಕೊಂಡು ಬಂದಿರಲ್ಲಾ ಅದೇರೀತಿಯಾಗಿ ಮಹಾರಾಷ್ಟ್ರದ್ದು ಮತ್ತು ಗಡಿ ಪ್ರದೇಶದ ಸಮಸ್ಯೆ ಸುಮ್ಮನೆ ಉದ್ಭವ ಆಗುವುದು ಬೇಡ. ಸುಮ್ಮನೆ ನೀವು ಇಲ್ಲದೆ ಇರುವುದನ್ನು ಕ್ರಿಯೇಟ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅವರು ಬೊಂಬಾಯಿಗೆ ಹೋಗಲಿ, ನಮ್ಮವರೇ ಪ್ರಧಾನಿಯಾಗಿದ್ದಾರೆ, ಗೃಹಮಂತ್ರಿಗಳಿಗೆ ಹೇಳಿ, ಪಾರ್ಲಿಮೆಂಟ್‌ನಲ್ಲಿ ತೀರ್ಮಾನವಾಗಲಿ ಮಹಾಜನ ವರದಿಯನ್ನು ಪಾರ್ಲಿಮೆಂಟ್‌ನಲ್ಲಿ ಒಪ್ಪಬಹುದು.

ಶ್ರೀ ಜೆ. ಹೆಚ್. ಪಟೇಲ್ : ಲೀಗಲ್ ಮಹಾಜನ್ ವರದಿಯನ್ನು ಕೇಂದ್ರ ಸರ್ಕಾರ ಒಪ್ಪಿದೆಯೇ? ಇದರ ಪ್ರಕಾರ ಈ ಹಳ್ಳಿ, ಆ ಹಳ್ಳಿ ಕರ್ನಾಟಕಕ್ಕೆ, ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಏನಾದರೂ ಆಜ್ಞೆ ಆಗಿದೆಯೇ?

ಶ್ರೀ ವಾಟಾಳ್ ನಾಗರಾಜ್ : ಮಹಾಜನ್ ವರದಿಯಲ್ಲಿ ಕ್ಲಿಯರ್ ಆಗಿ ವಿವರಣೆ ಕೊಟ್ಟಿದ್ದಾರೆ.

ಶ್ರೀ ಜೆ. ಎಚ್. ಪಟೇಲ್ : ಅದು ಬರೀ ಸರ್ಕಾರಿ ಆಜ್ಞೆ ಅಲ್ಲ, It is not a Government order.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಹಾಜನ್ ಆಯೋಗದ ವರದಿ for both the states, binding. 25 ವರ್ಷಗಳಿಂದ ಹಾಗೆಯೇ ಇದೆ. ಈಗ ನಮ್ಮವರೇ ಪ್ರಧಾನಿ ಇದ್ದಾರೆ. ಸಮಸ್ಯೆ ಅವರಿಗೆ ಗೊತ್ತಿದೆ. ಈಗ ಮಾಡಿಸದೆ ಇದ್ದರೆ ಇನ್ನು ಯಾವಾಗ ಮಾಡಿಸುತ್ತೀರಿ? ಇಂತಹ ಸುವರ್ಣಾವಕಾಶ ಯಾವಾಗ ಸಿಗುತ್ತದೆ?

ಶ್ರೀ ಜೆ. ಹೆಚ್. ಪಟೇಲ್ : ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು ಪತ್ರ ಬರೆಯುತ್ತಾರೆ. ಇದರ ಬಗ್ಗೆ ಏನಾದರೂ ಲೀಗಲ್, ಫೈನಲ್, ಆಫೀಷಿಯಲ್.

ಶ್ರೀ ವಾಟಾಳ್ ನಾಗರಾಜ್ : ಹೊಸದು ಏನೂ ಇಲ್ಲ. ಮಹಾಜನ ವರದಿಯನ್ನು ಇಂಪ್ಲಿಮೆಂಟ್ ಮಾಡಿ ಎಂದು ಹೇಳಿ ಇಲ್ಲದಿದ್ದರೆ ಕನ್ನಡನಾಡಿನಲ್ಲಿ ಮತ್ತೆ ಗೊಂದಲವುಂಟಾಗುತ್ತದೆ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಅದಕ್ಕೆ ನೀವೇ ಜವಾಬ್ದಾರರಾಗುತ್ತೀರಿ.

(ಗೊಂದಲ)

ಶ್ರೀ ಜೆ. ಎಚ್. ಪಟೇಲ್ : ನನಗೆ ನೀವು ಏನು ಕೊಡಬೇಡಿ, ನನಗೆ ಏನೂ ಬೇಕಾಗಿಯೂ ಇಲ್ಲ. ನೀವು ಸಮಸ್ಯೆಯನ್ನು ಅರ್ಥ ಮಾಡಿಕೊಂಡರೆ ಸಾಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಸಮಸ್ಯೆಯನ್ನು ಅರ್ಥ ಮಾಡಿಕೊಂಡೇ ಹೇಳುತ್ತಿದ್ದೇವೆ. ನೀವು ಒಂದು ಸಾರಿ ಚರ್ಚೆಯನ್ನು ಪ್ರಾರಂಭ ಮಾಡಿದರೆ ಪದೇಪದೇ ಅದರ ಮೇಲೆ ಚರ್ಚೆ ಮಾಡುತ್ತೀರಿ ಮತ್ತೆ ಕರೆಯುತ್ತಾರೆ, ಸತ್ತು ಹೋಗಿರುವಂಥ ವಿಷಯ ಜೀವಂತವಾಗಬಾರದೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

Sri J. H. Patel : But, what about these villages.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವು ಈಗ ಕೇಂದ್ರದ ಗೃಹಮಂತ್ರಿಯವರಿಗೆ ಪತ್ರ ಬರೆಯಿರಿ. ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಪಾರ್ಲಿಮೆಂಟ್‌ನಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಿ, ನಂತರ ಯಾವ ಹಳ್ಳಿಗಳು ಎಲ್ಲೆಲ್ಲಿ ಹೋಗುತ್ತದೆನ್ನುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳೋಣ.

ಶ್ರೀ ಜೆ. ಎಚ್. ಪಟೇಲ್ : ನಾನು ಕೇಂದ್ರದ ಗೃಹಮಂತ್ರಿಯವರಿಗೆ ಇಷ್ಟೇ ಹೇಳುತ್ತೇನೆ.ಈಗಾಗಲೇ ಸ್ಪಷ್ಟಪಡಿಸಿರುವ ಹಾಗೆ ಮಹಾಜನ ವರದಿ ಅಂತಿಮವಾಗಿದೆ. ಅದರ ಚೌಕಟ್ಟಿನೊಳಗೆ ಬಾರ್ಡರ್ ವಿಲೇಜ್ ಬಗ್ಗೆ ಈ ಎರಡೂ ಸರ್ಕಾರಗಳು ಏನು ಮಾಡಬೇಕೆನ್ನುವುದನ್ನು ನಾನು ಪೂರ್ತಿ ಹೇಳುವುದನ್ನು ಕೇಳಿ. ಈ ಮಹಾಜನ್ ಕಮಿಷನ್ ವರದಿಯನ್ನು ಅವರು ಒಪ್ಪಿಕೊಳ್ಳಬೇಕು. ಅವರು ಒಪ್ಪಿಕೊಂಡ ಮೇಲೆ ಯಾವ ಗ್ರಾಮಗಳು ಅವರಿಗೆ ಹೋಗಬೇಕು. ಯಾವ ಗ್ರಾಮಗಳು ನಮಗೆ ಬರಬೇಕು, ಮತ್ತು ಇವುಗಳ ವೆಲ್‌ಫೇರ್

ಬಗ್ಗೆ ಚಿಂತನೆ ಮಾಡುವುದಕ್ಕೆ ಅವರಿಗೆ ಇಚ್ಚೆ ಇದ್ದರೆ ನಮ್ಮ ಸರ್ಕಾರದಿಂದ ಅಧಿಕಾರಿಗಳನ್ನು ನಾನೂ ಕಳುಹಿಸುತ್ತೇನೆ. ಅವರ ಸರ್ಕಾರದಿಂದ ಅಧಿಕಾರಿಗಳನ್ನು ಅವರೂ ಕಳುಹಿಸಲಿ to look at the welfare of the villages.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಮಹಾಜನ್ ವರದಿಯನ್ನು ಒಪ್ಪಿಕೊಂಡರೆ ಅಷ್ಟೇ ಸಾಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಹೇಳಿದರು. ನೀವು ಎಲ್ಲರೂ ಗಾಭರಿಯಿಂದ ಮಾತನಾಡುತ್ತಿದ್ದುದರಿಂದ ನಿಮಗೆ ಏನೂ ಅರ್ತವಾಗಲಿಲ್ಲ. ಮಹಾಜನ್ ವರದಿಯ ತೀರ್ಪು ಅಂತಿಮ ಅದರ ಆಧಾರದ ಮೇಲೆ ಸೂಚಿಸಿರುವ ಹಳ್ಳಿಗಳು ಯಾವುದು ಯಾರಿಗೆ ಸೇರಬೇಕೆಂದು ಚರ್ಚೆ ಮಾಡುವ ವಿಚಾರಕ್ಕೆ ಕೇಂದ್ರಸರ್ಕಾರ ತಾನೇ ಆರ್ಡರ್ ಮಾಡಬೇಕು.

ಶ್ರೀ ಕಾಗೋಡ್ ತಿಮ್ಮಪ್ಪ : ಅದು ಅಂಡರ್‌ಸ್ಟುಡ್

ಶ್ರೀ ಜೆ. ಹೆಚ್. ಪಟೇಲ್ : ಅದು ಆರ್ಡರ್ ಆಗದೆ ಅಂಡರ್‌ಸ್ಟುಡ್ ಇದು ಬರೀ ಅಂಡರ್ ಸ್ಟುಡ್ ಆಯಿತು.

ಅಧ್ಯಕ್ಷರು : ಈ ವರದಿಯನ್ನು ಆರ್ಡರ್ ರೂಪದಲ್ಲಿ ಜಾರಿಗೆ ತರಬೇಕಾದರೆ ಆ ಅಧಿಕಾರಿ ಕೇಂದ್ರ ಸರ್ಕಾರಕ್ಕಿರುತ್ತದೆ. ಕೇಂದ್ರ ಸರ್ಕಾರದವರು ಹೇಳಿ ಕಳುಹಿಸಿದಾಗ ನಮ್ಮ ವಾದ ನಾವು ಒಂದು ಇಂಚು ಅತ್ತ ಇತ್ತ ಹೋಗುವುದಿಲ್ಲ. ಮಹಾಜನ್ ವರದಿಯ ತೀರ್ಪೇ ಅಂತಿಮವಾಗಿದೆ, ಎನ್ನುವುದನ್ನು ಹೇಳುವುದಕ್ಕಾದರೂ ಹೋಗಬೇಕೋ ಬೇಡವೊ?

ಶ್ರೀ ವಾಟಾಳ್ ನಾಗರಾಜ್ : ಎಲ್ಲಿಗೆ ಹೋಗುತ್ತಾರೆಂಬುದನ್ನು ಹೇಳಿ.

ಶ್ರೀ ಜೆ. ಹೆಚ್. ಪಟೇಲ್ : ದೆಹಲಿಗೆ, ಲಂಡನ್‌ಗೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಮಹಾಜನ್ ವರದಿಯ ಒತ್ತಾಯಕ್ಕಾಗಿ ದೆಹಲಿಗೆ ಹತ್ತು ಸಾರಿ ಬೇಕಾದರೆ ಹೋಗಿ ಬರಲಿ, ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಇವರು ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಜೊತೆಗೆ ಮಾತುಕತೆಗೆ ಹೋಗಬಾರದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಂದ ಸದನ ನಿಯೋಗವನ್ನು ಕರೆದುಕೊಂಡು ಹೋಗಲಿ, ಅಲ್ಲಿ ಪ್ರಧಾನಮಂತ್ರಿಯವರನ್ನು ಹತ್ತಿರ ಇದನ್ನೇ ಇಂಪ್ಲಿಮೆಂಟ್ ಮಾಡಿ ಎಂದು ಒತ್ತಾಯ ಮಾಡಿ, ಆರ್ಡರ್ ಮಾಡಿ ಎಂದು ಹೇಳಿ ಒತ್ತಾಯ ತರೋಣ.

ಶ್ರೀ ಜೆ. ಹೆಚ್. ಪಟೇಲ್: ಸದನದ ನಿಯೋಗವನ್ನು ತೆಗೆದುಕೊಂಡು ಹೋಗುವುದರ ಬಗ್ಗೆ ಮತ್ತು ಮಾನ್ಯ ಪ್ರಧಾನಮಂತ್ರಿಯವರ ಮೇಲೆ ಒತ್ತಡ ಮಾಡುವುದರ ಬಗ್ಗೆ ನನ್ನದು ಏನು ಭಿನ್ನಾಭಿಪ್ರಾಯವಿಲ್ಲ. ಈ ರೀತಿಯಾಗಿ ಈಗಾಗಲೇ ನೂರು ಸಾರಿ ಮಾಡಿಯಾಗಿದೆ.

(ಗೊಂದಲ)

ಒಂದು ಕಗ್ಗಂಟು ಬಿದ್ದರೆ ಎಲ್ಲಿಯಾದರೂ ಒಂದು ಕಡೆ ತೆಗೆದಯಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನೀವು ಎಳೆ ತೆಗೆಯುವುದಕ್ಕೆ ಹೋಗಿ ಪಂಚೆ ಹರಿದು ಹೋಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್ : ಆ ಭಯ ನನಗಿಲ್ಲ, ಅದು ಯಾವ ಕಾಲಕ್ಕೂ ಇಲ್ಲ. ನಾನು ಆಂಧ್ರಪ್ರದೇಶದವರ ಹತ್ತಿರ ಮಾತನಾಡಿದೆ, ತಮಿಳುನಾಡಿನವರ ಜೊತೆಗೆ ಹಾಗೆ ಮಹಾರಾಷ್ಟ್ರದವರ ಹತ್ತಿರವೂ ಮಾತನಾಡಿದೆ. ನನಗೆ ಮಾತನಾಡಿ ದಕ್ಕಿಸಿಕೊಳ್ಳುವಂತಹ ಧೈರ್ಯ, ಶಕ್ತಿ ಎರಡೂ ಇದೆ. ನಾನು ಯಾವತ್ತೂ ಕರ್ನಾಟಕವನ್ನು ಬಿಟ್ಟು ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಧೈರ್ಯವನ್ನು ಮೆಚ್ಚುತ್ತೇನೆ ನೀವು ಮಾತುಕತೆಗೆ ಹೋಗಬಾರದು.

ಶ್ರೀ ಜೆ. ಹೆಚ್. ಪಟೇಲ್ : ಎಲ್ಲಾ ಮೆಚ್ಚಿದ್ದೇವೆ ಎಂದು ಹೇಳುತ್ತಾರೆ. ನೀನು ಬಹಳ ಶೌರ್ಯವಂತ ಆದರೆ ಯುದ್ಧಕ್ಕೆ ಮಾತ್ರ ಹೋಗಬೇಡವೆಂದರೆ, ಇದು ಯಾವುದು?

ಶ್ರೀ ವಾಟಾಳ್ ನಾಗರಾಜ್ : ಅವರು ಮಹಾಜನ ವರದಿಯನ್ನು ಒಪ್ಪಲ್ಲಿ, ಅವರು ಒಪ್ಪದೇ ಹೋದರೆ ನಮ್ಮ ರಾಜ್ಯಕ್ಕೆ ಅಪಾಯವಿದೆ. ನಿಮ್ಮ ಶಕ್ತಿಯ ಬಗ್ಗೆ ನಾನು ಎಂದೂ ಪ್ರಸ್ನೆಯನ್ನು ಮಾಡುವುಲ್ಲ ಮಾಡುವುದಕ್ಕೂ ಹೋಗುವುದಿಲ್ಲ. ಆದರೆ ನಾವು ಈ ಮಹಾಜನ್ ವರದಿಯ ವಿಚಾರದಲ್ಲಿ

ಶ್ರೀ ಜೆ. ಹೆಚ್. ಪಟೇಲ್ : ನಾನು ಏನು ಹೇಳಿದ್ದೇನೆಂದರೆ ಕೇಂದ್ರ ಗೃಹಮಂತ್ರಿಗಳು ಬರೆದಿರುವಂತಹ ಪತ್ರಕ್ಕೆ ಉತ್ತರವನ್ನು ಕೊಟ್ಟು ಈಗಾಗಲೇ ಹೇಳಿದ್ದೇನೆ. ಅಲ್ಲಿಂದ.

ವಾಟಾಳ್ ನಾಗರಾಜ್ : ನಾನು ಧರಣಿ ಮಾಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ : ನೀವು ಧರಣ ಮಾಡುವುದಲ್ಲ, ನನ್ನ ಹತ್ತಿರ ಬನ್ನಿ ನಾನು ಹೇಳುತ್ತೇನೆ. ದಯಮಾಡಿ ಅರ್ಥ ಮಾಡಿಕೊಳ್ಳಿ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ನಿಂತರು)

ಅಧ್ಯಕ್ಷರು : ಅವರು ಎಳೆ ತೆಗೆಯುವುದಕ್ಕೆ ಹೋದರೆ ಪಂಚೆ ಹರಿದು ಹೋಗುತ್ತದೆಂದು ಹೇಳಿದರು, ಅದು ಹರಿಯುವ ಪಂಚೆಯಲ್ಲ.

ಶ್ರೀ ಜೆ. ಹೆಚ್. ಪಟೇಲ್ : ನಾನು ಏನು ಉತ್ತರವನ್ನು ಬರೆದಿದ್ದೇನೆಂದರೆ ನಿನ್ನೆ ಮಾನ್ಯ ಮನೋಹರ ಜೋಷಿಯವರು ಅವರ ಸದನದಲ್ಲಿ ಉತ್ತರವನ್ನು ಹೇಳುವಾಗ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರು ಕರ್ನಾಟಕ ರಾಜ್ಯದ ಗಡಿ ಸಮಸ್ಯೆಯ ಬಗ್ಗೆ ಮಾತನಾಡುವುದಕ್ಕೆ ಬರುತ್ತಾರೆಂದು ಹೇಳಿದ್ದಾರೆ. ಅದು ಯಾವ ಆದಾರದ ಮೇಲೆ ಹೇಳಿದ್ದಾರೆಂದರೆ ಅವರು ಹೇಳುವುದೇ ಸುಳ್ಳು ಎಂದು ಹೇಳಬಾರದು, ಜವಾಬ್ದಾರಿಯಿಂದ ಹೇಳುತ್ತಿದ್ದಾರೆ, ಅವರು ಏನು ಬರೆದಿದ್ದರು, ಮಹಾಜನ ಕಮಿಷನ್ ವರದಿಯನ್ನು ಒಪ್ಪುತ್ತಾರೋ ಬಿಡುತ್ತಾರೋ ಎಂದು ಅಲ್ಲ. ಅಲ್ಲಿ. ಬಾರ್ಡರ್‌ನಲ್ಲಿರುವಂತಹ ವಿಲೇಜ್‌ಗಳ ಪ್ರಾಬ್ಲಂಗಳು ಏನಿವೆ, ಅದಕ್ಕೆ ನಾನು ಗೃಹಮಂತ್ರಿಯವರಿಗೆ ಏನು ಪತ್ರ ಬರೆಯುತ್ತೇನೆಂದರೆ ಈಗ ಗ್ರಾಮಗಳನ್ನು ಗುರುತಿಸಿ ಮಹಾಜನ್ ವರದಿಯನ್ನು ಅವರು ಒಪ್ಪಿಕೊಂಡರೆ ಯಾವ ಗ್ರಾಮಗಳ ಬಗ್ಗೆ ಅವರು ಚರ್ಚೆ ಮಾಡಬೇಕೆಂದು ಕರೆಯುತ್ತಾರೋ ಅದಕ್ಕೆ ನಾನು ಹೋಗುತ್ತೇನೆ. ಅದ್ಕಕೂ ಬರುವುದಿಲ್ಲವೆಂದರೆ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಮಹಾಜನ್‌ವರದಿಯನ್ನು ಒಪ್ಪಿಕೊಂಡ ಮೇಲೆ ತಾನೇ ಈ ಪ್ರಶ್ನೆ ಬರುತ್ತದೆ. ಆ ರಿಪೋರ್ಟ್ ಒಪ್ಪಿಕೊಂಡು ಮೇಲೆ ತಾನೇ ಈ ಪ್ರಶ್ನೆ ಬರುತ್ತದೆ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಜವಾಬ್ದಾರಿ ಇರುವಂಥದ್ದು ಕೇಂದ್ರ ಸರ್ಕಾರದ ಮೇಲೆ ಮಹಾಜನ ಕಮಿಷನ್ ವರದಿಯ ಬಗ್ಗೆ ಇವತ್ತಿನವರೆಗೆ ಲಿಖಿತವಾದ ಯಾವುದೇ ಒಂದು ಕಾನೂನು ಪ್ರಕಾರ ಆರ್ಡರ್ ಆಗಿಲ್ಲ. ಅದು ವರದಿಯಷ್ಟೆ ಅದು ಅವಾರ್ಡ್ ಅಲ್ಲವೆನ್ನುವುದು ಮಹಾರಾಷ್ಟ್ರದ ಕೇಸ್ ಇದೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಜೆ. ಹೆಚ್. ಪಟೇಲ್ : ನಾನು ಹೋಗುವಾಗ ಎಲ್ಲರ ಅಭಿಪ್ರಾಯವನ್ನು ಕೇಳಿಕೊಂಡು ಹೋಗುತ್ತೇನೆ. ನಾನು ಕೇಳದೆ ಹೋಗುವುದಿಲ್ಲ.

ಸಾರಾಯಿ ನಿಕ್ಷೇಧದ ಬಗ್ಗೆ ವಿಶೇಷ ಅಧಿವೇಶನ

ಶ್ರೀ ಬಿ. ಎಸ್. ಯಡಿಯೂರಪ್ಪ : ಸಾರಾಯಿ ನಿಷೇಧದ ಬಗ್ಗೆ ಚರ್ಚೆ ಮಾಡಲು ತಾವು ಯಾವಾಗ ವಿಶೇಷ ಅಧಿವೇಶನವನ್ನು ಕರೆಯುತ್ತೀರಾ? ಮುಂದಿನ ಅಧಿವೇಶನದ ಮೊದಲು ಕರೆಯಬೇಕು.

ಶ್ರೀ ಜೆ. ಹೆಚ್. ಪಟೇಲ್: ಈ ವಿಚಾರವನ್ನು ಮಾನ್ಯ ಸಭಾಧ್ಯಕ್ಷರ ಜೊತೆಯಲ್ಲಿ ಮಾತನಾಡಿ ಮುಂದಿನ ಅಧಿವೇಶನಕ್ಕೆ ಮುಂಚೆ ಎರಡು ಅಥವಾ ಮೂರು ವಾರಗಳ ಮುಂಚೆ ಕರೆಯುತ್ತೇವೆ. ಆಗ ವಿಷಯ ಸಾರಾಯಿ ಬಗ್ಗೆ ಮಾತ್ರ ಇರಬೇಕು. ಆವತ್ತೂ ನೀವು ಧರಣೆಗಿರಣೆ ಎಂದು ಕುಳಿತರೆ ನಾನು ಕೇಳುವವನಲ್ಲ ಅದನ್ನೂ ತಿಳಿದುಕೊಂಡಿರಿ. ಆಮೇಲೆ ಈಗ ವಾಟಾಳ್ ನಾಗರಾಜ್‌ರವರು ಹೇಳಿದಂತೆ ನಾನು ಏನು ಗೃಹಮಂತ್ರಿಗಳಿಗೆ ಹೇಳಿದ್ದೇನೆ, ನಾನು ಏನು ಹೇಳಬೇಕು, ಅಥವಾ ಏನು ಹೇಳಬಾರದು ಎನ್ನುವುದನ್ನು ನಿಮ್ಮಗಳನ್ನು ಕೇಳಿ ಹೇಳುತ್ತೇನೆ. ಈ ಸಮಸ್ಯೆ ಕಗ್ಗಂಟ್ಟಾಗಿ ಕುಳಿತಿದೆ. ಹಾಗೆಯೇ ಬಿಟ್ಟರೆ ಮುಂದಿ ಪೀಳಿಗೆಯವರು, ಆ ಗ್ರಾಮಗಳು ಹಾಳಾಗಿ ಹೋಗುತ್ತವೆ, ನಮ್ಮ ಕರ್ನಾಟಕ ರಾಜ್ಯಕ್ಕೆ ಸೇರಿರುವ ಗ್ರಾಮಗಳೇ ಹಾಳಾಗಿ ಹೋಗುತ್ತವೆ, ಅದಕೋಸ್ಕರ ನಿಮ್ಮನ್ನು ಕೇಳದೆ ಹೋಗುವುದಿಲ್ಲ. ಈಗ ನಾನು ಪರಿಷತ್ತಿನಲ್ಲಿ ಉತ್ತರ ಕೊಡಲು ಹೋಗಬೇಕು.

(ಈ ಸಂದರ್ಭದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)

ಈ ಜಿಲ್ಲೆಗಳ ಬಗ್ಗೆ ಹೆಚ್ಚುಕಡಿಮೆ ಆಯವ್ಯಯದಲ್ಲಿ ಮಾನ್ಯ ಹಣಕಾಸು ಮಂತ್ರಿಗಳು ಐದು ಕೋಟಿ ರೂಪಾಯಿಗಳನ್ನು ಅದರ ಖರ್ಚಿಗಾಗಿ ಎಂದು ಇಟ್ಟಿದ್ದಾರೆ. ಇನ್ನೂ ಬೇಕಾದರೆ, ಏಕೆಂದರೆ ದೊಡ್ಡ ಜಿಲ್ಲೆಗಳನ್ನು ನಾವು ಇವತ್ತು ಸಾಮಾನ್ಯಜನರ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಅವನ್ನು ವಿಂಗಡಣೆ ಮಾಡಬೇಕೆಂದು ಒಪ್ಪಿದ್ದೇವೆ. ಆದರೆ ಮಲ್ಲಿಕಾರ್ಜುನ ಖರ್ಗೆಯವರೇ ವಿವಾದ ಇಲ್ಲದೆ ಇರತಕ್ಕಂಥವು ಶೇಕಡ 90 ರಷ್ಟು ಇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಜಿಲ್ಲೆಯ ವಿವಾದ ಇಲ್ಲ.

ಶ್ರೀ . ಜೆ. ಹೆಚ್. ಪಟೇಲ್ : ಈಗ ವಿವಾದವಿರುವ ಜಿಲ್ಲೆಗಳು ಯಾವುವೂ ಇಲ್ಲ.

ಶ್ರೀ ಎಸ್. ಕೃಷ್ಣಪ್ಪ : ಮೈಸೂರು ಜಿಲ್ಲೆಯ ವಿವಾದ ಇದೆ.

ಶ್ರೀ ಜೆ. ಹೆಚ್. ಪಟೇಲ್ : ಈಗ ಅಡ್ಮಿನಿಸ್ಟ್ರೇಟಿವ್ ಬಗ್ಗೆ ಎಲ್ಲೇ ಪ್ರಕಟಣೆ ಮಾಡಲು ಅಡ್ಮಿನಿಸ್ಟೇಟಿವ್ ಪ್ರಿಪರೇಷನ್ ಮಾಡಿಕೊಳ್ಳಬೇಕು, ಅದಕ್ಕಾಗಿ I have requested the Chief Secretary ಎಲ್ಲೆಲ್ಲಿ ಜಿಲ್ಲಾ ಕಛೇರಿಗಳಿರಬೇಕು, ಎಲ್ಲೆಲ್ಲಿ ಏನು ಕೆಲಸ ಮಾಡಬೇಕು ಇದನ್ನೆಲ್ಲಾ ಮುಂದಿನ ಸಚಿವ ಸಂಪುಟದ ಸಭೆಗೆ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇನೆ, ನೀವೂಕೂಡ ಹೇಳಿದ್ದೀರಿ. ಇದು ಬಂದು ತಕ್ಷಣ, ಸಚಿವಸಂಪುಟದ ಮಂಜೂರಾತಿಯಾದ ತಕ್ಷಣವೇ ಪ್ರಕಟಣೆ ಮಾಡುತ್ತೇನೆ, ಅದನ್ನು ಮತ್ತೆ ಸದನಕ್ಕೆ ತಿಳಿಸುವುದು ಅವಶ್ಯಕವಿಲ್ಲ.

ಶ್ರೀ ಹೆಚ್. ಶಿವಪ್ಪ : ಇದನ್ನು ಯುಗಾದಿ ಉಡುಗರೆಯಾಗಿ ಏನಾದರೂ ಪ್ರಕಟಣೆ ಮಾಡುತ್ತೀರೋ?

ಶ್ರೀ ಜೆ. ಹೆಚ್. ಪಟೇಲ್ : ಅದು ಯಾವತ್ತು ಬರುತ್ತದೆಯೋ ಅವತ್ತೇ ಯುಗಾದಿ ಎಂದು ತಿಳಿದುಕೊಳ್ಳೋಣ, ಯಾರು ಬೇಡವೆನ್ನುತ್ತಾರೆ? ಅದಕ್ಕೆ ಆಗಲೇ ಸದನದ ಸಮ್ಮತಿ ಸಿಕ್ಕಿದೆ ಎಲ್ಲರೂ ಕೂಡ ಅದನ್ನು ಮಾಡಬೇಕೆಂದು ಹೇಳಿದ್ದೀರಿ. ಕ್ಯಾಬಿನೆಟ್ ಅಡ್ಮಿನಿಸ್ಟೇಟಿವ್ ಆರ್ಡರ್ ಅನ್ನು ಹೇಗೆ ಹೊರಡಿಸಬೇಕೆಂಬುದು ಇರತಕ್ಕ ಪ್ರಶ್ನೆ. ಇದು ಒಂದೇ ಒಂದು ತೊಂದರೆಬರುವುದು, ಜ್ಯುಡಿಷಿಯಲ್ ಜ್ಯುರಿಸ್‌ಡಿಕಷನ್ ಬಗ್ಗೆ. ಅದನ್ನು ನಾನು ಲೀಗಲ್ ಅಡ್ವೈಸ್ ತೆಗೆದುಕೊಂಡು ಹೇಗೆ ಮಾಡಬೇಕೆನ್ನುವುದನ್ನು ಮಾಡುತ್ತೇನೆ, ಇನ್ನು ಉಳಿದದ್ದು ಅಂಥ ತೊಂದರೆ ಬರುವುದಿಲ್ಲ. ಪೋಲೀಸ್ ತೊಂದರೆ ಬರುವುದಿಲ್ಲ. ಆಡಳಿತಾತ್ಮಕ ತೊಂದರೆ ಬರುವುದಿಲ್ಲ ಇನ್ಯಾವುದು ಇಲ್ಲ ಕೇವಲ ಡಿಸ್ಟ್ರಿಕ್ಟ್ ಜಡ್ಜಸ್ ಜ್ಯುರಿಸ್‌ಡಿಕ್,ನ್ ಹೇಗಿರಬೇಕೆನ್ನುವುದನ್ನು ಬಿಟ್ಟರೆ, ಆದರಲ್ಲೂ ನಾವು ಹೆಚ್ಚಿಗೆ ಹಣವನ್ನು ಖರ್ಚು ಮಾಡುವಂತಿಲ್ಲ. ಈಗಿರುವ ಕಛೇರಿಗಳನ್ನೇ, ಅಧಿಕಾರಿಗಳನ್ನೇ ಉಪಯೋಗ ಮಾಡಿಕೊಂಡು ಪ್ರಾರಂಭ ಮಾಡುತ್ತೇವೆ ಎನ್ನುವುದು ಜಿಲ್ಲೆಗಳ ಬಗ್ಗೆ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಪರಿಷತ್ತಿಗೆ ಹೋಗಬೇಕೇನೋ

ಶ್ರೀ ಜೆ. ಹೆಚ್. ಪಟೇಲ್ : ನಾನು ಇನ್ನೊಂದು ಮಾತನ್ನು ಹೇಳುತ್ತೇನೆ, ಕೊಜೆಂಟ್ರಿಕ್ಸ್ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಯು. ಆರ್. ಸಭಾಪತಿಯವರು ಕೇಳಿದರು, ಕೊಜೆಂಟ್ರಿಕ್ಸ್‌ದು ಕ್ಲಿಯರ್ ಆಗಿದೆ. Yesterday the project is cleared. The Work will Start and within 3 years 1000 MW generation will start. ದಯವಿಟ್ಟು, ಇಂಥವನ್ನೆಲ್ಲಾ ತಡೆಯುವುದಕ್ಕೆ ಹೋಗಬೇಡಿ, ಮನೆ ಕಟ್ಟುವುದನ್ನು ಕಲಿತುಕೊಳ್ಳಿ ಕೆಡುವುದಲ್ಲ. ಸರ್, ನಾನು ಈ ಮೂರು ವಿಷಯವನ್ನು ಹೇಳಿದ್ದೇನೆ ಈಗ ಪರಿಷತ್ತಿಗೆ ಹೋಗುತ್ತೇನೆ.

ಶ್ರೀ ಎ. ಆರ್. ಕೃಷ್ಣಮೂರ್ತಿ : ಅಧ್ಯಕ್ಷರೆ, ಸನ್ಮಾನ್ಯ ಉಪಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕಿಂತ ಮುಂಚೆ ಒಂದೇ ಒಂದು ಮಾತನ್ನು ಹೇಳಿ ಬಿಡುತ್ತೇನೆ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಸಮಯವಿಲ್ಲ, ಸಿದ್ಧರಾಮಯ್ಯನವರೇ, ನಿಮ್ಮ ಸದಸ್ಯರೆ ಏನೋ ಕೇಳುತ್ತಾರೆ ನೋಡಿ.

ಶ್ರೀ ಎ. ಆರ್. ಕೃಷ್ಣಮೂರ್ತಿ (ಸಂತೆಮಾರನಹಳ್ಳಿ) : ತಾವು ಉತ್ತರ ಕೊಡುವುದಕ್ಕಿಂತ ಮುಂಚೆ ನಾನು ನೀರಾವರಿಗೆ ಸಂಬಂಧಿಸಿದಂತೆ ಒಂದು ಎರಡು ಮಾತನಾಡುತ್ತೇನೆ, ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ. ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮೂರನೆ ಆಯವ್ಯಯವನ್ನು ಮಂಡಿಸುತ್ತಿದ್ದಾರೆ. ಇವತ್ತಿನದಿವಸ ನೀರಾವರಿಗೆ ಸಂಬಂಧಿಸಿದಂತೆ ಈ ನೀರಾವರಿ ಅಭಿವೃದ್ಧಿ ಕೆಲಸಕಾರ್ಯಗಳಲ್ಲಿ ಇವತ್ತು ಕೃಷ್ಣಭಾಗ್ಯ ಜಲನಿಗಮದ ಬಗ್ಗೆ ಸಬಂಧಿಸಿದಂತೆ ಹೆಚ್ಚಿನ ಒತ್ತನ್ನು ಕೊಟ್ಟು ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಕಾವೇರಿ ಕಣಿವೆಯಲ್ಲಿ ಬರುವ ಈ ಹಾರಂಗಿ, ಕಬಿನಿ, ಹೇಮಾವತಿ, ಅರ್ಕಾವತಿ, ಕೃಷ್ಣಾ ಸಾಗರ ಇವಕ್ಕೆ ಸಂಬಂಧಿಸಿದಂತೆ ಇವತ್ತಿನ ದಿವಸ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟಿಲ್ಲ. ಮುಖ್ಯವಾಗಿ ಕಾವೇರಿ ಕಣಿವೆಯಲ್ಲಿ ಬರುವ ಕಬಿನಿ ಎರಡನೆ ಹಂತದ ವಿಚಾರದಲ್ಲಿ ನಾನು ಸದನದಲ್ಲಿ ಮಾತನಾಡುವುದಕ್ಕೆ ಬಯಸುತ್ತೇನೆ. ಅಧ್ಯಕ್ಷರೆ, ಕಬಿನಿ ಎರಡನೆ ಹಂತಕ್ಕೆ ಸಂಬಂಧಿಸಿದಂತೆ ಸರ್ಕಾರ ಇಲ್ಲಿ ಯಾವುದೇ ಕಾರ್ಯಕ್ರಮವನ್ನು ರೂಪಿಸಿ ಕೊಂಡಿಲ್ಲ. ಇದಕ್ಕೆ 1986ರಲ್ಲಿ ಆಡ್ಮಿನಿಸ್ಟೇಟಿವ್ ಹಾಗೂ ಟೆಕ್ನಿಕಲ್ ಮಂಜೂರಾತಿ ಸಿಕ್ಕಿದ್ದರೂ ಕೂಡ, ಇವತ್ತಿನ ದಿವಸ ಸನ್ಮಾನ್ಯ ನೀರಾವರಿ ಸಚಿವರು ಮೈಸೂರಿನಲ್ಲಿ ಸಭೆ ನಡೆಸಿ ಬಗ್ಗೆ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ಹೇಳಿದರೂ ಕೂಡ ಈ ವಿಚಾರದಲ್ಲಿ ಮಾನ್ಯ ಹಣಕಾಸು ಸಚಿವರು ಏನು 590 ಕೋಟಿ ರೂ. ಒದಗಿಸುವುದರ ಮೂಲಕ ನೀರಾವರಿ ಇಲಾಖೆಯವರು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ ಅದಕ್ಕೆ ದಯಮಾಡಿ ಹಣಕಾಸು ಸಚಿವರು ಈ ಆಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು 1997-98ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ (ಮುಂದು)

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ) : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿರುವ ಬಗ್ಗೆ ಈಗಾಗಲೇ ನನ್ನ ಉತ್ತರದಲ್ಲಿ ಹೇಳಿದ್ದೇನೆ. ಮುಂದಿನ ವರ್ಷದ

ಯೋಜನೆಗೆ ನೀವು ತಲುಪುವುದಿಲ್ಲ, ನೂರು ಐವತ್ತು ಕೋಟಿ ರೂಪಾಯಿಗಳು ಎಕ್ಸೈಸ್‌ನಲ್ಲಿ ಕಡಿಮೆಯಾಗುತ್ತದೆ ಎಂದು ಹೇಳಿದ್ದಾರೆ. ಅಲ್ಲಿ 900 ಕೋಟಿ ರೂ. ಮಾಡಿದ್ದರೂ ಕೂಡ ಅದಕ್ಕೆ ಇಲ್ಲಿ ನೂರ ಐವತ್ತು ಕೋಟಿ ರೂಪಾಯಿಗಳನ್ನು ತೋರಿಸಿರತಕ್ಕಂಥದ್ದು. ಅದಕ್ಕು, ಇದಕ್ಕು ಏನು ಸಂಬಂಧ ಬರುವುದಿಲ್ಲ. ಈ ಸಾರಿ ನನಗೆ ವಿಶ್ವಾಸವಿದೆ, ಈ ಸಾರಿ ಯೋಜನೆ ಹೆಚ್ಚು ವಾಸ್ತವಿಕವಾಗಿರಬೇಕು ಎಂದು ಅದಕ್ಕೋಸ್ಕರ ಕಳೆದ ಸಾರಿ ನಾಲ್ಕು ಸಾವಿರದ ಮೂನ್ನೂರ ಅರವತ್ತು ಕೋಟಿ ಮಾಡಿದ್ದರೂ ಕೂಡ ಈ ಸಾರಿ ನಾಲ್ಕು ಸಾವಿರದ ನಾನೂರ ನಲವತ್ತೈದು ಕೋಟಿ ರೂಪಾಯಿಗಳಿಗೆ ಅದನ್ನು ಸೀಮಿತಗೊಳಿಸಿ, ಅದನ್ನು ಮುಟ್ಟಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ನಮಗೆ ಬೇಕಾದ ಮೊಬಿಲೈಸೇಷನ್ ಅನ್ನು ವಾಣಿಜ್ಯ ತೆರಿಗೆ, ಅಬಕಾರಿ, ಸ್ಟಾಂಪ್‌ಗಳಿಂದ ಮಾಡುತ್ತೇವೆ ಎನ್ನುವ ಮಾತನ್ನು ಕೂಡ ಹೇಳುತ್ತೇನೆ. ಮತ್ತು ಸೋರುವಿಕೆಯನ್ನು ಕೂಡ ಸ್ವಲ್ಪಮಟ್ಟಿಗೆ ತಡೆಗಟ್ಟಬೇಕು, ಡಿಸ್‌ಇನ್‌ವೆಸ್ಟ್ ಮೆಂಟ್, ಸರ್ಕಾರಿ ನೌಕರಿಯನ್ನು ಶೇಕಡ 5 ರಷ್ಟು ಕಡಿಮೆ ಮಾಡಬೇಕು, ಈ ಎಲ್ಲಾ ಅನಗತ್ಯ ಹುದ್ದೆಗಳನ್ನು ಕಡಿಮೆ ಮಾಡಬೇಕೆನ್ನುವುದೂ ಕೂಡ ಇದೆ. ಈ ಎಲ್ಲಾ ಕಾರಣದಿಂದ ನಾವು ಈ ಸಾರಿ ಅದನ್ನು ಮುಟ್ಟತಕ್ಕಂಥ ಕೆಲಸವನ್ನು ಮಾಡುತ್ತೇವೆ. ಇನ್ನೊಂದು ನಾನು ಆ ಲೈಮ್ ಸ್ಟೋನ್ ಬಗ್ಗೆ ನಾನು ಹೇಳಿರತಕ್ಕಂಥದ್ದು ನಿಮ್ಮ ಲೈಮ್ ಸ್ಟೋನ್, ಗ್ರಾನೈಟ್ ಮತ್ತೆ ಐರನ್ ಓರ್ಸ್ ಇವುಗಳಿಗೆ ರಾಯಲ್ಟಿ ಮೇಲೆ ಸೆಸ್ ಹಾಕುತ್ತೇವೆ ಎಂದು ಹೇಳಿದ್ದೇವೆ, ನಿಮ್ಮ ಶಹಬಾದ್ ಸ್ಟೋನ್‌ಗೆ ಸೆಸ್ ಹಾಕುವುದಿಲ್ಲ. ಶಹಬಾದ್ ಸ್ಟೋನ್‌ಗೆ ಎಂಟ್ರಿ ಟ್ಯಾಕ್ಸ್ ಇಟ್ಟಿರತಕ್ಕಂಥದ್ದು ಹೊರಗಡೆಯಿಂದ ಬಂದರೆ ಮಾತ್ರ. ಇಲ್ಲಿ ತೆಗೆದುಕೊಂಡು ವ್ಯಾಪಾರ ಮಾಡುವವರಿಗೆ ಅದು ಸಂಬಂಧವಿಲ್ಲ ಆದುದರಿಂದ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಸಿಮೆಂಟ್ ಬಗ್ಗೆ ನಾನು ಏತಕ್ಕೆ ಶೇಕಡ 15ರಷ್ಟು ಮಾಡಿದೆ ಎಂದರೆ, ಸಿಮೆಂಟ್ ಲೋಕಲ್‌ನಲ್ಲೇ ಆಗಬೇಕು, ನಮ್ಮ ವ್ಯಾಪಾರ ಕರ್ನಾಟಕದಲ್ಲೇ ಆಗಬೇಕು ಎನ್ನುವ ಉದ್ದೇಶದಿಂದ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಶೇಕಡ 16 ರಷ್ಟು ಇದೆ, ಗುಲ್ಬರ್ಗಾ ಆ ಭಾಗದಲ್ಲಿ ಸಿಮೆಂಟ್ ಉತ್ಪನ್ನವಾಗುತ್ತದೆ. ಆಂಧ್ರಪ್ರದೇಶದಲ್ಲಿ ಶೇಕಡ 16 ರಷ್ಟು ಇದೆ, ಪಕ್ಕದ ತಮಿಳುನಾಡಿನಲ್ಲಿ ಶೇಕಡ 16 ರಷ್ಟು ಇದೆ ಅದಕ್ಕೆ ನಾನು ಈ ಸರ್ಚಾರ್ಜ ತೆಗೆದು ಹಾಕಿದ ಮೇಲೆ ಈ ಶಕೇಡ 15 ರಷ್ಟು ಹಾಕಿರತಕ್ಕಂತದ್ದು, ಅದು ಹೆಚ್ಚು ಹೊರೆಯಾಗುವುದಿಲ್ಲ. ಆದುದರಿಂದ ಪಕ್ಕದ ರಾಜ್ಯಕ್ಕೆ ಸಮಾನಂತರವಾಗಿರಬೇಕೆನ್ನುವ ಕಾರಣಕ್ಕೋಸ್ಕರ, ಟ್ರೇಡ್ ಡೈವರ್ಷನ್ ಆಗಬಾರದೆನ್ನುವ ಕಾರಣಕೋಸ್ಕರ ಆ ಉದ್ದೇಶದಿಂದ ಅದನ್ನು ಹಾಕಿದ್ದೇವೆ. ಆಮೇಲೆ ಶ್ರೀಮಾನ್ ಪುಟ್ಟಣ್ಣಯ್ಯನವರು ಒಂದು ವಿಚಾರವನ್ನು ಹೇಳಿದ್ದಾರೆ. ಬೆಂಬಲ ಬೆಲೆ ಕೊಡುವುದರ ಬಗ್ಗೆ ಈ ಸಾರಿ, ಬೆಲೆ ಕುಸಿದರೆ ಸರ್ಕಾರ

ಮಧ್ಯ ಪ್ರವೇಶ ಮಾಡಬೇಕು, ಬೆಲೆ ಕುಸಿಯದಂತೆ ನೋಡಿಕೊಳ್ಳುವುದಕ್ಕೆ ಆಯವ್ಯಯದಲ್ಲಿ ಎರಡು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇನೆ. ಕಳೆದ ಸಾರಿ ಆಲುಗೆಡ್ಡೆಯ ಬೆಲೆ ಕಡಿಮೆಯಾದಾಗ, ಮಾರುಕಟ್ಟೆಯಲ್ಲಿ ಡಿಸ್ಟ್ರೆಸ್ ಸೇಲ್ ಆದಾಗ, ಇಂಥ ಸಂದರ್ಭದಲ್ಲೂ ಕೂಡ ಸರ್ಕಾರ ಮಾರುಕಟ್ಟೆ ಪ್ರವೇಶ ಮಾಡುತ್ತದೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಶ್ರೀರಾಮರೆಡ್ಡಿಯವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ, ಅದೇನೆಂದರೆ ನೀವು ತೆರಿಗೆಯನ್ನು ಕೇಂದ್ರ ರಾಜ್ಯಗಳ ನಡುವೆ ವಿಭಜನೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಹಣಕಾಸು ಮಂತ್ರಿಗಳ ಸಭೆಯನ್ನು ಕರೆದು ಕೇಂದ್ರ ಸರ್ಕಾರಕ್ಕೆ ಮನವಿ ಕೊಟ್ಟು ಒತ್ತಾಯ ಮಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ಕೇಂದ್ರ ಅರ್ಥಸಚಿವರಾದ ಚಿದಂಬರಂರವರು ಏನು ಮಾಡಿದ್ದಾರೆನ್ನುವುದನ್ನು ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ. ಶೇಕಡ 29 ರಷ್ಟು ಡಿವಿಸಿಬಲ್ ಪೂಲ್‌ನಲ್ಲಿ ಏನು ಹತ್ತನೆಯ ಹಣಕಾಸು ಆಯೋಗದವರು ಒಪ್ಪಂದದ ಪ್ರಕಾರ ಒಪ್ಪಿಕೊಂಡಿದ್ದಾರೆ, ಅದರ ಜೊತೆಗೆ ಇದಕ್ಕೆ ಸಂಬಂಧಿಸಿದಂತೆ ಸಂವಿಧಾನ ತಿದ್ದುಪಡಿ ಮಾಡುವಾಗ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಚರ್ಚೆ ಮಾಡುತ್ತೇನೆಂದೂ ಕೂಡ ಹೇಳಿದ್ದಾರೆ. ಆದುದರಿಂದ ಅದು ಏನೂ ಆಗದಿದ್ದರೆ, ಮತ್ತೆ ಹಣಕಾಸು ಮಂತ್ರಿಗಳು ಸಭೆಯನ್ನು ಕರೆದು ನಿಮ್ಮ ಸಲಹೆಯ ರೀತಿಯಲ್ಲಿ ಮಾಡಬಹುದು ಎನ್ನುವ ಮಾತನ್ನು ಅವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಮತ್ತೆ ಬಯಲು ಸೀಮೆಗೆ ಹೆಚ್ಚು ಹಣ ಕೊಡಬೇಕೆಂದು ಹೇಳಿದ್ದಾರೆ, ಈ ಸಾರಿ ಕಳೆದ ಸಾರಿಯ ಆಯವ್ಯಯಕ್ಕಿಂತ ಒಂದು ಕೋಟಿಯನ್ನು ಹೆಚ್ಚಿಗೆ ಇಟ್ಟಿರಬೇಕು, ನಿಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ. ಹಶ್ಮಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಸರ್ಕಾರದ್ದು ಏನೂ ಕೂಡ ಇಲ್ಲವೆಂದು ಹೇಳಿದ್ದಾರೆ, ಇದರಲ್ಲಿ ಸಬ್ಸಿಡಿ ಪೋರ್ಷನ್ ಎಲ್ಲಾ ಸರ್ಕಾರದ್ದಾಗಿದೆ.

ಶ್ರೀ ಶ್ರೀ ಶೈಲಪ್ಪ : ವಿರೂಪಾಕ್ಷಪ್ಪ ಬಿದರೂರು : ಸರ್, ಆ ಬಯಲು ಸೀಮೆ ಬಗ್ಗೆ ಸ್ವಲ್ಪ ಗಮನಹರಿಸಬೇಕು

ಶ್ರೀ ಶಿವಾನಂದ ಪಾಟೀಲ್ : ಬಯಲು ಸೀಮೆ ಬಗ್ಗೆ ಸ್ವಲ್ಪ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಹೇಳಿ.

ಶ್ರೀ ಸಿದ್ದರಾಮಯ್ಯ : ಕೇಂದ್ರ ಸರ್ಕಾರದಿಂದ ಬಂದಂಥ ಸಾಲಕ್ಕೂ ಕೂಡ ಸರ್ಕಾರವೇ ಗ್ಯಾರಂಟಿ ನಿಂತುಕೊಳ್ಳುತ್ತದೆ. ಆದ್ದರಿಂದ ಕಳೆದ ಸಲ ನಾವು 8 ಸಾವಿರ ಜನ ಅಲ್ಪಸಂಖ್ಯಾತರಿಗೆ ಸಾಹಾಯ ಮಾಡಿದ್ದೆವು. ಅದನ್ನು ಈ ಸಲ 10 ಸಾವಿರ ಜನ ಅಲ್ಪಸಂಖ್ಯಾತರಿಗೆ ಸಹಾಯ

ಮಾಡಬೇಕು ಎನ್ನತಕ್ಕಂತ ಗುರಿಯನ್ನು ಇಟ್ಟುಕೊಂಡಿದ್ದೇವೆ. ಆ ದೃಷ್ಟಿಯಿಂದ ಹೇಳಿರತಕ್ಕಂಥ ಮಾತು ಇದಾಗಿದೆ. ಇನ್ನೂ ಮಾನ್ಯ ಚಂದ್ರಕಾಂತ ಗುರಪ್ಪ ಬೆಲ್ಲದ್ ಅವರು ಅವರ ಕ್ಷೇತ್ರಕ್ಕೆ ಒಂದು ಐ.ಟಿ.ಐ. ಕಾಲೇಜನ್ನು ಕೇಳಿದ್ದಾರೆ. ಈ ಸಲ ಐದು ಐ.ಟಿ.ಐ ಕಾಲೇಜುಗಳನ್ನು ಕೊಡಬೇಕೆಂದು ಹೇಳಿ ನಾನು ಬಜೆಟ್‌ನಲ್ಲಿ ಹೇಳಿದ್ದೇನೆ. ನಂತರ, ಈ ಸಲ ಹೈಸ್ಕೂಲ್‌ಗಳನ್ನು ಎಲ್ಲಿಗೂ ಸಹ ಕೊಡುತ್ತೇನೆಂದು ಹೇಳಿಲ್ಲ. ಕಳೆದಸಲ ಬಹುಶಃ 265 ಹೈಸ್ಕೂಲ್‌ಗಳನ್ನು ಕೊಟ್ಟಿದ್ದೇವೆ. ಅದರ ಜೊತೆಗೆ 60 ಇಂಜಿನಿಯರಿಂಗ್ ಕಾಲೇಜನ್ನು ಕೊಟ್ಟಿದ್ದೆವು. ಅವುಗಳಿಗೆ ಈ ಸಲ ಕಟ್ಟಡ ಕಟ್ಟುತ್ತೇವೆಂದು ನಾವು ಹೇಳಿದ್ದೇವೆ. ಆದ್ದರಿಂದ ಈ ಸಲ ಹೊಸ ಹೈಸ್ಕೂಲ್‌ಗಳು ಆಗಲಿ, ಜ್ಯೂನಿಯರ್‌ಕಾಲೇಜುಗಳು ಆಗಲಿ ಕೊಡತಕ್ಕಂಥದ್ದು ಇಲ್ಲ. ಶ್ರೀ ವೀರಭದ್ರಪ್ಪನವರು ನಮ್ಮ ಕಡೆ ಕೆರೆಗಳಿಂದ ಸಿಲ್ಟ್ ತೆಗೆಸಬೇಕೆಂದು ಹೇಳಿದ್ದಾರೆ. ಮುಂದಿನ ವರ್ಷ ನೋಡೋಣ. ಈ ವರ್ಷ ಇಲ್ಲ. ಸಿಲ್ಟ್ ತೆಗೆಸುವ ಬಗ್ಗೆ ವಿಚಾರ ಮಾಡುತ್ತೇವೆ. ಶ್ರೀ ನಾರಾಯಣ ರಾವ್ ತರಳೆ ಅವರು ಕೇಳಿದ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಉತ್ತರ ಹೇಳಿದ್ದಾರೆ. ಶ್ರೀ ಲಿಂಗಪ್ಪನವರು ರಾಯಲ್ಟಿ, ಸೆಸ್ ಇವನ್ನೆಲ್ಲಾ ಚೆಕ್‌ಪೋಸ್ಟ್‌ಗಳಿಂದಲೇ ವಸೂಲಿ ಮಾಡಿ ಎಂದು ಹೇಳಿದ್ದಾರೆ. ಇದಕ್ಕೆ ಹೊಸದಾಗಿ ಒಂದು ಪಾಲಿಸಿಯನ್ನು ನಾನು ಮಾಡಿರತಕ್ಕಂಥದ್ದ ರಸ್ತೆ ಫಂಡ್ ಮಾಡತಕ್ಕಂಥದ್ದರ ಬಗ್ಗೆ ರಾಯಲ್ಟಿ ಕಾನೂನು ತರಬೇಕಾಗುತ್ತದೆ. ಅದನ್ನು ಹೇಗೆ ಮಾಡಬೇಕು? ಏನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಇಲ್ಲಿ ಅದು ಚರ್ಚೆಗೆ ಬರುತ್ತದೆ. ರಸ್ತೆ ಫಂಡ್‌ಮಾಡಲಿಕ್ಕೆ ಈ ಪಾಲಿಸಿ ನಾನು ಅನೌನ್ಸ್ ಮಾಡಿದ್ದೇನೆ. ಆದ್ದರಿಂದ ಅದರ ಬಗ್ಗೆ ಆ ಸಂದರ್ಭದಲ್ಲಿ ನಿಮ್ಮ ಅಭಿಪ್ರಾಯಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಶ್ರೀ ಅರಗ ಜ್ಞಾನೇಂದ್ರ ಅವರು ಈ ವೆನಿಲ್ಲಾ ಬೆಳೆ ಇದನ್ನು ಕೇವಲ ದಕ್ಷಿಣ ಕನ್ನಡಕ್ಕೆ ಸೀಮಿತಗೊಳಿಸಿದ್ದೀರಿ, ಅದನ್ನು ಶಿವಮೊಗ್ಗ ಜಿಲ್ಲಾ ಭಾಗಕ್ಕೆ ವಿಸ್ತರಣೆ ಮಾಡಬೇಕೆಂದು ಕೇಳಿದ್ದಾರೆ. ಅದನ್ನು ವಿಸ್ತರಣೆ ಮಾಡಲಿಕ್ಕೆ ಕ್ರಮ ತೆಗೆದಕೊಳ್ಳುತ್ತೇವೆ ತಾಳೆ ಬೆಳೆಯುವುದನ್ನು ಸಹ ವಿಚಾರ ಮಾಡುತ್ತೇನೆ. ಇನ್ನು ಜಿಲ್ಲಾ ಪುನರ್ ವಿಂಗಡಣೆ ಮಾಡುವ ಬಗ್ಗೆ ಶ್ರೀ ಬಣಕಾರ್‌ರವರು ಕೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮಾನ್ಯ ಅಪ್ಪಚ್ಚು ರಂಜನ್ ರವರು ನಾವು ಕಾಫಿ ಬೆಳೆಯುತ್ತಿದ್ದೇವೆ ವರಮಾನ ತೆರಿಗೆ ಕೊಡುತ್ತಿದ್ದೇವೆ ಆದ್ದರಿಂದ ನಮ್ಮ ತೆರಿಗೆ ಹಣವನ್ನು ನಮ್ಮ ಜಿಲ್ಲೆಗೆ ವಾಪಸ್ಸು ಕೊಡಬೇಕು ಎಂದು ಕೇಳಿದ್ದಾರೆ. ಹಾಗೆ ಲೆಕ್ಕ ಹಾಕುವುದಾದರೆ, ಆಯಾಯ ಜಿಲ್ಲೆಯ ತೆರಿಗೆಯನ್ನು ಆಯಾಯ ಜಿಲ್ಲೆಗೆ ಕಡೊವುದಕ್ಕೆ ಬರುವುದಿಲ್ಲ. ಬೆಂಗಳೂರು ಸಿಟಿಯಲ್ಲಿ ಒಟ್ಟು ವಾಣಿಜ್ಯ ತೆರಿಗೆ ಶೇಕಡ 60 ರಷ್ಟು ಬರುತ್ತದೆ. ಆದರೆ ಅಷ್ಟನ್ನು ಅಲ್ಲಿಗೇ

ಕೊಡುವುದಕ್ಕಾಗುತ್ತದೆಯೇ? ಆ ತರಹ ಮಾಡುವುದಕ್ಕೆ ಬರುವುದಿಲ್ಲ ಟ್ಯಾಕ್ಸ್ ಡಿಡಕ್ಷನ್ ಅವರಿಗೂ ಕೊಟ್ಟಿದ್ದೇವೆ. ನಿಮಗೆ ಅಲ್ಲಿ ಹೊಸ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಭಾಗಮಂಡಲ ಮತ್ತು ತಲಕಾವೇರಿ ಅದನ್ನು ಅಭಿವೃದ್ಧಿ ಪಡಿಸಲಿಕ್ಕೆ ಅಲ್ಲಿ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದೇವೆ. ಆದ್ದರಿಂದ ಅದನ್ನು ನಾವು ಮಾಡುತ್ತೇವೆ. ಶ್ರೀ ಸುರೇಶ್ ಕುಮಾರ್‌ರವರು ವೃತ್ತಿ ತೆರಿಗೆ ಬಗ್ಗೆ ಹೇಳಿದರು. ಈಗಾಗಲೇ ನಾನು ಇದರ ಬಗ್ಗೆ 1500 ರೂಪಾಯಿ ಇದ್ದುದನ್ನು 3 ಸಾವಿರ ರೂಪಾಯಿಗೆ ಏರಿಸಿದ್ದೇನೆ. ಅದನ್ನು ಮುಂದೆ ಯೋಚನೆ ಮಾಡೋಣ. ಮತ್ತೆ ರಸ್ತೆಗಳಿಗೆ ದುಡ್ಡು ಕೇಳಿದಿರಿ. ಈಗ ನಮ್ಮ ಸ್ಟೇಟ್ ಫೈನಾನ್ಸ್ ಕಮಿಷನ್‌ನ ವರದಿಯನ್ನು ಆ ಹಣ ರಾಜ್ಯಕ್ಕೆ ಏನು ವರ್ಗಾವಣೆ ಆಗಬೇಕು ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಈ ಸಲ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಹಣ ಬರತಕ್ಕಂಥದ್ದು ಇದೆ. ಅದಕ್ಕೆ ಐದು ವರ್ಷದಲ್ಲಿ ಹೆಚ್ಚು ಹಣ ಸಿಗುತ್ತದೆ. ಹಾಗೂ ಒಂದು ಕಾನೂನು ತಂದು ಸ್ಥಳೀಯ ಸಂಸ್ಥೆಗಳಿಗೆ ಹೇಗೆ ಹಣ ಮೊಬಿಲೈಸ್ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಚಿಂತನೆ ಮಾಡಬೇಕೆಂದೂ ಕೂಡ ಇದೆ. ಅದರ ಬಗ್ಗೆ ಮತ್ತೆ ನಿಮ್ಮ ಅಭಿಪ್ರಾಯವನ್ನೆಲ್ಲಾ ಕೇಳತಕ್ಕಂಥದ್ದನ್ನು ಮಾಡುತ್ತೇವೆ. ಇನ್ನು ಶ್ರೀ ಸಭಾಪತಿಯವರು ಈ ಮನೆ, ಆಸ್ತಿ ಕಳೆದುಕೊಂಡವರ ಪುನರ್ವಸತಿಯನ್ನು ಹೇಗೆ ಮಾಡುತ್ತೀರಿ ಎಂದು ಕೇಳಿದ್ದಾರೆ. ಇದನ್ನೆಲ್ಲಾ ಈಗ ಬೇರೆ ರೀತಿಯಲ್ಲಿ ಲೈಸೆನ್ಸ್ ಮಾಡುತ್ತಿದ್ದೇವಲ್ಲಾ, ಆಗ ಅವರಿಗೂ ಕೂಡ ಕನ್ಸಿಡರ್ ಮಾಡುತ್ತೇವೆ. ಎಲ್ಲರಿಗೂ ಕೆಲಸ ಕೊಡುತ್ತೇವೆ ಎನ್ನತಕ್ಕಂಥದ್ದನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಇದರಿಂದ ಕೆಲಸ ಕಳೆದು ಕೊಂಡವರಿಗೆ ಕೆಲಸ ಕೊಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತೆ ಇನ್ನೂ ಒಂದು ಏನು ಹೇಳಿದರು ಎಂದರೆ. ಆಕ್ಟ್ರಾಯ್ ಬಗ್ಗೆ ಏನು ಮಾತನಾಡುತ್ತಿದ್ದಾರೆ ಅದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಆದ್ದರಿಂದ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ ಮಾನ್ಯ ಸದಸ್ಯರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಹಣಕಾಸಿನ ಸಚಿವರು ಪ್ರಸ್ತಾಪನೆಯನ್ನು ಮಂಡಿಸಿ.

ಶ್ರೀ ಸಿದ್ದರಾಮಯ್ಯ (ಹಣಕಾಸಿನ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ : 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ

ಬರುವ ಲೇಖಾನುದಾನ 1 ರಿಂದ 62ರ ವರೆಗೆ ಅಭಿಯೋಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಅಧ್ಯಕ್ಷರು : 1997-98ನೇ ಸಾಲಿನ ಅನುಧಾನಗಳನ್ನು ಪಡೆಯಲು ಲೇಖಾನುದಾನ ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯವಾಯಿತು. ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ.

"31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಲೇಖಾನುದಾನ 1 ರಿಂದ 62 ವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗಳನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು"

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಮಾನ್ಯ ಅಧ್ಯಕ್ಷರ ದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ರಾಜ್ಯಪಾಲರ ಶಿಪಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,35,73,23,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,35,39,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 2-ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ತೋಟಗಾರಿಕೆ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 41,53,05,000 ರೂ.ಗಳಿಗಿಂತ ಮೀರದ ಮೊತ್ತವನ್ನು

ಮತ್ತು ಬಂಡವಾಳ ಖಾತ್ಯಲ್ಲಿ 75,00,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3-ಪಶುಸಂಗೋಪನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿರಿ "ಪಶುಸಂಗೋಪನೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 62,05,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 4-ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೀನುಗಾರಿಕೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,33,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,79,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು ಅಭಿಯಾಚನ ಕ್ರಮಾಂಕ 5 ಭಾರಿ ಮತ್ತು ಮಧ್ಯಮಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉದ್ಯಮಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)" ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 17,51,56,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 34,05,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 6-ಗಣಿ ಮತ್ತು ಭೂ ವಿಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗಣಿಗಳು ಮತ್ತು ಭೂ ವಿಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 7,75,75,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 7-ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಚಿಕ್ಕಪುಟ್ಟ ಉದ್ಯಮಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕೆ ರಾಜಸ್ವ ಖಾತೆಯಲ್ಲಿ 42,77,47,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,87,50,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 8-ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇಷ್ಮೆ ವ್ಯವಸಾಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 64,42,39,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,50,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 9- ಸಕ್ಕರೆ

ರಾಜ್ಯಪಾಲರ ಶಿಫಾರಸ್ಸಿನ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಕ್ಕರೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕೆ ರಾಜಸ್ವ ಖಾತೆಯಲ್ಲಿ 5,12,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,25,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 10 - ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೇಖನ ಸಾಮಗ್ರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,15,22,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12 - ಯುವಜನ ಸೇವೆ

ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉನ್ನತ ಶಿಕ್ಷಣಕ್ಕೆ " ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,63,73,52,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12-ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯುವಜನ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 21,65,90,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 13-ಕಲೆ, ಸಂಸತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಲೆ, ಸಂಸತಿ ಮತ್ತು ಕನ್ನಡಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 9,21,20,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14-ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರಾಥಮಿಕ ಮತ್ತು ಸೆಕಂಡರಿ ಶಿಕ್ಷಣ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 91,772,98,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 15 - ವರಮಾನ ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವರಮಾನ ವೃತ್ತಿಗಳು ಮಾರಾಟ ಮತ್ತು ಇದರ ಸೇವೆಗಳಿಗೆ ಸಂದಾಯ ಮಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 33,10,17,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ - 16 - ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಶ್ರಾಂತಿವೇತನ ಮತ್ತು ಇತರ ನಿವೃತ್ತಿ ಸೌಲಬ್ಯಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,36,52,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 17 - ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ "ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,72,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,91,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 18 - ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿಗಳು, ವಿಮೆ, ಖಜಾನೆ ಮತ್ತು ಲೆಕ್ಕ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ಉಳಿತಾಯಗಳು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕ ಆಡಳಿತ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 96,15,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,88,000 ರೂ.ಗಳಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆಕ್ರಮಾಂಕ - 19 - ಇತರೇ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇತರೇ ವಿವಿಧ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 21,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,42,50,000 ರೂ.ಗಳಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 20 ಆಹಾರ ಮತ್ತು ನಿತ್ಯೂಪಯೋಗಿ ಸಾಮಗ್ರಿಗಳ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 88,26,52,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ - 21 - ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 99,54,19,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 22 - ರಾಜ್ಯದ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ "ರಾಜ್ಯದ ಅಬಕಾರಿಗೆ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚರನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,37,47,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯೋಜನೆ ಕ್ರಮಾಂಕ 23 - ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಪಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷಕ್ಕೆ "ಸಾರಿಗೆ ಸೇವೆ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 36,49,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,50,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 24 - ಆರಕ್ಷಕ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗಿ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರಕ್ಷಕ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,56,66,07,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 15 - ಬಂದೀ ಖಾನೆಗಳು, ಅಗ್ನಿ ಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 25,45,86,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 26 - ವಾರ್ತಾ ಮತ್ತು ಪ್ರಚಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ ಮತ್ತು ಪ್ರಚಾರ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,08,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 27 - ಪ್ರವಾಸೋದ್ಯಮ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರವಾಸೋಧ್ಯಮಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,71,21,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ - 28 - ವೈದ್ಯಕೀಯ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವೈದ್ಯಕೀಯ ಶಿಕ್ಷಣ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 84,16,82,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 29 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,97,32,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 30 - ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗಿ 31-3-1998ರಂದು ಕೊನೆಗೊಳ್ಳುವು ಆರ್ಥಿಕ ವರ್ಷದಲ್ಲಿ "ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 88,40,04,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,13,34,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 31 - ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಭೂತ ಸೌಕರ್ಯ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ). ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,03,18,70,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 69,45,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 32 - ಬೆಂಗಳೂರು ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಅಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 60,10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,15,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಕಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 33 - ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ನೀರಾವರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 26,56,57,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 41,55,00,00 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 34 - ಭಾರೀ ಮತ್ತು ಮಧ್ಯಮ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ನೀರಾವರಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,25,68,73,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,04,21,66,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 35 - ರಾಜ್ಯ ವಿಧಾನಮಂಡಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ವಿಧಾನಮಂಡಲ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,93,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ - 36 - ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನ್ಯಾಯ ಪರಿಪಾಲನೆ" ಗೆ ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 40,10,41,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 37 - ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,26,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರುಮಾಡುವುದು.

ಅಭಿಯಾಚನೆ ಕ್ರಮಾಂಕ 38 - ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಚಿವಾಲಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 21,49,16,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 39 - ಜಿಲ್ಲಾಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದುಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಿಲ್ಲಾಡಳಿತಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 58,08,51,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 40 - ಸಾಮಾನ್ಯ ಆಡಳಿತ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾಮಾನ್ಯ ಆಡಳಿತ ಇತ್ಯಾದಿ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,37,23,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 41 - ಯೋಜನೆ ಮತ್ತು ಸಾಂಖ್ಯಿಕ ಹಣಕಾಸು (ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ ಮತ್ತು ಸಾಂಖ್ಯಿಕ ಹಣಕಾಸು ("ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ಹೊರತುಪಡಿಸಿ") ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14,10,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,00,000 ರೂ.ಗಳಿಗಿಂತ ಮೀರ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 42 - ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 46,99,00.000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮೂಡುವುದು.

ಅಭಿಯಾಚನೆ ಕ್ರಮಾಂಕ 43 - ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,11,02,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 44 - ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಟ್ಟಡಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,61,49,000 ರೂ.ಗಳಿಗಿಂತ ಮೀರದ ಮೊತ್ತವನ್ನು

ಮತ್ತು ಬಂಡವಾಳ ಖಾತೆಯಲ್ಲಿ 49,34,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 45 - ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಸ್ತೆಗಳು ಮತ್ತು ಸೇತುವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,06,65,31,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 46,95,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 46 - ರೇವು ಮತ್ತು ಜಲಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇವು ಮತ್ತು ಜಲಸಾರಿಗೆ ಸೇವೆಗಳಿಗಾಗಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,97,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,66,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿದ್ಯುಚ್ಛಕ್ತಿ ಯೋಜನೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,12,38,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 48 - ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭೂ ಕಂದಾಯ ಇತ್ಯಾದಿ" ಗಲಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 44,77,73,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,00,88,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 49- ಮುದ್ರಾಂಕಗಳು ಮತ್ತು ನೋಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮುದ್ರಾಂಕಗಳು ಮತ್ತು ನೋಂದಣಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 7,43,27,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಕಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 50 - ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,81,38,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 51 - ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಕ್ಫ್‌ಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,28,88,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 52 - ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 23,95,21,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,72,75,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 53 - ಕ್ರಮಪಡಿಸಿದ ಮಾರುಕಟ್ಟೆಗಳು

ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31-3-1994 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕ್ರಮಪಡಿಸಿದ ಮಾರುಕಟ್ಟೆಗಳಿಗಾಗಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,96,79,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 54 - ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,89,96,79,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 55 - ಗ್ರಾಮೀಣ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣ ಅಭಿವೃದ್ಧಿಗಾಗಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,14,42,56,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದನಾವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 56 - ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ ಮತ್ತು ಉದ್ಯೋಗ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 39,28,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 57 - ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಲ್ಯಾಣ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,26,68,62,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 58 - ಮಹಿಳಾ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಕಲ್ಯಾಣ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ

ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,65,61,78,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 59 - ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,66,72,000 ರೂ.ಗಳಿಗಿಂತ ಮೀರದ ಮೊತ್ತವನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 50 - ಮಲೆನಾಡು ಪ್ರದೇಶ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಲೆನಾಡು ಪ್ರದೇಶ ಅಭಿವೃದ್ಧಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ - 61 - ಜವಳಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜವಳಿ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,66,62,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,31,35,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ - 62 - ಹಿಂದುಳಿದ ವರ್ಗದಗವರು ಮತ್ತು ಅಲ್ಪ ಸಂಖ್ಯಾತರು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಹಿಂದುಳಿದ ವರ್ಗದವರು ಮತ್ತು ಅಲ್ಪ ಸಂಖ್ಯಾತರು"ಗೆ ಸಂದಾಯ ಮಾಡಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 42,39,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.